ಸಾಹಿತ್ಯ ದಾಸೋಹ – ೧೯೨



೧೦ ಜುಲೈ ೨೦೨೧ರ ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳು, ವರದಿಗಳು

ಪ್ರಾ. ಎಚ್ಚೆಸ್ಕೆ ಜನ್ಮ ಶತಮಾನೋತ್ಸವ ಆಚರಣೆ ವರ್ಷ



ಸಮನ್ವಯ ಸಮಿತಿ * ನೋಡಿಯೋ ಸಾಹಿತ್ಯ ವೇದಿಕೆ * ಕನ್ನಡವೇ ಸತ್ಯ

ಸಾಹಿತ್ಯ ದಾಸೋಹ ೧೯೨

೧೦ನೇ ಜುಲೈ ೨೦೨೧ರಂದು ನಡೆದ 'ಸಾಹಿತ್ಯ ದಾಸೋಹ ೧೯೨' ರ ಪ್ರಸ್ತುತಿಗಳನ್ನು ಪಿಡಿಎಫ್ ರೂಪದಲ್ಲಿ ದಾಸೋಹಿಗಳ ಕೈಗಿರಿಸಲು ಅತೀವ ಸಂತಸವಾಗುತ್ತದೆ. ಪ್ರಬುದ್ಧ ಚಿಂತನೆಗಳು ಹರಳುಗಟ್ಟಿ ಲೇಖನ ರೂಪದಲ್ಲಿ ತಂದ ಎಲ್ಲ ಲೇಖಕರಿಗೆ ಹಾಗೂ ದಾಸೋಹದ ಅಧ್ಯಕ್ಷತೆ ವಹಿಸಿ ದಾಸೋಹದಲ್ಲಿ ಮಂಡಿಸಲಾದ ವಿವಿಧ ಪ್ರಸ್ತುತಿಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಶ್ರೀ ಕೆ.ಆರ್.ಎಸ್. ಮೂರ್ತಿಯವರಿಗೆ ಧನ್ಯವಾದಗಳು.

ದಾಸೋಹದ ಅಭಿಯಾನ ಇನ್ನೂರರ ಎತ್ತರಕ್ಕೆ ಏರುತ್ತಿರುವುದು ಕನ್ನಡ ಸಾರಸ್ವತ ಲೋಕದಲ್ಲೊಂದು ಅಭಿಮಾನದ ಸಂಗತಿಯಾಗಿದೆ. ಇದಕ್ಕೆ ಪ್ರಾಂಜಲವಾಗಿ ಸಹಕರಿಸಿದ ಎಲ್ಲ ಸಾಹಿತ್ಯಾಸಕ್ತರಿಗೆ ಅಭಿನಂದನೆಗಳು.

ಕಳೆದ ದಾಸೋಹದಿಂದ ಇಂದಿನ ದಾಸೋಹದವರೆಗೆ ಅಂತರಜಾಲದ ಮುಖೇನ ನಡೆದ ಮೂರು ಕಾರ್ಯಕ್ರಮಗಳು ಹಾಗೂ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಏರ್ಪಡಿಸಲಾದ ಡಾ. ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ದತ್ತಿ ಉಪನ್ಯಾಸ ಕಾರ್ಯಕ್ರಮಸಿದ ವರದಿಗಳೂ ಈ ಸಂಚಿಕೆಯಲ್ಲಿವೆ. ಈ ವರದಿಗಳನ್ನು ಸಿದ್ಧಪಡಿಸಿದ ಶ್ರೀ ಹು.ವಾ.ಶ್ರೀಪ್ರಕಾಶ್ ಅವರಿಗೆ ಹಾಗೂ ಎಲ್ಲ ಬರಹಗಳ ಪಿಡಿಎಫ್ ರೂಪವನ್ನು ಶ್ರದ್ಧೆಯಿಂದ ಹಾಗೂ ಅಚ್ಚುಕಟ್ಟಾಗಿ ಸಿದ್ಧಪಡಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರಿಗೆ ನಮ್ಮ ನಮನಗಳು.

ಧನ್ಯವಾದಗಳೊಂದಿಗೆ,

ಸಂಚಾಲಕ ಸಮಿತಿ

೨೮ ಆಗಸ್ಟ್ ೨೦೨೧ — ನೋಡಿಯೋ ಸಾಹಿತ್ಯ ದಾಸೋಹ

ದಾಸೋಹದ ಪುಟಗಳಲ್ಲಿ......

ಸಮನ್ವಯ ಸಮಿತಿ – ಕನ್ನಡವೇ ಸತ್ಯ - ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 192 – 10ನೇ ಜುಲೈ 2021
ಕಾರ್ಯಕ್ರಮ ವರದಿ

– ಹು.ವಾ. ಶ್ರೀಪ್ರಕಾಶ್

ಜುಲೈ ೧೦ ಶನಿವಾರ ಮಧ್ಯಾಹ್ನ ೩.೩೦ ಕ್ಕೆ ಕಾರ್ಯಕ್ರಮ ಪ್ರಾರಂಭವಾಯಿತು. ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲರವರು ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಶ್ರವಣ ಕುಮಾರಿಯವರು ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ ಆರ್ ಎಸ್ ಮೂರ್ತಿಯವರನ್ನು ಪರಿಚಯಿಸಿದರು.



ಹಾಸನ ಜಿಲ್ಲೆ ಅರಸೀಕೆರೆಯಲ್ಲಿ ಜನಿಸಿದ ಶ್ರೀ ಕೆ ಆರ್ ಎಸ್ ಮೂರ್ತಿಯವರು ಹಾಸನದ ಮಲ್ನಾಡ್ ಇಂಜಿನೀಯರಿಂಗ್ ಕಾಲೇಜಿನಲ್ಲಿ ಬಿ.ಇ ಪದವಿ ಪಡೆದು ನಂತರ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನಲ್ಲಿ ಎಂ ಟೆಕ್ ಮಾಡಿ ಬೆಂಗಳೂರಿನ ಐಟಿಐ ನಲ್ಲಿ ಚೀಫ್ ಇಂಜಿನೀಯರ್ ಆಗಿ ಸೇವೆ ಸಲ್ಲಿಸಿ, ಜಪಾನ್ ಹಾಗೂ ಸಿಂಗಪೂರ್ ಗಳಲ್ಲಿ ಕಾರ್ಯನಿರ್ವಹಿಸಿ ೨೦೧೭ರಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಮೂರು ಕವನ ಸಂಕಲನಗಳನ್ನು ಹೊರತಂದಿರುವ ಇವರ ಬರಹಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ 'ಹವಳ ದ್ವೀಪದ ಹೊನ್ನು' ಕೃತಿಯು 'ತರಂಗ' ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆಯಲ್ಲದೆ ಇವರ ಇತ್ತೀಚಿನ 'ವ್ಯೋಮ ವಿಸ್ಮಯ ಮಂಡಲ' ಎಂಬ ಕೃತಿಯೂ 'ತರಂಗ'ದಲ್ಲಿ ಧಾರಾವಾಹಿಯಾಗಿ ಬರಲಿದೆ ಎಂದು ಕೆ.ಆರ್.ಎಸ್. ಮೂರ್ತಿಯವರನ್ನು ಸ್ವಾಗತಿಸಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀ ಬೆಂ ಶ್ರೀ ರವೀಂದ್ರರವರು 'ಸಾಹಿತ್ಯ ದಾಸೋಹ ಬೆಳೆಯುತ್ತಿರುವ ಪರಿ ನನಗೇ ಅಚ್ಚರಿ ತಂದಿದೆ. ಹೆಚ್ಚು ಹೆಚ್ಚು ಸದಸ್ಯರು ಭಾಗವಹಿಸಲು ಬರುತ್ತಿರುವುದು ಸಂತೋಷ. ಹೊಸ ಬರಹಗಳಿಗೆ ಪ್ರೋತ್ಸಾಹ ಒದಗಿಸುವುದೇ ನಮ್ಮ ಉದ್ದೇಶ. ವೇದಿಕೆಯ ೧೭೦ ಜನ ಪ್ರಸ್ತುತಪಡಿಸಲು ಬಂದರೂ ಅವಕಾಶ ಮಾಡಿಕೊಡಲಾಗುವುದು' ಎಂದರು. ವೇದಿಕೆಯು ಮುಂಬರುವ ದಿನಗಳಲ್ಲಿ ಆಯೋಜಿಸಿರುವ ವಿವಿಧ ಕಾರ್ಯಕ್ರಮಗಳ ಮುನ್ನೋಟವನ್ನು ನೀಡಿದ ಅವರು, ಜುಲೈ ೧೮ರಂದು ಸಂಜೆ ೫ ಕ್ಕೆ ಶ್ರೀ ಮಹಾಬಲ ಭಟ್ ರವರಿಂದ 'ವೇದಗಣಿತ' ಕಾರ್ಯಕ್ರಮ, ಜುಲೈ ೨೪ ಮತ್ತು ೨೫ ರಂದು ಶ್ರೀಮತಿ ಶಾಂತಾ ಹಾಗೂ ಶ್ರೀಮತಿ ಸುಜಾತರವರು ಈ ಹಿಂದೆ ನಡೆಸಿಕೊಟ್ಟ 'ಮೇಘ ಸಂದೇಶ' ಗಮಕ ವಾಚನ-ವ್ಯಾಖ್ಯಾನ ಕಾರ್ಯಕ್ರಮದ ವೀಡಿಯೋ ಅವತರಣಿಕೆ ಪ್ರಸಾರವಾಗಲಿದೆ. ಅಗಸ್ಟ್ ೭ ರಂದು ಗೋಖಲೆ ಇನ್ಸ್ಟಿಟ್ಯೂಟಿನಲ್ಲಿ ಪ್ರಾಚಾರ್ಯ ಎಚ್ಚೆಸ್ಕೆಯವರ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದ್ದು ನಮ್ಮ ವೇದಿಕೆಯ ಶ್ರೀ ಶೃಂಗೇಶ್ವರ ಶರ್ಮರವರು "ಜಾಗತಿಕ ಸಾಂಕ್ರಾಮಿಕ ಪಿಡುಗು ಮತ್ತು ಆರ್ಥಿಕತೆ" ಬಗ್ಗೆ ಉಸನ್ಯಾಸ ನೀಡಲಿದ್ದಾರೆ.

ಅಗಸ್ಟ್ ೧೪ ರಂದು 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮವನ್ನು ಅಂತರ್ಜಾಲದಲ್ಲಿ ಸಂಘಟಿಸಲಾಗುವುದು. ಅಂದು ಬೆಳಿಗ್ಗೆ ಸಾಹಿತ್ಯ ಗೋಷ್ಠಿಗೆ ಉಪನ್ಯಾಸಕಾರರಾಗಿ ಡಾ ಎಚ್ ಎಸ್ ಸತ್ಯನಾರಾಯಣರವರು ಭಾಗವಹಿಸಲಿದ್ದು, 'ಆಧುನಿಕ ಕನ್ನಡದ ಅಜ್ಞಾತ ಕವಿಗಳು' ಎಂಬ

ವಿಷಯದ ಬಗ್ಗೆ ಉಪನ್ಯಾಸ ನೀಡುವರು. ಬ್ಯಾಂಕಿಂಗ್ ಗೋಷ್ಠಿಯಲ್ಲಿ ನಮ್ಮ ವೇದಿಕೆಯ ಶ್ರೀ ನಾಗೇಶ್ ವೈಧ್ಯರವರು "ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಭವಿಷ್ಯ" ಎಂಬ ಬಗ್ಗೆ ಉಪನ್ಯಾಸ ನೀಡುವರು. ಮಧ್ಯಾಹ್ನ ನಡೆಯಲಿರುವ ಸಾಂಸ್ಕೃತಿಕ ಗೋಷ್ಠಿ ಯಲ್ಲಿ ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರು ಭಾಗವಹಿಸುವರು. ಆ ದಿನದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಕವಿ ಶ್ರೀ ಜಯಂತ ಕಾಯ್ಕಿಣಿ ಯವರು ವಹಿಸಲಿದ್ದು ನಮ್ಮ ವೇದಿಕೆಯ ಕವಿಗಳು ತಮ್ಮ ಕವನವನ್ನು ಗರಿಷ್ಠ ಸಮಯ ಮಿತಿ ಮೂರು ನಿಮಿಷದೊಳಗೆ ಓದಬಹುದು ಈ ಕಾರ್ಯಕ್ರಮದ ಬಗೆಗಿನ ಹೆಚ್ಚಿನ ವಿವರವನ್ನು ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಅಗಸ್ಟ್ ತಿಂಗಳ ಸಾಹಿತ್ಯ ದಾಸೋಹ ತಾ೨೮ ರಂದು ನಡೆಯಲಿದೆ. ಸಾಹಿತಿಯ ಎಲ್ಲ ಕೃತಿಗಳನ್ನು ಓದಿ ದಾಖಲೆ ಮಾಡುತ್ತಿರುವ ವಿಶಿಷ್ಟ ಕಾರ್ಯಕ್ರಮ 'ಎಚ್ಚಸ್ಕೆ ಕೇಳೊತ್ತಿಗೆ ' ಮತ್ತು ಖೋ ಕಾದಂಬರಿ ಪ್ರಗತಿಯಲ್ಲಿದೆ ಎಂದೂ ಶ್ರೀ ಬೆಂ.ಶ್ರೀ. ರವೀಂದ್ರ ಅವರು ತಿಳಿಸಿದರು. ಇದುವರೆಗಿನ ದಾಸೋಹದ ಪಿಡಿಎಫ್ ಸಂಚಿಕೆಗಳನ್ನು ಶ್ರೀ ಎಚ್ ಎಲ್ ಗುರುಪ್ರಸಾದ್ ಅವರು ಸಿದ್ಧಪಡಿಸಿ ಬಿಡುಗಡೆ ಮಾಡಿದ್ದರು. ಈ ಬಾರಿ ಶ್ರೀ ಶೃಂಗೇಶ್ವರ ಶರ್ಮರವರು ಸಾಹಿತ್ಯ ದಾಸೋಹ ೧೯೧ ಸಂಚಿಕೆಯನ್ನು ರೂಪಿಸಿದ್ದು ಈಗ ಬಿಡುಗಡೆ ಮಾಡಲಿದ್ದಾರೆ ಎಂದರು

ಶ್ರೀ ಎಸ್. ಶೃಂಗೇಶ್ವರ ಶರ್ಮರವರು ಮಾತನಾಡಿ ಈ ಹಿಂದೆ ದಾಸೋಹದ ಸಂಚಿಕೆಗಳನ್ನು ಶ್ರೀ ಗುರುಪ್ರಸಾದ್ ಮಾಡುತ್ತಿದ್ದರು. ನನಗೆ ಇದು ಹೊಸ ಅನುಭವ. ೬೩ ಪುಟಗಳಿರುವ ಎಲ್ಲ ಲೇಖನಗಳನ್ನೂ ಓದಿ ಸಂಚಿಕೆಗೆ ಒಂದು ರೂಪ ಕೊಡುವ ಪ್ರಯತ್ನ ಮಾಡಿದ್ದೇನೆ. ಪ್ರಸ್ತುತಿಪಡಿಸಿದ ಎಲ್ಲರಿಗೂ ಅಭಿನಂದನೆಗಳು. ಬರೆಯುವುದು ಸುಲಭ. ಆದರೆ ತಪ್ಪಿಲ್ಲದೆ ಬರೆಯುವುದು ಕಷ್ಟ. ಲೇಖಕರು ಈ ಬಗ್ಗೆ ಗಮನ ಹರಿಸುವುದು ಅಗತ್ಯ. ದಾಸೋಹದಲ್ಲಿ ಪ್ರಸ್ತುತಿಪಡಿಸಿದ ನಂತರ ಅಗತ್ಯ ಮಾರ್ಪಾಡುಗಳಿದ್ದರೆ ಮಾಡಿ ಬರಹಗಳನ್ನು ಮತ್ತೊಮ್ಮೆ ಓದಿ ಪರಿಷ್ಕರಿಸಿ ಕಳಿಸಿ ಎಂದರು. ಸಾಹಿತ್ಯ ದಾಸೋಹ ೧೯೧ರ ಪಿಡಿಎಫ್ ಪ್ರತಿಯನ್ನು ಬಿಡುಗಡೆ ಮಾಡಿ ಸಂಚಿಕೆಯ ಸುಂದರ ಮುಖಪುಟ ಮತ್ತು ಲೇಖನಗಳನ್ನು ಪ್ರದರ್ಶಿಸಿ ಸಂಕ್ಷಿಪ್ತ ವಿವರಣೆ ನೀಡಿದರು. ಸುಮಾರು ೪೨ ಜನ ಪ್ರಸ್ತುತಿ ಪ್ರಕಟಿಸಿದ್ದಾರೆ ಇವುಗಳ ಬಗ್ಗೆ ಅವಲೋಕನ ಮಾಡಿ ಲೇಖನ ಬರೆದರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಬಹುದು ಎಂದರು.

ಇಂದಿನ ದಾಸೋಹದಲ್ಲಿ ೩೧ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಆರ್.ಎಸ್. ಮೂರ್ತಿಯವರು ಮಾತನಾಡಿ ಯಾವುದೇ ನಿರೂಪಣಾ ವಿಧಾನ ಅರ್ಥಪೂರ್ಣವಾಗುವುದಕ್ಕೆ ಕುಶಲತೆ, ಪ್ರತಿಭೆ, ಆಸಕ್ತಿ, ಭಾಷೆಯ ಮೇಲಿನ ಹಿಡಿತ ಮಂತಾದವು ಚೆನ್ನಾಗಿರಬೇಕು.ಅದನ್ನು ಸಾಧನೆ ಮಾಡಿಕೊಳ್ಳುವುದು ಬರಹಗಾರನ ಕೈಯಲ್ಲಿದೆ. ಲೇಖಕರ ಅರಿವು, ಅನುಭವದ ಹಿನ್ನೆಲೆಯಲ್ಲಿ, ಕಲ್ಪನೆ ಭಾವನೆಯನ್ನು ಅಭಿವ್ಯಕ್ತಿಸುವ ರೀತಿಯಲ್ಲಿ ಭಿನ್ನತೆ, ವೈಶಿಷ್ಟ್ಯತೆ ಇರುತ್ತದೆ. ಬರೆದಾಗ ಓದುಗನ ಮನಸ್ಸನ್ನು ಸೆರೆಹಿಡಿಯುವ ಹಾಗೆ ಬರೆಯಬೇಕು. ಸಾಹಿತ್ಯ ಕಾಲಕಾಲಕ್ಕೆ ತಕ್ಕಂತೆ ವಿಕಾಸಗೊಳ್ಳುತ್ತ ಸಮಾಜಕ್ಕೆ ಉಪಯೋಗವಾಗಬೇಕು ಎಂದರು. ನಂತರ ದಾಸೋಹದ ಎಲ್ಲ ಪ್ರಸ್ತುತಿಗಳನ್ನೂ ವಿಶ್ಲೇಷಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕೊನೆಯಲ್ಲಿ ಶ್ರೀ ವೆಂಕಟೇಶ್ (ಮನು) ರವರು ವಂದನಾರ್ಪಣೆ ಮಾಡಿದರು.

(ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು)

ಸಮನ್ವಯ ಸಮಿತಿ – ಕನ್ನಡವೇ ಸತ್ಯ - ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

‘ ವೇದಗಣಿತ ’ ಉಪನ್ಯಾಸಕರು: ಶ್ರೀ ಮಹಾಬಲ ಭಟ್ – ೧೮ನೇ ಜುಲೈ ೨೦೨೧

ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ: ೧೮-೦೭-೨೦೨೧ರಂದು ಭಾನುವಾರ ಸಂಜೆ ೫.೦೦ ಗಂಟೆಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀ ಗಣಪತಿ ಹೆಗಡೆಯವರು ಎಲ್ಲರನ್ನೂ ಸ್ವಾಗತಿಸಿ, ಉಪನ್ಯಾಸಕಾರರಾದ ಶ್ರೀ ಮಹಾಬಲ ಭಟ್ ರವರನ್ನು ಪರಿಚಯಿಸಿದರು.



ಶ್ರೀ ಮಹಾಬಲ ನಾಗೇಂದ್ರ ಭಟ್ ರವರು ಉತ್ತರ ಕನ್ನಡದ ಕುಮಟಾ ತಾಲೂಕಿನ ಉಪ್ಪಿನಪಟ್ಟಣ ಗ್ರಾಮದವರು. ಸಂಸ್ಕೃತ ಎಂಎ ಪದವಿ ಪಡೆದಿರುವ ಇವರು ಗೋವಾದ ಮಾಪುಸಾ ದಲ್ಲಿ ಸೆಂಟ್ ಕ್ಸೇವಿಯರ್ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಪಠ್ಯಪುಸ್ತಕ ರಚನೆಯಲ್ಲಿ ಸಂಚಾಲಕ ರಾಗಿದ್ದಾರೆ. ಸಂಸ್ಕೃತ ಸಂಸ್ಕೃತಿಯ ಪ್ರಚಾರ ದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪರಂಪರಾ ಹಾಗೂ ಸಂಸ್ಕೃತ ಭಾರತಿ ಎಂಬ ಸಂಸ್ಥೆ ಹುಟ್ಟು ಹಾಕಿ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಎಂದು ಪರಿಚಯಿಸಿ ಶ್ರೀ ಮಹಾಬಲ ಭಟ್ ಅವರನ್ನು ಸ್ವಾಗತಿಸಿದರು.

ಸಮನ್ವಯ ಸಮಿತಿ ವೇದಿಕೆ ಸೇರಿದ ಮೇಲೆ ಚಿಂತಕರ ಸಹವಾಸ ಲಭಿಸಿದ್ದರಿಂದ ನನ್ನಲ್ಲಿ ಸಾಕಷ್ಟು ಬೆಳವಣಿಗೆ ಸಾಧ್ಯವಾಗಿದೆ ಎಂದು ತಮ್ಮ ಉಪನ್ಯಾಸ ಆರಂಭಿಸಿದ ಶ್ರೀ ಮಹಾಬಲ ಭಟ್ ರವರು, ವೇದಗಣಿತ ವಿಶಿಷ್ಟವಾದ ವಿಷಯವಾದ ವೇದಗಣಿತದ ಕುರಿತು ನಡೆಸುತ್ತಿರುವ ಮೊದಲ ಅಂತರ್ಜಾಲ ಉಪನ್ಯಾಸ ಇದು ಎಂದು ಹೇಳಿ ಪ್ರಾತ್ಯಕ್ಷಿಕೆಯೊಂದಿಗೆ ವಿವರಣೆ ನೀಡಿದರು.

ವೇದಕ್ಕೂ ಗಣಿತಕ್ಕೂ ಸಂಬಂಧವಿದೆ. ವೇದಗಳು ಅಪೌರುಷೇಯ. ನಾಲ್ಕುವೇದಗಳಿಗೂ ಉಪವೇದಗಳಿವೆ. ಅಥರ್ವಣ ವೇದಕ್ಕೆ ಸ್ಥಾಪತ್ಯ ವೇದವಿದೆ. ಅದರಲ್ಲಿ ಅನೇಕ ಗಣಿತ ವಿಷಯಗಳಿವೆ. ಅದರಲ್ಲಿ ಬರುವ ಕಲ್ಪ ಸೂತ್ರಗಳ ಅನುಬಂಧ ಶುಲ್ಬ ಸೂತ್ರ. ಯಜ್ಞ ವೇದಿಕೆಯನ್ನು ಅಳತೆ, ಆಕಾರ, ಕ್ಷೇತ್ರಫಲ ನಿರ್ಧರಿಸಿ ನಿರ್ಮಿಸಲು ಸೂತ್ರಗಳ ಅವಶ್ಯಕತೆ ಇತ್ತು. ಭೂಮಿತಿ ಶಾಸ್ತ್ರ ಮೊದಲು ಅಭಿವೃದ್ಧಿ ಯಾಯಿತು ಎಂಬ ಅಭಿಪ್ರಾಯವಿದೆ. ವೇದಗಳಲ್ಲಿ ಗಣಿತವಿತ್ತು. ವೇದಾಂಗ ಶಾಸ್ತ್ರಗಳಲ್ಲಿ ಗಣಿತ ಮುಖ್ಯ ಸ್ಥಾನದಲ್ಲಿದೆ. ಆರ್ಯಭಟ, ಭಟ್ಟಾಚಾರ್ಯ ಮೊದಲಾದವರು ಜ್ಯೋತಿಷ್ಯ ಹಾಗೂ ಗಣಿತದಲ್ಲಿ ಅಪಾರ ಸಾಧನೆಗೈದವರು.

ಪರಮಪೂಜ್ಯ ಶ್ರೀ ಭಾರತೀ ಕೃಷ್ಣ ತೀರ್ಥರು ತಮಿಳುನಾಡಿನವರು. ಒಂದೇ ವರ್ಷದಲ್ಲಿ ಏಳು ವಿಷಯಗಳಲ್ಲಿ ಎಂಎ. ಮಾಡಿ ದಾಖಲೆ ಮಾಡಿದ ಇವರು ೧೯೧೯ರಲ್ಲಿ ಸನ್ಯಾಸ ದೀಕ್ಷೆ ಪಡೆದು ಶೃಂಗೇರಿಯಲ್ಲಿ ಶಾಸ್ತ್ರಾಭ್ಯಾಸ ಮಾಡಿದರು. ಅವರು ಒಮ್ಮೆ ಕಿಗ್ಗದ ಕಾಡಿನಲ್ಲಿ ಧ್ಯಾನಕ್ಕೆ ಕುಳಿತಾಗ ಕೆಲವು ಸೂತ್ರಗಳು ಗೋಚರವಾದುದರಿಂದ ಸ್ವಾಮೀಜಿಯವರು ಅವುಗಳಿಗೆ ‘ವೇದಗಣಿತ’ ಎಂದು ಹೆಸರಿಸಿದರು. ವಿದೇಶ ಪ್ರವಾಸ ಮಾಡಿ ಭಾರತೀಯ ತತ್ವ ಶಾಸ್ತ್ರ ಮತ್ತು ವೇದಗಣಿತವನ್ನು ಪ್ರಚುರಪಡಿಸಿದರು. ಶ್ರೀ ಭಾರತೀ ಕೃಷ್ಣ ತೀರ್ಥರು

ಮುಂದೆ ಪುರಿಯ ಗೋವರ್ಧನ ಪೀಠದ ಪೀಠಾಧಿಪತಿಗಳೂ ಆಗಿದ್ದರು. ವೇದಗಣಿತದ ಬಗ್ಗೆ ಇವರು ಬರೆದ ಒಂದು ಪುಸ್ತಕ ಮಾತ್ರ ಲಭ್ಯವಿದ್ದರೆ, ವೇದಗಣಿತದ ಬಗ್ಗೆ ವಿವಿಧ ಲೇಖಕರು ಬರೆದ ವಿವಿಧ ಭಾಷೆಯಲ್ಲಿನ ಅನೇಕ ಪುಸ್ತಕಗಳು ಪ್ರಕಟವಾಗಿವೆ. .

ಒಂಬತ್ತರ ಅಂಕೆಯ ವಿಶೇಷದ ಬಗ್ಗೆ ಕುತೂಹಲಕಾರಿ ಅಂಶಗಳನ್ನು ಹಂಚಿಕೊಂಡ ಶ್ರೀ ಮಹಾಬಲ ಭಟ್ ಅವರು ಯಾವುದೇ ಅಂಕೆಯನ್ನು ಒಂಬತ್ತರಿಂದ ಗುಣಿಸಿದರೆ ಬರುವ ಗುಣಲಬ್ದ ಕೂಡಿಸಿದರೆ ಒಂಬತ್ತೇ ಬರುತ್ತದೆ. ಅಲ್ಲದೆ ಒಂಬತ್ತರ ಮಗ್ಗಿಯನ್ನು ಕೈ ಬೆರಳಿಂದಲೂ ಸುಲಭವಾಗಿ ಮಾಡಬಹುದೆಂದು ತೋರಿಸಿದರು.

ಸೂತ್ರಕ್ಕೆ ವಿವರಣೆ ಇರುವುದಿಲ್ಲ. ಸೂತ್ರವು ಕಡಿಮೆ ಅಕ್ಷರಗಳನ್ನು ಹೊಂದಿ ಹೆಚ್ಚು ಅರ್ಥವ್ಯಾಪ್ತಿ ಪಡೆದಿರುತ್ತದೆ ಎಂದ ಭಟ್ ಅವರು,
ಏಕಾಧಿಕ ಪೂರ್ವ,
ಅಂತ್ಯಯೋರ್ದಶಕೇಪಿ
ಏಕನ್ಯೂನೇನ ಪೂರ್ವೇಣ
ಮುಂತಾದ ಹಲವು ಸೂತ್ರಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ತೋರಿಸಿ ಸುಲಭವಾಗಿ ಲೆಕ್ಕ ಬಿಡಿಸುವ ವಿಧಾನವನ್ನು ವಿವರಿಸಿದರು.

ಗಣಿತಕ್ಕೆ ಭಾರತದ ಕೊಡುಗೆ 'ಶೂನ್ಯ'. ಶೂನ್ಯದಿಂದ ವೈಜ್ಞಾನಿಕ ಪ್ರಗತಿ ಸಾಧ್ಯವಾಗಿದೆ. 'ಶೂನ್ಯ' ಸಹಿತವಾದ ಹಿಂದೂ ನಂಬರನ್ನು ಅರೇಬಿಯನ್ನರು ಯುರೋಪಿಗೆ ತಲುಪಿಸಿದ್ದರಿಂದ ಈಗ ನಾವು ಬಳಸುವ ಸಂಖ್ಯೆಗಳನ್ನು ಹಿಂದೂ ಅರೇಬಿಯನ್ ನಂಬರ್ ಎಂದು ಕರೆಯಲಾಗುತ್ತಿದೆ. ಭಾರತವು ಗಣಿತ ಪ್ರಪಂಚಕ್ಕೆ ಉತ್ತಮ ಕೊಡುಗೆ ಕೊಟ್ಟಿದ್ದು, ಮುಂದೆಯೂ ಕೊಡುವ ಸಾಧ್ಯತೆಗಳಿವೆ.

ಗಣಿತ ಕಬ್ಬಿಣದ ಕಡಲೆ ಎಂಬುದು ಸಾಮಾನ್ಯ ತಿಳವಳಿಕೆ. ಗಣಿತದ ಸ್ವಾರಸ್ಯ ಹೇಳಿ ಕಲಿಸುವ ಶಿಕ್ಷಕರು ಕಡಿಮೆಯಾಗಿರುವುದರಿಂದ ಗಣಿತದ ಬಗ್ಗೆ ವಿದ್ಯಾರ್ಥಿಗಳಿಗೆ ಅಭಿರುಚಿ ಕಡಿಮೆಯಾಗುತ್ತಿದೆ. ಶೂನ್ಯ ಸೇರಿ ಹತ್ತು ಅಂಕೆಗಳ ಜೊತೆ ಆಡಲು ಕಲಿತರೆ ಗಣಿತ ಬಹಳ ಸುಲಭವಾಗುತ್ತದೆ. ಮಕ್ಕಳಿಗೆ ವೇದಗಣಿತ ಅಭ್ಯಾಸ ಮಾಡಿಸಬೇಕು. ಕರಗತವಾದರೆ ಭಾಷೆಯ ಹಾಗೆ ಗಣಿತವೂ ಸುಲಭವೇ ಆಗುತ್ತದೆ. ಹೊಸ ರೀತಿಯನ್ನು ಕಂಡುಹಿಡಿಯಲು ವೇದಗಣಿತದಲ್ಲಿ ಸತ್ವವಿದೆಯೆಂದು ತೋರುವ ಉದ್ದೇಶದಿಂದ ವೇದಗಣಿತವನ್ನು ಹೆಚ್ಚು ಪ್ರಚುರಪಡಿಸಬೇಕಾಗಿದೆ. ಐದು ಗಂಟೆಗಳ ಕಾಲ ಕಮ್ಮಟ ನಡೆಸುವಷ್ಟು ವಿಷಯ ನನ್ನಲ್ಲಿದ್ದು, ಆಸಕ್ತರಿದ್ದರೆ ಅಂತಹ ಕಾರ್ಯಾಗಾರವನ್ನು ನಡೆಸಲು ನಾನು ಸದಾ ಸಿದ್ಧ ಎಂದ ಮಹಾಬಲ ಭಟ್, ಗಣಿತವನ್ನು ದ್ವೇಷಿಸದೆ ಪ್ರೀತಿಸಿದರೆ ವಿಜ್ಞಾನ ಕ್ಷೇತ್ರಕ್ಕೆ ಹೆಚ್ಚು ಸಹಾಯವಾಗುತ್ತದೆ ಎಂದು ಹೇಳಿ ತಮ್ಮ ವಿದ್ವತ್ಪೂರ್ಣ ಉಪನ್ಯಾಸವನ್ನು ಮುಗಿಸಿದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅಂತರ್ಜಾಲ ಸಭಿಕರು ಬಗೆಗೆ ಕೇಳಿದ ಹಲವು ಕುತೂಹಲಕಾರಿ ಪ್ರಶ್ನೆಗಳಿಗೆ ಮಹಾಬಲ ಭಟ್ ಉತ್ತರಿಸಿದರು.

ಪ್ರಧಾನ ಸಂಚಾಲಕರಾದ ಶ್ರೀ ಬೆಂ ಶ್ರೀ ರವೀಂದ್ರರು ಮಾತನಾಡಿ, ಬಹಳ ಆಸಕ್ತಿ ಕೆರಳಿಸುವಂತೆ ಉಪನ್ಯಾಸ ಮಾಡಿದ ಸಂಸ್ಕೃತ ಪಂಡಿತರಾದ ಶ್ರೀ ಮಹಾಬಲ ಭಟ್ ರವರನ್ನು ಪ್ರಶಂಸಿಸಿದರು. ಶ್ರೀನಿವಾಸ ಗಟ್ಟುರವರು ವಂದನಾರ್ಪಣೆ ಮಾಡಿ ವಿದ್ವತ್ಪೂರ್ಣವೂ ಉಪಯುಕ್ತವೂ ಆದ ಉಪನ್ಯಾಸ ನೀಡಿದ ಶ್ರೀ ಮಹಾಬಲ ಭಟ್ ಅವರಿಗೆ, ಅಂತರ್ಜಾಲ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸುಮಾರು ೯೫ ಜನ ಶ್ರೋತೃಗಳಿಗೆ, ಸ್ವಾಗತಿಸಿದ ಶ್ರೀ ಗಣಪತಿ ಹೆಗಡೆಯವರಿಗೆ, ಶ್ರೀ ಬೆಂಶ್ರೀ ರವೀಂದ್ರರಿಗೆ ಮತ್ತು ತಾಂತ್ರಿಕ ನಿರ್ವಹಣೆ ಮಾಡಿದ ಶ್ರೀ ಗುರುರಾಜ ಶಾಸ್ತ್ರಿ ಹಾಗೂ ಶ್ರೀಮತಿ ರೇಣುಕಾ ದೇಸಾಯಿಯವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

(ಈ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು)

ಸಮನ್ವಯ ಸಮಿತಿ – ಕನ್ನಡವೇ ಸತ್ಯ - ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಕಾಳಿದಾಸ ಮಹಾಕವಿಯ ‘ ಮೇಘ ಸಂದೇಶ ’ ಗಮಕ ವಾಚನ

ವಾಚನ: ವಿದುಷಿ ಶ್ರೀಮತಿ ಮಂಗಳಾ ಮರಾಠೆ, ವ್ಯಾಖ್ಯಾನ; ಶ್ರೀಮತಿ ಶಾಂತಾ ನಾಗಮಂಗಲ

೨೪, ೨೫ ಜುಲೈ ೨೦೨೧

ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ ೨೪ ಮತ್ತು ೨೫ ಜುಲೈ ೨೦೨೧ರ ಶನಿವಾರ ಮತ್ತು ಭಾನುವಾರ ಎರಡು ದಿನಗಳೂ ಸಂಜೆ ೦೫.೦೦ ಗಂಟೆಗೆ ಗಮಕ ವಾಚನ ವ್ಯಾಖ್ಯಾನ ಕಾರ್ಯಕ್ರಮ ಪ್ರಸಾರವಾಯಿತು.



ಕಳೆದ ವರ್ಷ ಕೊರೋನಾ ಹರಡದಂತೆ ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸಿದಾಗ ನಮ್ಮ ವೇದಿಕೆಯಲ್ಲಿ ನಿರಂತರವಾಗಿ ನಡೆಯುತ್ತಿದ್ದ ಸಾಹಿತ್ಯ ದಾಸೋಹದಂತಹ ಕಾರ್ಯಕ್ರಮಗಳನ್ನು ಕೈಬಿಡದೆ, ಅಂತರ್ಜಾಲದ ಮೂಲಕ ಮುಂದುವರೆಸಬೇಕೆಂಬ ದೃಷ್ಟಿಯಿಂದ ಆನ್ ಲೈನ್ ಕಾರ್ಯಕ್ರಮಗಳಿಗೇ ಮೀಸಲಾದ ‘ನೋಡಿಯೋ ಸಾಹಿತ್ಯ ವೇದಿಕೆ’ ಸೃಷ್ಟಿಯಾಯಿತು. ಈ ವೇದಿಕೆಯ ಪ್ರಾರಂಭದ ದಿನಗಳಲ್ಲಿ ನಡೆದ ಎರಡು ಮುಖ್ಯ ಅಂತರ್ಜಾಲ ಕಾರ್ಯಕ್ರಮಗಳೆಂದರೆ ಶ್ರೀಮತಿ ರತ್ನಾಮೂರ್ತಿ ಮತ್ತು ಶ್ರೀಮತಿ ಸುಮಾ ಪ್ರಸಾದ್ ಅವರು ನಿರಂತರವಾಗಿ .ಐದು ದಿನಗಳ ಕಾಲ ನಡೆಸಿಕೊಟ್ಟ ‘ತೊರವೆ ರಾಮಾಯಣ’ ಹಾಗೂ ಶ್ರೀಮತಿ ಶಾಂತಾ ನಾಗಮಂಗಲ ಮತ್ತು ಶ್ರೀಮತಿ ಮಂಜುಳಾ ಮರಾಠೆಯವರು ಮೂರು ದಿನಗಳ ಕಾಲ ನಡೆಸಿಕೊಟ್ಟ ‘ಮೇಘದೂತ’ ಗಮಕ ವಾಚನ, ವ್ಯಾಖ್ಯಾನ ಕಾರ್ಯಕ್ರಮಗಳು.

ಆಗಿನ್ನೂ ನಮ್ಮ ವೇದಿಕೆಯು ಯುಟ್ಯೂಬ್ ಪ್ರಸಾರ ಅರಂಭಿಸಿರಲಿಲ್ಲ. ಆದರೆ ಶ್ರೀ ಎಚ್.ಎಲ್.ಗುರುಪ್ರಸಾದ್ ಅವರು ತಮ್ಮ ದೂರದೃಷ್ಟಿಯಿಂದ ‘ಮೇಘದೂತ’ ಗಮಕ ವಾಚನ ಕಾರ್ಯಕ್ರಮವನ್ನು ಧ್ವನಿಮುದ್ರಣ ಮಾಡಿಕೊಂಡಿದ್ದರು. ಆ ನಂತರ ಅವರು ಅಂದಿನ ಐದೂವರೆ ಗಂಟೆಗಳ ಕಾರ್ಯಕ್ರಮವನ್ನು ಸಂಕಲಿಸಿ, ಪರಿಷ್ಕರಿಸಿ, ನಡುನಡುವೆ ಸೂಕ್ತ ಚಿತ್ರಗಳನ್ನು ಅಳವಡಿಸಿ, ‘ಮೇಘದೂತ’ ಕಾರ್ಯಕ್ರಮವನ್ನು ಸುಮಾರು ಮೂರುಗಂಟೆಗಳ ಚಚಿತ್ರವಾಗಿ ರೂಪಿಸಿದರು. ಈ ಸಂಕಲಿತ ಕಾರ್ಯಕ್ರಮವನ್ನು ಪ್ರತಿ ದಿನ ಒಂದೂವರೆ ಗಂಟೆಗಳಂತೆ ಎರಡು ಭಾಗಗಳಲ್ಲಿ ದಿನಾಂಕ ೨೪ ಮತ್ತು ೨೫ನೇ ಜುಲೈ ೨೦೨೧ ರಂದು ಪ್ರತಿದಿನ ಒಂದೂವರೆ ಗಂಟೆಗಳಂತೆ ನಮ್ಮ ನೋಡಿಯೋ ಸಾಹಿತ್ಯ ವೇದಿಕೆಯಲ್ಲಿ ಪ್ರಸಾರ ಮಾಡಲಾಯಿತು. ಯೂಟ್ಯೂಬ್ ಮೂಲಕ ಈ ಕಾರ್ಯಕ್ರಮದ ನೇರ ಪ್ರಸಾರವನ್ನೂ

ಹಮ್ಮಿಕೊಳ್ಳಲಾಗಿತ್ತು.

ಆರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಶ್ರೀ ಬೆಂ.ಶ್ರೀ.ರವೀಂದ್ರರವರು ಗಮಕ ವಾಚನ ಕಾರ್ಯಕ್ರಮವನ್ನು ಪುನಃ ಪ್ರಸಾರಮಾಡಲು ಒಪ್ಪಿಗೆ ನೀಡಿದ ಶ್ರೀಮತಿ ಶಾಂತಾ ನಾಗಮಂಗಲ ಹಾಗೂ ಶ್ರೀಮತಿ ಮಂಜುಳಾ ಮರಾಠೆ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಅತ್ಯಂತ ಶ್ರಮ ಹಾಗೂ ತಾಳ್ಮೆಯಿಂದ ಮೇಘದೂತ ಗಮಕ ವಾಚನವನ್ನು ವಿಡಿಯೋಗೆ ಚಿತ್ರಗಳ ಸಮೇತ ಸಿದ್ದಪಡಿಸಿ ಕಾರ್ಯಕ್ರಮವನ್ನು ನೋಡಲು ಅವಕಾಶ ಮಾಡಿಕೊಟ್ಟ ಶ್ರೀ ಎಚ್.ಎಲ್ ಗುರುಪ್ರಸಾದ್ ಅವರಿಗೆ ತುಂಬುಮನದ ವಂದನೆಗಳನ್ನು ಅರ್ಪಿಸಿದರು.

ನಂತರ ಶ್ರೀ ಗುರುಪ್ರಸಾದ್ ಅವರು ತಾವು ಈ ಹಿಂದೆ ಧ್ವನಿ ಮುದ್ರಿಸಿಕೊಂಡಿದ್ದ ಕಾರ್ಯಕ್ರಮಗಳನ್ನು ಸಚಿತ್ರ ವೀಡಿಯೋ ರೂಪಕವಾಗಿ ನಿರ್ಮಿಸಿದ ವಿವಿಧ ಹಂತಗಳ ಬಗ್ಗೆ ಮತ್ತು ತಾಂತ್ರಿಕ ಸಂಯೋಜನೆಯ ಬಗ್ಗೆ ಮಾಹಿತಿಗಳನ್ನು ವಿವರಿಸಿದರು.

ಎರಡು ದಿನಗಳ ಗಮಕ ವಾಚನ ವ್ಯಾಖ್ಯಾನವನ್ನು ಪ್ರಸಾರ ಮಾಡಿದ ನಂತರ ಶ್ರೀಮತಿ ಶೀಲಾ ಅರಕಲಗೂಡು ಅವರು ವಂದನಾರ್ಪಣೆ ಮಾಡಿದರು.

ಮೋಡಗಳ ಮೂಲಕ ಸಂದೇಶ ಕಳಿಸುವ ಮಹಾಕವಿ ಕಾಳಿದಾಸನ ಪರಿಕಲ್ಪನೆ, ಸಾಹಿತ್ಯ ಶ್ರೀಮಂತಿಕೆ ಹಾಗೂ ಕಾವಯ್ದು ಸುಶ್ರಾವ್ಯ ಗಾಯನ ಮತ್ತು ವ್ಯಾಖ್ಯಾನ ಮಾತ್ರವಲ್ಲದೆ ಅದನ್ನು ಮತ್ತೊಮ್ಮೆ ವಿಶಿಷ್ಟವಾಗಿ ಪ್ರಸಾರ ಮಾಡಿದ ಶ್ರೀ ಗುರುಪ್ರಸಾದರ ತಾಂತ್ರಿಕ ಪರಿಣತಿ, ಕಾರ್ಯಕ್ರಮದಲ್ಲ ಅಂತರ್ಜಾಲದ ಮೂಲಕ ವೀಕ್ಷಿಸಿದ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

(ಈ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು)

ಯಾರಿವ ಕಾಳಿದಾಸ

ಕಾಳಿದಾಸನೆ ಯಕ್ಷನೆ
ಕಾವ್ಯದಲರಳಿದ ವಿರಹ
ವೇದವೇ ಮೇಘದೂತವೆ

ಭೋಜನು ಬುವಿಗೆ ರಾಜನು
ಕಾಳಿದಾಸನು ರಸಿಕ ರಾಜನು
ಬುವಿಯೆಲ್ಲಾ ಅಲಕಾಪುರಿಯೇ
ಹುಡುಕಿನೋಡಿ ನಿಮ್ಮ ಒಳಗನು
ಯಕ್ಷ ಯಕ್ಷಿಯರಲ್ಲಿ ಅವಿತಿಹರು
ಹಾಡುತಲಿ ವಿರಹ ರಾಗವನು

ಕಿವಿಗೊಟ್ಟು ಕೇಳಿರಾನುಡಿ
ಕಳಿಸಲಿಹುದು ನಿಮ್ಮ ಯಕ್ಷ
ಯಕ್ಷಿಗೆ ಯಾರೂ ಕೇಳದ ಸಂದೇಶ

ಮೇಘದೂತವು ಎಂಥಾ ಮಾಟವು
ತೆರೆವುದೆಮಗೆ ಎಮ್ಮನದ ಆಟವು
ಅದಕೆ ಮರಳುವುದು ಆಷಾಢ

ಇಂದು ಮರಳುವುದು ಗಮಕವಾಚನ
ದಿವ್ಯಪ್ರತಿಭೆಯ ಅಮರ ಕಾವ್ಯಕೆರಗಿ
ನಮ್ಮಹಾಡ ನಮಗೆ ಹಾಡಿದೆ ನೂರಾಗಿ

… **ಬೆಂಶ್ರೀ ರವೀಂದ್ರ/ ೧೪-೦೭-೨೧**

ಸಮನ್ವಯ ಸಮಿತಿ – ಕನ್ನಡವೇ ಸತ್ಯ - ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಶ್ರೀ ಬೆಂ.ಶ್ರೀ. ರವೀಂದ್ರ ಅವರ

' ಆದಿಯೂ ನೆಟ್‌ನ ಪಾಠವೂ'

ಉಪನ್ಯಾಸಕರು: ಮಕ್ಕಳ ಕವಿತೆಗಳ ಸಂಕಲನ ಬಿಡುಗಡೆ ಕಾರ್ಯಕ್ರಮ – ೦೭ನೇ ಆಗಸ್ಟ್ ೨೦೨೧

ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ ೦೭ನೇ ಆಗಸ್ಟ್ -೨೦೨೧ರಂದು ಶನಿವಾರ ಸಂಜೆ ೦೫.೩೦ಕ್ಕೆ ಕುಮಾರಿ ಅದಿತಿಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ವೇದಿಕೆಯ ಸಂಚಾಲಕರಲ್ಲಿ ಒಬ್ಬರಾದ ಶ್ರೀ ಎಚ್.ಎಲ್.ಗುರುಪ್ರಸಾದ್ ರವರು ಎಲ್ಲರನ್ನೂ ಸ್ವಾಗತಿಸಿದರು.



ಗೂಗಲ್ ಅಂತರ್ಜಾಲದ ಮೂಲಕ ನಡೆದ ಈ ಕಾರ್ಯಕ್ರಮದ ಮುಖ್ಯ ಅತಿಥಿಗಳನ್ನು ಪರಿಚಯಿಸಿದ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್ ಮಹಾಬಲ ಅವರು -

- 'ಆದಿಯೂ ನೆಟ್ ನ ಪಾಠವೂ' ಕೃತಿಯನ್ನು ಹುಬ್ಬಳ್ಳಿಯಿಂದ ಲೋಕಾರ್ಪಣೆ ಮಾಡಲಿರುವ ಡಾ. ಗೋವಿಂದ ಹೆಗಡೆಯವರು ಅರವಳಿಕೆ ತಜ್ಞರು. ಖ್ಯಾತ ಕವಿ, ಚಿಂತಕರು. ಇವರು ನೂರಾರು ಗಜಲ್ ಗಳನ್ನು ಬರೆದಿದ್ದು ಕಿರಿಯ ಕವಿಗಳಿಗೆ ಅಗತ್ಯ ಮಾರ್ಗದರ್ಶನಗಳನ್ನೂ ನೀಡುತ್ತಿದ್ದಾರೆ;
- ಶ್ರೀ ಬೆಂ.ಶ್ರೀ.ರವೀಂದ್ರರ ಕೃತಿಯ ಪರಿಚಯ ಮಾಡಲಿರುವ ನಗೆಸಿಂಹ ಶ್ರೀ ಎಂ.ಎಸ್. ನರಸಿಂಹಮೂರ್ತಿಯವರು ಸುಮಾರು ೫೨ ವರ್ಷಗಳಿಂದ ಹಾಸ್ಯದೌತಣ ನೀಡುತ್ತಾ ಬಂದಿದ್ದು, ೧೦೦೦೦ ಕ್ಕೂ ಹೆಚ್ಚು ಟಿವಿ ಎಪಿಸೋಡ್ ಗಳನ್ನು ಬರೆದಿದ್ದಾರೆ;
- ಮತ್ತೋರ್ವ ಅತಿಥಿಯಾದ ಚಿತ್ರನಟಿ ಕುಮಾರಿ ಸಂಯುಕ್ತ ಹೊರನಾಡು ಅವರು ಕಲಾವಿದೆ ಶ್ರೀಮತಿ ಸುಧಾ ಬೆಳವಾಡಿಯವರ ಪುತ್ರಿಯಾಗಿದ್ದು, ಮಕ್ಕಳ ಹಕ್ಕುಗಳ ಹೋರಾಟದಲ್ಲಿ ತೊಡಗಿದ್ದಾರೆ ಎಂದು ಪರಿಚಯಿಸಿದರು.

ಕುಮಾರಿ ಸಂಯುಕ್ತ ಹೊರನಾಡು ಅವರು ಮಾತನಾಡಿ, ಇಂದು ಅಂತರ್ಜಾಲ ಮತ್ತು ಸಾಮಾಜಿಕ ಜಾಲತಾಣಗಳು ಮಕ್ಕಳ ಮೇಲೆ ಬಹಳ ಪರಿಣಾಮ ಬೀರುತ್ತಿವೆ. ಮಕ್ಕಳು ಹೆತ್ತವರ ಜೊತೆ ಹೆಚ್ಚು ಸಮಯ ಕಳೆಯಬೇಕು, ಜೊತೆಗೇ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಶ್ರೀ ಬೆಂ.ಶ್ರೀ.ರವೀಂದ್ರರ ಕವನ ಸಂಕಲನ ಮಕ್ಕಳ ಮನೋವಿಕಾಸಕ್ಕೆ ತುಂಬ ಉಪಯುಕ್ತವಾಗಿದೆ. ಕನ್ನಡದಲ್ಲಿ ಮಕ್ಕಳ ಕವನಗಳ ಸಂಕಲನ ಹೊರತಂದಿರುವುದು ಸಂತಸದ ವಿಷಯ ಎಂದು ಹೇಳಿದರು.

'ಆದಿಯೂ ನೆಟ್ ನ ಪಾಠವೂ' ಪುಸ್ತಕದ ಲೋಕಾರ್ಪಣೆ ಮಾಡಿದ ಡಾ ಗೋವಿಂದ ಹೆಗಡೆಯವರು, ಮಕ್ಕಳ ಸಾಹಿತ್ಯ ಪರಂಪರೆಯ ಭಾಗವಾಗಿರುವುದಕ್ಕೆ ರವೀಂದ್ರರಿಗೆ ಅಭಿನಂದನೆಗಳನ್ನು ತಿಳಿಸಿದರು. ಕನ್ನಡ ಮಕ್ಕಳ ಸಾಹಿತ್ಯದ ಬೇರುಗಳು ಜನಪದ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಇದೆ. ಮಕ್ಕಳ ಸಾಹಿತ್ಯವು ಮಕ್ಕಳ ಕಲ್ಪನಾ ಶಕ್ತಿಗೆ ಇಂಬುಕೊಡುವ, ರೆಕ್ಕೆ ಹಚ್ಚುವ, ಬದುಕಿನ ಪಾಠವನ್ನು ಹೇಳಿಕೊಡುವ ಕೆಲಸ ಮಾಡುತ್ತವೆ. ಜಾನಪದ ಹಾಡುಗಳು, ಸೂಕ್ತಿ. ಸುಭಾಷಿತ, ಒಗಟುಗಳು ಮುಂತಾದುವು ಮಕ್ಕಳ ಕಲ್ಪನೆ ಮತ್ತು

ಪದಸಂಪತ್ತನ್ನು ಬೆಳೆಸಿವೆ. ದೇವತೆಯಾಗಿ ಹುಟ್ಟುವ ಮಗು ಬೆಳೆದಂತೆಲ್ಲ ರೆಕ್ಕೆ ಸಣ್ಣದಾಗದಂತಿರಲು ಕತೆ ಕಾವ್ಯ ಬೇಕು. ಹೊಸಗನ್ನಡ ಸಾಹಿತ್ಯದಲ್ಲಿ ಗ್ರಹಿಸುವ ರೀತಿಯಲ್ಲಿ ಮಕ್ಕಳ ಸಾಹಿತ್ಯ ಬಂದಿರುವುದು ಇಂಗ್ಲೀಷಿನ ಪ್ರಭಾವದಿಂದ ಮತ್ತು ಅನುವಾದಗಳಿಂದ ಎಂದು ಅಭಿಪ್ರಾಯಪಟ್ಟರು.

ನವೋದಯದ ಹೆಚ್ಚಿನ ಹಿರಿಯರು ಶಿಶು ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ. ಡಿವಿಜಿ, ಕಾರಂತ, ಪಂಜೆ, ಕುವೆಂಪು, ಕಲ್ಯಾಣಮ್ಮ, ಎಂಪಿ ಮನೋಹರಚಂದ್ರನ್, ರಸಿಕ ಪುತ್ತಿಗೆ, ಸುನಂದಾ ಕಡಮೆ, ಶಂ.ಗು. ಬಿರಾದಾರ, ಪಳಕಳ ಸೀತಾರಾಮ ಭಟ್ಟ, ಸಿದ್ದಯ್ಯ ಪುರಾಣಿಕ, ಸಿಸು ಸಂಗಮೇಶ ಮೊದಲಾದವರು ಮಕ್ಕಳ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ನೀಡಿದ್ದು, ಅಪ್ಪಟ ಕನ್ನಡದ ಮೊದಲ ಶಿಶುಗೀತೆ 'ನಾಯಿಮರಿ ನಾಯಿಮರಿ'ಯನ್ನು ರಚಿಸಿ ಹಿರಿದಾದ ಪರಂಪರೆಗೆ ನಾಂದಿ ಹಾಡಿದ ಜಿ.ಪಿ ರಾಜರತ್ನಂ ಅವರನ್ನು ಸ್ಮರಿಸಿದರು. ನಿರಂಜನ (ದಿನಕ್ಕೊಂದು ಕತೆ), ಆರ್ ನರಸಿಂಹಾಚಾರ್ಯ (ಅಪ್ಪನ ಜೇಬಿನ ನೋಟುಗಳೆಲ್ಲ ಚಟಪಟಗುಟ್ಟುತ ಸಿಡಿಯುವವು- ಪಟಾಕಿ ಕವನ), ಬೊಳುವಾರು ಮಹಮ್ಮದ್ ಕುಂಞಿ (ತಟ್ಟು ಚಪ್ಪಾಳೆ ಪುಟ್ಟ ಮಗು- ಸಂಪಾದಿತ ಶಿಶು ಗೀತೆಗಳ ಸಂಕಲನ), ಶಂಕರನಾರಾಯಣ ರಾಯರು (ಬಾಳೆಯ ತೋಟದ ಪಕ್ಕದ ಕಾಡೊಳು), ಎಚ್.ಎಸ್.ವೆಂಕಟೇಶ ಮೂರ್ತಿ (ಹುಯ್ಯೋ ಹುಯ್ಯೋ ಮಳೆರಾಯ) ಮುಂತಾದವರ ಜನಪ್ರಿಯ ಕೃತಿಗಳನ್ನು ಹೆಸರಿಸಿದ ಡಾ. ಗೋವಿಂದ ಹೆಗಡೆಯವರು ಇತ್ತೀಚಿನ ದಿನಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಿರುವ ವಿಜಯಶ್ರೀ ಹಾಲಾಡಿ, ಚಿಂತಾಮಣಿ ಕೊಡ್ಲೆಕೆರೆ, ಲಿಂಗರಾಜ ಮೊದಲಾದವರ ಸಾಲಿಗೆ ಈಗ ರವೀಂದ್ರರು ಸೇರ್ಪಡೆಯಾಗಿದ್ದಾರೆ ಎಂದು ಹೇಳಿದರು. . ಪಶ್ಚಿಮ ಬಂಗಾಳದಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಾಹಿತ್ಯ ಪ್ರಶಸ್ತಿಗಳಿಲ್ಲ. ಇಂತಹ ನಿಯಮ ಎಲ್ಲೆಡೆ ಬಂದರೆ ನಾಡಿನಲ್ಲಿ ಮಕ್ಕಳ ಸಾಹಿತ್ಯದ ಬೆಳವಣಿಗೆ ಹೆಚ್ಚು ಸುಧಾರಿಸುತ್ತದೆ. ಮಕ್ಕಳ ಸಾಹಿತ್ಯ ಬೇರೆ ಬೇರೆ ಆಯಾಮಗಳಲ್ಲಿ ಚರ್ಚೆಗೆ ಬರುವುದು ಅಗತ್ಯ ಎಂದೂ ಅವರು ಹೇಳಿದರು.

ಒಟ್ಟು ಎಪ್ಪತ್ತು ಕವನಗಳನ್ನೊಳಗೊಂಡ ಈ ಕೃತಿಯಲ್ಲಿ ಎಲ್ಲ ಕವನಗಳೂ ಚಿತ್ರ ಸಹಿತವಾಗಿರುವುದಕ್ಕೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ ಗೋವಿಂದ ಹೆಗಡೆಯವರು, ೧೦ ಕವಿತೆಗೆ ಆದಿಯೇ ನಾಯಕ. ಆದಿಯ ತಂಟೆ, ತುಂಟತನ, ಕಿತಾಪತಿಗಳನ್ನು ನೆನಪಿಸಿಕೊಂಡು ನಮ್ಮ ಬಾಲ್ಯವನ್ನು ಮೆಲುಕು ಹಾಕುವಂತಾಗಿದೆ. ಲವಲವಿಕೆಯ ಸಾಲುಗಳಲ್ಲಿ ಕವಿತೆ ಕಟ್ಟಿದ್ದಾರೆ. ಪಂಚತಜತ್ರದ ಕತೆಗಳು ಕವಿತೆಗಳಾಗಿವೆ. ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಅಪೂರ್ವ ಕವಿತೆಯು ಇಲ್ಲಿ 'ಚಿರತೆ ಹಾರುತಿದೆ' ಎಂಬ ಅಣಕವಾಡು ಆಗಿದೆ. ಈ ಕೃತಿಯ ಉದ್ದಕ್ಕೂ ನಾಯಿ, ಬೆಕ್ಕು, ಸುತ್ತಲಿನ ಪರಿಸರದ ಬಗ್ಗೆ, ವ್ಯಕ್ತಿಗಳ ಬಗ್ಗೆ , ಕನ್ನಡದ ಬಗ್ಗೆ ಕವಿತೆಗಳಿವೆ. 'ಬ್ಯಾ ಬ್ಯಾ ಕಪ್ಪು ಕುರಿ' ಎಂಬಂತಹ ಕೆಲವು ಶ್ರೇಷ್ಠ ಪದ್ಯಗಳ ಅನುವಾದಗಳೂ ಇವೆ. ಗೋವಿನ ಹಾಡಿನಲ್ಲಿ ಬರುವ ಹುಲಿಯ ದೃಷ್ಟಿಕೋನವನ್ನು ಆಧರಿಸಿದ 'ಅರ್ಬುದನ ಹಾಡು' ಮತ್ತು ಮಡಿದ ವೀರ ಯೋಧನನ್ನು ಮುಗ್ಧ ಮಗುವಿನ ಕಣ್ಣಲ್ಲಿ ಕಾಣುವ 'ಯಾಕಳುತಾ ಕುಂತಿ' ಕವನಗಳನ್ನು ಗೋವಿಂದ ಹೆಗಡೆಯವರು ವಿಶೇಷವಾಗಿ ವಿಶ್ಲೇಷಿಸಿ ತಮ್ಮ ಮೆಚ್ಚುಗೆ ಸೂಚಿಸಿದರು. ಕೆಲವು ಕವನಗಳು ತುಸು ಹೆಚ್ಚು ಅನ್ನುವಷ್ಟರ ಮಟ್ಟಿಗೆ ಇಂಗ್ಲೀಷುಮಯವಾಗಿವೆ. ಅಂದರೆ ಕಂಗ್ಲೀಷ್ ಆಗುತ್ತಿರುವ ಇವತ್ತಿನ ಕನ್ನಡಕ್ಕೆ ಇವರು ಕನ್ನಡಿ ಹಿಡಿದಿದ್ದಾರೆ ಅನ್ನಿಸುತ್ತದೆ. ಮುಂಬರಲಿರುವ ಇವರ ರಚನೆಗಳು ಕನ್ನಡಿಯ ಜೊತೆಗೆ ದೀಪವೂ ಆಗಲಿ ಎಂದು ಆಶಿಸಿದರು.

ಪ್ರಸಿದ್ಧ ಕತೆಗಾರರಾದ ಬೊಳುವಾರು ಮಹಮದ್ ಕುಂಞ ಮತ್ತು ಗುರುಪ್ರಸಾದ್ ರವರ ಬೆನ್ನುಡಿ ಇದ್ದು, ಬಹುಶ್ರುತ ವಿದ್ವಾಂಸರೂ ಕವಿಗಳೂ ಆದ ಶ್ರೀ ಬಿ.ಎಸ್.ಚಂದ್ರಶೇಖರ್, ಕವಿ ಕೆ.ಎನ್.ಮಹಾಬಲ, ವಿದುಷಿ ರತ್ನಾ ಮೂರ್ತಿ, ಕತೆಗಾರ್ತಿ ಶ್ರವಣ ಕುಮಾರಿಯವರು ಕೃತಿಯ ಬಗ್ಗೆ ಸೂಕ್ತ ಒಳನೋಟ ಬೀರಿರುವುದಲ್ಲದೆ, ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಜನಾರ್ದನ ತುಂಗರವರು ರವೀಂದ್ರರ ಈ ಕೃತಿಯ ಬಗ್ಗೆ ಪರಾಮರ್ಶೆ ಮಾಡಿರುವುದು ಶ್ಲಾಘನೀಯ ಪ್ರಯತ್ನ ಎಂದೂ ಗೋವಿಂದ ಹೆಗಡೆ ಅಭಿಪ್ರಾಯ ವ್ಯಕ್ತಪಡಿಸಿದರು.

ನಗೆ ಬರಹಗಾರ ಶ್ರೀ ಎಂ.ಎಸ್.ನರಸಿಂಹಮೂರ್ತಿಯವರು ತಮ್ಮದೇ ಆದ ಹಾಸ್ಯಮಯ ಶೈಲಿಯಲ್ಲಿ ಮಾತನಾಡುತ್ತಾ, ಬೆಂಗಳೂರಿನಲ್ಲಿ ಶ್ರೀಮತಿ ಕಲ್ಯಾಣಮ್ಮ ಅವರು ಏರ್ಪಡಿಸಿದ ಮಕ್ಕಳ ಸಾಹಿತ್ಯ ಸಮ್ಮೇಳನವೊಂದರಲ್ಲಿ ಬೆಂ.ಶ್ರೀ. ರವೀಂದ್ರರವರು ತಮ್ಮ ಹನ್ನೆರಡನೇ ವಯಸ್ಸಿನಲ್ಲೇ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು ಮತ್ತು ಒಂಬತ್ತನೇ ವಯಸ್ಸಿನಲ್ಲೇ ಮೊದಲ ಕವನ ಬರೆದಿದ್ದರು ಎಂದು ನೆನಪಿಸಿದರು. ರವೀಂದ್ರರ ಮೊದಲ ಕವನ ಸಂಕಲನ 'ಶೂನ್ಯವಲ್ಲದೆ ಬೇರೆ" ಕೃತಿಯ ಕವನಗಳಲ್ಲಿನ ಹಲವಾರು ಸಾಲುಗಳನ್ನು ಉದಾಹರಿಸಿದ ಎಂಎಸ್ಸೆನ್ ಅದಕ್ಕೆ ಸಂಬಂಧಿಸಿದ ಕೆಲವು ,ಘಟನೆಗಳ ಹಿನ್ನಲೆಯನ್ನು ವಿವರಿಸಿದರು. "ಆದಿಯೂ ನೆಟ್ ನ ಪಾಠವೂ" ಒಂದು ಅಪರೂಪದ ಮಕ್ಕಳ ಕವನ ಸಂಕಲನವಾಗಿದ್ದು, ಜಾಗತಿಕ ವಿಷಯಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ, ಗಂಭೀರ ರಚನೆಗಳುಳ್ಳ ಈ ಸಂಕಲನದಲ್ಲಿ ಮಕ್ಕಳನ್ನು ಗುರುತಿಸಿ, ಪ್ರತಿಯೊಂದು ಕವನಕ್ಕೂ ಮಕ್ಕಳಿಗೆ ಖುಷಿಕೊಡುವಂತಹ ಸೂಕ್ತ ಚಿತ್ರಗಳನ್ನು ರಚಿಸಿ ಪ್ರಕಟಿಸಿರುವುದು ಸಂತೋಷದ ವಿಷಯ ಎಂದು ಹೇಳಿ, ಸಂಕಲನದಲ್ಲಿರುವ 'ಕಪ್ಪೆಗಳ ಮದುವೆ' ಮತ್ತು 'ಬ್ಯಾಬ್ಯಾ ಕಪ್ಪು ಕುರಿ' ಕವನಗಳ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಬ್ಯಾ ಬ್ಯಾ ಬ್ಲಾಕ್ ಶಿಪ್ ಮೂಲತಃ ಒಂದು ಕ್ರಾಂತಿಕಾರಿ ಪದ್ಯವಾಗಿದ್ದು, ಇದು ಅಂದಿನ ಬ್ರಿಟಿಷ್ ಸರಕಾರದ ವಿರುದ್ಧ ಪ್ರತಿಭಟನೆಯ ಸಂಕೇತವಾಗಿ ರೂಪುಗೊಂಡ ಪದ್ಯ. ಇಂದು ಇದು ವಿವಿಧ, ವಿಭಿನ್ನ ರೂಪ ತಳೆದಿದೆ ಎಂದು ಹೇಳಿದರು.


ಕಾರ್ಯಕ್ರಮದುದ್ದಕ್ಕೂ ನಡುನಡುವೆ 'ಆದಿಯೂ ನೆಟ್ ನ ಪಾಠವೂ' ಸಂಕಲನದ ವಿವಿಧ ಕವನಗಳನ್ನು ಮಕ್ಕಳು ಹಾಗೂ ಹಿರಿಯರು ಹಾಡಿದ, ಓದಿದ ವಿಡಿಯೋ ತುಣುಕುಗಳನ್ನು ಬಿತ್ತರಿಸಲಾಯಿತು. ಇದರಲ್ಲಿ ಮಕ್ಕಳಾದ ಆದಿತ್ಯ, ಚೈತ್ರ, ಸ್ಕಂದ, ಇಂಚರ, ಆದಿ, ಅಶ್ವಿನ್, ಸಾನ್ವಿ, ಶ್ರೇಯಾ ಅಶ್ವಿನ್ ಚಂದ್ರ, ದೀಪ್ತಿ, ಅಥರ್ವ, ಅದಿತಿ, ಪ್ರಣವ್, ಶ್ರೇಯಾ, ಮಾನ್ಯ ಬಿ, ಸಿರಿ ರಂಗನಾಥ, ಶ್ರೇಯಾ ಹಾಗೂ ಹಿರಿಯರಾದ ಮಂಗಳಾ ನಾಡಿಗ್, ಲಕ್ಷ್ಮಿ ವಿಠಲ್, ಎಚ್ ಎಲ್ ಗುರುಪ್ರಸಾದ್, ಶ್ರವಣಕುಮಾರಿ, ಶ್ರೀರಂಗರಾಜನ್, ರಾಧಿಕಾ ಗುಜ್ಜರ್, ಮಾಲತಿ ಶ್ರೀನಿವಾಸನ್, ಚಾಂದಿನಿ ಗರ್ತಿಕೆರೆ, ಪಲ್ಲವಿ, ರವಿರಾಜ ಒಡೆಯೂರು ಮೊದಲಾದವರು ಪಾಲ್ಗೊಂಡಿದ್ದರು.

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಕವಿ, ಚಿಂತಕ ಶ್ರೀ ಬಿ.ಎಸ್.ಚಂದ್ರಶೇಖರ್ ರವರು, ಇಪ್ಪತ್ತೈದು ವರ್ಷಗಳ ಹಿಂದೆ ತಮ್ಮ ಮೊದಲ ಕವನ ಸಂಕಲನ ತಂದ ರವೀಂದ್ರರು, ತಮ್ಮ ಸಂಘಟನೆಯ ಕೆಲಸಗಳ ನಡುವೆ ಸಾಕಷ್ಟು ಬರೆದಿದ್ದಾರೆ. ಈಗ ಮಕ್ಕಳಿಗಾಗಿ ಬರೆದಿದ್ದು ವಿಶೇಷ ಎಂದು ಹೇಳಿದರಲ್ಲದೆ, ಈ ಕೃತಿಯನ್ನು ಲೋಕಾರ್ಪಣೆ ಮಾಡಿ, ವಿಮರ್ಶಾತ್ಮಕವಾಗಿ ಮತ್ತು ಅರ್ಥಪೂರ್ಣವಾಗಿ ಮಾತನಾಡಿದ ಡಾ.ಗೋವಿಂದ ಹೆಗಡೆಯವರಿಗೆ ಮತ್ತು ಮುಖ್ಯ ಅತಿಥಿಯಾಗಿ ಸಂಕಲನದ ಕವನಗಳಲ್ಲಿನ ಸ್ವಾರಸ್ಯಕರ ಅಂಶಗಳನ್ನು ವಿಶ್ಲೇಷಿಸಿದ ಶ್ರೀ ಎಂ.ಎಸ್.ನರಸಿಂಹ ಮೂರ್ತಿಯವರಿಗೆ ಹಾಗೂ ಸಾಂದರ್ಭಿಕ ಮಾತುಗಳನ್ನಾಡಿದ ಕುಮಾರಿ ಸಂಯುಕ್ತ ಹೊರನಾಡು ಅವರಿಗೆ ವಂದನೆಗಳನ್ನು ಸಲ್ಲಿಸಿದರು. ಕವನ ಸಾರ್ಥಕವಾಗುವುದು ಅದನ್ನು ಬೇರೆಯವರು ಓದಿದಾಗ ಮತ್ತು ಹಾಡಿದಾಗ. ಅನೇಕ ಮಕ್ಕಳು ಮತ್ತು ಕೆಲವು ಹಿರಿಯರು ಕವನಗಳ ಗೇಯತೆ ಕಂಡುಕೊಂಡು ಭಾವವನ್ನು ತುಂಬಿ ಹಾಡಿದ್ದಾರೆ. ಇದರಲ್ಲಿ ಭಾಗವಹಿಸಿದ ಎಲ್ಲರಿಗೂ ಮತ್ತು ಅಂತರ್ಜಾಲ ಕಾರ್ಯಕ್ರಮವನ್ನು ತಾಂತ್ರಿಕವಾಗಿ ಸಂಘಟಿಸಿದವರು ಮತ್ತು ಎಲ್ಲಾ ವೀಕ್ಷಕರಿಗೂ ವಂದನೆ ಅರ್ಪಿಸಿದರು.

ಶ್ರೀ ಹು ವಾ ಶ್ರೀಪ್ರಕಾಶ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

(ಈ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು)

ಸಮನ್ವಯ ಸಮಿತಿ, ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು ಮತ್ತು
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು



ಡಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಸ್ಮಾರಕ ದತ್ತಿ ಉಪನ್ಯಾಸ

ವಿಷಯ: ಜಾಗತಿಕ ಸಾಂಕ್ರಾಮಿಕ ಪಿಡುಗುಗಳು ಮತ್ತು ಆರ್ಥಿಕತೆ

ಉಪನ್ಯಾಸಕರು: : ಶ್ರೀ ಎಸ್. ಶೃಂಗೇಶ್ವರ ಶರ್ಮ

- ವರದಿ: ಹು.ವಾ. ಶ್ರೀಪ್ರಕಾಶ್

ಶುಕ್ರವಾರ ದಿನಾಂಕ 06ನೇ ಆಗಸ್ಟ್ 2020ರಂದು ಸಂಜೆ 6.00 ಗಂಟೆಗೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಭಾಂಗಣದಲ್ಲಿ ಕಾರ್ಯಕ್ರಮ ಆರಂಭವಾಯಿತು.



ಶ್ರೀ ಟಿ.ಕೆ ರಂಗನಾಥ್ ರವರು ಸಮನ್ವಯ ಸಮಿತಿ ಮತ್ತು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಪರವಾಗಿ ಎಲ್ಲರಿಗೂ ಸ್ವಾಗತ ಕೋರಿ, ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತಂತೆ ಒಂದು ಭದ್ರ ತಳಹದಿ ಒದಗಿಸಿದ ನಮ್ಮೆಲ್ಲರ ಗುರುಗಳಾದ ಪ್ರಾಚಾರ್ಯ ಎಚ್ಚೆಸ್ಕೆಯವರ ಹೆಸರಿನಲ್ಲಿ ಸಮನ್ವಯ ಸಮಿತಿಯು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಒಂದು ದತ್ತಿ ನಿಧಿ ಸ್ಥಾಪಿಸಿ ಕಳೆದ ನಾಲ್ಕು ವರ್ಷಗಳಿಂದ ಪ್ರತಿ ವರ್ಷಕ್ಕೊಮ್ಮೆ ಯಾವುದಾದರೂ ಆರ್ಥಿಕತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪನ್ಯಾಸ ಏರ್ಪಡಿಸುತ್ತಿರುವುದನ್ನು ವಿವರಿಸಿದರು.

ಪ್ರಾ. ಎಚ್ಚೆಸ್ಕೆಯವರ ಬಗ್ಗೆ ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀ ರಂಗನಾಥ್ ಅವರು, 'ಸಮದರ್ಶಿ' ಎಂಬ ಕಾವ್ಯನಾಮದಿಂದ ಎಲ್ಲ ಓದುಗರಿಗೂ ಪರಿಚಿತರಾದ ಬಹುಶ್ರುತ ಪ್ರತಿಭೆ ಎಚ್ಚೆಸ್ಕೆಯವರು ಆರು ದಶಕಗಳಿಗೂ ಹೆಚ್ಚುಕಾಲ ಪತ್ರಿಕಾರಂಗದಲ್ಲಿ ದುಡಿದವರು. ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾಲಯದ ಮಾನವಿಕ ವಿಭಾಗದ ಸಂಪಾದಕರಾಗಿ

ಕಾರ್ಯನಿರ್ವಹಿಸಿದ ಅವರು 1980ರಲ್ಲಿ ಬ್ಯಾಕಿಂಗ್ ನಲ್ಲಿ ಕನ್ನಡ ಬಳಕೆಗೆ ಭದ್ರ ತಳಹದಿ ರೂಪಿಸಬೇಕೆಂಬ ಸಮನ್ವಯ ಸಮಿತಿಯ ಮಹದುದ್ದೇಶಕ್ಕೆ ಕೈಜೋಡಿಸಿ ಶಕ್ತಿ ತುಂಬಿದರು. ಭಾರತೀಯ ಭಾಷೆಗಳಲ್ಲಿ ಮೊದಲಬಾರಿಗೆ ಬ್ಯಾಂಕಿಂಗ್ ವಿಷಯಗಳಿಗೇ ಮೀಸಲಾದ 'ಬ್ಯಾಂಕಿಂಗ್ ಪ್ರಪಂಚ' ಎಂಬ ತ್ರೈಮಾಸಿಕ ಸಂಚಿಕೆಯ ಸಂಪಾದಕತ್ವ ವಹಿಸಿದರು. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಇವರ ನಿರ್ದೇಶನದಲ್ಲಿ ಬ್ಯಾಂಕಿಂಗ್ ಕಮ್ಮಟಗಳು ಜರುಗಿದುವು. ನಾಟಕ, ಕತೆ, ಕವನ, ಹೀಗೆ ಎಲ್ಲ ಬಗೆಯ ಸಾಹಿತ್ಯ ಕೃತಿಗಳನ್ನೂ, ವೈಚಾರಿಕ ಗ್ರಂಥಗಳನ್ನೂ ರಚಿಸಿರುವ ಇವರು ಬರೆದ 1167 ವ್ಯಕ್ತಿ ಚಿತ್ರಗಳು ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿವೆ. 26ನೇ ಆಗಸ್ಟ್ 1920ರಂದು ಜನಿಸಿದ ಎಚ್ಚೆಸ್ಕೆಯವರ ಜನ್ಮ ಶತಮಾನೋತ್ಸವದ ಆಚರಣೆಯ ಅಂಗವಾಗಿ ಸಮನವ್ಯ ಸಮಿತಿಯು ಪ್ರಸಕ್ತ ವರ್ಷ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದು ಹೇಳಿದರು.

ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಡಾ.ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಸ್ಮಾರಕ ದತ್ತಿ ಉಪನ್ಯಾಸ' ದ ಅಂಗವಾಗಿ ಈವರೆಗೆ ಎರಡು ಉಪನ್ಯಾಸಗಳು ನಡೆದಿವೆ. 2018ರಲ್ಲಿ ಶ್ರೀ ಕೆ ಲಕ್ಷ್ಮೀಶ ಮತ್ತು 2019ರಲ್ಲಿ ಡಾ ಪಿ ಆರ್ ಚಂದ್ರಶೇಖರ್ ರವರು ವಿವಿಧ ಆರ್ಥಿಕ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದ್ದಾರೆ. ಇಂದಿನದು ಮೂರನೇ ಉಪನ್ಯಾಸ. ಇದು ಪ್ರಾಚಾರ್ಯರ ಜನ್ಮ ಶತಾಬ್ದಿಯ ಹಿನ್ನೆಲೆಯಲ್ಲೇ ಬಂದಿದೆ ಎಂದು ಹೇಳಿ ಇಂದಿನ ಉಪನ್ಯಾಸಕರಾದ ಶ್ರೀ ಎಸ್. ಶೃಂಗೇಶ್ವರ ಶರ್ಮರವರನ್ನು ಪರಿಚಯಿಸಿದರು.

1956ರಲ್ಲಿ ಜನಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರು ಮೈಸೂರು ಬ್ಯಾಂಕಿನಲ್ಲಿ ಮೂವತ್ತೆಂಟು ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ, 2016ರಲ್ಲಿ ಸಹಾಯಕ ಪ್ರಧಾನ ವ್ಯವಸ್ಥಾಪಕ ಹುದ್ದೆಯಿಂದ ನಿವೃತ್ತರಾಗಿದ್ದಾರೆ. ನಂತರ ಕಾವೇರಿ ಗ್ರಾಮೀಣ ಬ್ಯಾಂಕ್ ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡದ ಬಗ್ಗೆ ಆಸಕ್ತಿ ಇರುವ ಇವರು ಕೃಷಿ ಬ್ಯಾಂಕಿಂಗ್ ಕೈಪಿಡಿ, ತ್ರಿಭಾಷಾ ಪದಕೋಶಗಳ ಪರಿಷ್ಕರಣೆಗೆ ಕೈಜೋಡಿಸಿದ್ದಾರೆ. ಮೈಸೂರು ಬ್ಯಾಂಕಿನ ಕನ್ನಡ ಬಳಗದ ಸಂಸ್ಥಾಪಕ ಸದಸ್ಯರಾದ ಇವರು ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ ಮತ್ತು ನಮ್ಮ ಸಮನ್ವಯ ಸಮಿತಿ ವೇದಿಕೆಯ ಸಕ್ರಿಯ ಸದಸ್ಯರಲ್ಲೊಬ್ಬರಾಗಿದ್ದಾರೆ ಎಂದು ಪರಿಚಯಿಸಿದರು.

ಕೊರೋನಾ ಪಿಡುಗಿನ ಭಯದ ಕಾರಣ, ಅಂತರ್ಜಾಲ ಕಾರ್ಯಕ್ರಮಗಳು ಜನಪ್ರಿಯವಾಗಿ, ಭೌತಿಕ ವೇದಿಕೆಯ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಹಾಜರಾತಿ ಕಡಿಮೆ ಇರುತ್ತದೆ. ಆದರೂ, ಕೋವಿಡ್ ಕಾರಣ ನೀಡದೇ ಕಾರ್ಯಕ್ರಮಕ್ಕೆ ಹಾಜರಾದ ಎಲ್ಲರಿಗೂ ಮತ್ತು ಎಲ್ಲಾ ಯೂಟ್ಯೂಬ್ ವೀಕ್ಷಕರಿಗೂ ಶ್ರೀ ರಂಗನಾಥ್ ಸ್ವಾಗತ ಕೋರಿದರು.

ತಮ್ಮ ಉಪನ್ಯಾಸವನ್ನು ಆರಂಭಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರು, ತಮ್ಮ ಕನ್ನಡಪರ ಆಸಕ್ತಿಗೆ ಪ್ರೇರಣೆ ನೀಡಿದ ಪ್ರಾಚಾರ್ಯ ಎಚ್ಚೆಸ್ಕೆಯವರಿಗೆ ನಮನ ಸಲ್ಲಿಸಿ, ಪ್ರಾಚಾರ್ಯರ ನಿರ್ದೇಶನದಲ್ಲಿ ನಡೆಯುತ್ತಿದ್ದ 'ಬ್ಯಾಂಕಿಂಗ್ ಕಮ್ಮಟ' ಗಳಲ್ಲಿ ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತಂತೆ ಸಾಕಷ್ಟು ಕೆಲಸಗಳನ್ನು ಮಾಡಲು ಅವರು ಪ್ರೇರಕ ಶಕ್ತಿಯಾಗಿದ್ದರು ಎಂದರು.

ಈ ದತ್ತಿ ಉಪನ್ಯಾಸ ಕಳೆದ ವರ್ಷ ನಡೆಯಬೇಕಿತ್ತು. ಸಹಜ ಬದುಕಿನ ಹಲವು ಪ್ರಕ್ರಿಯೆಗಳನ್ನು ಮುಂದೂಡುತ್ತಿರುವ ಕೊರೋನಾ ಪಿಡುಗು, ತಮ್ಮ ಉಪನ್ಯಾಸವನ್ನೂ ಒಂದು ವರ್ಷ ಕಾಲ ಮುಂತಳ್ಳಿತು. ಕಳೆದ ಒಂದೂವರೆ ವರ್ಷಗಳಲ್ಲಿ ಕೊರೋನಾ ಪಿಸುಗಿನಿಂದಾಗಿ ಜಗತ್ತಿನಾದ್ಯಂತ ಎಲ್ಲಾ ವಲಯಗಳಲ್ಲೂ ಆರ್ಥಿಕ ಪರಿಸ್ಥಿತಿ ಏರುಪೇರಾಗಿದ್ದು, ಕೆಲವು ಕ್ಷೇತ್ರಗಳಲ್ಲಿ ಚೇತರಿಕೆ ಕಾಣಲು ಹಲವು ವರ್ಷಗಳು

ಬೇಕಾದೀತು, ಲಭ್ಯ ಮಾಹಿತಿಯ ಆಧಾರದ ಮೇಲೆ ಇಂದಿನ ಉಪನ್ಯಾಸ ನೀಡುತ್ತಿದ್ದೇನೆ ಎಂದು ಹೇಳಿದರು. ಸುಮಾರು ಒಂದೂವರೆ ಗಂಟೆಗಳ ಅವರ ಭಾಷಣದಲ್ಲಿ 'ಜಾಗತಿಕ ಸಾಂಕ್ರಾಮಿಕ ಪಿಡುಗುಗಳು ಮತ್ತು ಆರ್ಥಿಕತೆ' ವಿಷಯಕ್ಕ ಸಂಬಂಧಿಸಿದಂತೆ ಪ್ರಾತ್ಯಕ್ಷಿಕೆಯ ಮೂಲಕ ಹಲವು ಅಂಕಿ ಅಂಶಗಳು ಮತ್ತು ಗ್ರಾಫ್ ಚಿತ್ರಗಳ ಮೂಲಕ ಅವರು ಪ್ರಸ್ತುತಪಡಿಸಿದ ಕೆಲವು ಮುಖ್ಯ ಅಂಶಗಳು ಹೀಗಿವೆ:

- ಜಾಗತಿಕ ಸಾಂಕ್ರಾಮಿಕ ಪಿಡುಗುಗಳು ಇಂದು ನಿನ್ನೆಯದಲ್ಲ. ಕ್ರಿ.ಪೂ. ಮೂರು ಸಾವಿರದಲ್ಲೇ ಇಂತಹ ಪಿಡುಗಗಳು ಜನರ ಬದುಕನ್ನು ಕಾಡಿದ ನಿದರ್ಶನಗಳಿವೆ. ಯಾವುದೇ ಅಡ್ಡ ಪರಿಣಾಮ ಬೀರದಂತಹ ಔಷಧ ಹಾಗೂ ಲಸಿಕೆ ಕಂಡುಹಿಡಿಯುವ ಪ್ರಕ್ರಿಯೆ ಮುಗಿಯುವವರೆಗೆ ಖಾಯಿಲೆ ಸುಮ್ಮನಿರುವುದಿಲ್ಲ. ರೋಗ ಹರಡದಂತೆ ಜೀವನ ವಿಧಾನ ಬದಲಿಸಿಕೊಂಡು ಎಚ್ಚರಿಕೆ ವಹಿಸುವುದು ಅಗತ್ಯ. ಈ ಹಿಂದೆ ಪಿಡುಗುಗಳಿಗೆ ತುತ್ತಾಗಿ ಜೀವ ತೆತ್ತವರು ಹಲವು ಮಂದಿ. ಹಾಗೆಯೇ ಎಲ್ಲೆಡೆಯೂ ರೋಗಕ್ಕೆ ಹೆದರಿ ವಲಸೆ ಹೋದ ಹಲವು ನಿದರ್ಶನಗಳಿವೆ.

- ರಾಷ್ಟ್ರದ ಗಡಿಯೊಳಗೇ ಹರಡುವ ಅಂಟು ರೋಗವು 'ಸಾಂಕ್ರಾಮಿಕ ರೋಗ' (ಎಪಿಡೆಮಿಕ್) ಎನಿಸಿಕೊಂಡರೆ, ಒಂದು ದೇಶದ ಗಡಿ ದಾಟಿ ಜಗತ್ತಿನ ಹಲವು ದೇಶಗಳಿಗೆ ವ್ಯಾಪಿಸುವ ಸಾಂಕ್ರಾಮಿಕ ರೋಗವನ್ನು 'ಜಾಗತಿಕ ಪಿಡುಗು' (ಪಾಂಡೆಮಿಕ್) ಎನ್ನಲಾಗುತ್ತದೆ. ಚೀನಾದ ವ್ಯೂಹಾನ್ ಎಂಬಲ್ಲಿ ಸಾಂಕ್ರಾಮಿಕ ರೋಗ ಎನಿಸಿಕೊಂಡಿದ್ದ ಕೊರೋನಾ ಸಾಂಕ್ರಾಮಿಕ ರೋಗವು ಚೀನಾದ ಗಡಿ ದಾಟಿ ಇತರ ದೇಶಗಳಿಗೆ ವ್ಯಾಪಿಸುತ್ತಿದ್ದಂತೆಯೇ ಅದನ್ನು ವಿಶ್ವ ಆರೋಗ್ಯ ಸಂಸ್ಥೆಯು 11ನೇ ಮಾರ್ಚ್ 2020ರಂದು ಇದನ್ನು 'ಜಾಗತಿಕ ಪಿಡುಗು' ಎಂದು ಘೋಷಿಸಿತು.

- ಜಾಗತಿಕ ಪಿಡುಗುಗಳು ಸಮುದಾಯ ಕೇಂದ್ರಿತ ಆರೋಗ್ಯ ಸಂಬಂಧಿ ಸಮಸ್ಯೆ ಮಾತ್ರವಲ್ಲದೆ ದೀರ್ಘ ಕಾಲದ ಆರ್ಥಿಕ ಸಮಸ್ಯೆ ಉಂಟುಮಾಡುತ್ತವೆ. ಇದೀಗ ಕೋವಿಡ್ ಇಡೀ ಜಗತ್ತನ್ನು ಆಕ್ರಮಿಸಿದ್ದು, ಅದರ ರೂಪಾಂತರಿ ತಳಿಗಳೂ ಜನ್ಮ ತಾಳಿ ಸಮಸ್ಯೆಗಳನ್ನು ಇನ್ನಷ್ಟು ಉಲ್ಬಣಗೊಳಿಸಿವೆ. ವಿಶ್ವದೆಲ್ಲೆಡೆ ರೋಗತಡೆಗೆ ಕಟ್ಟುನಿಟ್ಟಿನ ನಿರ್ಬಂಧಗಳು, ಲಾಕ್ ಡೌನ್ ನಂತಹ ಬಿಗಿ ಕ್ರಮಗಳು ಅನಿವಾರ್ಯವಾಗಿದೆ. ಇದು ವಿಶ್ವದ ಆರ್ಥಿಕತೆಯ ಮೇಲೆ ಸುದೀರ್ಘ ಅಡ್ಡಪರಿಣಾಮಗಳನ್ನು ಬೀರಿದೆ. ಈ ವರ್ಷದ ಜುಲೈವರೆಗೆ ಜಗತ್ತಿನಾದ್ಯಂತ 19.82 ಕೋಟಿ ಜನರಿಗೆ ಈ ಸೋಂಕು ತಗುಲಿದ್ದು, ಮರಣ ಹೊಂದಿದವರ ಸಂಖ್ಯೆ 42.28 ಲಕ್ಷ..

- ಭಾರತದಲ್ಲಿ ಕೊರೋನಾ ಸೋಂಕು ಮೊದಲಬಾರಿಗೆ 30.02.2020ರಲ್ಲಿ ಕಾಣಿಸಿಕೊಂಡು, 11.03.2020ರಂದು ಕರ್ನಾಟಕದ ಕಲ್ಬುರ್ಗಿಯಲ್ಲಿ ದೇಶದ ಮೊದಲ ಸಾವು ಸಂಭವಿಸಿತು. ದೇಶಾದ್ಯಂತ 19.03.2020ರಂದು 'ಜನತಾ ಕರ್ಫ್ಯೂ' ನಂತರ 25.03.3030ರಿಂದ 68 ದಿನಗಳ ಲಾಕ್ ಡೌನ್ ಘೋಷಿಸಲಾಯಿತು. ಜನಜೀವನ ಸ್ಥಬ್ದವಾಗಿ ಉದ್ಯೋಗ ನಷ್ಟ, ತವರೂರಿನ ಕಡೆ ವಲಸೆ, ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ ಮತ್ತಿತರ ವೈದ್ಯಕೀಯ ಸೌಲಭ್ಯಗಳ ಕೊರತೆ, ಶಾಲಾ ಕಾಲೇಜುಗಳಿಗೆ ರಜೆ, ಪರೀಕ್ಷೆ ಇಲ್ಲದೆ ತೇರ್ಗಡೆ, ಆನ್ಲೈನ್ ತರಗತಿಗಳ ಆರಂಭ, ಪೋಷಕರಿಗೆ ಹೊರೆಯಾದ ಮೊಬೈಲ್, ಗಣಕಯಂತ್ರಗಳ ಪೂರೈಕೆ, ಕಲಿಕೆ ಇಲ್ಲದ ಕಾರಣ ಕೂಲಿ ಕೆಲಸಕ್ಕೆ ಸೇರಿದ ಮಕ್ಕಳು, ಕೊರೋನಾ ಎರಡನೇ ಅಲೆಯಲ್ಲಿ ಮತ್ತೆ ಲಾಕ್ ಡೌನ್, ಪದೇಪದೇ ಲಾಕ್ ಡೌನಿನಿಂದಾಗಿ ಸಂಚಾರ, ಪ್ರವಾಸ, ಸಭೆ ಸಮಾರಂಭಗಳು, ಶಿಕ್ಷಣ, ಉತ್ಪಾದನೆ, ಅಂಗಡಿ ಮುಂಗಟ್ಟುಗಳು ಹೀಗೆ ಎಲ್ಲವೂ ಬಂದ್ ಆಗಿ, ಉದ್ಯೋಗ ಹಾನಿ, ವೇತನ ಕಡಿತ/ಸ್ಥಗಿತ. ಕುಂಠಿತವಾದ ಹಣಕಾಸು ಹರಿವು,

ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಅಬಕಾರಿ ಸಂಗ್ರಹಣೆಯಲ್ಲಿ ತೀವ್ರ ಕುಸಿತ, ಹೀಗೆ ಎಲ್ಲ ರಂಗಗಳಲ್ಲೂ ಸಮಸ್ಯೆ ಉದ್ಭವಿಸಿ, ಜಗತ್ತಿನ ಎಲ್ಲ ದೇಶಗಳೂ ಆರ್ಥಿಕವಾಗಿ ಜರ್ಝರಿತವಾದುವು. ಮೋಜುಸಂಬಂಧಿ ಖರ್ಚುಗಳೂ ನಿಂತು, ಉಳಿತಾಯದ ಕಡೆ ಜನ ಗಮನಹರಿಸತೊಡಗಿದರು. ಸರ್ಕಾರಗಳು ತಮ್ಮ ಕುಂಠಿತ ಆದಾಯದ ನಡುವೆಯೂ ಬಡವರಿಗೆ ಉಚಿತ ಆಹಾರ ಧಾನ್ಯ ಪೂರೈಕೆ, ನೇರ ನಗದು ಸಹಾಯಧನ ವಿತರಣೆ, ವಿಶೇಷ ಆಸ್ಪತ್ರೆ ಸೌಲಭ್ಯಗಳು, ಉಪಕರಣಗಳು, ಪ್ರತ್ಯೇಕವಾಸ ವ್ಯವಸ್ಥೆ (ಕ್ವಾರಂಟೈನ್) ಮುಂತಾದುವುಗಳಿಗಾಗಿ ವಿಪರೀತ ವೆಚ್ಚ ಮಾಡಬೇಕಾದ ಅನಿವಾರ್ಯತೆ ಉಂಟಾಯಿತು. ಕೋವಿಡ್ ನಿಂದ ಕೃಷಿ ಚಟುವಟಿಕೆಗೆ ಹೆಚ್ಚಿನ ತೊಂದರೆಯಾಗಲಿಲ್ಲ. ಆದರೆ ಕೊರೋನಾ ಎರಡನೇ ಅಲೆ ಗ್ರಾಮೀಣ ಭಾಗವನ್ನು ಆಕ್ರಮಿಸಿತು.

- ವರ್ಕ್ ಫ್ರಂ ಹೋಂ ಎಂಬ ಹೊಸ ಪರಿಕಲ್ಪನೆ ಜಾರಿಗೆ ಬಂದು, ಇದು ಉದ್ಯೋಗ ಕ್ಷೇತ್ರದ ಮೇಲೆ ಬಹಳ ಆಳವಾದ ಪರಿಣಾಮ ಬೀರಲಿದೆ.

- ಜಗತ್ತಿನಾದ್ಯಂತ ಈ ಹಿಂದೆ ಹಲವು ಬಾರಿ ಆರ್ಥಿಕ ಹಿಂಜರಿತ ಉಂಟಾಗಿದ್ದರೂ ಜಾಗತಿಕ ಪಿಡುಗೊಂದರ ಕಾರಣದಿಂದ ವಿಶ್ವ ಮಟ್ಟದಲ್ಲಿ ತೀವ್ರ ಆರ್ಥಿಕ ಹಿಂಜರಿತ ಉಂಟಾಗಿರುವುದು ಇದೇ ಮೊದಲು. ೨೦೨೦ ರ ಮಾರುಕಟ್ಟೆ ವಿನಿಮಯ ದರ ಆಧಾರಿತ ಜಾಗತಿಕ ಸ್ಥೂಲ ಉತ್ಪನ್ನದಲ್ಲಿ ಶೇ ೫.೨. ರಷ್ಟು ಕುಸಿತವಾಗಿದ್ದು, ವ್ಯಕ್ತಿಯ ತಲಾ ಆದಾಯ ಶೇ ೩.೬ ರಷ್ಟು ಕುಸಿತ ಕಂಡಿದೆ. ವಿಶ್ವ ಬ್ಯಾಂಕ್ ವರದಿಯನ್ನು ಆಧರಿಸಿದ ಸ್ಥೂಲ ದೇಶೀಯ ಉತ್ಪನ್ನ, ಆರ್ಥಿಕ ಹಿಂಜರಿತ, ಕೊರೋನಾ ಪೂರ್ವ ಮತ್ತು ನಂತರದ ಆರ್ಥಿಕತೆ, ಭಾರತದ ಆರ್ಥಿಕತೆಯ ಮೇಲೆ ಕೊರೋನಾ ಪಿಡುಗಿನ ಪರಿಣಾಮ ಮುಂತಾದ ಅಂಕಿ ಅಂಶಗಳು ಆರ್ಥಿಕತೆಯ ಮೇಲೆ ಕೊರೋನಾ ಪಿಡುಗಿನ ಕಬಂಧಬಾಹುಗಳನ್ನು ಪುಷ್ಟೀಕರಿಸುತ್ತವೆ.

- ಭಾರತ ಸರ್ಕಾರವು ಕೋವಿಡ್ ನಿರ್ವಹಣೆಯ ಜೊತೆಗೇ, ಆರ್ಥಿಕವಾಗಿ ರಾಷ್ಟ್ರವನ್ನು ಸ್ವಾವಲಂಬನಗೊಳಿಸುವ ದೃಷ್ಟಿಯಿಂದ 'ಆತ್ಮನಿರ್ಭರ ಭಾರತ' ಎಂಬ ಹೆಸರಿನಲ್ಲಿ, 'ಸ್ಥಳೀಯತೆಗೆ ದನಿ' (ವೋಕಲ್ ಫಾರ್ ಲೋಕಲ್') ಎಂಬ ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದರ ಅನ್ವಯ ತೆರಿಗೆ ಸರಳೀಕರಣ, ಸಾಲ ಮರುಪಾವತಿ ಮುಂದೂಡಿಕೆ, ಬಡ್ಡಿ ದರಗಳಲ್ಲಿ ಕಡಿತ, ಸಾಲಗಳ ಪುನರ್ರಚನೆ, ಆಧಾರ ರಹಿತ ಸಾಲ, ಮುದ್ರಾ ಸಾಲ, ನಗದು ಮೀಸಲು ಅನುಪಾತ ಇಳಿಕೆ, ಕೋವಿಡ್ ಭಾದಿತ ವಲಯಗಳಿಗೆ ಉದರಿಖಾತರಿ ಯೋಜನೆಗಳು, ಖಾಸಗಿ ಸಹಭಾಗಿತ್ವಕ್ಕೆ ಒತ್ತು, ಗುಡಿ ಕೈಗಾರಿಕೆಯಿಂದ ಭಾರೀ ಕೈಗಾರಿಕೆಗಳವರೆಗೆ ಹಲವು ಸುಧಾರಣಾ ಕ್ರಮಗಳು, ಸಂಪನ್ಮೂಲ ಹೆಚ್ಚಿಸುವ ವಿಧಾನಗಳು, ಇವೇ ಮುಂತಾದ ಉಪಕ್ರಮಗಳನ್ನು ಜಾರಿಗೊಳಿಸುತ್ತಿದೆ.

- ಕೊರೋನಾ ತಡೆಗಟ್ಟುವಿಕೆಗಾಗಿ ಕ್ಷಿಪ್ರಗತಿಯಲ್ಲಿ ಲಸಿಕೆಗಳ ಸಂಶೋಧನೆ ಮಾಡಿ, ವಿಶ್ವಾದ್ಯಂತ ಲಸಿಕಾ ಅಭಿಯಾನಕ್ಕೆ ಒತ್ತು ನೀಡಲಾಯಿತು. ಔಷಧ ತಯಾರಿಕಾ ಉದ್ಯಮದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ, ಲಸಿಕೆ ತಯಾರಿಕೆಯಲ್ಲಿಯೂ ಸ್ವಾವಲಂಬನೆ ಸಾಧಿಸಿತಲ್ಲದೆ ಕೆಲಕಾಲ ವಿದೇಶಗಳಿಗೂ ಲಸಿಕೆ ರಫ್ತು ಮಾಡಿತು. ಸ್ಥಳೀಯವಾಗಿ ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಯನ್ನು ತಯಾರಿಸಲು ಉತ್ತೇಜನ ನೀಡಿದ ಭಾರತ ಸರ್ಕಾರವು, ದೇಶದ ಎಲ್ಲ 130 ಕೋಟಿ ಜನರಿಗೂ ಉಚಿತ ಲಸಿಕೆ ನೀಡಲು ನಿರ್ಧರಿಸಿ ಪ್ರಸಕ್ತ ಬಜೆಟ್ ನಲ್ಲಿ ರೂ. 35000 ಕೋಟಿ ಮೀಸಲು ಇರಿಸಿದೆ. ಲಸಿಕೆ ಸಂಶೋಧನೆ,

ವಿಶೇಷೀಕೃತ ಆಸ್ಪತ್ರೆಗಳು, ಆಮ್ಲಜನಕ ಘಟಕಗಳು, ವೆಂಟಿಲೇಟರ್ ನಿರ್ಮಾಣ, ಮುಖಗವಸು ಮತ್ತು ವೈಯಕ್ತಿಕ ರಕ್ಷಣಾ ಸಾಧನಗಳು (ಪಿಪಿಇ ಕಿಟ್) ಮುಂತಾದುವುಗಳ ಉತ್ಪಾದನೆಗೆ ಹೆಚ್ಚಿನ ಉತ್ತೇಜನ ನೀಡಲಾಗಿದೆ.

- ಕೋವಿಡ್ ಕಾರಣದಿಂದ ಉಂಟಾದ ಆರ್ಥಿಕ ಹಿಂಜರಿಕೆಯಿಂದ ಭಾರತ ಮಾತ್ರವಲ್ಲದೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಆರ್ಥಿಕ ಚೇತರಿಕೆ ಕಾಣುತ್ತಿದ್ದರೂ, ಕೋವಿಡ್ ಹೊಸಹೊಸ ಅಲೆಗಳ ರೂಪದಲ್ಲಿ ಮತ್ತೆ ಮತ್ತೆ ಅವತರಿಸುತ್ತಿದ್ದು, ಮುಂಬರುವ ವರ್ಷ ಗಳಲ್ಲಿ ಯಾವುದೇ ದೇಶದ ಆರ್ಥಿಕ ಪರಿಸ್ಥಿತಿ ಯಾವ ಮಟ್ಟದಲ್ಲಿ ಸುಸ್ಥಿರಗೊಳ್ಳುತ್ತದೆ ಎಂದು ನಿಖರವಾಗಿ ಹೇಳುವುದು ಕಷ್ಟ.

- ಕೊರೋನಾ ಮಾನವ ನಿರ್ಮಿತವೇ ಎಂಬ ಶಂಕೆ ಉಂಟಾಗಿದ್ದು, ಇದು ಚೀನಾದ ಪ್ರಯೋಗ ಶಾಲೆಯಲ್ಲಿ ಮಾನವರೇ ಸೃಷ್ಟಿಸಿದ ಹುನ್ನಾರ ಎಂದು ಅಮೇರಿಕವೂ ಸೇರಿದಂತೆ ಹಲವು ರಾಷ್ಟ್ರಗಳು ಖಂಡಿಸಿವೆ. ಈ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ಶೋಧಕಾರ್ಯದಲ್ಲಿ ತೊಡಗಿದ್ದು, ರಾಜಕೀಯವಾಗಿಯೂ ಕೊರೋನಾ ಪಿಡುಗು ತಲ್ಲಣ ಉಂಟುಮಾಡಿದೆ. ಕೆಲವು ರಾಷ್ಟ್ರಗಳು ಚೀನಾದ ಜೊತೆ ವ್ಯಾಪಾರಿ ಸಂಬಂಧಗಳನ್ನೂ ಕಡಿದುಕೊಂಡಿವೆ. ಚೀನಾದಲ್ಲಿ ನೆಲೆಯೂರಿರುವ ಹಲವು ವಿದೇಶಿ ಕಂಪೆನಿಗಳು 'ಚೈನಾ ಪ್ಲಸ್ ಒನ್ ' ಹೆಸರಿನಲ್ಲಿ ಇತರ ದೇಶಗಳಲ್ಲೂ ತಮ್ಮ ಉದ್ಯಮಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆ. ಭಾರತದ ಅನೇಕ ಉತ್ಪಾದನಾ ಘಟಕಗಳು ಚೈನಾದ ಕಚ್ಚಾವಸ್ತುಗಳ ಬಿಡಿಭಾಗಗಳನ್ನು ಅವಲಂಬಿಸಿದ್ದು, ಇದು ಭಾರತದ ಉತ್ಪಾದನಾ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ.

- ಲಾಕ್ ಡೌನ್ ಸಮಯದಲ್ಲಿ ಬದುಕಿಗಾಗಿ ಕೆಲವರು ಹೊಸದಾರಿ ಕಂಡುಕೊಂಡರು. ವಿವಿಧ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳಾದುವು. ದೇಶದ ಪ್ರಧಾನ ಮಂತ್ರಿಯೂ ಸೇರಿದಂತೆ, ವಿಶ್ವದಲ್ಲಿ ಎಲ್ಲೇ ನೆಲೆಸಿದ್ದರೂ, ಅಂತರ್ಜಾಲದ ಮೂಲಕ ಸಭೆ ಸಮಾರಂಭಗಳನ್ನು ನಡೆಸುವ ಪರಿಪಾಠ ಪ್ರಾರಂಭವಾಯಿತು. ಇದಕ್ಕೆ ನಮ್ಮ ಸಮನ್ವಯ ಸಮಿತಿಯ 'ನೋಡಿಯೋ ಸಾಹಿತ್ಯ ವೇದಿಕೆಯೇ ಉದಾಹರಣೆ.

ಹೀಗೆ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರು ತಮ್ಮ ಒಂದೂವರೆ ಗಂಟೆಗಳ ಉಪನ್ಯಾಸದಲ್ಲಿ ಹಲವು ಅಂಕಿ ಅಂಶಗಳನ್ನು ಪ್ರಾತ್ಯಕ್ಷಿಕೆಯಲ್ಲಿ ವಿವಿಧ ಕೋಷ್ಟಕಗಳನ್ನು ಪ್ರದರ್ಶಿಸುವುದರ ಮೂಲಕ ವಿಶ್ಲೇಷಿಸಿದರು.

ಕೊನೆಯಲ್ಲಿ ಶ್ರೀ ಜನಾರ್ದನ ತುಂಗರವರು ಕೊರೋನಾ ನಿರ್ಬಂಧಗಳ ಸಂಕಷ್ಟ ಕಾಲದಲ್ಲೂ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಪ್ರಾಚಾರ್ಯರ ಜನ್ಮ ಶತಮಾನೋತ್ಸವದ ಆಚರಣೆಯ ಸಂಧರ್ಭದಲ್ಲಿ ಅವರ ಪ್ರಿಯ ಶಿಷ್ಯರೇ ಆದ ಶೃಂಗೇಶ್ವರ ಶರ್ಮರ ಉಪನ್ಯಾಸ ನಡೆದುದು ಸಂತಸ ತಂದಿದೆ ಎಂದರು. ದತ್ತಿ ಉಪನ್ಯಾಸಕ್ಕೆ ಕಾರಣರಾದ ಎಲ್ಲರಿಗೂ, ಪ್ರತ್ಯಕ್ಷವಾಗಿ ಹಾಗೂ ಯೂಟ್ಯೂಬ್ ಮೂಲಕ ಕಾರ್ಯಕ್ರಮವನ್ನು ವೀಕ್ಷಿಸಿದ ಎಲ್ಲ ಪ್ರೇಕ್ಷಕರಿಗೂ, ತಾಂತ್ರಿಕ ವರ್ಗದವರಿಗೂ, ದತ್ತಿ ಉಪನ್ಯಾಸವನ್ನು ಏರ್ಪಡಿಸಿದ ಗೋಖಲೆ ಸಾರ್ವಜನಿಕ ಸಂಸ್ಥೆಯವರಿಗೂ ವಂದನೆಗಳನ್ನು ಸಲ್ಲಿಸಿದರು.

(ಈ ಕಾರ್ಯಕ್ರಮವನ್ನು ಗೋಖಲೆ ಸಾರ್ವಜನಿಕ ಸಂಸ್ಥೆಯ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು)

ಸತ್ಯ ಘಟನೆ

ಹುಲಿ ಶಿಕಾರಿ

– ಜೀವಿ.ಹೆಗಡೆ

'ಸೀತಾರಾಮ ಹರಿ ಹೆಗಡೆ'..

ತಹಶೀಲದಾರ ಆಫೀಸಿನ ಜವಾನ ಬಾಗಿಲ ಹತ್ತಿರ ಬಂದು ಕೂಗಿದ. ಆಫೀಸಿನ ಎದುರುಗಡೆ ಬೇಂಚಿನ ಮೇಲೆ ಕುಳಿತಿದ್ದ ಸೀತಾರಾಮ ಹೆಗಡೆಗೆ ಸಣ್ಣಗೆ ನಡುಕ ಪ್ರಾರಂಭವಾಯಿತು. ಹದಿನೈದು ದಿನಗಳ ಹಿಂದೆ ಕೇವಲ ಅರವತ್ತು ಅಡಿಗಳ ದೂರದಲ್ಲಿ ಕುಳಿತು ಹುಲಿಯನ್ನು ಹೊಡೆದಾಗಲೂ ಮೈ ಇಷ್ಟು ಬೆವರಿರಲಿಲ್ಲ, ಕಾಲುಗಳು ನಡುಗುತ್ತಿರಲಿಲ್ಲ ಸೀತಾರಾಮ ಹೆಗಡೆಗೆ. ಸುಮಾರು ಅಷ್ಟೇ ದೂರದಲ್ಲಿ ಇರುವ ತಹಶೀಲದಾರರು ಹುಲಿಗಿಂತ ಭಯಂಕರರಾಗಿ ಕಂಡರು. ಸರಕಾರಿ ಕಚೇರಿ ಅಂದರೇ ಮಾರು ದೂರ ಹಾರಿ ಬೀಳುವ ಆ ಕಾಲದಲ್ಲಿ ಸ್ವತಃ ತಹಶೀಲದಾರರೇ ಪತ್ರ ಕಳಿಸಿ ಕರೆಸಿಕೊಂಡಿದ್ದಾರೆ ಅಂದರೆ?

ಸಾವಕಾಶವಾಗಿ ಬಾಗಿಲು ದಾಟಿ ತಹಶೀಲದಾರರ ಮೇಜಿನ ಮುಂದೆ ದೈನೇಶಿಯ ಹಾಗೆ ಇಡೀ ಶರೀರವನ್ನೆ ಮುದ್ದೆ ಮಾಡಿಕೊಂಡು ಕೈ ಕಟ್ಟಿಕೊಂಡು ನಿಂತ ಸೀತಾರಾಮ ಹೆಗಡೆ, ನ್ಯಾಯಾಧೀಶನ ಮುಂದೆ ನಿಲ್ಲುವ ಕೊಲೆಗಡುಕನ ಹಾಗೆ.

ಆದರೆ ಅಂತಹುದೇನೂ ಆಗಲಿಲ್ಲ. ಸಣ್ಣದಾಗಿ ನಗುತ್ತಲೇ ತಹಶೀಲದಾರರು ಕೇಳಿದರು.

'ನಿನ್ನ ಹೆಸರೇನು?'

"ಸೀತಾರಾಮ ಹರಿ ಹೆಗಡೆ"

'ಯಾವ ಊರು'

"ಮೂರೂರು"

'ಹುಲಿಯನ್ನು ಕೊಂದವ ನೀನೋ, ಯಾವಾಗ ಕೊಂದಿದ್ದು'

"ಹೌದು. ಹದಿನೈದು ದಿನಗಳ ಹಿಂದೆ ನಾನೇ ಕೊಂದಿದ್ದು".

ತಹಶೀಲದಾರರು ಇಪ್ಪತ್ತೈದು ರೂಪಾಯಿಗಳನ್ನು ಎದುರಿಗಿರುವ ಮೇಜಿನ ಮೇಲಿಟ್ಟು ಜೊತೆಯಲ್ಲಿ ಒಂದು ಅಭಿನಂದನಾ ಪತ್ರವನ್ನೂ ಕೊಟ್ಟರು ಸೀತಾರಾಮ ಹೆಗಡೆಗೆ. ಹುಲಿಯನ್ನು ಕೊಂದಿದ್ದಕ್ಕಾಗಿ ಇನಾಮು.

ಇದು ೧೯೫೦ ರಲ್ಲಿ ನಡೆದ ಘಟನೆ. ಈಗಿನ ಹಾಗೆ ಪ್ರಾಣಿದಯಾ ಸಂಘದವರು ಈ ಇನಾಮನ್ನು ವಿರೋಧಿಸುವ ಕಾಲವಲ್ಲ. ಊರಲ್ಲಿ ನಡೆಯುವ ಪ್ರಾಣಿಗಳಿಂದಾದ ಹಾನಿಗೆ, ಬೆಳೆಗಳ ಮೇಲಾದದ್ದು ಇರಲಿ ಅಥವಾ ಜಾನುವಾರುಗಳ ಮೇಲಾಗಲಿ ಸರಕಾರ ನೈತಿಕವಾದ ಜವಾಬ್ದಾರಿಯನ್ನು ಹೊರುತ್ತಿತ್ತು. ಬೆಳೆಗಳಿಗೆ ಹಾನಿಯನ್ನುಂಟು ಮಾಡುವ ಹಂದಿ, ಕೋಡ-ಮಂಗಗಳನ್ನು ಬಲೆಹಾಕಿಯೋ ಅಥವಾ

ಬಂದೂಕಿನಿಂದಲೋ ಕೊಂದಲ್ಲಿ ಅಥವಾ ಹಸುಕರುಗಳನ್ನು ಕೊಲ್ಲುವ ಹುಲಿಯನ್ನು ಕೊಂದಲ್ಲಿ, ಅವರು ಸರಕಾರಿ ಅತಿಥಿಗಳಾಗುವ ಅವಶ್ಯಕತೆ ಇರಲಿಲ್ಲ. ಆ ಕಾಲದಲ್ಲಿ ಬೆಳೆ ಜಾನುವಾರುಗಳ ರಕ್ಷಣೆಗಾಗಿ ಬಂದೂಕನ್ನು ಸುಲಭವಾಗಿ ಕೊಡುತ್ತಿದ್ದರು.

ಮೂರೂರು ಅದರಲ್ಲಿಯೂ ಆಚೇಕೇರಿ ದಟ್ಟವಾದ ಅರಣ್ಯದ ಸಮೀಪವೇ ಇದೆ ಅಥವಾ ಮಧ್ಯದಲ್ಲಿಯೇ ಇದೆ ಅನ್ನಿ. ಈಗ ವಿದ್ಯಾತೀರ್ಥವೆಂದು ಪ್ರಸಿದ್ಧವಾದ ಸ್ಥಳ ವಾಟೇಕೆರೆಯ ಸುತ್ತಮುತ್ತ ಎಂಟು ಹತ್ತು ಮೈಲಿ ವಿಸ್ತಾರದಲ್ಲಿ ಬರೀ ಅರಣ್ಯವೆ. ಊರವರ ಪಾಲಿಗೆ ಬೆಟ್ಟ. ಹಾಗಂತ ಅಲ್ಲಲ್ಲಿ ಮನೆಗಳೂ ಇದ್ದವು. ಒಂಟಿ ಮನೆ ಅಂತ ಇರಲಿಲ್ಲ ಅಷ್ಟೇ. ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಲು ಇದೇ ಕಾಡಿನಲ್ಲಿ ಕಾಲುದಾರಿಯಿತ್ತು. ಸಾಮಾನ್ಯವಾಗಿ ರಾತ್ರಿ ಪ್ರವಾಸ ಇರುತ್ತಿರಲಿಲ್ಲ. ಊರಿನವರು ಸೊಪ್ಪು ಹಾಗೂ ದರಕು ತರಲು ಈ ಬೆಟ್ಟವನ್ನೇ ಅವಲಂಬಿಸಿದ್ದರು.

ಈ ಬೆಟ್ಟದಲ್ಲಿ ಹುಲಿಗಳ ಸಂಸಾರ ಇಲ್ಲದೇ ಇದ್ದರೂ ಆಗಾಗ ಹುಲಿರಾಯ ಪ್ರತ್ಯಕ್ಷನಾಗುತ್ತಿದ್ದ. ಸಾಮಾನ್ಯವಾಗಿ ಜನರಿಗೆ ದರ್ಶನ ಭಾಗ್ಯ ಸಿಗುತ್ತಿರಲಿಲ್ಲ. ಜನರು ಹುಲಿಗೆ ಹೆದರುವದಕ್ಕಿಂತ ಹುಲಿಯೇ ಜನರಿಗೆ ಹೆದರುವದು ಹೆಚ್ಚು ಎನ್ನುತ್ತಾರೆ. ಮೇಯಿಸಲು ಬಿಟ್ಟ ದನ ಕರುಗಳು ಈ ಭಾಗದಲ್ಲೇ ಓಡಾಡಿ ಮೇದು ತಿರುಗಿ ಕೊಟ್ಟಿಗೆಗೆ ಬರುತ್ತಿದ್ದವು.

ಅಲ್ಲಲ್ಲಿ ಹುಲಿ ತಿಂದು ಬಿಟ್ಟ ಸತ್ತ ದನದ ಕಳೇಬರವನ್ನು ನೋಡಿದ ಜನರು ಹುಲಿ ಬಂದದ್ದನ್ನು ತಿಳಿಯುತ್ತಿದ್ದರು. ಇಲ್ಲವಾದರೆ ದನ ಕೊಟ್ಟಿಗೆಗೆ ಬರದೇ ಇದ್ದರೆ ಹುಲಿ ತಿಂದಿರಬಹುದು ಎಂದು ಊಹಿಸುತ್ತಿದ್ದರು.

ಕೆಲವೊಮ್ಮೆ ಮನೆಯ ಸಮೀಪವೇ ಇರುವ ಕೊಟ್ಟಿಗೆಯ ಬಳಿಯೂ ಹುಲಿ ತಿರುಗಾಡುತ್ತಿತ್ತು. ಇಲ್ಲಿ ಬರುವದು ರಾತ್ರಿಯ ಸಮಯವೇ. ಕೊಟ್ಟಿಗೆಯಲ್ಲಿಯ ಆಕಳಿನ ಅಥವಾ ಎಮ್ಮೆಯ ಕರುಗಳನ್ನು ಹಿಡಿದು ಎಳೆದೊಯ್ಯುತ್ತಿತ್ತು. ಒಮ್ಮೆ ರಾತ್ರಿ ಒಂಬತ್ತು ಘಂಟೆಗೆ ಎಮ್ಮೆಕರುವನ್ನು ಮನೆಯ ಸಮೀಪದ ಕೊಟ್ಟಿಗೆಯಿಂದ ಎಳೆದೊಯ್ಯುತ್ತಿದ್ದಾಗ ಅಡಿಕೆ ತೂಗುತ್ತಿದ್ದ ಪಂಚೇರು ಕಲ್ಲನ್ನು ನಾಣಜ್ಜ ಎತ್ತಿ ಹಾಕಿದ್ದಾಗ ಕರುವನ್ನು ಬಿಟ್ಟು ಓಡಿ ಹೋಗಿತ್ತಂತೆ ಹುಲಿ. ದೊಡ್ಡ ದೊಡ್ಡ ಆಕಳುಗಳನ್ನು ಅಥವಾ ಎತ್ತುಗಳನ್ನು ಕೊಟ್ಟಿಗೆಗೆ ಬಂದು ಒಯ್ಯುವದಿಲ್ಲ ಹುಲಿ. ದೊಡ್ಡ ದನಗಳನ್ನು ಎಳೆದೊಯ್ಯಲು ಸಾಧ್ಯವಾಗುವದಿಲ್ಲ. ಆಗ ದನವನ್ನು, ಹಾರಿ ಕುತ್ತಿಗೆ ಮುರಿದು ಕೊಲ್ಲುತ್ತದೆ. ಜನರು ಓಡಾಡುವ ಜಾಗವಾದಲ್ಲಿ ಪೂರ್ತಿ ತಿನ್ನಲೂ ಆಗುವದಿಲ್ಲ. ಆಮೇಲೆ ರಾತ್ರಿ ಬಂದು ಆ ದನವನ್ನು ತಿನ್ನುತ್ತದೆ.

ಒಮ್ಮೆ ಬೆಟ್ಟಕ್ಕೆ ಹುಲಿ ಬಂದ ವಿಷಯ ಊರವರಿಗೆ ಗುತ್ತಾಯಿತು. ಕೆಲವರು ಹುಲಿಯನ್ನು ನೋಡಿದರೆ ಇನ್ನು ಕೆಲವರು ಸತ್ತ ದನವನ್ನು ನೋಡಿ ಊಹಿಸಿದರು.

ಒಂದು ಮಧ್ಯಾಹ್ನ ಒಂದು ಘಂಟೆಯ ಹೊತ್ತಿಗೆ ಅಡ್ಕೋಳಿ ಮನೆಯ ದೊಡ್ಡದಾದ ಗಾಡಿ ಎತ್ತನ್ನು ಮುರಿದು ಕೊಂದಿತು ಹುಲಿ. ದೂರದಲ್ಲಿ ನಡೆದು ಹೋಗುತ್ತಿರುವ ಕೆಲವರು ಮೂಕ ಪ್ರೇಕ್ಷಕರಾದರು. ಬರೀ ಹುಲಿ ನೋಡಿದಾಗಲೆ ಹೆದರಿಕೆಯಾಗುತ್ತದೆ. ಆದರೆ ಹುಲಿಯು ಆಕ್ರಮಣ ಮಾಡುವ ದೃಶ್ಯವನ್ನು ನೋಡಿಯೇ ತಿಳಿಯಬೇಕು ಎನ್ನುತ್ತಾರೆ. ಎತ್ತಿನ ಮಿಡುಕಾಟ ಸ್ವಲ್ಪ ಹೊತ್ತಿಗೆ ನಿಂತಿತು. ಸುದ್ದಿ ಕಾಳ್ಗಿಚ್ಚಿನಂತೆ ಊರಲ್ಲಿ ಹರಡಿತು.

ಹುಲಿಯ ಉಪಟಳ ಜಾಸ್ತಿಯಾಗಿದೆ. ಇನ್ನೆಷ್ಟು ದನಗಳು ಹುಲಿಗೆ ಆಹಾರವಾಗಬೇಕೋ? ಆದ್ದರಿಂದ ಅದನ್ನು ಕೊಲ್ಲುವದೇ ಇದಕ್ಕಿರುವ ಪರಿಹಾರ ಅಂತ ನಾಲ್ಕುಜನ ಸೇರಿ ನಿರ್ಣಯಿಸಿದರು. ಅದೆಲ್ಲಾ ಹೌದು, ಆದರೆ ಬೆಕ್ಕಿಗೆ ಯಾರು ಗಂಟೆ ಕಟ್ಟುವವರು? ಸರಿಯಾದ ಗುರಿಕಾರನೂ ಬೇಕು, ಧೈರ್ಯವಂತನೂ ಬೇಕು.

ಹುಲಿ ಬೇಟೆಗೆ ಎರಡು ಕ್ರಮ. ಒಂದು ಊರವರೆಲ್ಲಾ ಒಟ್ಟಾಗಿ ಮುಂದೆ ಗುರಿಕಾರರು ಇದ್ದು ಹುಲಿಯನ್ನು ಹೊಡೆಯುವದು ಅಥವಾ ಎತ್ತನ್ನು ತಿನ್ನಲು ಬರುವ ಹುಲಿಯನ್ನು ಮುಖಾಮುಖಿ ಹೊಡೆಯುವದು. ಮೊದಲನೆ ಕ್ರಮವಾದರೆ ಗಾಬರಿಯಿಂದ ಹುಲಿ ಓಡಿ ಹೋಗುತ್ತದೆ ಅಥವಾ ಜನರ ಮೇಲೆ ತಿರುಗಿ ಬೀಳುತ್ತದೆ. ಆಗ ಕೋವಿ ಹೊಡೆಯುವದು ಡೇಂಜರ್. ಗುಂಡು ಸೇರಿದ ಜನರನ್ನೇ ಬಡಿಯಬಹುದು. ಆದ್ದರಿಂದ ಎರಡನೇ ದಾರಿಯೇ ಸರಿ.

ಇದಕ್ಕೆ ಆಚೇಕೇರಿ ಸೀತಾರಾಮನೇ ಸರಿ ಅಂತ ಅವರಲ್ಲೇ ನಿರ್ಣಯಿಸಿದರು. ಸೀತಾರಾಮ ಹೆಗಡೆಗೆ ಸುದ್ದಿ ಹೋಯಿತು. ಕೆಲವು ವರ್ಷಗಳ ಹಿಂದೆ ಮರದ ಮೇಲೇ ಕುಳಿತು ಹುಲಿ ಬರ್ಕವನ್ನು ಹೊಡೆದ ಅನುಭವವೂ ಇದೆ ಅವನಿಗೆ. ಗುರಿ ಅರ್ಜುನನದೆ.

ಆದರೆ ಒಂದು ಧರ್ಮ ಸೂಕ್ಷ್ಮ. ಸೀತಾರಾಮ ಹೆಗಡೆಯ ಹೆಂಡತಿ ಗರ್ಭಿಣಿ. ಕೆಲವರು ಹೆಂಡತಿ ಗರ್ಭಿಣಿಯಾದಾಗ ಪ್ರಾಣಿವಧೆ ಸಲ್ಲದು ಅಂತ ಅನುಮಾನ ಸೂಚಿಸಿದರು. ಆದರೆ ಅದು ಬ್ರಾಹ್ಮಣ ಪರಿಷತ್ತು. "ಪ್ರಾಣಿ ಹತ್ಯೆ ದೋಷ ಸರಿ. ಆದರೆ ಕ್ರೂರ ಮೃಗವನ್ನು ಕೊಂದಲ್ಲಿ ಪ್ರಾಣಿಹತ್ಯೆ ದೋಷವಿಲ್ಲ". ಹಿರಿಯರ ಸಮರ್ಥನೆ ಸಿಕ್ಕಿತು. 'ಹುಲಿಯನ್ನು ಕೊಂದಲ್ಲಿ ಹುಲಿ ಹೊಡೆಯವ ಮಗನೇ ಹುಟ್ಟುತ್ತಾನೆ.'

ಇನ್ನೊಬ್ಬ ಧೈರ್ಯವಂತನೂ ಜೊತೆಯಲ್ಲಿ ಇರಬೇಕೆಂದು ನಿರ್ಣಯಿಸಿದರು. ಅದಕ್ಕೆ ದಡ್ಡನಮೆಟ್ಟಿನ ವೆಂಕಟಾಚಲನೆ ಸರಿ. ಬೇಕು ಅಂತಾದರೆ ಹಿರಿಗತ್ತಿ ಹಿಡಿದು ಮುಂದೆ ಹೋಗಿ ಹುಲಿಗೆ ಕಪ್ಪು ಹಾಕುವ ಆಸಾಮಿ ಅವನು. ಕೆಲವರು ಅವನದು ಹುಂಬಧೈರ್ಯ ಅಂತ ಹೇಳಿದರೂ ಸೀತಾರಾಮ ಹೆಗಡೆ ಅವನನ್ನೇ ಆಯ್ಕೆ ಮಾಡಿದ. ವೆಂಕಟಾಚಲನಿಗೆ ಕೋವಿ ಹೊಡೆಯಲೂ ಗೊತ್ತಿತ್ತು.

ಮಧ್ಯಾಹ್ನ ಒಂದು ಗಂಟೆಗೆ ಎತ್ತನ್ನು ಕೊಂದಿದ್ದು. ರಾತ್ರಿ ಬಂದು ತಿನ್ನುತ್ತದೆ. ಹುಲಿಯ ಚಲನವಲನದ ಬಗ್ಗೆ ತನ್ನ ಮೂವತ್ತನೆ ವಯಸ್ಸಿಗೇ ಪೂರ್ತಿ ಅನುಭವ ಮಾಡಿಕೊಂಡವ ಸೀತಾರಾಮ ಹೆಗಡೆ.

ಅಂದು ಐದು ಘಂಟೆಗೇ ತಯಾರಿ ಶುರುವಾಯಿತು. ಒಂದು ಕೊಡ ನೀರು, ಬೆಲ್ಲ, ಕವಳದ ಸಾಮಾನು, ಎರಡು ಈಡು ತುಂಬಿದ ಕೋವಿಗಳು, ನಾಲ್ಕು ಅಂಗುಲ ಮಶಿ ಹಾಕಿ ಮೇಲೆ ಸಲಾಕೆ ಇಟ್ಟಿದ್ದು. ಎರಡು ಹರಿತಮಾಡಿದ ಹಿರೇಗತ್ತಿ. ಎಂಟು ಶೆಲ್ಲಿನ ಹೆಡ್ ಲೈಟ್ ಬ್ಯಾಟರಿ ಎರಡು, ರಾತ್ರಿ ಬೆಳಗಿನ ತನಕವೂ ಬೇಕಾಗಬಹುದು ಅಂತ. ವೆಂಕಟಾಚಲ ಹಾಗೂ ಸೀತಾರಾಮ ಹೆಗಡೆ ಮನೆಯಿಂದ ಮುಕ್ಕಾಲು ಮೈಲಿ ದೂರವಿದ್ದ ವಾಟೆಕೆರೆ ಹತ್ತಿರ ಎತ್ತನ್ನು ಮುರಿದ ಸ್ಥಳದ ಹತ್ತಿರ ಹೋದರು. ಎತ್ತಿನ ಕಳೇವರದಿಂದ ಅರವತ್ತು ಅಡಿ ದೂರ ಸ್ವಲ್ಪ ಎತ್ತರದ ಸ್ಥಳವನ್ನು ಆರಿಸಿದರು. ಅಲ್ಲಿ ನೆಲವನ್ನು ಸಮತಟ್ಟು ಮಾಡಿದರು. ಅಕ್ಕಪಕ್ಕದ ಸೊಪ್ಪನ್ನು ಕಡಿದು ನೆಲಕ್ಕೆ ಹಾಸಿದರು. ಎದುರಿಗೆ ಐದು ಅಡಿ ಎತ್ತರದ ತನಕ ಗಿಡ ಇದ್ದ ಕಲ್ಪನೆ ಬರುವ ಹಾಗೆ ಸೊಪ್ಪು ಹಾಕಿ ವ್ಯವಸ್ಥೆ ಮಾಡಿದರು. ಬೇಕು ಅಂತಾದರೆ ಬೆಳತನಕವೂ ಕಾಯಬೇಕು. ಅಷ್ಟು ವ್ಯವಸ್ಥೆ.

ಹೋಗುವಾಗ ಅಲ್ಲಿದ್ದವರಲ್ಲಿ ಕೋವಿ ಈಡಿನ ಶಬ್ದ ಕೇಳಿದ ಕೂಡಲೇ ಬನ್ನಿ ಅಂತ ಹೇಳಿದ್ದರು. ಅವರು ಮಂಡಲ ಹಚ್ಚಿ ಇಸ್ಪೀಟಾಡುತ್ತಾ ಕೋವಿ ಗುಂಡಿನ ಸಪ್ಪಳವನ್ನೆ ನಿರೀಕ್ಷಿಸುತ್ತಿದ್ದರು.

ಇಬ್ಬರೂ ನೆಲದಮೇಲೆ ಹಾಕಿದ ಸೊಪ್ಪಿನ ಮೇಲೆ ಕುಳಿತು ಒಂದು ಭರ್ಜರಿ ಕವಳ ಹಾಕಿದರು. ಮಾತಾಡುವ ಹಾಗಿಲ್ಲವಲ್ಲ, ಹುಲಿಗೆ ಸಂಶಯವೂ ಬರಬಾರದು ಎನ್ನುವ ಕಾರಣಕ್ಕಾಗಿ. ಬಾಯಿಗೆ ಈಡು ಹಾಕಿಕೊಂಡರೆ ಹುಲಿಗೆ ಈಡು ಹೊಡೆಯುವದು ಸುಲಭ. ದೊಡ್ಡದಾದ ಉಸಿರನ್ನೂ ಬಿಡಬಾರದು. ಕತ್ತಲಾಯಿತು. ಸುಮಾರು ಎಂಟು ಗಂಟೆಯ ಸುಮಾರಿಗೆ ಹುಲಿ ವಡ್ಡೇಕುಂಬ್ರಿಯ ಕಡೆಯಿಂದ ಮೇಲಿನಿಂದ ಇಳಿದು ಬರುವದು ಕಾಣಿಸಿತು. ಹಣೆಯಿಂದ ಹೊರಟ ಬ್ಯಾಟರಿಯ ಬೆಳಕು ಇನ್ನೂರು ಅಡಿಯ ತನಕವೂ ಸ್ಪಷ್ಟವಾಗಿ ಕಾಣುತ್ತಿತ್ತು. ಇಬ್ಬರೂ ಜಾಗ್ರತರಾದರು. ಸೀತಾರಾಮ ಹೆಗಡೆಯ ಕೈಯಲ್ಲಿ ಈಡುಮಾಡಿದ ಕೋವಿ. ಇನ್ನೊಂದು ಕೋವಿ ಪಕ್ಕದಲ್ಲಿ. ವೆಂಕಟಾಚಲನ ಕೈಯಲ್ಲಿ ಹಿರೇಗತ್ತಿ.

ಸಾವಕಾಶವಾಗಿ ಎತ್ತಿನ ಕಳೇವರವನ್ನು ತಿನ್ನತೊಡಗಿತು ಹುಲಿ. ಹುಲಿ ಅವಸರದಲ್ಲಿದ್ದದ್ದು ಕಾಣಲಿಲ್ಲ. ಶ್ರೀಮದ್ಗಾಂಭೀರ್ಯ. ಬೇಟೆಗಾರರು ಕುಳಿತಲ್ಲಿಂದ ಹುಲಿಯ ತಲೆ ಸರಿಯಾಗಿ ಕಾಣುತ್ತಿತ್ತು. ಗುಂಡು ಹಾರಿಸಲು ವೆಂಕಟಾಚಲ, ಸೀತಾರಾಮ ಹೆಗಡೆಯ ಭುಜವನ್ನು ತಟ್ಟಿ ಹೇಳಿದ. ಅರವತ್ತು ಅಡಿ ದೂರದಲ್ಲಿ ಹುಲಿಯನ್ನು ಕಂಡು ಒಮ್ಮೆ ಸೀತಾರಾಮ ಹೆಗಡೆಗೆ ಅಳುಕಾದದ್ದು ಹೌದು. ಆದರೆ ವೆಂಕಟಾಚಲನ ತಿವಿತ ಹೆಚ್ಚಾಯಿತು. ಹೊಡೆಯದಿದ್ದರೆ ತಾನೇ ಹೊಡೆಯುವದಾಗಿ ಒತ್ತಾಯ ಬೇರೆ.

ಹೆಡ್ ಲೈಟಿನ ಜೊತೆ ಕೋವಿಯ ಗುರಿಯನ್ನು ತಲೆ ಎತ್ತಿದ ಹುಲಿಯ ಕೊರಳ ಗಂಟೆಗೆ ಸರಿಯಾಗಿ ಹಿಡಿದ ಸೀತಾರಾಮ ಹೆಗಡೆ. ಕುದುರೆಯನ್ನು ಎಳೆದು ಬಿಟ್ಟ.

ಢಂ! ಒಂದೇ ಢಂ!.

ಅದು ಸೀತಾರಾಮ ಹೆಗಡೆಯ ಗುರಿ, ಅರ್ಜುನನ ಗುರಿ. ಗುಂಡು ಹುಲಿಯ ಕಂಠವನ್ನು ಭೇದಿಸಿ ದಾಟಿಹೋಯಿತು. ಭಯಂಕರವಾದ ಹೊಗೆ. ಗಾಳಿಗೆ ಹೊಗೆ ಚದುರಿದಾಗ ಕಂಡಿದ್ದು ಹುಲಿ, ಅಲ್ಲೇ ಉರುಳಿದೆ. ಸ್ವಲ್ಪ ಹೊತ್ತು ಅಲ್ಲೇ ಕುಳಿತರು ಇಬ್ಬರೂ. ಸ್ವಲ್ಪ ಚಲನವಲನ ಇದೆ. ಇನ್ನೊಂದು ಗುಂಡು ಹಣೆಗೆ. ಬಹುಶಃ ಸತ್ತ ಹುಲಿಯ ಹಣೆ. ಹುಲಿ ಸತ್ತಿದ್ದು ದೃಢವಾಗುತ್ತಲೇ ಎದ್ದು ಹುಲಿ ಸತ್ತ ಸ್ಥಳವನ್ನು ಪರಾಂಬರಿಸಿ ಮನೆಗೆ ಹೋದರು.

ರಾತ್ರಿಯೇ ಸುದ್ದಿ ಊರಲ್ಲಿ ಹರಡಿತು. ಜನಜಾತ್ರೆಯೇ ಕೂಡಿತು. ರಾತ್ರಿಯೇ ಹುಲಿಯನ್ನು ನಾಲ್ಕುಜನ ಹೊತ್ತು ಸೀತಾರಾಮ ಹೆಗಡೆಯ ಮನೆಗೆ ತಂದು ಕೋಲಿಗೆ ಆನಿಸಿ ಕೂಡ್ರಿಸಿದರು.

ಯಾರೋ ಈ ವಿಷಯವನ್ನು ತಹಶೀಲದಾರರಿಗೆ ಮುಟ್ಟಿಸಿದರು. ತಹಶೀಲದಾರರು ಇಪ್ಪತ್ತೈದು ರೂಪಾಯಿಯ ಜೊತೆ ಅಭಿನಂದನಾ ಪತ್ರವನ್ನೂ ಕೊಟ್ಟರು.

ವಿಡಂಬನೆ

ಕಚೇರಿ ಪ್ರಹಸನ

– ಟಿ.ಎಸ್. ಶ್ರವಣ ಕುಮಾರಿ

ಆನೆ ಬರೋದಕ್ಕೆ ಮುಂಚಿತವಾಗೇ ಅದರ ಸೊಂಡಿಲು ಬರತ್ತೆ ಅನ್ನೋ ಗಾದೆಯ ಹಾಗೆ ಬ್ಯಾಂಕಿನ ಶಾಖೆಗೆ ಯಾರಾದರೂ ಗ್ರಾವಣೆಯಾಗಿ ಬರ್ತಿದಾರೆ ಅನ್ನುವ ಮಾಹಿತಿಯ ಗಾಳಿಪಟಕ್ಕೇ ಅಂಟಿಕೊಂಡು ಸವಿವರವಾದ ಬಾಲಂಗೋಚಿಗಳೂ ಬರುತ್ವೆ. ಯಾವ ಶಾಖೆಯಿಂದ ಬರ್ತಿದಾರೆ, ಅಲ್ಲಿಂದ ಹೊರದಬ್ಬಲು ಅಥವಾ ಇಲ್ಲಿಗೇ ಬರಲು ಏನಾದರೂ ವಿಶೇಷ ಕಾರಣಗಳಿವೆಯೇ, ಮನುಷ್ಯ (ಇದನ್ನು ಕಾಮನ್ ಜೆಂಡರ್ ಆಗಿ ಉಪಯೋಗಿಸಿದ್ದೇನೆ) 'ಯಾವ ರೀತಿ', ಅವನ ಸಾಧನೆಗಳೇನು, ವಿಶೇಷತೆಗಳೇನು….. ಇಂತಹ ಎಲ್ಲಾ ವಿಷಯಗಳೂ ಕುತೂಹಲವನ್ನೂ, ನಿರೀಕ್ಷೆಯನ್ನೂ ಕೆಲವೊಮ್ಮೆ ಭಯವನ್ನೂ ಹುಟ್ಟಿಸಿದ ನಂತರ ಯಾವುದೋ ಒಂದು ಶುಭ ಬೆಳಗು, ಶುಭ ಮುಹೂರ್ತದಲ್ಲಿ ಆ ವ್ಯಕ್ತಿಯು ಕಚೇರಿಯೊಳಗೆ ಪಾದಾರ್ಪಣೆ ಮಾಡಿ ಎಲ್ಲರ ಕುತೂಹಲವನ್ನು ತಣಿಸುವುದು ಸಾಮಾನ್ಯ. ಹೀಗೆಯೇ ಬರುವ ವ್ಯಕ್ತಿಯೂ ಈ ಶಾಖೆಯಲ್ಲಿ ಯಾರುಯಾರಿದ್ದಾರೆ, ಯಾರು ಸ್ಪರ್ಧಿ, ಯಾರು ಹಿತವರು, ಯಾರ ಬಗ್ಗೆ ಕಣ್ಣಿಟ್ಟಿರಬೇಕು, ಶಾಖೆಯ ಬಲಾಬಲಗಳೇನು…. ಹೀಗೆ ಹಲವಾರು ಅಂಶಗಳನ್ನು ಅಂದಾಜಿಸಿಯೇ ಬಂದಿರುತ್ತಾನೆ/ಳೆ. ಇದು ದಿನದಿನವೂ ತನ್ನ ಉಳಿವಿಗಾಗಿ, ಸಾಮರ್ಥ್ಯ ಪ್ರತಿಪಾದನೆಗಾಗಿ, ಎದುರಾಡುವವರನ್ನು ಹಣಿಯುತ್ತಾ, ಬಲವಾದವರನ್ನು ಓಲೈಸುತ್ತಾ, ಕೃತಕವಾಗಿಯಾದರೂ ಸಂಬಂಧಗಳನ್ನು ಚೆನ್ನಾಗಿಟ್ಟುಕೊಳ್ಳಲು ಪ್ರಯತ್ನಿಸುವ ಒಂದು ಕ್ರೀಡೆಯೇ ಸರಿ. ಒಂದು ಕಚೇರಿಯೆಂದಮೇಲೆ ಅಲ್ಲೊಬ್ಬ ಧರ್ಮರಾಯ, ಅರ್ಜುನ, ಶಕುನಿ, ವಿದುರ, ಭೀಷ್ಮ, ದೃತರಾಷ್ಟ್ರ, ಕರ್ಣ, ಕೃಷ್ಣ…. ಹೀಗೆ ಮಹಾಭಾರತದ ಪಾತ್ರಗಳೆಲ್ಲವೂ ಇರುತ್ತವೆ. ಬಂದವರು ಯಾರೆಂದು ಇರುವವರು ತೀರ್ಮಾನಿಸಿಕೊಳ್ಳುತ್ತಾರಷ್ಟೇ.

ಪೀಠಿಕೆಯೇ ಉದ್ದವಾಯಿತೇನೋ. ಈಗ ಮುಖ್ಯವಾದ ಕತೆಗೆ ಬರೋಣ. ಹೀಗೇ ನಮ್ಮ ಶಾಖೆಗೆ ಏಕಕಾಲದಲ್ಲಿ ಶಾಖಾ ವ್ಯವಸ್ಥಾಪಕರು ಹಾಗೂ ಲೆಕ್ಕಾಧಿಕಾರಿ ಇಬ್ಬರೂ ವರ್ಗಾವಣೆಯಾಗಿ ಬರುವವರೆಂಬ ಸುದ್ದಿ ನಂಬಲರ್ಹವಾದ ಮೂಲಗಳಿಂದ ಹಾರಾಡುತ್ತಾ ಬಂತು. ಇಬ್ಬರ ಪೂರ್ವೇತಿಹಾಸವೂ ವಿಶೇಷವಾಗಿಯೂ, ಆತಂಕಕಾರಿಯಾಗಿಯೂ ಇದ್ದದ್ದು ಸ್ವಲ್ಪ ಬಿಗುವಿನ ವಾತಾವರಣವನ್ನೇ ಸೃಷ್ಟಿಸಿತ್ತು ಎಂದೆನ್ನಿ. ಶಾಖಾಧಿಕಾರಿಯಾಗಿ ಬರುತ್ತಿದ್ದ ಶ್ರೀಮಾನ್. . . ಅವರಿಗೆ ತಮ್ಮ ಹೆಸರಿನ ಎಡಕ್ಕೆ ಹುಚ್ಚು ಮುಂಡೇದು ಉರುಫ್ ಮೊಹಮದ್ ಬಿನ್ ತೊಘಲಖ್, ಹಾಗೆಯೇ ಲೆಕ್ಕಾಧಿಕಾರಿಣಿಯಾಗಿ ಬರುತ್ತಿರುವ ಶ್ರೀಮತಿ….ಯವರಿಗೆ ಲಂಕಿಣಿಯೆಂಬ ಅನ್ವರ್ಥಕ ವಿಶೇಷಣಗಳಿರುವುದೆಂದೂ ತಿಳಿದು ಬಂದದ್ದರಿಂದ ಎಲ್ಲರಿಗೂ ಆತಂಕವಾಗಿದ್ದು ಸಹಜವೇ ಆಗಿತ್ತು. ಯಾರೋ ಒಬ್ಬರು ಯಡವಟ್ಟಾದರೆ ಇನ್ನೊಬ್ಬರ ಆಶ್ರಯ ಪಡೆದುಕೊಳ್ಳಬಹುದು. ಆದರೆ ಅತ್ತ ದರಿ, ಇತ್ತ ಪುಲಿ ಎಂದಾದರೆ ಪ್ರಜೆಗಳಾದ ಸಿಬ್ಬಂಧಿಯ ಪಾಡೇನು?!

ಯಾರ ಪಾಡು ಹೇಗಾದರೇನು, ಅಂತೂ ಒಂದು ದುರ್ಮುಹೂರ್ತದಲ್ಲಿ ತೊಘಲಖನ ಸಾಮ್ರಾಜ್ಯ ಶಾಖೆಯಲ್ಲಿ ಆರಂಭವಾಯಿತು. ತನ್ನ ಎರಡೂ ಶೂಗಳ ಬೆಲೆಯ ಹಳದಿ ಸ್ಟಿಕರ್, ನೀಲಿ ಬಣ್ಣದ ಶರ್ಟಿನ ಮೇಲಿದ್ದ ಬಿಳಿಯ ಸ್ಟಿಕರ್‌ನ್ನು ತೆಗೆಯದೆ ಇಡೀ ದಿನ ಹಾಗೇ ಓಡಾಡಿ ತಾನು ಹೆಚ್ಚೆಮ್ ಎನ್ನುವುದನ್ನು ಪ್ರಮಾಣಿಸಿ ತೋರಿಸಿತು. ಎಲ್ಲರೂ ಶಾಖೆ ಶುರುವಾಗುವ ಸಮಯದೊಳಗೇ ಬಂದಿದ್ದರೂ, "ಕಾಯಿದೆ ರೀತ್ಯಾ ಕಾಲು ಗಂಟೆ ಮುಂಚಿತವಾಗಿರಬೇಕಿತ್ತು, ಇವತ್ತು ಪಾಪಾಂತ ಬಿಟ್ಟಿದೀನಿ. ನಾಳೆಯಿಂದ ಒಂಭತ್ತೂಕಾಲಿನೊಳಗೆ ಎಲ್ರೂ ಬಂದಿರ್ಬೇಕು. ಇಲ್ದಿದ್ರೆ ರಜಾ ಹಾಕಿ ಹೋಗ್ತಿರ್ಬೇಕು" ಎಂದು ಮೊದಲ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಅಂತೆಯೇ ಅದನ್ನು ಯಥಾರ್ಥವಾಗಿ ಜಾರಿಗೊಳಿಸುವ ಅಧಿಕಾರವನ್ನು ತೋಳಕ್ಕೆ ಪಾರುಪತ್ಯ ಕೊಟ್ಟಂತೆ ಲಂಕಿಣಿಗೆ ವಹಿಸಲಾಯಿತು. ಮಹಿಳೆಯರೇ ಹೆಚ್ಚಾಗಿದ್ದ ಕಚೇರಿಯಲ್ಲಿ ಪ್ರತಿದಿನವೂ ಒಂದಲ್ಲಾ ಒಂದು ಸಹಜವಾದ ಕಾರಣಕ್ಕೆ ಒಂದೆರಡು ನಿಮಿಷ ತಡವಾಗಿ ಬಂದು ಇಬ್ಬರಲ್ಲೊಬ್ಬರ

ಕೈಗೆ ಸಿಕ್ಕುಬಿದ್ದು ಏನೋ ಜೀವದಾನ ಮಾಡಿದಂತೆ ಪುಣ್ಯವಿದ್ದವರಿಗೆ ಕ್ಷಮೆ ದೊರೆತು, ಗ್ರಹಚಾರ ಕೆಟ್ಟಿದ್ದರೆ ಬಲವಂತದ ರಜೆಯ ಸಜೆಯನ್ನು ಅನುಭವಿಸಬೇಕಾಯಿತು.

ಈ ಹೊಸ ರಾಜ್ಯಾಡಳಿತದಿಂದಾಗಿ ಗ್ರಾಹಕರಿಗೂ ಸ್ವಲ್ಪ ಗಲಿಬಿಲಿಯಾಗಲು ಆರಂಭವಾಯಿತು. ಹಲವು ಗ್ರಾಹಕರು ಸಿಬ್ಬಂದಿಯೊಂದಿಗೆ ಒಂದಿಷ್ಟು ಹರಟುವುದು, ಶಾಖಾಧಿಕಾರಿಯ ಕೊಠಡಿಗೆ ಹೋಗಿ ಕಷ್ಟ ಸುಖ ಹೇಳಿಕೊಂಡು ಕಾಲಕ್ಷೇಪ ಮಾಡುವುದು, ವಿಶೇಷ ದಿನಗಳಲ್ಲಿ ದೇವಸ್ಥಾನದ ಪ್ರಸಾದಗಳನ್ನು, ಹಬ್ಬ ಹರಿದಿನಗಳಲ್ಲಿ ಸಿಹಿತಿಂಡಿಯನ್ನು ತಂದು ಹಂಚುವುದು, ಹೀಗೆ ಶಾಖೆಯನ್ನು ನೆಂಟರ ಮನೆಯನ್ನಾಗೇ ಮಾಡಿಕೊಂಡಿದ್ದರು ಎನ್ನಬಹುದು. ಪಿಂಚಣಿದಾರರೇ ಹೆಚ್ಚಾಗಿದ್ದು, ಬೆಳಗ್ಗೆ ತಿಂಡಿ ತಿಂದ ನಂತರ ಹಾಗೇ ಕಾಲಾಡಿಸಿಕೊಂಡು ಬರೋಣವೆಂದುಕೊಂಡು ಹತ್ತೋ, ಹದಿನೈದೋ ರೂಪಾಯಿನ ಡಿವಿಡೆಂಡ್ ವಾರಂಟನ್ನು ತಮ್ಮ ಖಾತೆಗೆ ಹಾಕುವುದಕ್ಕೋ, ಇಲ್ಲವೇ ನೂರೋ ಇನ್ನೂರೋ ಖಾತೆಯಿಂದ ತೆಗೆಯುವುದಕ್ಕೋ ಅಥವಾ ಎರಡು ದಿನದ ಹಿಂದೆ ಜಮಾ ಮಾಡಿದ್ದನ್ನು ಪಾಸ್ ಪುಸ್ತಕದಲ್ಲಿ ಭರ್ತಿ ಮಾಡಿಸಿಕೊಳ್ಳುವ ನೆಪದಲ್ಲೋ ಬರುತ್ತಿದ್ದರು. ಗ್ರಾಹಕರು ಕುಳಿತುಕೊಳ್ಳುವ ವಿಭಾಗದ ಮೇಜಿನ ಮೇಲಿದ್ದ ಅಂದಿನ ಕನ್ನಡ, ಇಂಗ್ಲೀಷ್ ಪತ್ರಿಕೆಗಳನ್ನು ತಿರುವಿಹಾಕುತ್ತ, ತಮ್ಮಂತೆಯೇ ದಿನವೂ ಬರಲಿರುವ ಮಿತ್ರರಿಗಾಗಿ ಕಾಯುತ್ತಿದ್ದರು. ಅವರೊಂದಿಗೆ ಕಥಾಕಾಲಕ್ಷೇಪವಾದ ನಂತರ ಎದುರಿನಲ್ಲಿದ್ದ ಮಾರುಕಟ್ಟೆಗೆ ಹೋಗಿ ಒಂದಿಷ್ಟು ತರಕಾರಿ, ಹಣ್ಣು ಖರೀದಿಸಿ ಮಧ್ಯಾಹ್ನ ಊಟದ ಹೊತ್ತಿಗೆ ಮನೆಸೇರಿಕೊಂಡರೆ ಅವರ ದಿನದ ಕಾರ್ಯಕ್ರಮ ಮುಗಿದಂತೆ. ಎ ಟಿ ಎಂ ಗಳಿದ್ದಿಲ್ಲದ ಕಾಲವದು. ಒಂದು ಸ್ನೇಹ ಬಾಂಧವ್ಯ ಗ್ರಾಹಕರೊಂದಿಗೆ ಸಹಜವಾಗಿತ್ತು.

ಹೀಗೇ ಒಂದು ದಿನ ನನ್ನೊಂದಿಗೆ ಮುದುಕರೊಬ್ಬರು ಎಂದಿನ ಸಲುಗೆಯಿಂದಲೇ ನಗುತ್ತಾ ಮಾತನಾಡುತ್ತಿರುವಾಗ ಹಿಂದೆ ಬಂದು ನಿಂತ ತೊಘಲಕ್- "ನೀವು ಯಾವ ಕೆಲಸಕ್ಕೆ ಬಂದಿದೀರಿ" ಎಂದು ಕೇಳಿದಾಗ ಗಲಿಬಿಲಿಯಾಗಿ "ಪಾಸ್‌ಬುಕ್ ಎಂಟ್ರಿಗೆ ಸರ್" ಎಂದರವರು. "ಸರಿ ಅಷ್ಟು ಕೆಲ್ಸ ಮುಗಿಸ್ಕೊಂಡು ಹೋಗಿ. ಅನವಶ್ಯಕ ಹರಟೆ ಬೇಡ" ಎಂದವರೇ ನನ್ನೆಡೆಗೆ ತಿರುಗಿ "ಹರ್ಟೆ ಹೊಡ್ಕೊಂಡು ಕೂತ್ಕೋಬೇಡಿ, ಮೊದ್ಲು ಅವ್ರ ಕೆಲ್ಸ ಮಾಡ್ಕೊಟ್ಟು ಕಳ್ಸಿ" ಎಂದು, ನಾನು ಪಾಸ್ ಬುಕ್ ಅವರಿಗೆ ಕೊಡುವತನಕ ಅಲ್ಲಿಂದ ಕದಲಲೇ ಇಲ್ಲ. ಗಾಬರಿಯಿಂದ ಅವರು ಹೊರಟ ನಂತರ ಶ್ರೀಮಾನ್ ಹೆಚ್ಚೆಮ್, ಶ್ರೀಮತಿ ಎಲ್ ಕಡೆಗೆ ತಿರುಗಿ "ಇದೇನಾ ನೀವು ಮ್ಯಾನೇಜ್ ಮಾಡೋ ರೀತಿ, ಇದೇನು ಮನೇನೋ ಆಫೀಸೋ. ಬಿ ಸ್ಟ್ರಿಕ್ಟ್ ಟು ಎವ್ವೆರಿಬಡಿ. ಕಮ್ ಟು ಮೈ ಕ್ಯಾಬಿನ್" ಎಂದು ಧುಡುಧುಡು ಹೊರಟಿತು. ಎಲ್ ಹಿಂಬಾಲಿಸಿತು – ಹೊಸ ಹೊಸ ಕಾಯಿದೆಗಳನ್ನು ರೂಪಿಸಲು…

ಇಬ್ಬರ ಜಂಟಿ ಕಾರ್ಯಸೂಚಿಯಲ್ಲಿ ಈ ವಿಷಯಗಳು ತೀರ್ಮಾನವಾದವು. 1. ಇಲ್ಲಿ ಬರುವ ಹೆಚ್ಚಿನ ಗ್ರಾಹಕರು ಪಿಂಚಣಿದಾರರು, ಅವರಿಗೆ ಟೈಮ್ ಪಾಸಾಗಲ್ಲ ಅಂತ ಅನವಶ್ಯಕವಾಗಿ ಬಂದು ಸಿಬ್ಬಂದಿಯೊಂದಿಗೆ ಹರಟುವುದನ್ನು ತಪ್ಪಿಸಬೇಕು; 2. ಸ್ನೇಹಿತರನ್ನು ಭೇಟಿ ಮಾಡಲು ಇದನ್ನೊಂದು ತಂಗುದಾಣವನ್ನಾಗಿ ಮಾಡಿಕೊಂಡಿದ್ದಾರೆ; 3. ಅಲ್ಲಿರುವ ಮೆತ್ತನೆಯ ಸೋಫಾಗಳನ್ನು ತೆಗೆಸಿ ಹಿಡಿಯಿಲ್ಲದ ಪ್ಲಾಸ್ಟಿಕ್ ಕುರ್ಚಿಗಳನ್ನು ಹಾಕಿಸಬೇಕು; 4. ಗ್ರಾಹಕರಿಗಾಗಿ ತರಿಸುತ್ತಿರುವ ವೃತ್ತಪತ್ರಿಕೆಗಳನ್ನು ತಕ್ಷಣವೇ ನಿಲ್ಲಿಸಬೇಕು/ ಅಲ್ಲಿಡದೆ ಒಳಗಿಡಬೇಕು; 5. ಅವರು ಸಿಹಿತಿಂಡಿ/ಪ್ರಸಾದ ಇಂತಹವನ್ನು ತಂದುಕೊಡುವುದು, ಪ್ರತಿಯಾಗಿ ಸಿಬ್ಬಂದಿಗಾಗಿ ಬರುವ ಕಾಫಿಯನ್ನು ಅವರಿಗೆ ಕೊಡುವುದು ಇದೆಲ್ಲವೂ ಈ ಕ್ಷಣದಿಂದಲೇ ಬಂದಾಗಬೇಕು. ಇನ್ನೇನೇನು ತೀರ್ಮಾನವಾದವೋ…. ನಮ್ಮ ಸುದ್ದಿವಾಹಕ ಶಾಂತರಾಜುವಿನಿಂದ ಹೊರಬಂದ ವಿಷಯಗಳಿಷ್ಟು. ಇದರ ಬಿಸಿ ಗ್ರಾಹಕರಿಗೆ ತಟ್ಟದೇ ಹೋಗಲಿಲ್ಲ.

ಆ ದಿನ ಬೆಳಗ್ಗೆ ಬಂದ ಗ್ರಾಹಕರೊಬ್ಬರು "ಹೊಸದಾಗಿ ಬಂದಿರುವ ಮ್ಯಾನೇಜರ್ರ ಪೂರ್ತಿ ಹೆಸರೇನು?" ಎಂದು ಕೇಳಿದರು. ನಾನೂ ಪೂರ್ಣವಿಶ್ವಾಸದೊಂದಿಗೆ "ಹೆಚ್.ಎಂ….ರಾವ್" ಎಂದೆ. "ಅಕೌಂಟೆಂಟ್ ಹೆಸರು" ಎಂದು ಕೇಳಿದ್ದಕ್ಕೆ "ಎಲ್….ವತಿ" ಎಂದೆ. ಅವರು

ಹೊರಟ ತಕ್ಷಣ ಪಕ್ಕದಲ್ಲಿದ್ದ ಇಂದು "ಮ್ಯಾನೇಜರ್ ಇನ್ಷಿಯಲ್ಸ್ ಹೆಚ್.ಎಂ. ಅಂತ ಗೊತ್ತಾ?" ಕೇಳಿದಳು. "ಅಲ್ವಾ ಹಾಗಾದ್ರೆ, ಅವ್ರ ಇನಿಷಿಯಲ್ಸ್ ನೋಡ್ಕೊಂಡೇ ಅವ್ರಿಗೆ ಹುಚ್ಚು ಮುಂಡೇದು ಅಂತ ಅಡ್ಡ ಹೆಸ್ರಿಟ್ಟಿರೋದಲ್ವಾ?" ಎಂದೆ. "ಅಲ್ಲಾನ್ಸತ್ತೆ ಬೇರೆ ಏನೋ ಇದೆ. ಜೊತೆಗೆ ಅಕೌಂಟೆಂಟ್‌ದು ಕೂಡಾ ಎಲ್. ಅಲ್ಲ. ಆದ್ರೂ ನೀನಷ್ಟು ಸೀರಿಯಸ್ ಆಗಿ ಅವ್ರ ಹತ್ರ ಹೇಳ್ತಿದ್ಯಲ್ಲ" ಎಂದು ನಗಲು ಶುರುಮಾಡಿದಳು. ನನಗೂ ನಗು ತಡೆಯದೆ ಇಬ್ಬರೂ ಬಿದ್ದು ಬಿದ್ದು ನಗುತ್ತಿರುವುದು ನಮ್ಮ ಗ್ರಾಚಾರಕ್ಕೆ ಲಂಕಿಣಿಯ ಕಣ್ಣಿಗೆ ಬೀಳಬೇಕೇ! "ಏನದು ನಗೋ ವಿಷ್ಯ. ನಂಗೂ ಹೇಳಿ, ನಾನೂ ಎಂಜಾಯ್ ಮಾಡ್ತೀನಿ" ಎನ್ನುತ್ತಾ ನಮ್ಮಿಬ್ಬರ ಮಧ್ಯದಲ್ಲಿ ಸಾಕ್ಷಾತ್ ಅಶೋಕವನದಲ್ಲಿ ಸೀತೆಯ ಪಕ್ಕದಲ್ಲಿದ್ದಾಕೆಯ ಅಪರಾವತಾರದಂತೆ ಬಂದು ನಿಂತಳು. ನಿಜ ಹೇಳಲು ಸಾಧ್ಯವೇ?! ಅಷ್ಟರಲ್ಲಿ ನಮ್ಮ ಹೆಚ್ಚೆಮ್ ಮಹಾಶಯರೂ ಕ್ಯಾಬಿನ್ನಿಂದ ಹೊರಬಂದು "ಏನ್ರಿ ಅದು, ಮೂವರೂ ಹರಟ್ತಾ ನಿಂತಿದೀರ. ಗೋ ಬ್ಯಾಕ್ ಟು ಯುವರ್ ಸೀಟ್" ಎಂದು ಲಂಕಿಣಿಗೆ ಆಜ್ಞಾಪಿಸಿ "ಕೆಲ್ಸ ನೋಡ್ರಿ, ನಗ್ತಾ ಕೂರೋದಲ್ಲ. ಕೆಲ್ಸಾಂದ್ರೆ ಸೀರಿಯಸ್‌ನೆಸ್ ಇಲ್ಲ" ಎಂದು ಒಂದು ಸಣ್ಣ ಯಕ್ಷಗಾನದ ಮಟ್ಟನ್ನು ಆಡಿ ತೋರಿಸಿದರು. ಕಷ್ಟಪಟ್ಟು ತಡೆದುಕೊಂಡರೂ ಎಷ್ಟೋ ಹೊತ್ತು ಮುಖದಿಂದ ನಗು ಮಾಯವಾಗಲಿಲ್ಲ.

ಆಗ ಮಧ್ಯಾಹ್ನದ ಊಟದ ವಿರಾಮಕ್ಕೆ ಮುಂಚೆಯೇ ವ್ಯವಹಾರದ ವೇಳೆ ಮುಗಿಯುತ್ತಿದ್ದ ಕಾಲ. ಹಾಗಾಗಿ ಊಟದ ವಿರಾಮದ ನಂತರ ಮಿಕ್ಕ ಕೆಲಸ ಮಾಡಿಕೊಳ್ಳುತ್ತಲೇ ನಮ್ಮೆಲ್ಲರ ನಡುವೆ ಮಾತು, ನಗು, ಹರಟೆ, ಕೀಟಲೆ ಎಲ್ಲವೂ ಸಾಮಾನ್ಯವಾಗಿತ್ತು. ಅದೂ ಶಾಖೆಯಲ್ಲಿ ಇದ್ದದ್ದೆಲ್ಲಾ ಬರೀ ಮಹಿಳಾಮಣಿಗಳೇ. ಹಾಗಾಗಿ ಏನು ಮಾತಾಡಲೂ ಪೂರ್ಣ ಸ್ವಾತಂತ್ರ್ಯವಿತ್ತು. ಇದನ್ನು ನೋಡುತ್ತಿದ್ದರೆ ನಮ್ಮ ಮಿ. ಹೆಚ್ಚೆಮ್ಗೆ ಹೊಟ್ಟೆ ಉರಿಯದಿರಲು ಸಾಧ್ಯವೇ?! ಸೀದಾ ಬಂದು ಲಂಕಿಣಿಯ ಎದುರಿನ ಕುರ್ಚಿಯಲ್ಲಿ ಆಸೀನನಾಗಿ, ಕಾಲ ಮೇಲೆ ಕಾಲು ಹಾಕಿಕೊಂಡು, ಕಾಲು ಕುಣಿಸುತ್ತಾ ಆಕೆಯೊಂದಿಗೆ ಕಷ್ಟ ಸುಖ ಮಾತಾಡಿಕೊಳ್ಳುತ್ತಿತ್ತು. ಕಡ್ಡಾಯವಾಗಿ ನಮ್ಮೆಲ್ಲರ ಬಾಯಿಯೂ ಬಂದ್ ಆಗುತ್ತಿತ್ತು. ಹೀಗೇ ಒಂದು ದಿನ ಮಾತಾಡ್ತಿರುವಾಗ "ನನ್ನ ಹೆಂಡತಿಗೆ ಕ್ಯಾನ್ಸರ್ ಕಣ್ರೀ. ಬೆಡ್ ರಿಡನ್. ದಿನಾ ಬೆಳಗ್ಗೆ ನಾಕುಗಂಟೆಗೇ ಎದ್ದು, ನಾನೇ ತಿಂಡಿ ಅಡುಗೆ ಎಲ್ಲಾ ಮಾಡಿ, ಅವಳಿಗೆ ಸ್ನಾನ ಮಾಡ್ಸಿ, ಪೌಡರ್ ಹಾಕಿ, ಬಟ್ಟೆ ತೊಡಿಸಿ, ತಿಂಡಿ ತಿನ್ಸಿ, ಮಗು ಹಾಗೆ ನೋಡ್ಕೋಬೇಕಾಗಿದೆ. ಅವ್ಳು ಬೇರೆ ಯಾರ ಕೈಲೂ ಮಾಡಿಸ್ಕೊಳಕ್ಕೆ ಒಪ್ಪೋದೇ ಇಲ್ಲ" ಎಂದು ಕೊಚ್ಚಿಕೊಳ್ಳುತ್ತಿತ್ತು. ಅದಕ್ಕೆ ಲಂಕಿಣಿಯೂ ಸಹಾನುಭೂತಿ(?) ತೋರಿ, "ಹೌದಾ ಸರ್, ಎಂಥಾ ಅನ್ಯಾಯ. ಪೌಡ್ರು ಹಾಕ್ಬೇಕು ಸರ್. ಇಲ್ದಿದ್ರೆ ಬೆಡ್ಸೋರ್ ಆಗ್ಬಿಡತ್ತೆ. ಏನ್ಮಡಕ್ಕಾಗತ್ತೆ. ಗಂಡಹೆಂಡ್ತಿ ಅಂದ್ಮೇಲೆ ಒಬ್ಬರಿಗೊಬ್ಬರು, ಸಮಯಾಂದ್ರೆ ತೊಳ್ಸೋದ್ರಿಂದ ಹಿಡ್ದು ಎಲ್ಲಾನೂ ಮಾಡ್ಬೇಕಾಗತ್ತೆ" ಎಂದು ಲೊಚಗುಟ್ಟಿತು. 'ಬೇಕಿತ್ತಾ ಇದು' ಎಂದು ನಾವೆಲ್ಲಾ ಮುಖಮುಖ ನೋಡಿಕೊಂಡೆವು. ಅಷ್ಟಕ್ಕೆ ನಿಲ್ಲಿಸದೆ ಹೆಚ್ಚೆಮ್ ತನ್ನ ಸಂಕಟಗಳನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾ ಹೋಯಿತು. ಕೇಳುತ್ತಿದ್ದ ಎಲ್ಲರಿಗೂ ಹೆಚ್ಚೆಮ್ ಬಗ್ಗೆ ಸಹಾನುಭೂತಿ ಹುಟ್ಟಿ, ಅದಕ್ಕೇ ಹೀಗಾಡತ್ತೇನೋ ಅಂದ್ಕೊಂಡಿದ್ದೂ ನಿಜ.

ಅದರ ಮುಂದಿನ ವಾರ ಯಾರೋ ಒಬ್ಬ ಚಂದದ ಮಹಿಳೆ ಲಕ್ಷಣವಾಗಿ ಅಲಂಕರಿಸಿಕೊಂಡು ಹೆಚ್ಚೆಮ್‌ನನ್ನು ಕೇಳಿಕೊಂಡು ಬಂದರು. ಹೆಚ್ಚೆಮ್ ಊಟಕ್ಕೆ ಹೋಗಿತ್ತು. ನಮ್ಮ ಶಾಂತರಾಜು ಪ್ರಾಥಮಿಕ ತನಿಖೆಯ ನಂತರ ಅವರನ್ನು ಕ್ಯಾಬಿನ್ನಿನಲ್ಲಿ ಕುಳ್ಳಿರಿಸಿ ಹೊರಬಂದು ಶಾಖೆಯ ಎಲ್ಲರ ಗಮನವನ್ನೂ ಸೆಳೆಯುವಂತೆ ಜೋರಾಗಿ "ಮ್ಯಾನೇಜರ್ ಮಿಸೆಸ್ ಬಂದಿದಾರೆ" ಎಂದ, ರಹಸ್ಯವನ್ನು ಹೊರಗೆಳೆದ ಧೀರನಂತೆ. ತಕ್ಷಣವೇ ಎಲ್ಲರೂ ಮ್ಯಾನೇಜರ್ ಕ್ಯಾಬಿನ್ ಕಡೆ ದೃಷ್ಟಿ ಹರಿಸಿ ಒಬ್ಬರ ಮುಖ ಒಬ್ಬರು ನೋಡಿಕೊಂಡೆವು ಅಚ್ಚರಿಯಿಂದ. ನಮ್ಮ ಎಲ್ ಮುಂದಿನ ತನಿಖೆಯನ್ನು ಸಾಂಗೋಪಾಂಗವಾಗಿ ಮಾಡಿತು. ಹೆಚ್ಚೆಮ್‌ನ 'ಸೋಕಾಲ್ಡ್ ಕ್ಯಾನ್ಸರ್ ಪತ್ನಿ' ಅಲ್ಲೇ ಯಾವುದೋ ಸೀರೆಯ ಅಂಗಡಿಗೆ ಬಂದಿದ್ದಾಕೆ ದುಡ್ಡು ಕಮ್ಮಿ ಬಂದಿದ್ದಕ್ಕೆ ಗಂಡನಿಂದ ತೆಗೆದುಕೊಂಡು ಹೋಗಲು ಬಂದಿದ್ದರು. ವಾಪಸ್ಸು ಬಂದ ಹೆಚ್ಚೆಮ್ ಮುಖ ಹೆಂಡತಿಯನ್ನು ನೋಡಿ ಹುಳ್ಳಗಾಯಿತು. ದುಡ್ಡು ಕೊಟ್ಟು ಬಾಗಿಲಿನವರೆಗೂ ಹೋಗಿ ಕಳಿಸಿ ಬಂದರು. ನಮ್ಮ ಲಂಕಿಣಿ ಸುಮ್ಮನಿರದೆ "ನಿಮ್ಮ ಮಿಸೆಸ್ ತುಂಬಾ ಚೆನ್ನಾಗಿದಾರೆ ಸರ್. ಕ್ಯಾನ್ಸರ್ ಪೇಷೆಂಟು ಅನ್ಸೋದೇ ಇಲ್ಲ. ವಾರದ ಹಿಂದೆ ಅಷ್ಟೊಂದು ಹೇಳಿದ್ರಿ. ಎಷ್ಟು ಬೇಗ

ರಿಕವರ್ ಆಗಿದಾರಲ್ಲಾ ಸರ್" ಎಂದಿತು. "ಸುಮ್ನೆ ಬಾಯ್ಮುಚ್ಕೊಂಡು ಕೆಲ್ಸ ನೋಡ್ರಿ ಎಲ್ರೂ" ಎನ್ನುತ್ತಾ ಹೆಚ್ಚೆಮ್ ಕಥಕ್ಕಳಿಯ ಭಂಗಿಯಲ್ಲೊಮ್ಮೆ ಕುಣಿದಾಡಿ ಕ್ಯಾಬಿನ್ನಿನ ಒಳ ಹೋಯಿತು. "ಮಾಡ್ದೋರ ಪಾಪ ಆಡ್ದೋರ ಬಾಯಲ್ಲಿ" ಎಂದ ಲಂಕಿಣಿ ಸುಮ್ಮನಾಯಿತು.

ಅರ್ಧ ವರ್ಷಾಂತ್ಯ ಹಾಗೂ ವರ್ಷಾಂತ್ಯದಂದು ಎಲ್ಲರಿಗೂ ಊಟ ಕೊಡಿಸುವುದು ಬ್ಯಾಂಕಿನ ವಾಡಿಕೆ. ಶುಕ್ರವಾರದ ಲಕ್ಷ್ಮೀಪೂಜೆಗೆಂದು ಇಟ್ಟಿದ್ದ ತೆಂಗಿನಕಾಯಿ, ಬಾಳೇಹಣ್ಣು, ಉಳಿದಿದ್ದ ಚರಪನ್ನೇ ಅದು ತನಗೆ ಸೇರಬೇಕಾದ್ದೆಂದು ಮನೆಗೊಯ್ಯುತ್ತಿದ್ದ ಹೆಚ್ಚೆಮ್ ಇನ್ನು ಧಾರಾಳವಾಗಿ ಖರ್ಚುಮಾಡಿ ಊಟ ಹಾಕಿಸುವುದುಂಟೆ? ಆದರೂ ಸಹಜವಾಗಿ ಊಟದ ನಿರೀಕ್ಷೆಯಿದ್ದುದರಿಂದ ಊಟ ತಂದಿಲ್ಲದೆ ಎಲ್ಲರೂ ಕಾಯುತ್ತಿದ್ದೆವು. ಲಂಕಿಣಿ ಅದನ್ನು ಹೆಚ್ಚೆಮ್‌ಗೆ ರವಾನಿಸಿತು. ಮನಸ್ಸಿಲ್ಲದ ಮನಸ್ಸಿನಿಂದ ಎಷ್ಟು ಜನರಿದ್ದಾರೆಂದು ಎಣಿಸಿಕೊಂಡು ಶಾಂತರಾಜುವನ್ನು ಕರೆದುಕೊಂಡು ಮಸಾಲೆ ದೋಸೆಯನ್ನು, ಮುಗ್ಗಿದ ಪೇಡಾವನ್ನು ಖುದ್ದಾಗಿ ತಾನೇ ಹೋಗಿ ಹಿಡಿದುಕೊಂಡು ಬಂದಿತು. "ಎಲ್ರೂ ಅವ್ರವ್ರ ಸೀಟಲ್ಲಿ ಕೂತ್ಕೊಳಿ, ಎಲ್ರಿಗೂ ಮಸಾಲೆ ದೋಸೆ ತಂದಿದೀನಿ" ಎಂದು ಬೊಂಬಾಟ್ ಭೋಜನವನ್ನೇ ತಂದಂತೆ ಪೋಸ್ ಕೊಟ್ಟು ಒಬ್ಬೊಬ್ಬರ ಬಳಿಯೂ ಬಂದು ದೋಸೆಯ ಪ್ಯಾಕೆಟ್ಟನ್ನು ಕೊಡುವ ಹೊತ್ತಿನಲ್ಲಿ ಲಾವಣ್ಯ ಊರಿಗೆ ಹೋಗುತ್ತಿರುವುದರಿಂದ ಈಗಲೇ ಹೊರಡುತ್ತಿದ್ದೇನೆಂದು ಹೇಳಲು ನನ್ನ ಬಳಿ ನಿಂತಿದ್ದಳು. ಹೆಚ್ಚೆಮ್‌ಗೆ ಮೈಯೆಲ್ಲಾ ಉರಿದುಹೋಗಿ "ಹೋಗಿ ನಿಮ್ಮ ಸೀಟಲ್ಲಿ ಕೂತ್ಕೊಳ್ರಿ, ಇಲ್ಲೊಂದ್ಸಲ ಅಲ್ಲೊಂದ್ಸಲ ಎರಡೆರಡು ಪ್ಯಾಕೆಟ್ ಇಸ್ಕೋಬೇಡಿ" ಎಂದಿತು ಕೋಪದಿಂದ. "ಅಯ್ಯೋ, ಮುಗ್ಗುಲು ಪೇಡಾ, ಆರಿದ್ ದೋಸೆ ಯಾರಿಗ್ಬೇಕಾಗಿದೆ. ನಂದೂ ನೀವೇ ತಿನ್ಕೊಳಿ ಸರ್. ನಾನು ಮನೆಗೆ ಹೋಗಿ ಊಟ ಮಾಡ್ಕೋತೀನಿ" ಎನ್ನುತ್ತಾ ಬ್ಯಾಗನ್ನೆತ್ತಿಕೊಂಡು ಹೊರಟೇಬಿಟ್ಟಳು ಅವಳು. ತಕ್ಷಣಕ್ಕೆ ಏನು ಹೇಳಲೂ ತೋಚದೆ ತಬ್ಬಿಬ್ಬಾಗಿ ಶಾಂತರಾಜುವಿನ ಕೈಗೆ ದೋಸೆಯ ಚೀಲವನ್ನು ಕೊಟ್ಟು ಬುಸುಗುಡುತ್ತಾ ಹೋಗಿ ಕ್ಯಾಬಿನ್ನಿನಲ್ಲಿ ಕುಳಿತುಕೊಂಡಿತು. ಹೇಗೋ ದೋಸೆಯನ್ನು ಎಲ್ಲರೂ ತಿಂದರೂ ಪೇಡಾವನ್ನು ಒಬ್ಬರೂ ಮುಟ್ಟಲಿಲ್ಲ. ಶಾಂತರಾಜು "ಮನೆಗೆ ತೊಗೊಂಡು ಹೋಗ್ತೀರಾ ಸರ್? ಇಲ್ದಿದ್ರೆ ಡಸ್ಟ್ ಬಿನ್ಗೆ ಹಾಕ್ತೀನಿ" ಎಂದು ಅವರ ಮುಂದೆ ತುಂಬಿದ ಡಬ್ಬಿಯನ್ನಿಟ್ಟ. ದುರುದುರು ನೋಡಿದವರೇ ಎತ್ತಿ ತಮ್ಮ ಬ್ಯಾಗಿನಲ್ಲಿಟ್ಟುಕೊಂಡರು.

ಅದೇನು ಒಳ್ಳೆಯ ಬುದ್ಧಿ ಬಂತೋ ಲಂಕಿಣಿಗೆ. ಸ್ವಯಂನಿವೃತ್ತಿ ಪಡೆದುಕೊಳ್ಳುವ ಯೋಚನೆ ಬಂದು ಕಾಗದಪತ್ರಗಳನ್ನು ಸಲ್ಲಿಸಿದ್ದಾಯಿತು. ಅಂದಿನಿಂದ ದಿನದಿನವೂ ಎಲ್ಲರೊಂದಿಗೂ ನಿವೃತ್ತಿಯ ಬಗ್ಗೆ ಮಾತನಾಡುತ್ತಾ, ಗ್ರಾಹಕರಿಗೆಲ್ಲಾ ಇನ್ನೆರಡೇ ತಿಂಗಳು ತಾನು ಸೇವೆಯಲ್ಲಿರುವ ಬಗ್ಗೆ ಹೇಳುತ್ತಾ ಎಲ್ಲರಿಗೂ ಒಂದು ರೀತಿಯ ಸಂತೋಷವನ್ನುಂಟುಮಾಡಿತ್ತು. ನಿವೃತ್ತಿಯ ಮೂರು ದಿನಕ್ಕೆ ಮೊದಲು ಒಂದು ಒಳ್ಳೆಯ ಭೋಜನದ ಏರ್ಪಾಟನ್ನು ಮಾಡಿ ಸಂಭ್ರಮಿಸಿತು. ಅಭಿನಂದನೆಗಳನ್ನು ಸಲ್ಲಿಸಿ ಪಟ್ಟಾಗಿ ಊಟ ಬಾರಿಸಿದ ಹೆಚ್ಚೆಮ್ ಒಳಗೊಳಗೇ ಮೇಲಿನವರಲ್ಲಿ, ಲಂಕಿಣಿಯು ಗ್ರಾಮಾಂತರ ಶಾಖೆಗಳಲ್ಲಿ ಕೆಲಸಮಾಡುವ ನಿಯಮದಲ್ಲಿ ಎರಡು ತಿಂಗಳು ಬಾಕಿಯಿದೆ ಎಂದು ಕಡ್ಡಿಯಿಟ್ಟು, ಆಕೆಯ ಸ್ವಯಂನಿವೃತ್ತಿ ಸಾಧ್ಯವಾಗದೆ ಅದು ಕೋಲಾರದ ಸಮೀಪದ ಹಳ್ಳಿಯೊಂದಕ್ಕೆ ವರ್ಗವಾಗಿ ಹೋಗುವಂತೆ ಮಾಡಿ ತನ್ನ ಹಿಂದಿನ ಕೋಪವನ್ನು ತೀರಿಸಿಕೊಂಡಿತು.

ಇಂತಹ ಹಲವಾರು ಹೊಸರೀತಿಯ ಮೋಜಿನ (?) ಪ್ರಸಂಗಗಳಿಗೆ ನಾವು ಸಾಕ್ಷಿಯಾದೆವು. ಮೊದಮೊದಲಿಗೆ ಆಗುತ್ತಿದ್ದ ಇರುಸುಮುರುಸು ಕಡೆಕಡೆಗೆ ನಗುವ ಸಂಗತಿಯಾಯಿತು. ದಿನವೂ ಇಂದೇನಿರಬಹುದು ಎಂದು ಎದುರುನೋಡುವ ಹಾಗಾಯಿತು. ಇನ್ನೆಂದಾದರೂ ಪುರಸೊತ್ತಾದಾಗ ಇನ್ನಷ್ಟು ಸ್ವಾರಸ್ಯಕರ ಪ್ರಸಂಗಗಳನ್ನು ಹೇಳ್ತೀನಿ.

ಪುಸ್ತಕ ಪರಿಚಯ

"ಸ್ವಿಚ್ ಆಫ್": ಮೊಬೈಲ್ ಆಚೆಗೂ ಒಂದು ಜಗತ್ತಿದ

(ಪುಸ್ತಕದ ಹೆಸರು: "ಸ್ವಿಚ್ ಆಫ್". ಲೇಖಕರು: ಟಿ ಜಿ ಶ್ರೀನಿಧಿ. ಪ್ರಕಾಶಕರು: ಇಜ್ಞಾನ. ಬೆಲೆ: 40 ರೂ.).

– **ಶ್ರೀಧರ ಬಾಣಾವರ**

ಈ ಆನ್ಲೈನ್ ಕಾರ್ಯಕ್ರಮದಲ್ಲಿ ಐವತ್ತಕ್ಕೂ ಹೆಚ್ಚು ಜನರು ಭಾಗವಹಿಸುತ್ತಿದ್ದೀವೆ. ಅದರಲ್ಲಿ ಹೆಚ್ಚಿನವರು ಮೊಬೈಲ್ ಬಳಸುತ್ತಿದ್ದರೆ ಉಳಿದವರು ಟ್ಯಾಬ್, ಲ್ಯಾಪ್ ಟಾಪ್ ಬಳಸುತ್ತಿರಬಹುದು. ಒಟ್ಟಿನಲ್ಲಿ ನಾವೆಲ್ಲರೂ ಇನ್ನು ಈ ಎರಡು ಮೂರು ಘಂಟೆಗಳ ಕಾಲ ಒಂದು ಪರದೆಗೆ ನಮ್ಮ ಕಣ್ಣನ್ನು ಅರ್ಪಿಸಿಕೊಂಡಿರುತ್ತೇವೆ. ಇನ್ನು ಮೊಬೈಲ್ ಫೋನಿನ ವಿಷಯಕ್ಕೆ ಬಂದರೆ ಅದಕ್ಕೆ ನಾವೆಲ್ಲರೂ ಎಷ್ಟು ಅಂಟಿಕೊಂಡಿದ್ದೇವೆ ಎಂದರೆ ಭೌತಿಕ ವಸ್ತುಗಳಾದ ಭೂಪಟ, ಶಬ್ಧಕೋಶ, ವಿಶ್ವಕೋಶ, ಇತ್ಯಾದಿ ಎಷ್ಟೋ ಸಾಧನಗಳನ್ನು ಉಪಯೋಗಿಸುವುದನ್ನೇ ಮರೆತಿದ್ದೇವೆ. ಹೌದು, ಮೊಬೈಲ್ ಫೋನು ಸರ್ವಾನುಕೂಲಿ. ಇದರ ಸದುಪಯೋಗ ಪಡೆದುಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ. ಇಲ್ಲಿ ಸಾಕಷ್ಟು ದುಷ್ಪರಿಣಾಮಗಳೂ ಇರುವುದು ನಮಗೆಲ್ಲ ಸ್ವಲ್ಪಮಟ್ಟಿಗೆ ತಿಳಿದೇ ಇದೆ. ಅವುಗಳನ್ನು ತಪ್ಪಿಸುವುದು ಸಾಧ್ಯವಿಲ್ಲ ಎಂದೆನಿಸಿದರೂ ಅವುಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಖಂಡಿತಾ ಸಾಧ್ಯವಿದೆ. ಇದಕ್ಕೊಂದಿಷ್ಟು ನೀತಿನಿಯಮಗಳನ್ನು ಯಾರಾದರೂ ರೂಪಿಸಿದ್ದು ಅದು ಮೊಬೈಲಿನಲ್ಲಿಯೇ ಲಭ್ಯವಿದೆಯೇ ಎಂಬ ಪ್ರಶ್ನೆ ಏಳುವುದು ಸಹಜ. ಮೊಬೈಲ್ ಫೋನನ್ನು ಎಲ್ಲಿ, ಹೇಗೆ, ಯಾವ ಪ್ರಮಾಣದಲ್ಲಿ ಬಳಸಿದರೆ ಒಳ್ಳೆಯದು ಎಂದಾದರೂ ನಮ್ಮ ಅನುಭವದಿಂದಲೇ ತಿಳಿದು ಕೊಳ್ಳಬಹುದಲ್ಲವೇ? ಇದರಿಂದಾಚೆಗೂ ಯೋಚಿಸುವುದಾದರೆ ಈಗಾಗಲೇ ನಾವು ಫೋನನ್ನು ಅವಶ್ಯಕತೆಗಿಂತಲೂ ಹೆಚ್ಚು ಸಮಯ, ಅನವಶ್ಯಕ ಸ್ಥಳಗಳಲ್ಲಿ, ಬೇಡದ ಕೆಲಸಗಳಿಗೆ ಬಳಸುತ್ತಿದ್ದೇವೆಯೇ ಎಂದು ಒಂದು ಸ್ವವಿಮರ್ಶೆ ಮಾಡಿಕೊಳ್ಳಬಹುದೇ? ಇದರಿಂದ ನಮಗೆ ಆಗುತ್ತಿರುವ/ಆಗಬಹುದಾದ ದುಷ್ಪರಿಣಾಮಗಳ ಒಂದು ವರದಿ ತಯಾರಿಸಿಕೊಳ್ಳಬಹುದೇ? ಈ ದಿಸೆಯಲ್ಲಿ ಸುತ್ತಮುತ್ತಲ ಜಗತ್ತಿನಲ್ಲಿ ಏನಾದರೂ ಸಲಹೆ ಸೂಚನೆಗಳು ಸಿಗಬಹುದೇ? ಎಂಬೆಲ್ಲ ಪ್ರಶ್ನೆಗಳು ನಿಮ್ಮ ಮನಸ್ಸಿನಲ್ಲಿ ಏಳುತ್ತಿವೆಯಲ್ಲವೇ?

ಇದೇ ನಿಟ್ಟಿನಲ್ಲಿ ಕಳೆದವಾರ ನನ್ನ ಕೈಸೇರಿರುವ ಒಂದು ಕನ್ನಡದ ಕಿರು ಹೊತ್ತಿಗೆಯ ಪರಿಚಯ ಮಾಡುವ ಕೆಲಸ ಈಗ ಮಾಡುತ್ತಿದ್ದೇನೆ. ವಿಜ್ಞಾನ, ತಂತ್ರಜ್ಞಾನದ ಹೊಸ ಹೊಸ, ಸಂಕೀರ್ಣ ವಿಷಯಗಳನ್ನು ಸರಳ ಕನ್ನಡದಲ್ಲಿ ಅದು ನಮ್ಮ ಭಾಷೆಯಲ್ಲೇ ಮೊದಲು ಹುಟ್ಟಿದ ವಿಷಯವೇನೋ ಎಂಬಷ್ಟು ಸರಳವಾಗಿ ತಿಳಿಸಿಕೊಡುತ್ತಿರುವ ಯುವ ಲೇಖಕ ಶ್ರೀ ಟಿ.ಜಿ.ಶ್ರೀನಿಧಿ ಅವರು ಬರೆದಿರುವ "ಸ್ವಿಚ್ ಆಫ್- ಮೊಬೈಲ್ ಆಚೆಗೂ ಒಂದು ಜಗತ್ತಿದೆ" ಎಂಬ ಪುಸ್ತಕದ ಜೊತೆ ನಿಮ್ಮೊಡನೆ ಒಂದು ಸುತ್ತು ಹೋಗಿಬರೋಣವೇ?

ಪುಸ್ತಕದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಮೊದಲ ಅಧ್ಯಾಯದ ಶೀರ್ಷಿಕೆ "ಹೀಗೊಂದು ಹೈಟೆಕ್ ಚಟ". ಇಲ್ಲಿ ಲೇಖಕರು ಚಟವನ್ನು ವಿವರಿಸಲು ಹೆಸರಾಂತ ಲೇಖಕ ಬಿ.ಜಿ.ಎಲ್.ಸ್ವಾಮಿಯವರನ್ನು ಉಲ್ಲೇಖಿಸುತ್ತಾರೆ. ಎಲೆ- ಅಡಿಕೆ-ತಂಬಾಕು- ಮದ್ಯಪಾನಗಳಂತಹ ಚಟಗಳ ಜೊತೆಗೆ ಮೊಬೈಲ್ ಫೋನನ್ನೂ ಸೇರಿಸುತ್ತಾರೆ ಶ್ರೀನಿಧಿ. ಬೆಳಿಗ್ಗೆ ಎದ್ದ ತಕ್ಷಣ, ರಾತ್ರಿ ಮಲಗುವ ಮುನ್ನ, ಮಧ್ಯರಾತ್ರಿ ಎಚ್ಚರವಾದಾಗ, ಬೇರೆಯವರೊಡನೆ ಕಾಲ ಕಳೆಯುವಾಗ…. (ಉಳಿದವನ್ನು ನೀವೇ ನಿಮ್ಮ ಅನುಭವದ ಆಧಾರದ ಮೇಲೆ ಪಟ್ಟಿ ಮಾಡಿ ಕೊಳ್ಳಬಹುದು) ಮೊಬೈಲ್ ಬಳಕೆ ನಮಗೆ ಒಂದು ಚಟವಾಗಿದೆ ಅಲ್ಲವೇ? ಪರಮ ಪಂಡಿತನಾದ ಸರ್ಚ್ ಇಂಜಿನ್ನನ್ನು ಪದೇಪದೇ ಬಳಸುವುದು. ಅಲ್ಲಿ ಕಂಡದ್ದನ್ನೆಲ್ಲಾ ನಂಬುವುದು. ಇತರರಿಗೆ ಹಂಚುವುದು ಹೀಗೆ ಹಲವಾರು ಚಟಗಳನ್ನು, ಅವುಗಳಿಂದಾಗುವ ಪರಿಣಾಮಗಳನ್ನು ಲೇಖಕರು ಇಲ್ಲಿ ಚರ್ಚಿಸುತ್ತಾರೆ.

ಎರಡನೆಯ ಅಧ್ಯಾಯ "ನಿಮ್ಮ ದಿನದಲ್ಲಿ ಸ್ಕ್ರೀನ್ ಟೈಮ್ ಎಷ್ಟು?" ಈ ಅಧ್ಯಾಯದಲ್ಲಿ ಟಿವಿ ನೋಡುವುದು, ವಿಡಿಯೋ ಗೇಮ್ ಆಡುವುದು ಕಂಪ್ಯೂಟರ್/ಮೊಬೈಲ್ ಬಳಸುವುದು ಇವೆಲ್ಲವನ್ನೂ ಸ್ಕ್ರೀನ್ ಟೈಮ್ ಎಂದು ವರ್ಗೀಕರಿಸಲಾಗಿದೆ. ಇದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಆಂಡ್ರಾಯ್ಡ್ ಫೋನ್ ಗಳಲ್ಲಿರುವ "ಡಿಜಿಟಲ್ ವೆಲ್ಬೀಯಿಂಗ್" ಸೌಲಭ್ಯವನ್ನು ಬಳಸಿಕೊಳ್ಳುವ ಸಲಹೆ ಇದೆ.

ಮೂರನೇ ಅಧ್ಯಾಯ "ಗೂಗಲ್ ನಿಮ್ಮ ಫ್ಯಾಮಿಲಿ ಡಾಕ್ಟರಾ?" ಒಂದು ಅತಿ ಮುಖ್ಯ ಅಧ್ಯಾಯ. ನಮ್ಮ ಅನಾರೋಗ್ಯ ಲಕ್ಷಣಗಳನ್ನು ಗೂಗಲ್ ಗೆ ಉಣಿಸಿದರೆ ಅದು ಕೊಡಬಹುದಾದ ರೋಗದ ವಿವರಗಳು ಎಂತಹ ಮಾನಸಿಕ ಅನಾರೋಗ್ಯವನ್ನು ಸೃಷ್ಟಿಸಬಲ್ಲುದು, ಇದರಿಂದ ಆಗಬಹುದಾದ ದುಷ್ಪರಿಣಾಮಗಳು ಎಲ್ಲವನ್ನೂ ವಿವರವಾಗಿ ಚರ್ಚಿಸಿದ್ದಾರೆ. ತಲೆ ನೋವು ಎಂದು ಗೂಗಲ್ ಗೆ ಹೇಳಿದರೆ ನಿದ್ರೆ ಮಾಡಿಲ್ಲದಿಂದ ಹಿಡಿದು ಬ್ರೈನ್ ಟ್ಯೂಮರ್ ವರೆಗೂ ಕಾರಣಗಳನ್ನು ಅದು ಹೇಳಬಹುದು. ಅಂತರ್ಜಾಲದಲ್ಲಿ ಮಾಹಿತಿ ಹುಡುಕುವ ಅಭ್ಯಾಸವನ್ನು "ಇಡಿಯೆಟ್ ಸಿಂಡ್ರೋಮ್: Internet Derived Information Obstructing Treatment" ಎಂದು ತಮಾಷೆಯಾಗಿ ಕರೆಯುತ್ತಾರೆಂದೂ ಲೇಖಕರು ತಿಳಿಸುತ್ತಾರೆ. ಪ್ರಥಮ ಪರಿಣಾಮ, ಸೈಬರ್ ಕಾಂಡ್ರಿಯ ಇತ್ಯಾದಿ ಮಾಹಿತಿಗಾಗಿ ಪುಸ್ತಕವನ್ನು ಓದಬೇಕು.

ಟಾಯ್ಲೆಟ್ ಗೆ ನೀವು ಮೊಬೈಲ್ ಕೊಂಡು ಹೋಗುವುದಿಲ್ಲ ಅಲ್ಲವೇ? ಸಧ್ಯ ನೀವು ಹಲವು ದುರಂತಗಳಿಂದ ಬಚಾವ್. ಆದರೂ ಊಟ ತಿಂಡಿ ಮಾಡುವಾಗ? ಇದರ ಪರಿಣಾಮಗಳನ್ನು ತಿಳಿಸಲು ಲೇಖಕರು ನಾಲ್ಕನೆಯ ಅಧ್ಯಾಯ "ನಿಮ್ಮ ಮೊಬೈಲ್ ನಲ್ಲಿ ಕೀಟಾಣು ಇದೆಯೇ" ದಲ್ಲಿ ವಿವರಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮೊಬೈಲನ್ನು ಶುಚಿಯಾಗಿಕೊಳ್ಳಲು ಹಲವು ಸೂಚನೆಗಳನ್ನು ಕೊಡುವುದಲ್ಲದೇ ಮೊಬೈಲ್ ತಂತಾನೇ ಈ ಕೆಲಸವನ್ನೂ ಮಾಡಿಕೊಳ್ಳಬಹುದಾದ ಆಂಟಿ ಮೈಕ್ರೋಬಿಯಲ್ ಪರದೆಗಳೂ ಇನ್ನು ಮುಂದೆ ಬರಬಹುದಂತೆ ಎಂಬ ಆಸೆಯನ್ನೂ ಹುಟ್ಟಿಸುತ್ತಾರೆ.

ಇನ್ನು ಮೊಬೈಲ್ ಗಳ ಮೂಲಕ ಹರಡಬಹುದಾದ ಸುಳ್ಳು ಮಾಹಿತಿಗಳ ಪರಿಣಾಮಗಳನ್ನು "ಮೊಬೈಲ್ ಎಂಬ ಸುಳ್ಳುಗಳ ಜಾಲ" ಎಂಬ ಶೀರ್ಷಿಕೆಯ ಐದನೆಯ ಅಧ್ಯಾಯದಲ್ಲಿ ವಿವರಿಸುತ್ತಾರೆ. ವಿವೇಚನೆಯಿಲ್ಲದೆ, ಪರಿಶೀಲಿಸದೆ ಮಾಡುವ ಮುನ್ನೊತ್ತುಗಳ ಬಗ್ಗೆ ಎಚ್ಚರಿಸುತ್ತಾರೆ.

ಹಲವು ಸಮೀಕ್ಷೆಗಳ ಪ್ರಕಾರ ಸಾಮಾನ್ಯ ಮೊಬೈಲ್ ಬಳಕೆದಾರ ಹದಿನೈದರಿಂದ ಮುವ್ವತ್ತು ನಿಮಿಷಗಳಲ್ಲಿ ಒಮ್ಮೆಯಾದರೂ ತಮ್ಮ ಮೊಬೈಲ್ ತೆರೆದು ನೋಡುತ್ತಾರಂತೆ. ನೀವು ಹಾಗಿಲ್ಲ ಬಿಡಿ. ರಾತ್ರಿ ನಿದ್ದೆ ಬರದಿದ್ದರೆ, ಹಲವು ಕಾಲ ಮೊಬೈಲ್ ಸಹಾಯ ತೆಗೆದುಕೊಳ್ಳುತ್ತೀರಿ ಅಲ್ಲವೇ? ಇದೆಲ್ಲದರ ಕಾರಣವಾಗಿ ಮೊಬೈಲ್ ಪ್ರಸರಿಸುವ ಬೆಳಕು ಯಾವುದು? ಅದರಿಂದ ಏನು ಪರಿಣಾಮ ಆಗಬಹುದು? ಇದಲ್ಲದೇ ಇನ್ನಿತರ ದೈಹಿಕ ಪರಿಣಾಮಗಳೇನಾಗಬಹುದು ಎನ್ನುವ ವಿಚಾರವನ್ನು ಸವಿಸ್ತಾರವಾಗಿ "ನಿಮ್ಮ ಡಿಜಿಟಲ್ ಆರೋಗ್ಯ ಹೇಗಿದೆ?" ಎಂಬ ಆರನೆಯ ಅಧ್ಯಾಯದಲ್ಲಿ ವಿವರಿಸುತ್ತಾರೆ. ಫಬ್ಬಿಂಗ್ (ಫೋನ್+ಸ್ನಬ್ಬಿಂಗ್), ನೊಮೋಫೋಬಿಯ (ನೋ ಮೊಬೈಲ್ ಫೋನ್), ಫ್ಯಾಂಟಮ್ ರಿಂಗಿಂಗ್ ಸಿಂಡ್ರೋಮ್, ರಿಂಗ್ ಸೈಟಿ (ರಿಂಗ್+ಆಂಗ್ಸೈಟಿ) ಇವೆಲ್ಲಾ ಈಗಾಗಲೇ ಕಾಯಿನ್ ಆಗಿರುವ ಹೊಸ ವೈದ್ಯಕೀಯ ಪದಗಳು. ವಿವರಗಳು ಇದೇ ಅಧ್ಯಾಯದಲ್ಲಿವೆ.

ಇನ್ನು "ಮೊಬೈಲ್ ಫೋನಿನಿಂದ ಸ್ವಾತಂತ್ರ ಬೇಕಿದೆ!" ಎಂಬ ಏಳನೆಯ ಹಾಗೂ ಕೊನೆಯ ಅಧ್ಯಾಯ. ಈ ಹಿಂದೆ ಚರ್ಚಿಸಿದ ಎಲ್ಲಾ ನ್ಯೂನತೆಗಳನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸಿಕೊಳ್ಳಲು ಒಂದು ಮಾರ್ಗಸೂಚಿಯನ್ನು ರೂಪಿಸಿಕೊಳ್ಳಲು ಸಹಾಯಮಾಡುವ ನಿಟ್ಟಿನಲ್ಲಿ ಸಹಕಾರಿಯಾಗಬಲ್ಲುದು. ನಮ್ಮ ದಿನನಿತ್ಯದ ಬದುಕಿನ ಮೇಲೆ ಸ್ವಲ್ಪ ಹೆಚ್ಚಿನ ನಿಯಂತ್ರಣ ಸಾಧಿಸಿರುವ ಮೊಬೈಲ್ ಫೋನಿನ

ಮೇಲೆ ನಮ್ಮ ಹಿಡಿತವನ್ನು ಬಿಗಿಗೊಳಿಸುವಲ್ಲಿನ ಸಾಧನಗಳ ಬಗ್ಗೆ ಲೇಖಕರು ತಿಳಿಸಿಕೊಟ್ಟಿದ್ದಾರೆ. ಹೆಚ್ಚಿನ ಕಾಫಿ, ಟೀ, ಸಿಹಿತಿಂಡಿ, ಆಲ್ಕೋಹಾಲ್, ತಂಬಾಕು ಮುಂತಾದವುಗಳನ್ನು ದೂರೀಕರಿಸಲು ಬಳಸುವ ಡಿಟಾಕ್ಸಿಫಿಕೇಷನ್ ರೀತಿಯಲ್ಲೇ "ಡಿಜಿಟಲ್ ಡಿಟಾಕ್ಸ್" ಪ್ರಯೋಗ, ಫೇಸ್ಬುಕ್, ವಾಟ್ಸಾಪ್ ಗಳ ಡಿಆಕ್ಟಿವೇಷನ್. ಒಮ್ಮೊಮ್ಮೆ ೨೪ ಘಂಟೆಗಳ ಕಾಲ ಸತತವಾಗಿ ಆಫ್ ನಲ್ಲಿಟ್ಟು "ಡೇ ಆಫ್ ಅನ್ ಪ್ಲಗಿಂಗ್" ಆಚರಣೆ, ಇಂಟರ್ನೆಟ್ ಉಪವಾಸ ಅಥವಾ ನೆಟ್ ಉಪವಾಸ. ಡೊಪಮೈನ್ ಉಪವಾಸ, "ಫಿಯರ್ ಆಫ್ ಮಿಸಿಂಗ್ ಔಟ್ FOMO" ಬದಲಿಗೆ "ಜಾಯ್ ಆಫ್ ಮಿಸಿಂಗ್ ಔಟ್ JOMO" ಅನುಸರಣೆ ಮುಂತಾದ ಈಗಾಗಲೇ ಜಗತ್ತಿನ ಇತರೆಡೆಗಳಲ್ಲಿ ಅನುಸರಿಸುತ್ತಿರುವ ಕ್ರಮಗಳನ್ನು ನಾವೂ ಪಾಲಿಸಬಹುದೇನೋ?

ಮೊಬೈಲಿನ ಅತಿ ಬಳಕೆಯ ದುಷ್ಪರಿಣಾಮಗಳನ್ನು ಹೋಗಲಾಡಿಸಿಕೊಳ್ಳಲು ಒಂದೇ ದಾರಿ ನಿಯಮಿತವಾಗಿ ಮೊಬೈಲ್ ಸ್ವಿಚ್ ಆಫ್. ಮೊಬೈಲ್ ಬಳಕೆದಾರರೆಲ್ಲರೂ ಓದಲೇ ಬೇಕಾದ ಪುಸ್ತಕ.

ಬಸಿರಿನುಸಿರು

ಫಲವತ್ತಾದ ಮುಷ್ಟಿ ಮಣ್ಣು ಬೇಕೆಂದೆ....
ಧಾರಿಣಿ, ಹುಟ್ಟಿಸಿ ನೋಡೆಂದಳು....

ನಿರ್ಮಲಾತಿನಿರ್ಮಲ ಜಲ ನೀಡೆಂದೆ....
ಧರಿತ್ರಿ, ಹುಟ್ಟಿಸಿ ನೋಡೆಂದಳು....

ತಣಿಸುವ ಮಳೆ ಕಾಣದಾಗಿದೆಯೆಂದೆ...
ಇಳೆ, ಹುಟ್ಟಿಸಲಾರೆಯಾ?? ಕೇಳಿದಳು....

ಮಳೆಯ ಎಳೆತರುವ ಕಾನನ ಕೊಚ್ಚಿಹೋಗಿದೆಯೆಂದೆ...
ಭೂಮಿಜೆ, ಹುಟ್ಟಿಸಿ ಸಾಕಾಯಿತೇ? ಪ್ರಶ್ನಿಸಿದಳು....

ಪ್ರಾಣಿ ಪಕ್ಷಿಗಳು, ಒಂದೊಂದೇ ಅಳಿಯುತ್ತಿವೆಯೆಂದೆ....
ಅವನಿ, ಹುಟ್ಟಿಸು ನೋಡೋಣ ಸವಾಲೆಸೆದಳು....

ಮುಂದಿನ ಪರಂಪರೆಗೇನು ಉತ್ತರಿಸಲಿ??? ಎಂದೆ...
ಭೂಮಿತಾಯಿ, ಸಕಲವ ಹುಟ್ಟಿಸುವ ಮೊದಲು,
ಉಸಿರ "ಪ್ರಕೃತಿ"ಯಲ್ಲಡಗಿಸುವ ಬಸುರಾಗೆಂದಳು.

– **ಶಾಂತಿವಾಸು**

ಸುವರ್ಣ ಸರಪಳಿ

ನಮ್ಮ ಜೀವನದ ಅಪರೂಪದ ಸುಳಿ
ನಮ್ಮಯ ಸಪ್ತ ಸುವರ್ಣ ಸರಪಳಿ
ಸಪ್ತ ಜೀವನಗಳೂ ತುಂಬಲು ಬಳುವಳಿ
ಸಾವಿರ ನೆನಪಿವೆ ನಮ್ಮ ಬಳಿ

ಭಾವಗೀತೆಗಳ ಲತೆಯೇ ಪಸರಿಸೆ
ಅಷ್ಟ ದಿಕ್ಕಿಗೂ ಮಂಗಳೆ
ಸಾವಿತ್ರಿ ಅದಕೆ ಕಿವಿಯ ಕೊಡುತಿರೆ
ಗೀತಳಾದಳು ಬೃಹನ್ನಳೆ

ನಂದಾ-ಪ್ರಮೀಳಾ ಶಿಕ್ಷಕಿಯರಾಗಿ
ಜ್ಞಾನಕೆ ಶೋಭೆಯ ತರುತಿರಲು
ಸಪ್ತ ಸಖಿಯರ ಜೀವನ ನೋಡಿರೆ
ಗೆಳೆತನವನ್ನೇ ಮೊಳಗಿಸಿರಲು

ಸಪ್ತ ಸಖಿಯರ ಸುಪ್ತ ಮನಗಳು
ನೂರು ನೆನಪನು ಬೆಳೆಸಿವೆ
ಆಪ್ತ ಗೆಳತಿಯರ ಕಥೆ ಕವನಗಳು
ನೂರು ಕನಸನು ಬೆಸೆದಿವೆ

- ಮಂಗಳಾ ಇನಾಮದಾರ

ಮೆಲುಕು

ಹೋದ ಪುಟ್ಟ ಬಂದ ಪುಟ್ಟ

– **ಶಾಂತಾ ನಾಗಮಂಗಲ**

"ಜ್ಯೋತಿ, ಸ್ವಲ್ಪ ನಿಮ್ಮಮ್ಮನ ಮನೆ ಹತ್ತಿರ ಬರ್ತೀಯಾ?" ಬೆಳಿಗ್ಗೆ ಬೆಳಿಗ್ಗೆಯೇ ಸುಧಾ ಆಂಟಿಯ ಫೋನ್ ಬಂದಾಗ ನನಗೆ ತುಂಬಾ ಗೊಂದಲ ಆಯ್ತು. ನಿನ್ನೆ ರಾತ್ರಿಯಷ್ಟೇ ಆಸ್ಟ್ರೇಲಿಯದಲ್ಲಿರುವ ತಂಗಿ ಕವಿತಾಳ ಮನೆಗೆ ಹೊರಟ ಅಮ್ಮ ಅಪ್ಪ ಇಬ್ಬರನ್ನೂ ಏರ್ ಪೋರ್ಟ್ ಗೆ ಟ್ಯಾಕ್ಸಿ ಹತ್ತಿಸಿ ಕಳಿಸಿ ಬಂದಿದ್ದೆನಲ್ಲಾ. ಅವರು ಹೊರಟಾಗಲೇ ೧೧ ಘಂಟೆಯಾಗಿತ್ತು. ಏರ್ ಪೋರ್ಟ್ ತಲುಪಿದೆವು ಎಂದು ಅಮ್ಮ ಫೋನ್ ಮಾಡಿದ್ದಳು. ಏನಾಯಿತು? ಸುಧಾ ಅಂಟಿ ಯಾಕೆ ಹೀಗೆ ತರಾತುರಿ ಮಾಡ್ತಾ ಇದ್ದಾರೆ? ಪಕ್ಕದ ಮನೇಲಿ ಒಂಟಿಯಾಗಿರೋ ಸುಧಾ ಆಂಟಿ ಸ್ವಲ್ಪ ಗಾಬ್ರಿ ಪಾರ್ಟಿ. ನೋಡೋಣ ಏನು ಅಂತ "ಯಾಕಂಟೀ, ಏನು ವಿಷಯ" ಎಂದೆ. "ಇಲ್ಲಾ .... ರಾತ್ರಿ ಒಂದೆರಡು ಘಂಟೆ ಇರಬಹುದು, ನಿಮ್ಮ ಮನೆ ಮುಂದೆ ಟ್ಯಾಕ್ಸಿ ನಿಂತ ಸದ್ದಾಯ್ತು. ಆಮೇಲೆ ಗೇಟ್ ತೆಗೆದು ಯಾರೋ ಒಳಗೆ ಬಂದರು ಅನ್ಸತ್ತೆ. ಅಮೇಲೆ ಸ್ವಲ್ಪ ಹೊತ್ತು ಲೈಟ್ ಉರೀತಿತ್ತು, ಯಾರೋ ಓಡಾಡ್ತ ಇದ್ದ ಹಾಗೂ ಇತ್ತಪ್ಪ. ನಾನು ಬಾಗಿಲು ಗೀಗಿಲು ತೆಗೆದು ನೋಡಲಿಲ್ಲಪ್ಪಾ. ಒಬ್ಬಳೇ ನೋಡು, ಭಯವಾಯ್ತು. ಬೆಳ್ಳಿಗ್ಗೆ ನೋಡಿದರೆ ಹಾಕಿದ ಬಾಗಿಲು ಕಿಟಕಿಗಳೆಲ್ಲಾ ಹಾಗೇ ಇವೆ. ನಿಮ್ಮಮ್ಮ ಅಪ್ಪ ಆಸ್ಟ್ರೇಲಿಯಾಕ್ಕೆ ಹೊರಟಿರೋದನ್ನು ತಿಳಕೊಂಡು, ಮನೆಗೆ ಕಳ್ರು ಗಿಳ್ರು ಬಂದು ಮನೇನ ದೋಚ್ಕೊಂಡು ಹೋಗಿದ್ದಾರಾ ಅಂತಾ ನಂಗೆ ಅನುಮಾನ. ಈಗೆಲ್ಲಾ ಇಂಥಾ ಕಳ್ಳರ ಗ್ಯಾಂಗ್ ಇದೆಯಂತೆ. ಅದಕ್ಕೆ ನೀನೊಂದ್ ಸರ್ತಿ ಬಂದು ಹೋಗ್ಲಿ ಅಂತಾ ಫೋನ್ ಮಾಡಿದೆ, ಜ್ಯೋತಿ" ಅಂದ್ರು.

ಇದೇನಪ್ಪಾ ಗ್ರಾಚಾರ. ಅಂತಾ ಬಿಟ್ಟ ಕೆಲಸ ಬಿಟ್ಟ ಹಾಗೆ ಯಜಮಾನರನ್ನೂ ಎಬ್ಬಿಸಿಕೊಂಡು ಸ್ಕೂಟಿ ಹತ್ತಿ ಹೊರಟೆವು. ನಮ್ಮಮ್ಮನ ಮನೆ ನಮ್ಮನೆಯಿಂದ ನಡೆದು ಹೋದರೆ ಹತ್ತು ನಿಮಿಷ, ಗಾಡೀಲಿ ಹೋದರೆ ಐದು ನಿಮಿಷಗಳಷ್ಟೇ. ಹೋದೆ. ಅವರು ಹೇಳಿದ್ದು ನಿಜ, ಗೇಟಿಗೆ ಹಾಕಿದ್ದ ಬೀಗ ತೆಗೆದಿದೆ. ಮನೆಯ ಒಳಗಣ ರೂಮಲ್ಲಿ ನಮಪ್ಪ ಸರ್ವೀಸಲ್ಲಿದ್ದಾಗ ತೆಗೆದುಕೊಂಡಿದ್ದ ಓಬಿರಾಯನ ಕಾಲದ ಫ್ಯಾನ್ ತಿರುಗೋ ಸದ್ದು ಕೇಳ್ತಾ ಇದೆ. ನನಗೂ ಆತಂಕವೇ ಆಯ್ತು. ಖಾಲಿ ಬಿಟ್ಟಿರೋ ಸೈಟ್ ಒತ್ತುವರಿ ಮಾಡಿ ಮನೆ ಕಟ್ಟೋ ಭಂಡರನ್ನು ನೋಡಿದೀವಿ. ಮನಗೆ ನುಗ್ಗಿದಾಗ ಏನು ಸಿಗದೇ ಇದ್ದರೆ ನಿರಾಶರಾಗಿ ಅಡುಗೆ ಮನೆಯಲ್ಲಿ ತುಪ್ಪ, ಸಕ್ಕರೆ, ಹಿಟ್ಟುಪಟ್ಟು ಎಲ್ಲಾ ಮೆದ್ದು, ಹೇಸಿಗೆ ಮಾಡಿ ಹೋಗೋ ಕಳ್ಳರಿರ್ತಾರೆ ಅಂತ ಪೋಲೀಸ್ ಅಧಿಕಾರಿಯಾಗಿರುವ ನನ್ನ ಗೆಳತಿಯ ಗಂಡ ಹೇಳಿದ್ದು ಗೊತ್ತು. ಆದರೆ ಖಾಲಿ ಮನೆಯಲ್ಲಿ, ಅದೂ ಕೆಲವೇ ಘಂಟೆಗಳಲ್ಲಿ ಇಷ್ಟು ರಾಜಾರೋಷವಾಗಿ, ಬೆಡ್ ರೂಮಿನಲ್ಲಿ ಪವಡಿಸೋ ಭಂಡ ಧೈರ್ಯದ ತಸ್ಕರವರೇಣ್ಯರು ಇರ್ತಾರಾ? ಇವರೇನು ಜೋಡಿ ಕಳ್ಳರೇ? ನೋಡೋಣ ಅಂತ ಬೆಲ್ ಮಾಡಿದೆವು. ಸ್ವಲ್ಪ ಕಾದೆವು. ಹೆಜ್ಜೆ ಸದ್ದು ಕೇಳಿಸಿತು. ಕಳ್ಳರಂತೂ ಅಲ್ಲ ಅಂತ ನಿರ್ಧಾರವಾಯ್ತು. ಆದರೆ ಯಾರೂ ಇಲ್ಲದ ಮನೇಲಿ ಹೀಗೆ ಯಾರು ಬಂದು ಮಲಗಿರಲು ಸಾಧ್ಯ? ದೆವ್ವ-ಗಿವ್ವ! ಛೇ.., ದೆವ್ವವೇ ಆಗಿದ್ದರೂ ಕಾಲಿಂಗ್ ಬೆಲ್ ಕೇಳಿ ಬಾಗಿಲು ತೆಗೆಯೋ ಅಷ್ಟು ಮಾಡರ್ನೇ? ಅಷ್ಟು ಸಂಸ್ಕಾರವೇ? ಏನಿದು "ರತ್ನಗಿರಿ ರಹಸ್ಯ?"-- ಮನಮಂಥನ ನಡೆಯುತ್ತಿತ್ತು.

ಅಷ್ಟರಲ್ಲೇ ಬಾಗಿಲು ತೆರೆಯಿತು. ನೋಡಿದರೆ ನಮ್ಮಮ್ಮ! ಕಣ್ಣು ಹೊಸಕೋತಾ ನಿಂತಿದ್ದಾಳೆ. ಅವಳನ್ನು ನೋಡಿ ನನ್ನನ್ನೇ ಒಮ್ಮೆ ಚಿವುಟಿ ನೋಡಿಕೊಳ್ಳುವಷ್ಟು ಆಶ್ಚರ್ಯ ನನಗಾದರೆ, ನನ್ನನ್ನು ನೋಡಿ ಅವಳಿಗೆ ಮತ್ತೂ ಆಶ್ಚರ್ಯ. "ನಿಂಗೆ ಹ್ಯಾಗೇ ಗೊತ್ತಾಯ್ತು, ನಾವು ವಾಪಸ್ಸು ಬಂದದ್ದು. ಇಷ್ಟು ಬೆಳಗ್ಗೇನೆ ಬಂದಿದೀಯಲ್ಲಾ" – ಎಂದಳು. ಒಳಗೆ ಹೋದೆವು. ಅಷ್ಟರಲ್ಲೆ ನಮ್ಮ ಸದ್ದುಗದ್ದಲ ಕೇಳಿ ಅಪ್ಪನೂ ಎದ್ದು

ಬಂದಾಗಿತ್ತು. ಕೇಳಿದೆ "ಯಾಕಮ್ಮಾ, ಏನಾಯ್ತು? ಯಾಕೆ ವಾಪಸ್ಸು ಬಂದಿರಿ?" ಅಮ್ಮ ಹೇಳಿದ್ದು ಕೇಳಿದ ಮೇಲೆ ನನಗೆ ನಗು ತಡೆಯಲಾಗಲಿಲ್ಲ. ಆಗಿದ್ದಿಷ್ಟೇ.

ಆಸ್ಟ್ರೇಲಿಯಾದಲ್ಲಿದ್ದ ತಂಗಿ ಕವಿತಾಳ ಮನೆಗೆ ಹೋಗಿಬರಲು ಟ್ರಾವೆಲ್ ಏಜೆಂಟ್ ಮೂಲಕ ಟಿಕೆಟ್ ಕಾಯ್ದಿರಿಸಿದ್ದರು. ಆ ಟ್ರಾವೆಲ್ ಏಜೆಂಟ್ ಸರಿಯಾಗಿ ವೀಸಾದಲ್ಲಿ ನಮೂದಿಸಿದ್ದ ಟ್ರಾವೆಲ್ ತಿಂಗಳು ಜೂನ್ ಎಂಬುದನ್ನು ಸರಿಯಾಗಿ ಗಮನಿಸದೆ, ಜುಲೈ ತಿಂಗಳಿಗೆ ಪ್ರಯಾಣದ ಟಿಕೆಟ್ ಕಾಯ್ದಿರಿಸಿ ಮನೆಗೆ ತಂದುಕೊಟ್ಟಿದ್ದ. ಅಮ್ಮ-ಅಪ್ಪ ಇಬ್ಬರೂ ಏನು ಗ್ರಾಚರವೋ, ದೆಹಲಿಯಿಂದ ಬಂದಿದ್ದ ವೀಸಾವನ್ನು ಸರಿಯಾಗಿ ಓದದೇ, ಪಾಸ್ ಪೋರ್ಟನ್ನು ಟ್ರಾವೆಲ್ ಏಜೆಂಟಿಗೇ ಕೊಟ್ಟಿದ್ದರು. ಕವಿತಾಳ ಗಂಡ "ವೀಸಾ ಸರಿಯಾಗಿ ನೋಡಿದಿರಾ" ಎಂದು ಕೇಳಿದ ಮೇಲೂ, "ಎಲ್ಲಾ ಸರಿಯಾಗಿದೆ, ಏಜೆಂಟ್ ಎಲ್ಲಾ ಸರಿಯಾಗಿಯೇ ಮಾಡಿದ್ದಾನೆ. ಅವನಿಗೆ ಅನುಭವ ಜಾಸ್ತಿ" ಎಂದು ಹೇಳಿ ನಿರಾಳವಾಗಿಯೇ ಇದ್ದುಬಿಟ್ಟರು. ಯಾವಾಗಲೂ ಬಹಳ ಎಚ್ಚರಿಕೆ ವಹಿಸುವ, ತನ್ನ ಎಡಗೈ ಬಲಗೈಯನ್ನೇ ನಂಬದ ಅಪ್ಪನೂ ಹಾಗೆ ಯಾಕೆ ಮಾಡಿದರೋ. ಇಂಥದನ್ನು ನೋಡೇ ಏನೋ, "ಪ್ರತ್ಯಾಸನ್ನ ವಿಪತ್ತಿಕಾಲೇ ಧೀಯೋಪಿ ಪುಂಸಾಂ ಮಲಿನೀ ಭವಂತಿ" ಎಂದಿರುವುದು ಭರ್ತೃಹರಿ. ಹೊರಡುವ ದಿನ ಬಂತು. ಕವಿತಾಳಿಗೆ, ಅವಳ ಮಕ್ಕಳಿಗೆ ಇಷ್ಟವಾದ ತಿಂಡಿಗಳು, ಪುಡಿಗಳು, ಎಲ್ಲವೂ ತಯಾರಾಗಿ, ಸೂಟ್ ಕೇಸ್ ಸೇರಿ, ಲಗ್ಗೇಜ್ ಸಿದ್ಧವಾಗಿ, ಪರಿಚಯದ ಟ್ಯಾಕ್ಸಿಯಲ್ಲಿ ಕಳುಹಿಸಿ ಮನೆಗೆ ಹೋಗಿದ್ದೆವು ನಾವು. ವಿಮಾನ ನಿಲ್ದಾಣದಲ್ಲಿ ಇಳಿಯು ತ್ತಿದ್ದಂತೆಯೇ ಅಮ್ಮ ಫೋನ್ ಮಾಡಿದ್ದಳು. ಒಳಗೆ ಹೋಗಿ ಬೋರ್ಡಿಂಗ್ ಪಾಸಿಗೆಂದು ನಿಂತಾಗಲೇ ಗೊತ್ತಾಗಿದ್ದು ಇವರ ಟ್ರಾವೆಲ್ ಪಿರಿಯಡ್ ಕಳೆದ ತಿಂಗಳಿಗೇ ಮುಗಿದು ಹೋಗಿದೆ ಎಂದು. ಪೆಚ್ಚಾಗಿದ್ದಾರೆ ಇಬ್ಬರೂ. ಮಗಳು, ಮೊಮ್ಮಕಳನ್ನು ಮಾರನೇ ದಿನ ಕಾಣ್ತೀವಿ ಎಂದಿದ್ದವರಿಗೆ ನಿರಾಶೆ. ಜೊತೆಗೆ ಆತಂಕ, ಟಿಕೆಟ್ ದುಡ್ಡಿನ ಪಾಡೇನಾಗುವುದೋ ಎಂದು? ಮಧ್ಯಮವರ್ಗದವರಲ್ಲವೇ? ಏನೇ ಆದರೂ ಮನೆಗೆ ಬರಲೇಬೇಕಲ್ಲ. ಮತ್ತೊಂದು ಟ್ಯಾಕ್ಸಿ ಹಿಡಿದು ಮನೆಗೆ ಬಂದಿದ್ದಾರೆ.

ಮನೆಗೆ ಬರುವ ವೇಳೆಗೆ ಅದೇ ಸುಧಾ ಆಂಟಿ ಹೇಳಿದ ಸಮಯವಾಗಿದೆ. ಬಾಗಿಲು ತೆಗೆದು ಒಳ ಹೋಗಿ ಮಲಗಿದ್ದಾರೆ. ಅಪ್ಪ "ಮಲಗುವ ಮೊದಲು ಹಸಿವಾಗುತ್ತಿತ್ತು ಜ್ಯೋತಿ, ನೀನು ಕಟ್ಟಿ ಕೊಟ್ಟಿದ್ದೆಯಲ್ಲಾ ಚಪಾತಿ-ಚಟ್ನಿಪುಡಿ ತುಪ್ಪ, ಪಟ್ಟಾಗಿ ತಿಂದು ಮಲಗಿದೆ ನೋಡು.... ಲೇ ಲಕ್ಷ್ಮೀ, ಕಾಫಿ ಡಿಕಾಕ್ಷನ್ ಹಾಕೇ. ನಾನು ಹೋಗಿ ಹಾಲು ತರ್ತೀನಿ. ಜ್ಯೋತಿ, ಅಳಿಯಂದಿರೂ ಕಾಫಿ ಕುಡ್ದೇ ಹೊರಡ್ತಾರೆ" ಅಂತ ಕೈಚೀಲ ತೆಗೊಂಡರು. ಹೊರಡುವ ಮುನ್ನ "ಈ ತರಹ ಒಂದೇ ದಿನದಲ್ಲಿ ಆಸ್ಟ್ರೇಲಿಯಾಕ್ಕೆ ಹೋಗಿ ವಾಪಸ್ಸು ಬಂದೋರನ್ನು ನೋಡಿದಿಯಾ? ಇದನ್ನೇ ನೋಡು, 'ಹೋದ ಪುಟ್ಟಾ, ಬಂದಾ ಪುಟ್ಟ' ಅನ್ನೋದು ಗೊತ್ತಾ?" ಅಂತಾ ಪಕಪಕನೇ ನಗುತ್ತಾ ಹೋದರು.

"ಅಲ್ಲ ಅಮ್ಮ, ನೀನಾರು ನೋಡಬಾರ್ದಿತ್ತಾ" ಅಂದರೆ "ಅಯ್ಯೋ, ಏನ್ ಮಂಕು ಕವಿದಿತ್ತೋ ನನಗೂ ಜ್ಯೋತಿ, ನೋಡಲೇ ಇಲ್ಲ. ಬಿಡು ಆದಿದ್ದಾಯ್ತು. ಇನ್ನು ಆ ಟ್ರಾವೆಲ್ ಏಜೆಂಟ್ ಹತ್ತಿರ ಹೋಗಿ ಏನ್ ಮಾಡೋದು ಅಂತಾ ನೋಡಬೇಕು". ಅಮ್ಮ ಎದ್ದು ಡಿಕಾಕ್ಷನ್ ಹಾಕಕ್ಕೆ ಹೋದಳು. ನಿಜ, ಯಾರಿಗೆ ಬೇಕಾದರೂ ಹೀಗೆ ತಪ್ಪಾಗಬಹುದು. ನಮಗೂ ಒಮ್ಮೆ ಹೀಗೆ ಆಗಿದ್ದು ನೆನಪಾಯಿತು. ಯಾವುದೋ ಮದುವೆಗೆ ಬಂದಿದ್ದು ವಾಪಸಾಗಲು ಮಧ್ಯಾಹ್ನದ ಶತಾಬ್ದಿಗೆ ಬುಕ್ ಮಾಡಿಸಿದ್ದರೂ ಪ್ರಯಾಣ ರಾತ್ರಿಯ ರೈಲಲ್ಲಿ ಅಂತಾ ಹೇಗೋ ತಲೇಲಿ ಕೂತು, ಕೊನೆಗೆ ರಾತ್ರಿ ಹೊರಟಾಗ ಗೊತ್ತಾಗಿ, ಪಡಿಪಾಟಲು ಪಟ್ಟು ಪ್ರೈವೇಟ್ ಬಸ್ಸಲ್ಲಿ ಚೆನ್ನೈಗೆ ಪ್ರಯಾಣ ಮಾಡಿದ ನೆನಪಾಗಿ ಸುಮ್ಮನಾದೆ. ಅಪ್ಪನ "ಹೋದ ಪುಟ್ಟ ಬಂದ ಪುಟ್ಟ" ವರ್ಣನೆ ಮಾತ್ರ ಈಗಲೂ ನಮ್ಮ ಕುಟುಂಬದಲ್ಲಿ ಹರಿದಾಡ್ತಾ ಇರತ್ತೆ ಅಂತೀನಿ. ನಿಮ್ಮಲ್ಲಿಯೂ ಇಂಥಾ ಎಡವಟ್ಟು ಪ್ರಯಾಣಗಳ ಕಂಡು ಕೇಳಿದ ಅನುಭವಗಳಿರಬಹುದು ಅಲ್ಲವೇ?

ಅದೇನಾಯ್ತೋ...

ಅದೇನಾಯ್ತೊ ಗೊತ್ತಿಲ್ಲ
ಇದ್ದಕ್ಕಿದ್ದಂತೆ ಜನರ
ಜನರಲ್ ಹೆಲ್ತ್ ಇಂಪ್ರೂವ್ ಆಗ್ಬಿಟ್ಟಿದ್ಯಲ್ಲ..?

ಜಂಕ್ ಫುಡ್ ಇಲ್ಲ ,ಚಾಟ್ ಇಲ್ಲ
ಹೋಟೆಲ್ ಇಲ್ಲ ..ಎಣ್ಣೆ ಅಂತೂ
ಇಲ್ವೇ ಇಲ್ಲ
ಮನೇಲಂತೂ ಹೆಲ್ತಿ ಫುಡ್ಡೇ ಎಲ್ಲ!

ಆಫೀಸ್ ಇಲ್ಲ ಸ್ಟ್ರೆಸ್ ಇಲ್ಲ
ಓಡಾಡುವ ಹಾಗಿಲ್ಲ.
ಪೊಲ್ಯೂಷನ್ ಇಲ್ವೇ ಇಲ್ಲ

ಶಾಪಿಂಗ್ ಇಲ್ಲ ಖರ್ಚೇ ಇಲ್ಲ
ಖಾತೆಗೆ ಸಂಬಳ ಬೀಳ್ತಾ ಇದ್ಯಲ್ಲ!

ಸ್ವಚ್ಛತೆಯ ಮಾನದಂಡವೇ
ಬದಲಾಗಿದ್ಯಲ್ಲ
ಕೈ ತೊಳಿ ಕಾಲು ತೊಳಿ
ಆಚೆ ಹೋದ್ರೆ ಮೈ ತೊಳೀಲೇಬೇಕಲ್ಲ

ಬಿಸಿ ನೀರು ಬಿಸಿ ಊಟ
ಬಿಸಿ ಬಿಸಿಯಾಗಿ ಬಡಿಸ್ತಾರಲ್ಲ

ಕೆಮ್ಮಿಲ್ಲ ಸೀನಿಲ್ಲ
ಕಣ್ಣು ಮೂಗು ಮುಟ್ಟುವ ಹಾಗಿಲ್ಲ
ಬಾಯಂತೂ ತೆಗ್ಯೋ ಹಾಗೇ ಇಲ್ಲ

ಅಕ್ಕ ಪಕ್ಕ ಯಾರನ್ನೂ ಮುಟ್ಟೋದೇ ಇಲ್ಲ
ಓ ಪಿ ಡಿ ಬಂದ್ ಅಂತ
ಖಾಯಿಲೆ ಎಲ್ಲ ದೂರ ಓಡಿದ್ಯಲ್ಲ

ಒಂದೂ ಅರ್ಥ ಆಗ್ತಿಲ್ಲ
ಮನುಷ್ಯನ ಸುಧಾರಿಸಕ್ಕೆ
ಕರೋನ ಅನ್ನುವ ಹೆಮ್ಮಾರಿಯೇ
ಬೇಕಾಯ್ತಲ್ಲ!

... ನಾಗರತ್ನ ಎಂ.ಜಿ.

ನನ್ನ ಶಾಲೆಯ ಗುರುಗಳು

ನನ್ನ ಶಾಲೆಯ ಆ ಗುರುಗಳು ಎಲ್ಲರಂತಲ್ಲ
ದುಡಿದು ವಿದ್ಯೆ ಉದ್ದಿಮೆಯಾಗದೆ ತಡೆದರು.
ಬೇರೆಯೇ ತಳಿ, ತಾಳ್ಮೆಯ ಕುಳಿ
ಪ್ರತಿಮೆಗಳ ಕೆತ್ತಿದ ಉಳಿಗಳು

ಹರಿದ ಜೇಬಿನ ಜುಬ್ಬ ತೊಟ್ಟರೂ
ಹರಕು ತೋರದೆ ನಡೆದರು
ಹರೆಯದಲೆ ಮಾಗಿದ ಬುದ್ದ
ತಮ್ಮದೆಲ್ಲವ ಧಾರೆ ಎರೆದ ವಿರಳರು

ಒಂದೇ ಹೊಲದಲಿ ಅದೇ ನೆಲದಲಿ
ಅದೆಷ್ಟು ಬಗೆ ಬೆಳೆ ಬೆಳೆದರು
ಎಲ್ಲಕ್ಕೂ ತಕ್ಕಷ್ಟೇ ನೀರನು ಎರೆದರು
ಶಾರದೆಯನೂ ಜೊತೆ ಕರೆದರು

ನನ್ನ ಶಾಲೆಯ ಆ ಗುರುಗಳು ಎಲ್ಲರಂತಲ್ಲ.

ಬಯಲೆ ಆಲಯ ಬೇಡ ಬಾಗಿಲು
ಜ್ಞಾನ ಗಂಗೆಗೆ ಏಕೆ ಕಾವಲು ಎಂದರು.
ಜಂಗಮರು ಒಂಟಿಯಾಗೇ ನಡೆದರು
ಮನದ ಕದ ತೆರೆದರು

ಸರಿದೂರ ನಡೆದು ತಿರುಗಿ ನೋಡಲು
ಅವರು ಅಲ್ಲಿಯೇ ಉಳಿದರು
ನಿಂತು ಗಾಳಿ ಬೀಸುವ
ಹಸಿರು ಸಾಲು ಮರಗಳು

ನನ್ನ ಶಾಲೆಯ ಆ ಗುರುಗಳು ಎಲ್ಲರಂತಲ್ಲ.

ಪ್ರತಿ ವಸಂತಕೂ ಹೊಸದೆ ಎಲೆ
ಹೊಸದೆ ನಗೆ ಸೆಳೆದು ತರುವವರು
ಕತ್ತಲೆ ಅರಿಯದವರಿಗೆ ಎದೆಯಲಿ
ಬೆಳಕಾಗಿಯೆ ಉಳಿವರು.

ನನ್ನ ಶಾಲೆಯ ಆ ಗುರುಗಳು ಎಲ್ಲರಂತಲ್ಲ

- ಪೋಲೇನಹಳ್ಳಿ ರಮೇಶ್

ಸಣ್ಣ ಕಥೆ

ಆಷಾಢದ ಗಾಳಿ

– **ಎನ್. ಶಂಕರ ರಾವ್**

ಅತ್ತೆ ಕಮಲಮ್ಮನಿಗೆ, ಸೊಸೆ ಅಂದರೆ ಪಂಚಪ್ರಾಣ. ಹೆಣ್ಣು ಮಕ್ಕಳಿಲ್ಲದ ಜೀವ. ಸೊಸೆಯನ್ನೇ ಮಗಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಮಧ್ಯಮವರ್ಗದ ತಾಯಿ. ಒಬ್ಬನೇ ಮಗನಿಗೆ ಒಳ್ಳೆಯ ಹೆಣ್ಣು ನೋಡಿ ಮದುವೆ ಮಾಡಿದ್ದರು. ಕೆಲವೇ ದಿನಗಳಲ್ಲಿ ರಾಧ ಅತ್ತೆಯ ಮನೆಯಲ್ಲಿ ಹೊಂದಿಕೊಂಡು, ಅವರ ಸುಖದುಃಖಗಳಿಗೆ ಸಮನಾಗಿ ಸ್ಪಂದಿಸುತ್ತ, ಅತ್ತೆಯ ಮೆಚ್ಚುಗೆಗೆ ಪಾತ್ರಳಾಗಿದ್ದಳು.

ಏ ರಾಧ, ಬಾರೆ ಇಲ್ಲಿ, ಕೂತ್ಕೋ ಎಣ್ಣೆ ನೀರು ಹಾಕ್ಕೊಂಡ್ಯ? ತಲೆ ಚೆನ್ನಾಗಿ ಒಣಗಿಸಿಕೊಂಡೆಯ? ಬಾ ಇಲ್ಲಿ ತಲೆ ಬಾಚ್ತೇನಿ ಇರು..

ಅಮ್ಮ.. ಅಮ್ಮ.. ಮತ್ತೇ.. ಮತ್ತೇ..

ಏನೇ ಅದು..

ಅದು, ಅಮ್ಮನ ಮನೆಯಿಂದ ಕಾಗದ ಬಂದಿದೆ. ಅಪ್ಪಯ್ಯ ಬಂದು ನನ್ನ ಕರೆದು ಕೊಂಡು ಹೋಗ್ತಾರಂತೆ.

ಓ ಹೌದಾ? ಆಷಾಢ ಮಾಸ ಬರ್ತಾ ಇದೆ ಅಲ್ವ, ನಿಮಗೆ ಮದುವೆ ಆಗಿ ಮೊದಲನೇ ವರುಷ.. ಅದಕ್ಕೆ..

ಅಲ್ಲಿ ಹೋಗಿ ಅಮ್ಮನ ಜೊತೆ ಸ್ವಲ್ಪ ದಿನ ಇರು. ಮಲೆನಾಡಿನ ಪರಿಸರದಿಂದ ಮನ ಸಂತಸವಾಗುತ್ತದೆ. ಹಸಿರು ಸಿರಿಯ ತಾಣ, ಸ್ವಚ್ಛ ಗಾಳಿ, ಮನಸ್ಸಿಗೆ ಹಿತವಾಗಿರುತ್ತದೆ.

ಅಮ್ಮ, ಆಷಾಢ ಮಾಸದಲ್ಲಿ ಏಕೆ ಅಮ್ಮನ ಮನೆಗೆ ಹೋಗಬೇಕು? ಅವರನ್ನು, ನಿಮ್ಮನ್ನು ಬಿಟ್ಟು ನಾನು ಹೋಗಲ್ಲ. ನೀವು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತೀರಿ. ನನಗೆ ಅಮ್ಮನೂ ನೀವೇನೆ ಅತ್ತೆನೂ ನೀವೇನೇ. ಅಕ್ಕಪಕ್ಕದ ಮನೆಯವರು ಹೇಳ್ತಾರೆ, "ಇಂಥಾ ಅತ್ತೆ ಪಡೆದಿದ್ದು ನಿನ್ನ ಪುಣ್ಯ ಅಂಥಾ."

ಕಮಲಮ್ಮ ನಗುತ್ತಾ, ಏ ನನ್ನ ಬಿಟ್ಟು ಹೋಗೋದಿಕ್ಕೋ ಅಥವಾ ನಿನ್ನ ಗಂಡ ಕೃಷ್ಣನಿಂದ ದೂರ ಹೋಗೋಕೆ ಬೇಜಾರೋ! ನಿಜ ಹೇಳೂ. ನಿಜ ಕಣೆ ನೀನು ನಮಗೆ ಚೆನ್ನಾಗಿ ಹೊಂದಿಕೊಂಡಿದ್ದೀಯ. ನಮಗೆ ಹೆಣ್ಣು ಮಕ್ಕಳು ಇಲ್ಲಾ ಅನ್ನೋ ಕೊರಗು ದೂರ ಮಾಡಿದ್ದೀಯ.

ಅಮ್ಮ ಮತ್ತೆ ಆಷಾಢ ಮಾಸದಲ್ಲಿ ಅಮ್ಮನ ಮನೆಗೆ ಏಕೆ ಹೋಗಬೇಕು ಹೇಳಲೇ ಇಲ್ಲ.

ನೋಡು ರಾಧ, ಅದು ಒಂದು ಸಂಪ್ರದಾಯ. ಕೆಲವು ಕಟ್ಟುನಿಟ್ಟುಗಳನ್ನು ಅನುಸರಿಸಿ ಬಂದಿರುವ ನಂಬಿಕೆ. ಸೊಸೆ ಆಷಾಢ ಮಾಸದಲ್ಲಿ ಅತ್ತೆ ಮನೆಯಲ್ಲಿದ್ದರೆ, ಅತ್ತೆಗೆ ಆರೋಗ್ಯ ಸಮಸ್ಯೆ ಬರಬಹುದು ಎಂದು ನಂಬಿಕೆ. ನಮ್ಮ ಮನೆ ಡಾಕ್ಟರ್ ಆಶಾ ಹೇಳುತ್ತಾ ಇದ್ದರು.. ವೈಜ್ಞಾನಿಕವಾಗಿ ಸಂತಾನೋತ್ಪತ್ತಿಗೆ ಇದು ಸಕಾಲವಲ್ಲ, ಆಷಾಢದಲ್ಲಿ ಅಂಕುರಾರ್ಪಣೆ ಆದರೆ ಮಗುವಿನ ಜನ್ಮ ಬೇಸಿಗೆಯಲ್ಲಿ ಆಗುವುದರಿಂದ, ಇದನ್ನು ತಡೆಯಲು ಒಂದು ಆರೋಗ್ಯಕರ ಸಂಪ್ರದಾಯ.

ಹಾಗಾ ಅಮ್ಮ, ನಾನು ಅಮ್ಮನ ಮನೆಗೆ ಹೋಗ್ತೀನಿ. ನಿಮ್ಮ ಆರೋಗ್ಯ ಮುಖ್ಯ. ಒಂದು ತಿಂಗಳ ಕಾಲ ಪರವಾಗಿಲ್ಲ. ಹೇಗೋ ಕಳೀತೀನಿ. .

ಅಯ್ಯೋ ನೋಡು, ನಿನ್ನ ಮುಖ ಎಷ್ಟು ಬಾಡೋಯ್ತು. ನಿನ್ನ ಕೃಷ್ಣನ್ನ ಬಿಟ್ಟು ಇರೋದು ಅಷ್ಟು ಸುಲಭವಲ್ಲ!

ಏನಿಲ್ಲಾ ಅಮ್ಮ.. ನಿಮ್ಮ ಆರೋಗ್ಯ ಮುಖ್ಯ..

ಯೋಚನೆ ಮಾಡ್ಬೇಡ ಮಗಳೇ.. ನಿನ್ನನ್ನ ತವರಿಗೆ ಕಳುಹಿಸಲ್ಲ. ಇಲ್ಲೇ ಇರುವಂತೆ. ನಿನ್ನ ಪ್ರೀತಿ ನನ್ನ ಆರೋಗ್ಯವನ್ನು ಕಾಪಾಡುತ್ತದೆ...

ಅತ್ತೆಯ ಸಾಂತ್ವನದ ಮಾತು ಸೊಸೆಯ ಕಣ್ಣಲ್ಲಿ ಸಂತಸದ ಹನಿ ತರಿಸಿತು. ಆಷಾಢ ಮಾಸದ ಗಾಳಿ ಮೆಲ್ಲನೆ ಬೀಸಿ ತನುಮನ ಪ್ರಫುಲ್ಲ ಗೊಂಡಿತು.

***

ದೇವಮಾನವರು

ಇದ್ದಕ್ಕಿದ್ದಂತೆ ಅಲ್ಲಲ್ಲಿ ಹುಟ್ಟಿಕೊಳ್ಳುತ್ತಾರೆ ದೇವಮಾನವರು.

ಯಾವುದೋ ಗಲ್ಲಿ ನಡುವಿನ ಮನೆಯಲ್ಲಿ
ಕೆದರಿದ ತಲೆ ಹಣೆ ತುಂಬ ಕುಂಕುಮ
ದೇವಿ ಉದ್ಭವವಾಗಿಬಿಡುತ್ತಾಳೆ
ಅಭಿಷೇಕ ನಾನಾ ನೈವೇದ್ಯ ಮಾಡಿ
ಧನ್ಯರಾಗುತ್ತಾರೆ ಭಕ್ತರು.

ಕಾಲೇಜು ಮುಗಿಸಿ ಸಿಕ್ಕ ಕೆಲಸ ಬಿಟ್ಟ ಹುಡುಗ
ಆಧ್ಯಾತ್ಮ ಮಾತಾಡುತ್ತ ತಿರುಗುತ್ತಾ
ಅವಧೂತನೇ ಆಗಿಬಿಡುತ್ತಾನೆ
ಮಂತ್ರಿ ಮಹೋದಯರು ಕಾಲಿಗೆರಗುತ್ತಾರೆ.

ಇನ್ನು ಕೆಲವರೋ ನಿಮ್ಮೊಳಗಿನ
ಭವಿಷ್ಯದ ಭಯವನ್ನೇ ತಟ್ಟುತ್ತಾರೆ
ಬಾಗಿಲ ದಿಕ್ಕು ಬದಲಾಯಿಸುತ್ತಾರೆ
ಸಂಧಿ ಶಾಂತಿ ಮಾಡಿಸುತ್ತಾರೆ ..

ಹೆಸರಿಗೆ ಕೊಂಬೋ ದೀರ್ಘವೋ ಸೇರಿಸಿ
ಭವಿಷ್ಯ ಬದಲಾಯಿಸುವೆವೆನ್ನುತ್ತಾ
ಸಿಂಹಾಸನದಲ್ಲಿಮೆರೆಯುತ್ತಾರೆ
ಭಕ್ತರು ಆನೆ ಮೇಲೆ ಮೆರವಣಿಗೆ ಮಾಡುತ್ತಾರೆ.
ನಡೆವ ದಾರಿಗೆಲ್ಲ ಹೂವು ಹಾಕುತ್ತಾರೆ
ಪಾದಪೂಜೆ ಮಾಡುತ್ತಾರೆ.

ಮಾಧ್ಯಮಗಳು ಎಡಬಿಡದೆ
ಪ್ರಸಾರ ಮಾಡುತ್ತವೆ.
ಪವಾಡದ ಕತೆಗಳು ಹುಟ್ಟಿಕೊಳ್ಳುತ್ತವೆ
ಭಕ್ತಗಣ ಹೆಚ್ಚುತ್ತದೆ.

ಮತ್ತೆ ಮತ್ತೆ ದೇವ ಮಾನವರು
ಹುಟ್ಟುತ್ತಲೇ ಇರುತ್ತಾರೆ

- ಹು.ವಾ.ಶ್ರೀಪ್ರಕಾಶ್

ಸಣ್ಣ ಕಥೆ

ಪೊಟ್ಟಿ

-- ಶೀಲಾ ಭಂಡಾರ್ಕರ್

ಪೊಟ್ಟಿ, ಬಂಟ್ವಾಳದ ಬಂಗ್ಲೆ ಗುಡ್ಡೆಯಲ್ಲೊಂದು ಗುಡಿಸಲು ಕಟ್ಟಿ ವಾಸವಾಗಿದ್ದಳು.

ಬಂಗ್ಲೆ ಗುಡ್ಡೆಗೆ ಹೋಗುವ ರಸ್ತೆಗೆ ತಾಗಿಯೇ ನಮ್ಮಜ್ಜಿ ಮನೆ ಇದ್ದುದರಿಂದ ಅವಳು ಯಾವುದಕ್ಕಾದರೂ ಓಡಿ ಬರುವುದಿತ್ತು. ಅವಳಿಗೆ ಒಂದಿಷ್ಟು ಜನ ಮಕ್ಕಳು. ಎಷ್ಟು ಎಂದು ಅವಳಿಗೇ ಲೆಕ್ಕ ಇತ್ತೊ ಇಲ್ಲವೊ. ಕೃಶ ಶರೀರದ ಮಧ್ಯಮ ಎತ್ತರದ ಪೊಟ್ಟಿಗೆ ಒಬ್ಬ ಗಂಡ ಅಂತ ಇದ್ದನಂತೆ ಎಂದು ಅಜ್ಜಿ ಹೇಳಿದ್ದ ನೆನಪು. ಅದೇನೋ ಆಗಿ ಅವನು ಸತ್ತ ಮೇಲೆ ಒಂದೆರಡು ಮಕ್ಕಳ ಜೊತೆ ಅವಳೊಬ್ಬಳೇ ಬಂಗ್ಲೆ ಗುಡ್ಡೆಯಲ್ಲಿ ವಾಸವಾಗಿದ್ದಳು.

ವರ್ಷಕ್ಕೊಮ್ಮೆ ಬಸುರಿ, ವರ್ಷಕ್ಕೊಂದು ಬಾಣಂತನ ಅಂದ ಹಾಗೆ ಸದಾ ಅದೇ ಸ್ಥಿತಿಯಲ್ಲಿರುತಿದ್ದಳು. ಅದ್ಯಾರು ಬರುತಿದ್ದರೋ, ಹೋಗುತಿದ್ದರೋ, ಆ ಬತ್ತಿದ ದೇಹದಲ್ಲಿ ಅದೆಂತ ಅಕರ್ಷಣೆಯಿತ್ತೊ! ಅವಳಲ್ಲಿಗೆ ಬರೋ ಗಂಡಸರಿಗೆ, ಹೋಗುವ ಮೊದಲು ಅವಳಿಗೆ, ಅವಳ ಮಕ್ಕಳಿಗೆ ಎಂದು ಏನಾದರೂ ಕೊಡಬೇಕೆಂದು ಅನಿಸುತಿತ್ತೋ ಇಲ್ಲವೋ ಒಂದೂ ಸರಿಯಾಗಿ ಯಾರಿಗೂ ತಿಳಿಯುತ್ತಿರಲಿಲ್ಲ. ಯಾಕೆಂದರೆ ಅವಳು ಪೊಟ್ಟಿ.

ಪೊಟ್ಟಿ ಅಂದರೆ ಮಾತು ಬಾರದವಳು. ಮೂಕಿ. ಅವಳ ಮಕ್ಕಳಿಗೆ ಮಾತು ಬರುತಿತ್ತೇನೋ ಆದರೆ ಅವರಿಗೆ ಮಾತು ಕಲಿಸಲು ಯಾರಿದ್ದರು? ಅವರ ಬಳಿ ಮಾತನಾಡುವವರು ಬೇಕಲ್ಲ!

ನಮ್ಮ ಮನೆಗೆ ಬರುವಾಗ, ಹಿಂದಿನ ಬಾಗಿಲೆಂದಿಲ್ಲ, ಮುಂದಿನ ಬಾಗಿಲೆಂದಿಲ್ಲ, ಎಲ್ಲಿಂದಾದರೂ ಯಾವಾಗಲಾದರೂ ಬರುತಿದ್ದಳು. ಅಂದರೆ ಒಳಗೆ ಬರುತ್ತಿರಲಿಲ್ಲ. ಹೊರಗೆ ನಿಂತು ಅದೇನೋ ವಿಚಿತ್ರ ಸದ್ದು ಮಾಡುತಿದ್ದಳು.

ನಮ್ಮ ಅಜ್ಜಿ ಅವಳಿಗೆ ಉಳಿದದ್ದು ಬಳಿದದ್ದು ಅದು ಇದು ಅಂತ ಕೊಡುತಿದ್ದರು. ಆ ಮಕ್ಕಳನ್ನು ನೋಡುವಾಗ ಹೊಟ್ಟೆ ಚುರ್ ಅನ್ನುತ್ತೆ ಅನ್ನುತಿದ್ದರು. ಕಂಕುಳಲ್ಲೊಂದು, ಹೆಗಲ ಮೇಲೆ ನೇತಾಡುವ ಜೋಳಿಗೆಯಲ್ಲೊಂದು, ಹಿಂದೆ ಮುಂದೆ, ಹೀಗೆ ಐದಾರು ಮಕ್ಕಳು ಜತೆಗೆ ನಡೆದುಕೊಂಡು ಬರುವಂಥವು. ಇಷ್ಟು ಮಕ್ಕಳನ್ನು ಕರೆದುಕೊಂಡು ಭಿಕ್ಷೆಗೆ ಹೋಗುತಿದ್ದಳು. ಕೆಲಸ ಮಾಡಿ ತಿನ್ನುವ ಸ್ವಾಭಿಮಾನ ಇತ್ತೋ ಇಲ್ಲವೋ, ಅವಳಿರುವ ಸ್ಥಿತಿ ಅವಳನ್ನು ಕೆಲಸ ಮಾಡಲು ಬಿಡಬೇಕಲ್ಲ.

ನನ್ನ ಅಪ್ಪನಿಗೆ ಮದುವೆ ಆಗುವ ಮೊದಲಿನಿಂದಲೂ ಅವಳು ಅಲ್ಲಿ ವಾಸಿಸುತಿದ್ದಳು. ಅಪ್ಪನಿಗೆ ಮದುವೆ ಆದ ಹೊಸತರಲ್ಲಿ, ಅಮ್ಮ ಒಂದು ಸಂಜೆ ಒಬ್ಬರೇ ಅಡುಗೆ ಮನೆಯಲ್ಲಿ ಒಲೆ ಮೇಲೆ ಹಾಲಿಟ್ಟು ಅದು ಕಾಯುವುದನ್ನೇ ನೋಡುತ್ತಾ ಕೂತಿದ್ದಾಗ, ಎಂದಿನಂತೆ ಪೊಟ್ಟಿ ಬಂದು ತನ್ನ ವಿಚಿತ್ರ ಧ್ವನಿಯಲ್ಲಿ ಕೂಗಿದಳಂತೆ. ಅಮ್ಮ ಹೆದರಿ ಹೌಹಾರಿ ಒಲೆಯ ಕಟ್ಟೆಗೆ ಮೇಲೆ ಕಾಲಿಟ್ಟು, ಆ ಸೌದೆ ಎಗರಿ ಹಾಲಿನ ಪಾತ್ರೆ ಉರುಳಿ, ಹಾಲೆಲ್ಲ ಚೆಲ್ಲಿ ಹೋಯ್ತುಂತೆ.

ಒಂದು ಕಡೆ ಇಷ್ಟೆಲ್ಲ ರಂಪವಾಗಿ ಹೋಯ್ತು. ಮತ್ತೊಂದೆಡೆ ಕಿಟಕಿಯಿಂದ ಹೆದರಿಸಿದ್ದು ಯಾರು ಎನ್ನುವ ಭಯ.

ಒಳಗೆ ಇಷ್ಟೆಲ್ಲ ಆದ ಶಬ್ದಕ್ಕೆ ಎಲ್ಲರೂ ಓಡಿಬಂದು ನೋಡಿದರೆ ಪೊಟ್ಟಿ ಇನ್ನೂ ಅಲ್ಲೇ ತನ್ನ ಕೊಳಕಾದ ಹಲ್ಲು ತೋರಿಸಿ ನಗುತ್ತಾ ನಿಂತಿದ್ದಳು. ಅಮ್ಮ ಕಿಟಕಿ ಬಳಿ ಕೈ ತೋರಿಸಿ, ನಡುಗುತ್ತಾ ಅಳುವುದನ್ನು ನೋಡಿ ಅಜ್ಜಿ ಪೊಟ್ಟಿಗೆ ಚೆನ್ನಾಗಿ ಬೈದರಂತೆ. ಹೀಗಾ ಹೆದರಿಸೋದು ಅಂತ.

ಪೊಟ್ಟಿಗೆ ಹೆಸರೇನಾದರೂ ಇತ್ತೋ ಗೊತ್ತಿಲ್ಲ. ಇದ್ದರೂ ಅವಳ ಬಳಿ ಕೇಳಿದವರ್ಯಾರು? ಕೇಳಿದರೂ ಅವಳು ಹೇಳುವುದಾದರೂ ಹೇಗೆ? ಎಲ್ಲರೂ ಅವಳನ್ನು ಪೊಟ್ಟಿ ಎಂದೇ ಕರೆಯೋದಿತ್ತು. ಯಾರುಯಾರೋ ಕೊಟ್ಟ, ಎಲ್ಲಿ ಸಿಕ್ಕಿದರೂ ಹೆಕ್ಕಿದ ಬಳೆಗಳನ್ನು ಅವಳು ಕೈ ತುಂಬಾ ಸುರಿದುಕೊಳ್ಳುವುದಿತ್ತು. ಒಂದಕ್ಕೊಂದು ಬಣ್ಣ, ಸೈಜ್, ಡಿಸೈನ್ ಯಾವುದೂ ತಾಳೆ ಇರುತ್ತಿರಲಿಲ್ಲ. ಈಗಲೂ ಅದೇ ರೀತಿ ಬಳೆ ಹಾಕಿಕೊಂಡ ಮಕ್ಕಳನ್ನು "ಪೊಟ್ಟಿಯ ಹಾಗೆ" ಅನ್ನುವುದುಂಟು.

ಒಮ್ಮೆ ಅವಳ ಮಕ್ಕಳಲ್ಲಿ ಒಂದು ಮಗು ಎಲ್ಲೋ ಹೋಯ್ತೆಂದು ಬಂದು ನಮ್ಮಜ್ಜಿಯ ಹತ್ತಿರ ಹೇಳುತಿದ್ದಳು. ಆದರೆ ಅಂಥಾದ್ದೇನೂ ದುಃಖ ಆದ ಹಾಗಿಲ್ಲ. ಅವಳು ಯಥಾಪ್ರಕಾರ ಭಿಕ್ಷೆ ಬೇಡೋದು, ದಾರಿಯಲ್ಲಿ ಹೋಗುವವರನ್ನು ನೋಡಿ ತಲೆ ಕೆರೆದು, ಹಲ್ಲು ಕಿಸಿದು ನಗೋದು ಎಲ್ಲಾ ಮಾಡುತಿದ್ದಳು. ಅವಳಲ್ಲಿ ಏನೂ ಭಾವನೆಗಳಿಲ್ಲವೇನೋ ಎಂದು ನಮ್ಮ ಮನೆಯಲ್ಲಿ ಮಾತನಾಡಿಕೊಂಡದ್ದು ನನ್ನ ಕಿವಿಗೂ ಬಿದ್ದಿತ್ತು.

ಅಮ್ಮನನ್ನು ಹೆದರಿಸಿದಾಗ ಬೈದದ್ದು ಬಿಟ್ಟರೆ ಅಜ್ಜಿ ಮತ್ತು ಅವಳ ನಡುವೆ ಸಂಭಾಷಣೆ ಕೈ ಬಾಯಿ ಸನ್ನೆಯಲ್ಲೇ ನಡೆಯುತಿತ್ತು.

ಅವಳಿಗೆಂದು ಏನಾದರೂ ತೆಗೆದಿಟ್ಟರೆ ಅಜ್ಜಿ ಮನೆಯ ಮುಂದಿನ ಸರಳುಗಳ ಜಗಲಿಯಲ್ಲಿ ಮರದ ಮಂಚದ ಮೇಲೆ ಕೂತು ಕಾಯುತಿದ್ದರು. ಅವಳನ್ನು ಕಂಡ ಕೂಡಲೇ ಏಯ್ ಅಂತ ಕರೆದರೆ ಅವಳೂ ಗೊಳ್ಳನೆ ನಕ್ಕು, ನೀವು ಕರೆಯುವುದನ್ನೇ ಕಾದಿದ್ದೆ ಅನ್ನುವ ಹಾಗೆ ಕಾಂಪೌಂಡ್ ಒಳಗೆ ಬಂದು ತುಳಸಿ ಕಟ್ಟೆಯ ಬಳಿ ಕೂತು ಮಕ್ಕಳನ್ನೂ ಕೂರಿಸಿಕೊಂಡು ಅಜ್ಜಿ ಕೊಟ್ಟ ತಿಂಡಿಯನ್ನು ತಾನೂ ತಿನ್ನುತ್ತಾ ಮಕ್ಕಳಿಗೆ ತಿನ್ನಿಸುತ್ತಾ ಸ್ವಲ್ಪ ಹೊತ್ತು ಇದ್ದು ನೀರು ಕುಡಿದು ಹೊರಡುತಿದ್ದಳು. ಆಮೇಲೆ ಅಲ್ಲಿ ಇಲ್ಲಿ ಸಿಕ್ಕಿದ್ದನ್ನು ಮದ್ಯಾಹ್ನಕ್ಕೆಂದು ಮನೆಗೆ ತೆಗೆದು ಕೊಂಡು ಹೋಗುತಿದ್ದಳು.

ಮುಂದೆ ಒಂದು ದಿನ ಭಾರೀ ಸುಸ್ತಾಗಿ ಬಂದು ಅಂಗಳದಲ್ಲಿ ಕೂತಿದ್ದು ನೋಡಿ ಅಜ್ಜಿ ಹುಷಾರಿಲ್ವಾ ಎಂದು ಕೇಳಿದಾಗ ನಸು ನಾಚಿ ನಕ್ಕಳಂತೆ. ಅಜ್ಜಿಗೆ ಅರ್ಥ ಆಗಿ ಅವಳಿಗೆ ಸನ್ನೆಯಲ್ಲೇ ಸಹಸ್ರನಾಮಾರ್ಚನೆ ಮಾಡಿದರೂ ದಿನಾ ಕರೆದು ತಿನ್ನಲು ಕೊಡುತಿದ್ದರು. ಅವಳ ಬಾಣಂತನ ಅವಳೇ ಮಾಡಿಕೊಳ್ಳುತಿದ್ದಳಂತೆ. ಅದನ್ನೂ ಸನ್ನೆಯಲ್ಲೇ ವಿವರಿಸಿ ಹೇಳುತಿದ್ದಳು. ಯಾವ ಸಂಭ್ರಮವಿಲ್ಲದಿದ್ದರೂ, ಸರಿಯಾಗಿ ಹೊಟ್ಟೆಗಿಲ್ಲದಿದ್ದರೂ ಅವಳ ಮಕ್ಕಳು ಮಾತ್ರ ಮೈಕೈ ತುಂಬಿಕೊಂಡು ನೋಡಲು ಲಕ್ಷಣವಾಗಿದ್ದವು.

ಹಾಲು, ಬೆಣ್ಣೆ, ತುಪ್ಪ ಸುರಿದು ತಿನ್ನಿಸಿದ್ರೂ ನಮ್ಮ ಮಕ್ಕಳು ಹೊಟ್ಟೆಗೆ ಇಲ್ಲದವರ ಹಾಗಿವೆ ಅಂತ ಅಜ್ಜಿ ನಮ್ಮನ್ನು ತೋರಿಸಿ ಹೇಳುವಾಗ ಅಮ್ಮನಿಗೆ ಪಾಪ ಪಿಚ್ಚೆನಿಸುತಿತ್ತು.

ಈ ಸಲವೂ ಹೆರಿಗೆಯಾಗಿ ಮೂರು ನಾಲ್ಕು ದಿನಕ್ಕೇ ರಸ್ತೆಗೆ ಇಳಿದಿದ್ದಳು ಪೊಟ್ಟಿ. ಅಷ್ಟೂ ಮಕ್ಕಳ ಮತ್ತು ತನ್ನ ಹೊಟ್ಟೆಗೆ ಏನಾದರೂ ಬೇಕಿತ್ತಲ್ಲ. ಈಗಲೂ ಎಂದಿನಂತೆ ಒಂದು ಜೋಳಿಗೆಯೊಳಗೆ, ಒಂದು ಕಂಕುಳಲ್ಲಿ.

ಒಂದು ದಿನ ಮದ್ಯಾಹ್ನ ಪೊಟ್ಟಿ ಓಡುತ್ತಾ ಬಂದು ಎದೆ ಬಡಿದುಕೊಳ್ಳುತ್ತಾ ಹೃದಯವಿದ್ರಾವಕವಾಗಿ ತನ್ನ ವಿಚಿತ್ರ ಧ್ವನಿಯಲ್ಲಿ ಅಳುತಿದ್ದಾಗ ಮನೆಯವರೆಲ್ಲ ಗಾಬರಿಯಾಗಿ ಓಡಿ ಬಂದರು. ಜೋಳಿಗೆಯಲ್ಲಿ ಮಗುವನ್ನು ನೇತಾಡಿಸಿದ್ದಾಳೆ. ಮಗು ಜೀವಂತವಾಗಿದೆ. ಇನ್ನೇತಕ್ಕೆ ಅಳುತಿದ್ದಾಳೆಂದು ಯಾರಿಗೂ ತಿಳಿಯದಾಯಿತು.

ಆ ಹೊತ್ತು ಗಾಬರಿಯಾದ ನಮ್ಮ ಧೈರ್ಯಸ್ಥೆ ಅಜ್ಜಿಯ ಮುಖ ನನಗೆ ಇನ್ನೂ ಕಣ್ಣ ಮುಂದಿದೆ. ಅಜ್ಜಿ ಅಂಗಳಕ್ಕೆ ಇಳಿದು ಹತ್ತಿರ ಹೋಗಿ ಕೇಳಿದರು. ಹೂಂ ಹೂಂ ಅಂತ ಸನ್ನೆಯಲ್ಲಿ "ಏನಾಯಿತು?" ಎಂದರು.

ಅವಳು ಹೊಟ್ಟೆ ಕಿವುಚಿಕೊಳ್ಳುತ್ತಾ ಎದೆ ಬಡಿದು ಕೊಳ್ಳುತ್ತಾ, ಕೂದಲು ಕಿತ್ತು ಕೊಳ್ಳುತ್ತಾ ಅಳುವುದನ್ನು ನೋಡಿ ಅಲ್ಲಿದ್ದವರೆಲ್ಲರ ಕಣ್ಣುಗಳು ಒದ್ದೆಯಾದವು.

ಅವಳ ಕೈ ಹಿಡಿದು ಅಳಬೇಡ ಎಂದು ಕುಡಿಯಲು ನೀರು ಕೊಟ್ಟು, ಸಮಾಧಾನ ಮಾಡಲು ನಮ್ಮಜ್ಜಿ ಮಡಿ ಮೈಲಿಗೆಯನ್ನೂ ಮರೆತು ಅವಳ ಬೆನ್ನು ಸವರಿದ್ದರು. ಸಮಾಧಾನ ತಂದುಕೊಂಡ ಅವಳು ಅಜ್ಜಿಯ ಕೈ ಹಿಡಿದು ಏನು ನಡೆಯಿತು ಎಂದು ಪಾಪ ಅವಳ ರೀತಿಯಲ್ಲಿ ವಿವರಿಸಿದಾಗ ಅರ್ಥವಾಗಿದ್ದನ್ನು ನಮ್ಮಜ್ಜಿ ಉಳಿದವರಿಗೆ ಹೇಳಿದರು.

ಬೆಳಿಗ್ಗೆ ಭಿಕ್ಷೆಗೆ ಹೋಗುವಾಗ, ಕಂಕುಳ ಮಗುವಿನ ಕಾಲಿಗೆ ಮತ್ತು ಗುಡಿಸಲಿನ ಮಧ್ಯೆ ಆಧಾರಕ್ಕಿಟ್ಟ ಕೋಲಿಗೆ ದಾರ ಕಟ್ಟಿಬಿಟ್ಟು ಹೋಗಿದ್ದಳು. ಮೊದಲೆಲ್ಲ ಇನ್ನೂ ನಡೆಯಲು ಬಾರದ ಮಕ್ಕಳನ್ನು ಹೀಗೆ ಕಾಲಿಗೆ ದಾರ ಕಟ್ಟಿ ಮಂಚಕ್ಕೋ, ಕಂಬಕ್ಕೋ ಕಟ್ಟಿ ಹಾಕಿ ಮನೆಕೆಲಸ ಮುಗಿಸುವುದಿತ್ತು. ಮಕ್ಕಳು ಆ ದಾರದ ಪರಿಧಿಯಲ್ಲೇ ಓಡಾಡಿ, ಆಟವಾಡಿ, ಸಾಕಾಗಿ ಅಲ್ಲೇ ಕೂತು ಅಳುತಿದ್ದವು.

ಪೊಟ್ಟಿ ಹೀಗೆ ಬಿಟ್ಟು ಹೋಗಿದ್ದಾಗ, ಮನೆಗೆ ಹಿಂತಿರುಗಿ ಬಂದು ನೋಡಿದರೆ ಮಗು ಇಲ್ಲ. ಹುಡುಕಿ, ಹುಡುಕಿ, ಕರೆದು ಸಾಕಾಗಿ, ಕೊನೆಗೆ ಅಲ್ಲೇ ಹತ್ತಿರದಲ್ಲೇ ಇದ್ದ ನೀರಿಲ್ಲದ ಪೊಟ್ಟು ಸರ್ಕಾರಿ ಬಾವಿಯೊಳಗೆ ಬಗ್ಗಿ ನೋಡಿದರೆ ಅದರೊಳಗೆ ಬಿದ್ದಿದೆ ಮಗು. ತುಂಬಾ ಹಳೆಯ ಬಾವಿ ಅದು. ಅದರ ಕಟ್ಟೆಯೂ ಬಿದ್ದು ಹೋಗಿ ಬಾವಿ ಎಂಬ ಹೊಂಡವೊಂದು ಮುಚ್ಚದೇ ಹಾಗೇ ಇತ್ತು.

ಬನ್ನಿ ಬನ್ನಿ ಎಂದು ಸನ್ನೆಯಲ್ಲೇ ಕರೆದಾಗ ಎಲ್ಲರೂ ಬಾವಿಯ ಬಳಿ ಹೋಗಿ ನೋಡಿದರೆ ಮಗು ರಕ್ತಸಿಕ್ತವಾಗಿ ವಿಕಾರವಾಗಿ ಬಿದ್ದಿತ್ತು. ಕೂಡಲೇ ಅಜ್ಜಿ ಅದರೊಳಗೆ ಯಾರನ್ನೋ ಇಳಿಸಿ ಮಗು ಬದುಕಿದೆಯೋ ಎಂದು ಪರೀಕ್ಷಿಸಲು ಹೇಳಿ ಅಲ್ಲಿಯೇ ಮಣ್ಣು ಹಾಕಿ ಮುಚ್ಚಿಸಿದರು. ಪೊಟ್ಟು ಬಾವಿ ಅರ್ಧ ಮುಚ್ಚಿತು. ಆದರೂ ಅಪಾಯವೆಂದು ಮುನಿಸಿಪಾಲಿಟಿಯವರಿಗೆ ಹೇಳಿ ಪೂರ್ತಿ ಮುಚ್ಚಿಸಲಾಯಿತು.

ಮಾತು ಬಾರದಿದ್ದರೂ, ಭಾವನೆಗಳೇ ಇಲ್ಲ ಎಂದುಕೊಂಡಿದ್ದರೂ ಪೊಟ್ಟಿಗೆ ತನ್ನ ಕೈಯಾರ ಮಗು ಸತ್ತಿತು ಅನ್ನುವ ಅಪರಾಧಿ ಪ್ರಜ್ಞೆ ಕಾಡುತಿತ್ತೇನೋ. ಹೊಟ್ಟೆಗಿಲ್ಲದಿದ್ದರೂ, ಬಟ್ಟೆಗಿಲ್ಲದಿದ್ದರೂ, ಆ ಮಕ್ಕಳನ್ನು ಹುಟ್ಟಿಸಿದವರು ಆಮೇಲೆ ತಿರುಗಿ ನೋಡದಿದ್ದರೂ ಕರುಳ ವೇದನೆ ಎಂಬುದು ಎಷ್ಟು ತೀವ್ರವಾದುದು. ಮುಂದಿನ ದಿನಗಳಲ್ಲಿ ಅವಳು ಯಾವ ಗಂಡಸನ್ನೂ ತನ್ನ ಗುಡಿಸಲಿಗೆ ಬರಲು ಬಿಡುತ್ತಿರಲಿಲ್ಲವಂತೆ. ಕಿರುಚಾಡಿ, ಕೈಗೆ ಸಿಕ್ಕಿದುದರಿಂದ ಹೊಡೆದು ಓಡಿಸುತಿದ್ದಳಂತೆ.

ನಗೆ ಬರಹ

ಪ್ರಶಸ್ತಿಗೆ ಪರದಾಟ

- ಎಂ.ಎಸ್. ನರಸಿಂಹಮೂರ್ತಿ

ವಿಶ್ವನ ಮನೆಗೆ ಹೋದಾಗ ಆಶ್ಚರ್ಯ ಕಾದಿತ್ತು. ಪುರಾತನ ಕಾಲದ ಆ ಮನೆಗೆ ಸುಣ್ಣ ಬಣ್ಣ ಹೊಡೆಸಿ ವಸ್ತುಗಳನ್ನು ನೀಟಾಗಿ ಜೋಡಿಸಿದ್ದ. ಪೂರ್ವಕ್ಕೆ ಗೋಡೆ ಮೇಲೆ ಹಳೆ ಕಾಲದ ಜರಿ ಕೆಲಸದ ದೇವರ ಚಿತ್ರಗಳು, ಪಶ್ಚಿಮಕ್ಕೆ ಕಾಡೆಮ್ಮೆಯ ನಯವಾದ ಕೊಂಬುಗಳು. ಲೈಟ್ ಹಾಕಿ ಹೈಲೈಟ್ ಮಾಡಿದ ಹುಲಿ ಉಗುರುಗಳು ದಕ್ಷಿಣಕ್ಕಿತ್ತು. ಕವಡೆಗಳನ್ನು ಮಣಿಗಳಂತೆ ಪೋಣಿಸಿ ಬಾಗಿಲಿಗೆ ಇಳಿ ಬಿಟ್ಟಿದ್ದ. ಕಳೆದ ಶತಮಾನದ ಮ್ಯೂಸಿಯಂ ನೋಡಿದಂತೆ ನನಗೆ ಭಾಸವಾಯಿತು.

`ಏನಿದು ಜೀರ್ಣೋದ್ಧಾರ?' ಎಂದೆ.

ವಿಶ್ವ ತನ್ನ ಫ್ಯಾಮಿಲಿ ಹಿಸ್ಟರಿ ಶುರು ಮಾಡಿದ. ಸ್ವಾತಂತ್ರ್ಯ ಪೂರ್ವದಲ್ಲಿ ವಿಶ್ವನ ತಾತ ಒಂದು ಹುಲಿಯನ್ನು ಕೊಂದಿದ್ದನಂತೆ. ತಾನು ಕೊಂದ ಹುಲಿಯ ಜೊತೆ ತಾತ ಫೋಟೋ ತೆಗೆಸಿಕೊಂಡಿದ್ದ. ಅದು ಶತಮಾನದಷ್ಟು ಹಳೆಯ ಫೋಟೋ. ಹುಲಿ ಯಾವುದು, ತಾತ ಯಾವುದು ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲ. ಕೆಳಗಿರುವುದು ಹುಲಿ, ಮೇಲೆ ಕೂತಿರುವುದು ನಮ್ಮ ತಾತ ಎಂದು ಬಂದವರಿಗೆಲ್ಲ ವಿಶ್ವ ಹೇಳುತ್ತಿದ್ದ.

ವಿಶ್ವನ ತಂದೆಯೂ ಹುಲಿಯನ್ನು ಹೊಡೆಯಲು ಕಾಡಿಗೆ ಹೋಗಿದ್ದರಂತೆ. ಆದರೆ ಅದು ಸ್ವಾತಂತ್ರ್ಯಾನಂತರದ ಕಾಲವಾದ್ದರಿಂದ ಅರಣ್ಯದಲ್ಲಿದ್ದ ಕಾವಲು ಸಿಬ್ಬಂದಿ ಬಿಡಲಿಲ್ಲ. ನೀವು ಹುಲಿಯನ್ನು ಹೊಡೆದರೆ ನಾವು ನಿಮ್ಮನ್ನೇ ಹೊಡೆದು ಹಾಕುತ್ತೇವೆ ಎಂದು ಫಾರೆಸ್ಟ್ ಗಾರ್ಡುಗಳು ಹೆದರಿಸಿ ಅಪ್ಪನನ್ನು ವಾಪಸ್ ಕಳಿಸಿದ್ದರಂತೆ !

ತಾತನದು ಮಾತ್ರ ಸಾಧನೆಗೆ ಸಂದ ಪ್ರಶಸ್ತಿ. ತಾನು ಸಹ ಏನಾದರೂ ಸಾಧನೆ ಮಾಡಿ ಒಂದು ಫೋಟೋ ಹೊಡೆಸಿಕೊಳ್ಳಲೇಬೇಕು ಎಂದು ವಿಶ್ವ ಯೋಚಿಸುತ್ತಿರುವಾಗ ಅವನಿಗೆ ಒಂದು ಆಫರ್ ಬಂದಿತ್ತು. ನವದೆಹಲಿಯ ಯಾವುದೋ ಗಲ್ಲಿಯ ಒಂದು ಬಿಲ್ಲಿ ಸಂಸ್ಥೆ ವಿಶ್ವನ ಕವನವನ್ನ ತಾನೇ ಕೇಳಿಪಡೆದು ಅದಕ್ಕೆ ಬಹುಮಾನ ನೀಡಿ ಪ್ರಶಸ್ತಿ ಘೋಷಿಸಿತ್ತು.

ಇಂತಿಷ್ಟು ಹಣವನ್ನು ಗೂಗಲ್ ಆಂಟಿ ಮೂಲಕ ಕಳಿಸಿದರೆ ನಿಮ್ಮ ಫೋಟೋ ಇರುವ ಪ್ರಶಸ್ತಿ ಪತ್ರ ಕೊರಿಯರಿನಲ್ಲಿ ಕಳಿಸಿಕೊಡುತ್ತೇವೆ ಎಂಬ ಸಂದೇಶವೂ ಬಂದಿತ್ತು. ಈ ವಿಷಯವನ್ನು ವಿಶ್ವ ಖುಷಿಯಿಂದ ನನ್ನ ಜೊತೆ ಹಂಚಿಕೊಂಡ. ಎಂದೂ ಏನೂ ಬರೆಯದ ವಿಶ್ವ ಅಂದೇಕೆ ಗ್ರಹಚಾರ ತಪ್ಪಿ ಕವನ ಬರೆದ ಎಂಬುದೇ ಗೊತ್ತಾಗಲಿಲ್ಲ. ಕಂಪ್ಯೂಟರಿನಲ್ಲಿದ್ದ ಸಾಮಾಜಿಕ ಜಾಲತಾಣಗಳನ್ನು ಸರ್ಫ್ ಮಾಡುತ್ತಿದ್ದಾಗ `ನೀವು ಕವಿಗಳೇ? ನಿಮಗೆ ಪ್ರಶಸ್ತಿ ಬೇಕೆ? ಹಾಗಿದ್ದರೆ ಕವನ ಕಳಿಸಿ ಪ್ರಶಸ್ತಿ ಗಳಿಸಿ' ಎಂಬ ಆಕರ್ಷಕ ಜಾಹೀರಾತು ಅವನು ಕಂಡಿದ್ದ.

ಪ್ರಚಲಿತ ವಿಷಯದ ಬಗ್ಗೆ ಕವನ ಬರೆಯಲು ತಲೆಯೆತ್ತಿ ಸೂರು ನೋಡಿದ. ಕಿಟಕಿ ಆಚೆ ಕಣ್ಣು ಹಾಯಿಸಿದ. ಮಾಸ್ಕ್ ಧರಿಸಿದ ಜನ ಓಡಾಡುತ್ತಿದ್ದರು. ಸಾಮಾಜಿಕ ಅಂತರಗಳ ಬಗ್ಗೆ ಟೀವಿಯಲ್ಲಿ ನಿರಂತರ ಚರ್ಚೆ ನಡೆದಿತ್ತು. ಕರೋನ ಬಗ್ಗೆ ಸಲೀಸಾಗಿ ಒಂದು ಕವನ ಹೊಮ್ಮಿತು. ಆ ಕವನವನ್ನು ವಿಶ್ವ ವಾಚಿಸಿದ.

`ಗೋ ಕರೋನ ಗೋ' ಎಂಬ ಟೈಟಲ್ ಕವನವನ್ನು ಕವಿಗೋಷ್ಠಿಯ ಶೈಲಿಯಲ್ಲಿ ಓದಿದ.

*ಗೋ ಕರೋನ ಗೋ
ನೀನು ಯಾಕಾದರೂ ಬರೋಣ
ವೃಥಾ ದಾಳಿ ಮಾಡೋಣ
ಅಮಾಯಕ ಜನ ಸಾಯೋಣ
ಚಿತಾಗಾರದಲ್ಲಿ ಕಾಯೋಣ
ಅವ್ಯವಸ್ಥೆಗೆ ಬೈಯೋಣ
ಇವೆಲ್ಲ ಬೇಡ ಕರೋನ
ಗೋ ಕರೋನ ಗೋ ...

ವಿಶ್ವ ಕವನ ಓದಿ ಹೆಮ್ಮೆಯಿಂದ ನನ್ನ ಮುಖ ನೋಡಿದ. ನಾನು ಕಿಟಕಿಯಾಚೆ ನೋಡಿದೆ. ಹೊರಗೆ ಧುಮುಕಲು ಸರಳುಗಳು ಅಡ್ಡ ಇದ್ದವು.

`ಹೇಗಿದೆ?' ಎಂದ.

`ಕರೋನ ಈ ಪದ್ಯವನ್ನು ಕೇಳಿಸಿಕೊಂಡಿದ್ದಿದ್ದರೆ ತಾನೇ ಓಡಿ ಹೋಗುತ್ತಿತ್ತು' ಎಂದೆ. ನನ್ನ ಮಾತಿನಲ್ಲಿದ್ದ ವ್ಯಂಗ್ಯ ಅವನಿಗೆ ಅರ್ಥವಾಗಲಿಲ್ಲ. ಥ್ಯಾಂಕ್ಯೂ ಎನ್ನುತ್ತಾ ಅದೇ ಕವನಕ್ಕೆ ನವದೆಹಲಿಯ ಬಹುಮಾನ ಬಂದಿರುವುದಾಗಿ ಹೇಳಿದ. ಹದಿನೈದು ಸಾವಿರ ರೂಪಾಯಿ ನಾನು ಗೂಗಲ್ ಪೇನಲ್ಲಿ ಕಳಿಸಿದರೆ ನನ್ನ ಫೋಟೋ ಇರುವ ರಾಷ್ಟ್ರೀಯ ಪ್ರಶಸ್ತಿ ಕೊಡುತ್ತಾರಂತೆ. ಅದನ್ನು ಬ್ಲೋ ಅಪ್ ಮಾಡಿ ಈ ಗೋಡೆಗೆ ಹಾಕುತ್ತೇನೆ ಎಂದು ಉತ್ತರ ದಿಕ್ಕಲ್ಲಿ ಕಾದಿರಿಸಿದ್ದ ಖಾಲಿ ಗೋಡೆ ತೋರಿಸಿದ. ದಕ್ಷಿಣಕ್ಕೆ ತಾತ, ಉತ್ತರಕ್ಕೆ ವಿಶ್ವ!

ಹಣ ಕೊಟ್ಟು ಪ್ರಶಸ್ತಿ ಪಡೆಯುವುದಾ? ಇದೆಂಥ ಹುಚ್ಚು ಎನ್ನಿಸಿತು. ಆ ಸಂಸ್ಥೆಯ ಹೆಸರೇ ನಾನು ಕೇಳಿರಲಿಲ್ಲ. ಅವನಿಗೂ ಗೊತ್ತಿರಲಿಲ್ಲ. ಗೂಗಲ್ನಲ್ಲಿ ತಡಕಾಡಿದರೂ ವಿಳಾಸ ಪತ್ತೆ ಆಗದೆ ಎರರ್ ಕಾಣಿಸಿ ಟ್ರೈ ಟುಮಾರೋ ಎಂದು ಬಂತು. `ದೆಹಲಿ ಪ್ರೈಜ್'  ಎಂದು ಮತ್ತೆ ಮತ್ತೆ ಹಾಕಿದಾಗ `ದಂಡುಪಾಳ್ಯ' ತೋರಿಸಿತು. ಬರೀ ಈಮೇಲು, ಮೆಸೇಜುಗಳಲ್ಲೇ ಪ್ರಶಸ್ತಿಯ ವ್ಯವಹಾರ!

1980ರಲ್ಲಿ ನನಗೆ ದೆಹಲಿಯಿಂದ ಯಾವುದೋ ಸಂಸ್ಥೆ ಇದೇ ರೀತಿಯ ಆಮಿಷ ಒಡ್ಡಿತ್ತು. ನನ್ನ `ಸ್ವಯಂವಧು' ಕೃತಿಗೆ ಅಕಾಡೆಮಿ ಪುಸ್ತಕ ಬಹುಮಾನ ಬಂದಿರುವುದು ಅವರಿಗೆ ತಿಳಿದು ಅದನ್ನ ಉಲ್ಲೇಖಿಸಿ ಬರೆದಿದ್ದರು.

`ನಿಮ್ಮ ಸಾಹಿತ್ಯ ಸೇವೆ ಶ್ಲಾಘನೀಯ. ನೀವು ದೆಹಲಿಗೆ ಬಂದು ನಮ್ಮಿಂದ ಆತಿಥ್ಯ ಸನ್ಮಾನ ಸ್ವೀಕರಿಸಬೇಕು.   ನೀವು ಹೋಗಿ ಬರಲು ರೈಲು ಖರ್ಚು ನೀಡುತ್ತೇವೆ. ಸ್ಟಾರ್ ಹೋಟೆಲ್ನಲ್ಲಿ ನಿಮಗೆ ಮೂರು ದಿನಗಳ ವಾಸ್ತವ್ಯ' ಎಂದೆಲ್ಲ ಬರೆದಿದ್ದರು. ನನಗೆ ಖುಷಿಯಾಯಿತು. ಮೊಬೈಲ್ ಫೋನ್ ಇಲ್ಲದ ಕಾಲವದು. ಬರೀ ಪತ್ರ ವ್ಯವಹಾರ. ಮಾಲೂರಿನಲ್ಲಿರುವ ನನಗೆ ನವದೆಹಲಿಯಿಂದ ಯಾರೋ ಪತ್ರ ಬರೆದು ಸನ್ಮಾನ ಮಾಡುತ್ತೇವೆಂದರೆ ಆನಂದವಾಗಲೇಬೇಕು. ಆ ಪ್ರಶಸ್ತಿಯ ಇತರೆ ವಿವರಗಳನ್ನು ತಿಳಿದಾಗ ನಾನು ತಬ್ಬಿಬ್ಬಾಗಿದ್ದೆ.

`ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಸಮಾರಂಭ ಇರುತ್ತದೆ. ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಿ ಪ್ರಶಸ್ತಿ ನೀಡಲಾಗುವುದು. ಒಟ್ಟು 25 ಜನರನ್ನು ಮಾತ್ರ ಆಯ್ಕೆ ಮಾಡಿದ್ದೇವೆ. ಪ್ರಶಸ್ತಿ ವಿಜೇತರಿಗೆ ಇಂದಿರಾಗಾಂಧಿಯವರನ್ನು ನಾವೇ ಭೇಟಿ ಮಾಡಿಸುತ್ತೇವೆ. ಅವರ ಜೊತೆ ಗ್ರೂಪ್ ಫೋಟೋಗೆ ಅವಕಾಶ ಇರುತ್ತದೆ. ಇದೊಂದು ಸುವರ್ಣ ಅವಕಾಶ!'

ಆ ಕಾಲದಲ್ಲಿ ದೆಹಲಿಗೆ ಹೋಗುವ ಪ್ರವಾಸಿಗರೆಲ್ಲ ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿ ಫೋಟೋ ತೆಗೆಸಿಕೊಳ್ಳುವುದು ಹೆಮ್ಮೆಯ ವಿಷಯ ಮತ್ತು ಪ್ರಮುಖ ಆಕರ್ಷಣೆ ಆಗಿತ್ತು. ನಾನು ಒಪ್ಪಿದೆ. ದೆಹಲಿಯಿಂದ ಮತ್ತೊಂದು ಪತ್ರ ಬಂತು. ಅವರು ಹತ್ತು ಸಾವಿರ ರೂಪಾಯಿಗೆ ಡಿಮ್ಯಾಂಡ್ ಡ್ರಾಫ್ಟ್ ಕಳಿಸಿಕೊಡಿ, ಉಳಿದೆಲ್ಲ ವ್ಯವಸ್ಥೆ ನಾವೇ ಮಾಡುತ್ತೇವೆ ಎಂದಾಗ ನನಗೆ ಗಾಬರಿಯಾಯಿತು. ಬ್ಯಾಂಕ್ ಮ್ಯಾನೇಜರ್ ಆಗಿದ್ದ ನನಗೆ ಆಗ ಬರುತ್ತಿದ್ದ ಸಂಬಳ ಕೇವಲ ಒಂದು ಸಾವಿರ ರೂಪಾಯಿ ಮಾತ್ರ. ಹತ್ತು ಸಾವಿರ ಎಲ್ಲಿಂದ ತರೋಣ ಎಂದು ಸುಮ್ಮನಾದೆ. ಅನಂತರ ಗೊತ್ತಾದ ವಿಷಯವೆಂದರೆ ಸನ್ಮಾನ ಮಾಡಲು ಹುಟ್ಟಿಕೊಂಡಿರುವ ಆ ಸಂಸ್ಥೆ ಹಣ ಕೊಟ್ಟವರಿಗೆಲ್ಲ ಪ್ರಶಸ್ತಿ ಕೊಡುತ್ತದೆ ಎಂಬುದು!

ಹತ್ತು ವರ್ಷಗಳ ಹಿಂದೆ ಹಾಸ್ಯ ಕಾರ್ಯಕ್ರಮ ನೀಡಲು ನಾನು ಅಮೆರಿಕಕ್ಕೆ ಹೋಗಿದ್ದಾಗ ಯಾವುದೋ ಯೂನಿವರ್ಸಿಟಿಯ ಮುಂದೆ ನಮ್ಮ ಪ್ರವಾಸಿ ಬಸ್ಸನ್ನು ಉಪಹಾರಕ್ಕಾಗಿ ನಿಲ್ಲಿಸಿದ್ದರು.

`ಇಲ್ಲಿ ಒಂದು ಗಂಟೆ ಕಾಲ ಬಸ್ ನಿಲ್ಲಿಸಲಾಗುತ್ತದೆ. ಎದುರುಗಡೆ ಯೂನಿವರ್ಸಿಟಿ ಇದೆ. ಯಾರಾದರೂ ಡಾಕ್ಟರೇಟ್ ಕೊಂಡುಕೊಳ್ಳು ವವರಿದ್ದರೆ ಬೇಗ ಮುಗಿಸಿ, ವಿಂಟರ್ ಸೀಸನ್ ಡಿಸ್ಕೌಂಟ್ ಸಹ ಇದೆ' ಎಂದು ನಮ್ಮ ಗೈಡ್ ನಗುತ್ತಾ ಹೇಳಿದ್ದು ನನಗೆ ಲೇಖನಕ್ಕೆ ಗ್ರಾಸವಾಗಿತ್ತು.

ಒಂದು ಸಾವಿರ ಡಾಲರ್ ಕೊಟ್ಟರೆ ಡಾಕ್ಟರೇಟ್ ಕೊಡುವ ವ್ಯವಸ್ಥೆ ಅಲ್ಲಿತ್ತು. ಈಗಲೂ ಅಂಥ ಯೂನಿವರ್ಸಿಟಿಗಳು ವಿದೇಶದಲ್ಲಿವೆ. ಡೊನೇಷನ್ ಪಡೆದು ಡಾಕ್ಟರೇಟ್ ಕೊಡುತ್ತಾರೆ. ನಿಮ್ಮ ಫೋಟೋ ಕೊಟ್ಟರೆ ಸಾಕು, ನೀವು ಡಾಕ್ಟರೇಟ್ ಪಡೆಯುತ್ತಾ ಕಪ್ಪು ಲಾಂಗ್ ಕೋಟಿನಲ್ಲಿ ನಿಂತಿರುವ ಫೋಸು! ನಿಮ್ಮ ಮುಖವನ್ನು ಯಾರಿಗೋ ಜೋಡಿಸಿ ಸುಂದರ ಫೋಟೋ ಕ್ರಾಪ್ ಮಾಡಿ ಕಳಿಸುತ್ತಾರೆ.

ಇಷ್ಟೆಲ್ಲ ಹೇಳಿದ ಮೇಲೆ ವಿಶ್ವನಿಗೆ ಜ್ಞಾನೋದಯ ಆಯಿತು. ಕಂಪ್ಯೂಟರೀಕೃತ ಪ್ರಶಸ್ತಿ ಪತ್ರಕ್ಕೆ 15 ಸಾವಿರವೆಂದರೆ ಹಗಲು ದರೋಡೆ ಎನ್ನಿಸಿ ಬೇಡ ಎಂದು ಕೈ ಚೆಲ್ಲಿದ.

ಈ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಯಾರೋ ಕಿಟಕಿ ಪಕ್ಕ ಹೋದಂತಾಯಿತು. `ಕರೋನ' ಇರಬಹುದೇ ಎಂಬ ಅನುಮಾನ ಬಂತು.

ಅಷ್ಟರಲ್ಲಿ ಕೋಮಲ ಕಂಠದಲ್ಲಿ ಅಶರೀರವಾಣಿ: `ನನ್ನ ಬಗ್ಗೆ ಥೀಸಿಸ್ ಬರೆಯಿರಿ. ಖಂಡಿತ ಡಾಕ್ಟರೇಟ್ ಸಿಗುತ್ತದೆ!'


ವಿಶ್ವನ ಮಡದಿ ವಿಶಾಲೂ ಮಾಡಿದ ಚೇಷ್ಟೆಯದು ಎಂದು ಯಾರಿಗೂ ತಿಳಿಯಲೇ ಇಲ್ಲ !

ಪುಸ್ತಕ ಪರಿಚಯ

‘ಕಾಲಕೋಶ’ದ ಸುತ್ತ ಒಂದು ನೋಟ

– ಡಾ.ಜಯಂತಿ ಮನೋಹರ್

ಶಶಿಧರ ಹಾಲಾಡಿಯವರ ವಿಶಿಷ್ಟ ಹೊತ್ತಿಗೆ, ‘ಕಾಲಕೋಶ’ ತನ್ನ ಅರ್ಥಗರ್ಭಿತ ಹೆಸರಿನಿಂದಲೇ ಓದುಗರನ್ನು ಸೆಳೆಯುತ್ತದೆ. ನಮ್ಮ ಅರಿವಿಗೆ ನೇರವಾಗಿ ಬಂದ, ಕೇಳಿ, ಓದಿ ತಿಳಿದ ಸಂಗತಿಗಳು ಕಾಲ ಗತಿಸಿದಂತೆಯೇ ಮನಸ್ಸಿನ ಆಳದ ಕೋಶದಲ್ಲಿ ಹುದುಗಿ ಹೋಗುವುದು ಹಲವೊಮ್ಮೆ ಪ್ರಜ್ಞಾಪೂರ್ವಕವಾಗಿಯೇ ನಡೆಯುತ್ತದೆ. ನಿಜ ಜೀವನದ ಆಗು ಹೋಗುಗಳೂ ಅಂತೆಯೇ ನೆನಪಿನ ಮೇಲ್ಪದರದಿಂದ ಮರೆಯಾಗಿ ಆಗೊಮ್ಮೆ ಈಗೊಮ್ಮೆ ಮೇಲೆ ಬಂದು ಸುಖವೋ ದುಃಖವೋ ಮರುಕಳಿಸುವುದು ಸಾಮಾನ್ಯವಾದ ಅನುಭವ.



‘ಕಾಲಕೋಶ’ ನನ್ನ ಕೈಸೇರಿದ ಕೂಡಲೇ ಪೂರ್ಣವಾಗಿ ಅದರಲ್ಲಿ ಮುಳುಗಿಹೋದ ಮನಸ್ಸು ಅಲ್ಲಿ ಅವರು ಹೇಳಿರುವ ಹಾಗೂ ಹೇಳದಿರುವ ದುರಂತಗಳನ್ನು ಸಾಲುಸಾಲಾಗಿ ಮುಂದೆ ತಂದು ನಿಲ್ಲಿಸಿತು. ಸ್ವಾರ್ಥ ಸಾಧನೆಗಾಗಿ/ದ್ವೇಷ ಅಸೂಯೆಗಳಿಂದಾಗಿ/ ಮತಾಂಧತೆಯ ದಳ್ಳುರಿಯಲ್ಲಿ ಹಲವಾರು ಮೂಲ ಜನಾಂಗಗಳು ನಿರ್ನಾಮವಾಗಿರುವುದು ಜಗತ್ತಿನ ಇತಿಹಾಸದುದ್ದಕ್ಕೂ ಕಾಣುತ್ತದೆ. ಇನ್ನು ಹಲವಡೆ ತಮ್ಮ ಮೂಲ ನೆಲೆಯನ್ನು ಬಿಟ್ಟು ಬೇರೆಲ್ಲೋ ಬದುಕು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಗದವರ ಬವಣೆ ಪ್ರಪಂಚದೆಲ್ಲಡೆ ಕಾಣುತ್ತದೆ. ಈ ದಿಸೆಯಲ್ಲಿ ಜಾಗತಿಕವಾಗಿ ಯಹೂದಿಯರು ಕಂಡರೆ, ನಮ್ಮ ದೇಶದಲ್ಲಿ ನಮ್ಮವರೇ ಆದ ಕಾಶ್ಮೀರಿಗಳ ಮೇಲೆ, ಸಿಖ್ ಜನಾಂಗದವರ ಮೇಲಾದ ದೌರ್ಜನ್ಯಗಳು ದೂರದ ದಕ್ಷಿಣದಲ್ಲಿರುವ ನಮಗೆ ಅಷ್ಟಾಗಿ ತಟ್ಟಿಲ್ಲ ಎಂದೇ ಹೇಳಬೇಕಾಗುತ್ತದೆ.

ಹಾಲಾಡಿಯವರು, ನಮ್ಮ ಪಕ್ಕದಲ್ಲಿಯೇ ನಡೆದುಹೋದ ಕಾಡುಗಳ್ಳ ವೀರಪ್ಪನ್ ನಿಂದ ಅಮಾಯಕ ಜನರ ಮೇಲಾದ ದೌರ್ಜನ್ಯ ದೊಂದಿಗೆ, ದೇಶ ವಿಭಜನೆ, ಮಹಾತ್ಮ ಗಾಂಧೀಜಿ ಹಾಗೂ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಗಳು ಸೃಷ್ಟಿಸಿದ ಘೋರ ಪರಿಣಾಮಗಳನ್ನು ಕಾಲಕೋಶದ ಆವರಣದಿಂದ ಮೇಲೆತ್ತಿ ತಂದು, ಮುಂದೆ ನಿಲ್ಲಿಸಿ, ನಮ್ಮ ಸಾಕ್ಷಿ ಪ್ರಜ್ಞೆಯನ್ನು ಬಡಿದೆಬ್ಬಿಸುತ್ತಾರೆ.

ನಮಗೆ ಸ್ವಾತಂತ್ರ್ಯ ದೊರೆತ ಕಾಲದಲ್ಲಿ ನಡೆದ ದೇಶ ವಿಭಜನೆಯ ದುರಂತ ಹೊತ್ತಿಸಿದ ಮತಾಂಧತೆಯ ದ್ವೇಷದ ದಳ್ಳುರಿಯಲ್ಲಿ ಪಾಕಿಸ್ತಾನಕ್ಕೆ ಸೇರಿಹೋದ ಭಾಗದಲ್ಲಿದ್ದ ಲಕ್ಷಾಂತರ ಜನರ ಜೀವನ ಬೆಂದುಹೋಯಿತು. ಅಂದು ನಿರಾಶ್ರಿತನಾಗಿ ಬಂದು ದಿಲ್ಲಿಯ ತ್ರಿಲೋಕಪುರಿಯಲ್ಲಿ ನೆಲೆಸಿರುವ ಅಮರಸಿಂಗ್ ಹೇಳುವ ನೇರ ಕಥನದಲ್ಲಿ ಅವರ ಸಂಘರ್ಷದ ಬದುಕಿನ ಪುಟಗಳು ತೆರೆಯುತ್ತವೆ.

ಆ ವಿಷಮ ಪರಿಸ್ಥಿತಿಯಲ್ಲಿ, ಅಮರ ಸಿಂಗ್ ಜೀವ ಉಳಿಸಿಕೊಳ್ಳಲು ಅಲ್ಲಿದ್ದ ತನ್ನೆಲ್ಲಾ ಸಂಪತ್ತನ್ನು ಬಿಟ್ಟು ಹೊರಟಿದ್ದು ಅಮೃತಸರಕ್ಕಾದರೂ ಅನಿವಾರ್ಯವಾಗಿ ಬಂದು.ಸೇರುವುದು ದೆಹಲಿಗೆ. ಅಲ್ಲೇನೂ ಅವರಿಗೆ ಸ್ವಾಗತ ಸಿಗಲಿಲ್ಲ. ಅವರು ತಂಗಿದ್ದ ತಾತ್ಕಾಲಿಕ ಶಿಬಿರಗಳ ಮೇಲೆ ನಡೆದ ಆಕ್ರಮಣ, ದೊಂಬಿಗಳ ನಡುವೆ ಅವರ ಚಿಕ್ಕ ವಯಸ್ಸಿನ ಮಗ ಕಳೆದುಹೋಗುತ್ತಾನೆ. ಮಗನನ್ನು ಹುಡುಕುವುದಾಗಲೀ ಅಥವಾ ಅವನಿಗಾಗಿ ಅಲ್ಲಿಯೇ ಕಾಯುವುದಾಗಲೀ ಸಾಧ್ಯವಾಗದ ದುರ್ಭರ ಪರಿಸ್ಥಿತಿ ಮನಕಲಕುವಂತಹುದು. ಎಂದೋ ಕಳೆದುಹೋದ ಮಗನಿಗಾಗಿ ಕಾಯುತ್ತಲೇ ಇರುವ ಅಮರಸಿಂಗನ ಪತ್ನಿ ರಜನಿ ಸಿಂಗ್ ಆ ವಯಸ್ಸಿನ ಯಾವುದೇ ಯುವಕ ಕಂಡರೂ ಆಸೆ-ನಿರಾಶೆಗಳಲ್ಲಿ ವಿಹ್ವಲಳಾಗುವುದು ಓದುಗರನ್ನು ಆರ್ದ್ರವಾಗಿಸುತ್ತದೆ. ಆ ರೀತಿ, ಕರುಳ ಕುಡಿಯನ್ನು ಕಳೆದುಕೊಂಡು ನಿರಂತರ ಶೋಕ, ಹುಡುಕಾಟಗಳಲ್ಲಿ ಮುಳುಗಿರುವ ಅಂತಹ ನೂರಾರು ಕುಟುಂಬಗಳ ವ್ಯಥೆಯ ಕಥೆ ಅದು.

ನಿಧಾನವಾಗಿ ಒಂದು ಸೂರು ದೊರೆತು ಸಂಘರ್ಷಗಳೊಡನೆಯೇ ಬದುಕು ಕಟ್ಟಿಕೊಂಡರೂ ಅಮರ ಸಿಂಗನನ್ನು ತನ್ನ ಹುಟ್ಟಿದ ಊರಿನ ನೆನಪು ಕಾಡುತ್ತದೆ. ಅವನಂತೆಯೇ ರಕ್ಷಣೆಯನ್ನು ಅರಸಿ ದೆಹಲಿಗೆ ಬಂದ ಸಾವಿರಾರು ನಿರಾಶ್ರಿತರಿಗೆ ಅಲ್ಲಿನ ಮೂಲನಿವಾಸಿಗಳು ಎಂದುಕೊಳ್ಳುವವರು ತೋರಿಸುವ ಅಸಹನೆಯಿಂದಾಗಿ, ತಮ್ಮದೆನಿಸುವಂತಹ ವಾತಾವರಣ ಅಲ್ಲಿಲ್ಲ ಎನ್ನುವ ಕೊರಗಿರುವುದನ್ನು ಲೇಖಕರು ಗುರುತಿಸುತ್ತಾರೆ.

ಆದರೆ, ಅದರ ಫಲಶ್ರುತಿಯಾಗಿಯೇ, ಸ್ವರ್ಣಮಂದಿರದಲ್ಲಿ, ಪ್ರತ್ಯೇಕ ರಾಜ್ಯಕ್ಕಾಗಿ ಬಂದೂಕು ಹಿಡಿದು ಕುಳಿತದ್ದನ್ನು ಸಮರ್ಥಿಸುತ್ತಾ, ಅಮರ ಸಿಂಗ್ ಹೇಳುವ ಮಾರ್ಮಿಕವಾದ ಮಾತು (ಪುಟ. ೧೪೮) ಗಾಭರಿ ಹುಟ್ಟಿಸುತ್ತದೆ. ಕ್ರೌರ್ಯಕ್ಕೆ ಬದಲು ಕ್ರೌರ್ಯವೇ ಉತ್ತರವಾದರೆ ಅದರ ಕೊನೆಯಾಗುವುದು ಎಂದು? ಸ್ವರ್ಣಮಂದಿರವನ್ನು ತೆರವುಗೊಳಿಸಲು ಅಂದಿನ ಪ್ರಧಾನಿ ತೆಗೆದುಕೊಂಡ ನಿರ್ಧಾರವನ್ನು ಅನೇಕ ವಿಚಾರವಂತರು/ಸುದ್ದಿ ಮಾಧ್ಯಮಗಳು ಸಮರ್ಥಿಸಿದರೂ, ಅದರ ಫಲಶ್ರುತಿಯಾಗಿ ಅವರ ಹತ್ಯೆಯೇ ನಡೆದುಹೋಯಿತಲ್ಲ!

ಇಂದಿರಾ ಗಾಂಧಿಯ ಹತ್ಯೆಯಾದ ಮೇಲೆ ಅಲ್ಲಿ ಸಿಖ್ಖರ ಮೇಲೆ ನಡೆದ ಮಾರಣ ಹೋಮದ ಪುಟ 'ಕಾಲಕೋಶ'ದಲ್ಲಿ ತೆರೆದುಕೊಳ್ಳುತ್ತದೆ. ಅಂದು ೨-೩ ದಿನಗಳು ಬೇಕೆಂದೇ ಮಿಲಿಟರಿ ಸಹಾಯವನ್ನು ಪಡೆಯದೆ ರಾಜಕೀಯ ಧುರೀಣರು ತೀರಿಸಿಕೊಂಡ ಹಗೆಯ ಸ್ವರೂಪದ ಭೀಕರತೆಯ ನಡುವೆಯೇ, ಸಹೋದ್ಯೋಗಿ ಆಪ್ಟೆಯ ಮನೆಯ ಕೌಟಂಬಿಕ ವಾತಾವರಣದಲ್ಲಿ ಕಥಾನಾಯಕ ಒಂದಷ್ಟು ನೆಮ್ಮದಿಯನ್ನು ಕಾಣುತ್ತಾನೆ. ಆಪ್ಟೆಯವರ ಮಗಳು ಚಂದ್ರಿಕಳೊಂದಿಗೆ ಬೆಳೆದ ಸ್ನೇಹ ವಿವಾಹದವರೆಗೂ ಹೋಗುವ ಒಂದು ನವಿರಾದ ಎಳೆ ಓದುಗರಿಗೆ ಆಪ್ಯಾಯವೆನಿಸುತ್ತದೆ. ಗಂಭೀರ ವಿಷಯದ ಮಧ್ಯೆ ಹಾಲಾಡಿಯವರು ನಿರ್ಮಿಸಿಕೊಂಡಿರುವ ಇಂತಹ ಚೇತೋಹಾರಿ ತಂತ್ರ ಪರಿಣಾಮಕಾರಿ.

ಮಹಾತ್ಮ ಗಾಂಧಿಯ ಹತ್ಯೆಯಾದ ತರುಣದಲ್ಲಿ ನಡೆದ, ಅಂದು ಅಷ್ಟಾಗಿ ಪ್ರಮುಖ ಸುದ್ದಿಯಾಗದ ವಿಷಾದಕರ ಸಂಗತಿ ಅಲ್ಲಿ ಆಪ್ಟೆಯವರಿಂದ ಹೊರಬರುತ್ತದೆ. ಅದು, 'ಗೋಡ್ಸೆ' ಎಂಬ ಮನೆತನದ ಹೆಸರಿದ್ದವರು ರಾಜಕೀಯ ಕುಮ್ಮಕ್ಕಿನಿಂದಾಗಿ ಗೂಂಡಾಗಳಿಂದ ಜೀವ ಕಳೆದುಕೊಂಡ ಕರುಣಾರ್ದ್ರ ಕಥಾನಕ. ಅದರಿಂದಾಗಿ ಹಲವರು ಮಹಾರಾಷ್ಟ್ರದಲ್ಲಿದ್ದ ತಮ್ಮ ಹುಟ್ಟೂರನ್ನು ತೊರೆದು, ಮನೆತನದ

ಹೆಸರನ್ನೇ ಬದಲಾಯಿಸಿಕೊಂಡು ಬದುಕಬೇಕಾಯಿತು. ಅಂತಹ ಅಮಾಯಕರ ನೋವು ನಮ್ಮ ಮನಸ್ಸನ್ನು ತಟ್ಟುವುದರ ಜೊತೆಗೆ, ಗಾಂಧಿ ಹತ್ಯೆಯಾದ ಸಮಯದಲ್ಲಿ ತನಿಖೆಯಲ್ಲಾದ ಲೋಪದೋಷಗಳ ಹಿಂದೆ ಇದ್ದಿರಬಹುದಾದ ದೊಡ್ಡವರ ಹುನ್ನಾರಗಳತ್ತ ನಮ್ಮ ಗಮನವನ್ನು ಸೆಳೆಯುತ್ತದೆ ಹಾಲಾಡಿಯವರ 'ಕಾಲಕೋಶ'.

ಅಲ್ಲೇ ಹೊರಬರುವ ಬರ್ಮಾದಿಂದ ರತ್ನಗಿರಿಯವರೆಗೆ ಹರಡಿರುವ ಇತಿಹಾಸದಂತೆ ಕಾಲಾಂತರದಲ್ಲಿ ಮರೆಯಾಗಿ ಹೋಗಿರುವ ವಿಚಾರಗಳತ್ತ ಈಗಲಾದರೂ ಸಂಶೋಧನೆ ನಡೆದು ದಾಖಲಿಸಬೇಕು ಎನಿಸುತ್ತದೆ. ಯಾವುದೇ ಕಾಲಘಟ್ಟದಲ್ಲಿ ರಚಿತವಾದ ಕೃತಿಯಾದರೂ ಅದರಲ್ಲಿ ಆ ಸಮಯದ ವಿದ್ಯಮಾನಗಳೊಂದಿಗೆ ಹಿಂದಿನದನ್ನು ತಿಳಿಯುವ ಪ್ರಚೋದನೆ ಸಿಕ್ಕಾಗ ಅದು ಬಹುಕಾಲ ನಿಲ್ಲಬಲ್ಲದು.

'ಕಾಲಕೋಶ'ದಲ್ಲಿ, ೧೯೪೭ರಿಂದ ೧೯೮೪ರವರೆಗೂ ಹರಡಿರುವ ಕಥಾನಕದ ವಿಶಾಲ ಹರವಿನಲ್ಲಿ ಎದ್ದು ಕಾಣುವುದು ದೌರ್ಜನ್ಯಕ್ಕೊಳಗಾದ, ನೆಲೆ ತಪ್ಪಿದ ಅಮಾಯಕ ಜನರು ಬೇರೆಡೆ ಗುಳೆ ಹೋಗಿ ಅನುಭವಿಸುವ ಕಷ್ಟ ಕೋಟಲೆಗಳು. ಕಾಡುಗಳ್ಳ ವೀರಪ್ಪನ್‌ನಿಂದ ದೌರ್ಜನ್ಯಕ್ಕೊಳಗಾಗಿ ತಮ್ಮ ಪೂರ್ವಿಕರ ನೆಲೆಯಿಂದ ಹೊರಬರಬೇಕಾದ ಅನಿವಾರ್ಯ ಪರಿಸ್ಥಿತಿಗೆ ಒಳಗಾದ ಕಥಾನಾಯಕನ ಕುಟುಂಬದ ಚಿತ್ರಣದಿಂದಲೇ 'ಕಾಲಕೋಶ'ದ ಪಯಣ ಪ್ರಾರಂಭವಾಗುತ್ತದೆ.

ಹಲವಾರು ಆಕ್ರಮಣಕಾರೀ ವಸಾಹತುಶಾಹಿಗಳಿಂದ ಭಾರತದ ಮೇಲಾದ ದೌರ್ಜನ್ಯದ ಇತಿಹಾಸದ ಬಹಳಷ್ಟು ಭಾಗ ಇನ್ನೂ ಕತ್ತಲಲ್ಲಿಯೇ ಉಳಿದಿದೆ. ಸ್ವಾರ್ಥ ಸಾಧನೆಗಾಗಿ ಬ್ರಿಟಿಷರ ದೃಷ್ಟಿಯಿಂದ ರಚಿತವಾದ ಕಪೋಲಕಲ್ಪಿತ ವಿಚಾರಗಳು ನಮ್ಮ ಇತಿಹಾಸದ ಪಠ್ಯದಲ್ಲಿ ತುಂಬಿಹೋಗಿರುವುದನ್ನು ಹಾಲಾಡಿಯವರು ಪ್ರಸ್ತಾಪಿಸುತ್ತಾರೆ. ಅದರೊಂದಿಗೇ, ಸ್ವಾತಂತ್ರ್ಯೋತ್ತರದ ಇತಿಹಾಸದ ಹಲವು ಪುಟಗಳೂ ರಾಜಕೀಯ ಕೈವಾಡದಿಂದ ಕಣ್ಮರೆಯಾಗಿಹೋಗಿವೆ ಎನಿಸುತ್ತಾ, ಮಹಾತ್ಮ ಗಾಂಧಿಯ ಹತ್ಯೆಯ ವಿಚಾರದಲ್ಲಿ ಹಾಗೂ ಸುಭಾಷ್ ಚಂದ್ರ ಬೋಸರ ಅಂತ್ಯದ ಸುತ್ತ ಆವರಿಸಿರುವ ಗೋಪ್ಯತೆಯ ಕವಚ ಕಳಚುವುದು ಎಂದು?

ಕೇಂದ್ರದಲ್ಲಿ ಬೇರೆ ಬೇರೆ ಪಕ್ಷಗಳ ಆಡಳಿತ ಬಂದಾಗ್ಯೂ ಉಳಿದುಹೋಗುವ ಇಂತಹ ಪ್ರಶ್ನೆಗಳಿಗೆ ಎಂದಾದರೂ ಉತ್ತರ ದೊರೆತೀತೇ? ಎಂದು ವಿಷಾದವಾಗುತ್ತದೆ. ಇಂತಹ ಜಿಜ್ಞಾಸೆಗಳನ್ನು ಪ್ರಚೋದಿಸುವ 'ಕಾಲಕೋಶ' ನಿಜಕ್ಕೂ ಉತ್ತಮ ಕೃತಿ. 'ಕಾಲಕೋಶ'ವನ್ನು ಓದುವಾಗ ಮೊದಲಿಗೆ ಮನವನ್ನು ಮುಟ್ಟುವುದು ಶಶಿಧರ ಹಾಲಾಡಿಯವರ ಆಪ್ತ ಬರಹದ ಶೈಲಿ. ಇದು ಅವರ ಮೊದಲ ಕೃತಿಯೇ ಎಂಬ ಸಂಶಯ ಬರುವಂತಹ ಪರಿಣಾಮಕಾರಿ ಕಥಾ ತಂತ್ರಗಳು ಇಲ್ಲಿವೆ. ಯಾವುದನ್ನೂ ಹೆಚ್ಚಾಗಿ ವೈಭವೀಕರಿಸದೆ, ನಾವು ಕೇಳಿ, ಓದಿ ತಿಳಿದಿರುವ ದುರ್ಘಟನೆಗಳ ಸುತ್ತಲಿನ ಒಂದಷ್ಟು ಪರದೆಗಳನ್ನು ಸರಿಸುವ ಜಾಣ್ಮೆ ಇಲ್ಲಿದೆ. ಹಾಗಾಗಿ, ಪತ್ರಕರ್ತರಾಗಿ ಮುಂಚೂಣಿಯಲ್ಲಿರುವ ಸಹೃದಯಿ ಸ್ನೇಹಿತರಿಂದ ನಮ್ಮ ನಿರೀಕ್ಷೆ ಹೆಚ್ಚಾಗಿದೆ.

ಎಲ್ಲರೂ ಅದರಲ್ಲಿಯೂ ಯುವ ಜನಾಂಗದವರು ಓದಬೇಕಾದ ಉತ್ತಮ ಕೃತಿ ಕೊಟ್ಟಿರುವ ಶಶಿಧರ ಹಾಲಾಡಿಯವರಿಗೆ ಧನ್ಯವಾದಗಳು.

ಹರಟೆ

ನಿಮಗೆ ನೆನಪಿದೆಯೇ...

- ಜಿ ವಿ ಅರುಣ

ಪರೀಕ್ಷೆಗೆ ಸಿದ್ಧವಾಗಲು ಓದಿದ್ದು ಎಷ್ಟು ನಮಗೆ ನೆನಪಿನಲ್ಲಿ ಇರುತ್ತದೆ ಎಂದು ಎಲ್ಲರಿಗೂ ಗೊತ್ತು. ಆಗ ಸೂತ್ರಗಳನ್ನು ನೆನಪಿಡಲು ಇಂಗ್ಲಿಷಿನ ಅಕ್ಷರಗಳ ಸಂಕ್ಷಿಪ್ತ ಸಂಕೇತವನ್ನು ಉರು ಹೊಡೆಯುತ್ತಿದ್ದೆವು. ಇಷ್ಟಾದರೂ ಅವು ನಮ್ಮ ನೆನಪಿನಲ್ಲಿ ಉಳಿಯುತ್ತಿರಲಿಲ್ಲ. ನಮ್ಮ ನೆನಪಿಗೆ ಬರುತ್ತಿದ್ದುದು ಒಂದೇ, ಕರ್ಣನಿಗೆ ಪರಶುರಾಮರು ಕೊಟ್ಟ ಶಾಪ. ಆದರೂ ಹೇಗೋ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಬೀಗುತ್ತಿದ್ದೆವು.

ತ್ರಿಜ್ಯಾಮಿತಿಯಲ್ಲಿ ಸೈನ್, ಕಾಸ್, ಟ್ಯಾನ್ ಗಳನ್ನು ನೆನಪಿಡಲು

ಸಂ ಪೀಪಲೆ ಹ್ಯಾವ್
ಕರ್ಲಿ ಬ್ಲಾಕ್ ಹೇರ್
ಟರ್ನ್ಡ್ ಪರ್ಮನೆಂಟ್ಲಿ ಬ್ಲಾಕ್

ಎಂಬಂತಹ ಪದ್ಯಗಳನ್ನು ಉಪಯೋಗಿಸುತ್ತಿದ್ದೆವು. ಅಷ್ಟೇ ಏಕೆ ಯಾವುದೇ ದಿನದ ರಾಹುಕಾಲವನ್ನು ಕಂಡುಹಿಡಿಯಲು "ಮದರ್ ಸಾ ಫಾದರ್ ವೇರಿಂಗ್ ದ ಟರ್ಬನ್ ಸಡನ್ಲೀ" ಎಂಬ ಆಂಗ್ಲ ವಾಕ್ಯದ ಮೊದಲ ಅಕ್ಷರಗಳನ್ನು ನಿರ್ದೇಶಿಸಿಕೊಂಡು ರಾಹುಕಾಲವನ್ನು ಹೇಳುವ ಸುಲಭೋಪಾಯವನ್ನು ಹೇಳಿಕೊಟ್ಟಿದ್ದರು.

ಚಿಕ್ಕಂದಿನಲ್ಲಿ ಕಲಿತ ಈ ತರಹದ ಅನೇಕ ಸಂಕ್ಷಿಪ್ತ ಸಂಕೇತಗಳು ಎಲ್ಲರಲ್ಲೂ ಹುದುಗಿವೆ ಎಂಬುದು ಸರ್ವವಿದಿತ. ಅವುಗಳ ಸಂಖ್ಯೆ ಅವರವರ ಗುರುಗಳ ಪ್ರಭಾವ ಹಾಗೂ ಸ್ವಪ್ರತಿಭೆಗಳ ಮೇಲೆ ಅವಲಂಬಿತವಾಗಿರುತ್ತವೆ. ನಿಮಗೆ ನೆನಪಿಗೆ ಬರುವ ಸಂಕ್ಷಿಪ್ತ ಸಂಕೇತಗಳನ್ನು ದಯವಿಟ್ಟು ನನಗೆ ತಿಳಿಸಿ. ಅವುಗಳನ್ನು ಒಟ್ಟುಗೂಡಿಸಿ ಮುಂದಿನ ಪೀಳಿಗೆಗೆ ದಾಟಿಸೋಣ.

ನೆನಪಿನ ವಿಚಾರಕ್ಕೆ ಬಂದಾಗ ಒಂದು ವಿಷಯ ನನಗೆ ಇದುವರೆವಿಗೆ ಅರ್ಥವಾಗಿಲ್ಲ. "ನೀವು" ಮೊದಲು ಬರೆದ ಅಥವಾ ಬರೆಯಬೇಕೆಂದುಕೊಂಡ ಪ್ರೇಮಪತ್ರದ ಒಕ್ಕಣೆಯ ಪ್ರತಿ ಅಕ್ಷರವೂ ಈಗಲೂ ನಿಮಗೆ ಹೇಗೆ ನೆನಪಿನಲ್ಲಿ ಇರುತ್ತದೆ ಎಂದು.ನೆನಪಿಡಿ, ನಾನು ಹೇಳಿದ್ದು "ನೀವು ಬರೆದ ಪ್ರೇಮಪತ್ರ" ಎಂದು; "ನಾನು ಬರೆದ ಅಲ್ಲ". ಆ ಒಕ್ಕಣೆ ನೆನೆದು ಈಗಾಗಲೇ ನಿಮ್ಮ ಮುಖದ ಮೇಲೆ ಮೂಡುತ್ತಿರುವ ಮಂದಹಾಸ ನನಗೆ ಚೆನ್ನಾಗಿ ಕಾಣುತ್ತಿದೆ. ಅವನ್ನು ನನ್ನೊಡನೆ ಗುಟ್ಟಾಗಿ ಹಂಚಿಕೊಳ್ಳಿ. ಆಗ ನಿಮ್ಮ ಮನಸ್ಸು ಹೇಗೆ ಪ್ರಫುಲ್ಲವಾಗುತ್ತದೆ ನೋಡಿ! ನಿಮ್ಮ "ಆ" ಗುಟ್ಟನ್ನು ನಾನು ಯಾರಿಗೂ ಬಿಟ್ಟುಕೊಡುವುದಿಲ್ಲ ಎಂಬ ಭರವಸೆಯನ್ನು ನೀಡುತ್ತೇನೆ. ಹೂಂ, ನಿಮ್ಮ ಮೊಬೈಲ್ ತಕ್ಷಣವೇ ಕೈಗೆತ್ತಿಕೊಳ್ಳಿ. ನೀವು ಕರೆ ಮಾಡಿದಾಗ ನನ್ನ ಸಂಖ್ಯೆ ವ್ಯಸ್ತವಾಗಿದ್ದರೆ, ಇನ್ಯಾರೋ ಅವರ ಗುಟ್ಟು ಬಿಟ್ಟು ಕೊಡುತ್ತಿರುತ್ತಾರೆ. ಆದ್ದರಿಂದ ಸ್ವಲ್ಪ ಸಮಯ ಕಾಯಿರಿ. ಇಲ್ಲವೇ ಅನಂತರ ಕರೆ ಮಾಡಿ. ನಿಮ್ಮ ಕರೆ ನಮ್ಮಿಬ್ಬರಿಗೂ ಬಹಳ ಮುಖ್ಯ!

ಹೀಗೆ ನಮ್ಮ ನೆನಪಿನ ಸಾಗರದಲ್ಲಿ ಗಾಳ ಹಾಕಿದಾಗ ಮೊದಲು ಸಿಗುವ ದೊಡ್ಡ ಮೀನು ಯಾರೋ ನಮಗೆ ಘಾಸಿ ಮಾಡಿದ ಪ್ರಸಂಗ. ಅದರ ನೆನಪು, ಆ ಪ್ರಸಂಗವೂ ಧುತ್ತೆಂದು ಮತ್ತೆ ನಮ್ಮ ಮುಂದೆ ನಡೆದಂತೆ ಭಾಸವಾಗಿ ಮನಸ್ಸು ಕದಡಿದ ರಾಡಿಯಾಗುತ್ತದೆ; ಆಕ್ರೋಶಗೊಳ್ಳುತ್ತದೆ. ಆಗ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು ಸ್ವಲ್ಪ ಆಲೋಚಿಸಿ, ಆ ಪ್ರಸಂಗ ನಡೆದ ಸಮಯ, ಸಂದರ್ಭ, ಸನ್ನಿವೇಶವನ್ನು ಕುರಿತು ಚಿಂತಿಸಿ. ಅಂದು ಅದಕ್ಕೆ ನಮ್ಮ ಪ್ರತಿಸ್ಪಂದನೆಯನ್ನು, ನಮಗೆ ಶೇಕಡಾ 200 ಸರಿ ಎನಿಸಿದ ಪ್ರತಿ ಸ್ಪಂದನೆಯನ್ನು ನೆನಪಿಸಿಕೊಳ್ಳಿ.

ಇಂದು, ಆಗ ನಡೆದ ಘಟನೆಯನ್ನು ನಡೆಯದಂತೆ ಮಾಡಲು ಸಾಧ್ಯವಿಲ್ಲ. ಆದರೆ ಅದಕ್ಕಾಗಿ ನಾವು ಇಂದೂ ತಳೆಯುವ ರೋಷ, ಕೋಪ, ತಾಪಗಳಿಂದ ಕಳಚಿಕೊಳ್ಳಬಹುದು. ಅಂದಿನ ಘಟನೆಗೆ ಕಾರಣರಾದವರನ್ನು ಮನಸ್ಸಿನಲ್ಲೇ ಬೇಶರ್ತ ಕ್ಷಮಿಸಿಬಿಡೋಣ. ಹಾಗೇ ಮನಸ್ಸಿನಲ್ಲೇ ಅವರಿಂದ ಕ್ಷಮೆಯನ್ನು ಯಾಚಿಸಿಬಿಡೋಣ. ಅನಂತರ ನೋಡಿ, ರಾಡಿ ಹೇಗೆ ತಿಳಿಯಾಗುತ್ತದೆ ಎಂದು.

ಹಾಗೆಯೇ ನಮ್ಮ ಗಾಳಕ್ಕೆ ಸಿಕ್ಕುವ ಮತ್ತೊಂದು ಮೀನು, ನಾವು ಇತರರಿಗೆ ಘಾಸಿ ಮಾಡಿದ ಪ್ರಸಂಗಗಳು. ಇಲ್ಲೂ ಅಷ್ಟೇ, ಮನದಲ್ಲೇ ಅವರ ಕ್ಷಮೆ ಕೇಳಿಕೊಂಡು ಬಿಡೋಣ. ಅವರು ಮತ್ತೆ ಸಿಕ್ಕಾಗ "ನನ್ನನ್ನು ಕ್ಷಮಿಸಿಬಿಡಿ" ಎಂದು ಕೇಳುವ ಧೈರ್ಯ ತಾನಾಗೇ ಬರುತ್ತದೆ. ಅಷ್ಟು ಸಾಕು ನಮ್ಮ ನೆನಪಿನ ಸಾಗರವು ತಳ ಕಾಣುವ ತಿಳಿಗೊಳವಾಗಲು.

ಈಗ ನಾವು ಪಿಟಿಪಿಟಿ ಎನ್ನುವ "... ಪಾದ ಸ್ಪರ್ಶಂ ಕ್ಷಮಸ್ವ ಮೇ" ಅಥವಾ "...ಕ್ಷಮಸ್ವ ಪುರುಷೋತ್ತಮ"ಗಳಿಗೆ ಗಟ್ಟಿಯಾದ ಅರ್ಥ ತಾನಾಗೇ ಹೊರಹೊಮ್ಮುತ್ತದೆ.

ಹೀಗೆ ಗಾಳ ಹಾಕಿದಾಗ ಮನಸ್ಸಿಗೆ ಕಚಗುಳಿ ಇಡುವ, ಮುದ ನೀಡುವ ಮೀನುಗಳೂ ಸಿಗುತ್ತವೆ. "ಯಾಕೆ ಒಬ್ಬರೇ ನಕ್ಕೋತಾ ಇದೀರಾ? ಏನು ಜ್ಞಾಪಕಕ್ಕೆ ಬಂತು?" ಎಂದು ನಿಮ್ಮ ಜೊತೆಗಾತಿಯೋ ಜೊತೆಗಾರನೋ ಬೇಟದಿಂದ ಕೇಳಿದರೆ, ನಿಮಗೆ ಒಂದು ಮೀನು ಸಿಕ್ಕಿದೆ ಎಂದೇ ಅರ್ಥ!

ಈಚೆಗೆ ನನಗೆ ಹಾಗೆ ಆಯಿತು. ನಾನು ಹಿಂದೆ ಓದಿದ್ದ ಲಲಿತ ಪ್ರಬಂಧಗಳ ಒಂದು ಪುಸ್ತಕ ಥಟ್ಟನೆ ನನ್ನ ನೆನಪಿಗೆ ಬಂತು. ಅದು ನಾನು ಚಿಕ್ಕಂದಿನಲ್ಲಿ ಅಂದರೆ ಪ್ರೌಢಶಾಲೆಯಲ್ಲಿದ್ದಾಗ ಓದಿದ ಒಂದು ಪುಸ್ತಕ. ಬಹುಶಃ ಅದನ್ನು ಬರೆದವರ ಹೆಸರು ಶ್ರೀ ಗೋವಿಂದರಾವ್. ಪುಸ್ತಕದ ಹೆಸರು ನನ್ನ ನೆನಪಿಗೆ ಬರುತ್ತಿಲ್ಲ.

ಅದರಲ್ಲಿ ಇದ್ದಂತಹ ಕೆಲವು ಲೇಖನಗಳ ಬಗ್ಗೆ ಸ್ಥೂಲವಾಗಿ ನಿಮಗೆ ತಿಳಿಸುತ್ತೇನೆ. ಒಂದು ಲೇಖನದಲ್ಲಿ ಲೇಖಕರು ಆಗತಾನೆ ಮದುವೆಯಾಗಿ ಹೆಂಡತಿಯನ್ನು ಕರೆದುಕೊಂಡು ತಮ್ಮ ಊರಿಗೆ ಬಂದಿರುತ್ತಾರೆ. ಆತ ಕಾಲೇಜಿನಲ್ಲಿ ಅಧ್ಯಾಪಕರು. ಬಂದ ಮಾರನೆಯ ದಿನ ಕಾಲೇಜಿಗೆ ಹೋಗುವಾಗ, ಹೆಂಡತಿಗೆ "ನಾನು ಬಹಳ ಪ್ರಸಿದ್ಧನಾದ ವ್ಯಕ್ತಿ. ನನ್ನನ್ನು ಹುಡುಕಿಕೊಂಡು ಅನೇಕರು ಬರುತ್ತಿರುತ್ತಾರೆ. ಗೆಳೆಯರು ಗೋವಿಂದ ಎಂದೇ ನನ್ನನ್ನು ಕರೆಯುವುದು. ಹಾಗೆ ಯಾರಾದರೂ ಬಂದರೆ, ಅವರಿಗೆ ನಾನು ಕಾಲೇಜಿಗೆ ಹೋಗಿದ್ದೇನೆ. ಸಂಜೆಯ ಮೇಲೆ ಬನ್ನಿ. ಎಂದು ಹೇಳಿಬಿಡು" ಎಂದು ತಿಳಿಸುತ್ತಾರೆ.

ಸಂಜೆ ಮನೆಗೆ ಬಂದಾಗ ಹೆಂಡತಿಯನ್ನು ಕೇಳುತ್ತಾರೆ: "ಯಾರಾದರೂ ನನ್ನನ್ನು ಹುಡುಕಿಕೊಂಡು ಬಂದಿದ್ದರೇ?"

ಹೆಂಡತಿ "ಹೌದು, ನಾಲ್ಕು ಜನ ಬಂದಿದ್ದರು." .ಗಂಡನಿಗೆ ಆಶ್ಚರ್ಯ ಮತ್ತು ಸಂತೋಷ. ಜೊತೆಗೆ ನನ್ನ ಪ್ರತಿಭೆ ನನ್ನ ಹೆಂಡತಿಗೆ ಇಷ್ಟು ಬೇಗ ಗೊತ್ತಾಯಿತಲ್ಲ ಎಂಬ ಖುಷಿ. "ಹೌದಾ ಯಾರ್ಯಾರು ಬಂದಿದ್ದರು" ವಿಚಾರಿಸುತ್ತಾನೆ.

ಅದಕ್ಕೆ ಹೆಂಡತಿಯ ಉತ್ತರ: "ಒಬ್ಬ ಭಿಕ್ಷುಕ, ಮೂವರು ದಾಸಯ್ಯಗಳು 'ಗೋವಿಂದ ಗೋವಿಂದ' ಅಂತ ನಿಮ್ಮನ್ನು ಹುಡುಕಿಕೊಂಡು ಬಂದಿದ್ದರು. ಸಂಜೆ ಬನ್ನಿ ಎಂದು ಹೇಳಿದ್ದೇನೆ. ಇನ್ನೇನು ಬರಬಹುದು."

ಮತ್ತೊಂದು ಲೇಖನದಲ್ಲಿ, ಅಷ್ಟೇನೂ ಓದಿರದ ಹೆಂಡತಿ ಮದುವೆಯ ನಂತರ ಮೊದಲನೆಯ ಬಾರಿಗೆ ತನ್ನ ತವರುಮನೆಗೆ ಹೋಗಿರುತ್ತಾಳೆ. ಕಾಗದ ಬರೆಯುತ್ತಿರಬೇಕೆಂದು, ಕ್ಷೇಮ ಸಮಾಚಾರವನ್ನು ತಿಳಿಸುತ್ತಿರಬೇಕೆಂದು ಗಂಡ ಹೇಳಿರುತ್ತಾನೆ. ಅಷ್ಟಾಗಿ ಓದಿರದ ಹೆಂಡತಿಗೆ ಬರವಣಿಗೆಯು ಬಹಳ ಕಷ್ಟ ಸಾಧ್ಯ. ಎಷ್ಟು ದಿನವಾದರೂ ಕಾಗದ ಬರದಿದ್ದಾಗ, ಗಂಡನೇ ಅವಳಿಗೆ ಕಾಗದ ಬರೆಯುತ್ತಾನೆ. ಕೊನೆಯಲ್ಲಿ ಬೇಗ ಉತ್ತರಿಸು ಎಂದು ತಿಳಿಸಿರುತ್ತಾನೆ. ಪ್ರೇಮಪತ್ರವನ್ನು ನಿರೀಕ್ಷಿಸಿದ್ದ ಗಂಡನಿಗೆ ಕಾಗದ ಬರುತ್ತದೆ.

"ನೀವು ನಿಮ್ಮ ಕಾಗದದಲ್ಲಿ ಬರೆದಿರುವ ಯಾವ ವಿಚಾರವೂ ನನಗೆ ಗೊತ್ತಾಗಲಿಲ್ಲ. ಮನೆಯಲ್ಲಿ ಹಿರಿಯರಿಗೆ ತೋರಿಸಿದಾಗ ಅವರು ಅದನ್ನು ನಾನೇ ಓದಿಕೊಳ್ಳಬೇಕು ಎಂದು ಹೇಳಿದರು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ನೀವು ಕ್ಷೇಮವೇ? ನಮ್ಮ ಮನೆಯಲ್ಲಿ ಹಸು ಕರುವನ್ನು ಹಾಕಿದೆ. ನಿಮ್ಮ ಮನೆಯಲ್ಲೂ ಹಾಕಿದೆಯೇ? ನನ್ನ ಸೋದರತ್ತೆಯ ಮಗಳು ಗಂಡು ಮಗುವನ್ನು ಹೆತ್ತಿದ್ದಾಳೆ. ನಮಗೆ ಪುಡುರು. ನಿಮಗೂ ಪುಡುರಾ? "

ಹೀಗೆ ಆ ಪ್ರೇಮಪತ್ರವು ವ್ಯಾಕರಣದ ಹಾಗೂ ಕಾಗುಣಿತ ದೋಷಗಳಿಂದ ಕೂಡಿರುತ್ತದೆ. ಅದನ್ನು ಓದುವಾಗ ಬರುವ ಬೇರೆ ಬೇರೆ ಅರ್ಥಗಳು ನಮ್ಮನ್ನು ನಗೆಗಡಲಲ್ಲಿ ಮುಳುಗಿಸುತ್ತವೆ.

ಮತ್ತೊಂದು ಲೇಖನದಲ್ಲಿ, ಲೇಖಕರು ಎಲ್ಲ ವಿಚಾರಗಳ ಪರೀಕ್ಷೆಗೂ ಚೆನ್ನಾಗಿ ತಯಾರಾದರು. ಕನ್ನಡದ ಬಗ್ಗೆ "ಕನ್ನಡ ತಾನೆ, ಪರೀಕ್ಷೆಯ ದಿನ ನೋಡಿದರಾಯ್ತು" ಅಂದುಕೊಂಡು ಸುಮ್ಮನಿರುತ್ತಾರೆ. ಪರೀಕ್ಷೆಯ ದಿನ ಕೈಗೆ ಬಂದ ಕನ್ನಡದ ಪ್ರಶ್ನೆಪತ್ರಿಕೆಯನ್ನು ನೋಡಿ ಉತ್ತರಿಸಲು ತೊಡಗುತ್ತಾರೆ. ಅದರಲ್ಲಿ ಯಾವ ಪ್ರಶ್ನೆಗೂ ಉತ್ತರ ಕೊಡಲು ಆಗುವುದಿಲ್ಲ. ಕೊನೆಗೆ ಪದ ವಿಭಾಗ ಮಾಡಿ ಅರ್ಥ ತಿಳಿಸಿ ಎಂದು ಕೊಟ್ಟಿದ್ದ ಕಾವ್ಯ ಭಾಗವನ್ನು ಓದಲಾರದೆ ನೋಡಿದಾಗ ಅವರ ಕಣ್ಣಿಗೆ ಬಿದ್ದದ್ದು "ಎಂದೊಡಿಂತೆಂದಂ" ಎಂಬ ಭಾಗ. ಅದನ್ನು ನೋಡಿ ಸಂತೋಷದಿಂದ ಆ ಪದ್ಯಕ್ಕೆ ಅರ್ಥವನ್ನು ಬರೆಯಲು ಪ್ರಾರಂಭಿಸುತ್ತಾರೆ. ಅವರ ಪ್ರಕಾರ ;ಎಂದೊಡಿಂತೆಂದಂ; ಎಂಬುದನ್ನು ಕವಿಯು ಬಹಳ ಚೆನ್ನಾಗಿ ವಿವರಿಸಿದ್ದಾನೆ ಎಂದು ಹೇಳುತ್ತಾ ಹೀಗೆ ಪದ ವಿಭಾಗ ಮಾಡುತ್ತಾರೆ:

ಎಂದೊಡಿಂತೆಂದಂ ಎಂದರೆ
ಎಂದು ವಡೆ ತಿಂದಂ
ಎಂದು ಒಂದು ವಡೆ ತಿಂದಂ
ಎಂದು ಒಂದೊಂದೇ ವಡೆ ತಿಂದಂ!

ಈ ರೀತಿಯ ಲಲಿತ ಪ್ರಬಂಧಗಳಿದ್ದ ಆ ಪುಸ್ತಕ ಬಹಳ ನೆನಪಿಗೆ ಬರುತ್ತಿದೆ. ಪುಸ್ತಕದ ಹೆಸರು ಈಗ ನನಗೆ ಗೊತ್ತಿಲ್ಲ. ನಿಮ್ಮಲ್ಲಿ ಯಾರಿಗಾದರೂ ನೆನಪಿಗೆ ಬಂದರೆ ದಯವಿಟ್ಟು ನನಗೆ ತಿಳಿಸಿ. ನಿಮ್ಮ ಬಳಿ ಆ ಪುಸ್ತಕ ಇದ್ದರೆ ದಯಮಾಡಿ ಕೊಡಿ. ಅದನ್ನು ಓದಿ ಹಿಂದಿರುಗಿಸುವ ಭರವಸೆಯನ್ನು ನಾನು ಕೊಡುತ್ತೇನೆ.

ಇದೇ ರೀತಿ ನನ್ನ ನೆನಪಿಗೆ ಬರುತ್ತಿರುವುದು ಹಾಡಲು ಬಾರದಿದ್ದರೂ ಬಾಯಿಪಾಠವಾಗಿದ್ದ ಹಾಡುಗಳು.

ನಮ್ಮ ಶಾಲಾ ದಿನಗಳಲ್ಲಿ, ಶಾಲೆಯಲ್ಲಿ ಯಾವುದಾದರೂ ಬೆಳಗಿನ ಕಾರ್ಯಕ್ರಮವಿದ್ದರೆ ಗ್ರಾಮಾಫೋನ್ ರೆಕಾರ್ಡಿನ ಹಾಡುಗಳು ಬೆಳಗ್ಗೆಯೇ ಪ್ರಾರಂಭವಾಗುತ್ತಿದ್ದವು. ಮೊದಲು ಹಾಕುತ್ತಿದ್ದ ಹಾಡು ಘಂಟಸಾಲ ಅವರ ವಾತಾಪಿ ಗಣಪತಿಂ ಭಜೆಹಂ. ಅವರ ಕಂಚಿನ ಕಂಠದಲ್ಲಿ "ಶುಕ್ಲಾಂಬರಧರಂ..." ಎಂದು ಪ್ರಾರಂಭಿಸುತ್ತಿದ್ದರೆ, ಇನ್ನೇನು ಕಾರ್ಯಕ್ರಮ ಆರಂಭವಾಗುತ್ತದೆ ಎಂಬುದರ ಸೂಚನೆ ಅದು. ಅನಂತರ ಹಿಂಬದಿಯಲ್ಲಿದ್ದ ಮತ್ತೊಂದು ಹಾಡು "ದಿನಕರ ಶುಭಕರ..." ಅವನ್ನು ಕೇಳೀಕೇಳಿ ಆ ಸಂಗೀತವೆಲ್ಲ ನಮಗೆ ಬಾಯಿಪಾಠವಾಗಿ ಹೋಗಿತ್ತು.

ಅದೇ ರೀತಿ ನಮಗೆ ಸಂಗೀತದ ಬಗ್ಗೆ ಆಸಕ್ತಿ ಹುಟ್ಟಿಸಿದ್ದು ಆಕಾಶವಾಣಿಯಲ್ಲಿ ರಾತ್ರಿ ಬರುತ್ತಿದ್ದ ಸುಮಧುರವಾದ ಸುಗಮ ಸಂಗೀತದ ಹಾಡುಗಳು. ಅದು "ನವಸುಮ" ತಿಂಗಳ ಹೊಸ ಗೀತೆಗಳು ಆಗಿರಬಹುದು, ಇಲ್ಲದಿದ್ದರೆ ಚೀನಾ ದೇಶದ ಆಕ್ರಮಣದ ಕಾಲದಲ್ಲಿ ಬರುತ್ತಿದ್ದ ದೇಶಭಕ್ತಿ ಗೀತೆಗಳಾಗಿರಬಹುದು. ನಮಗೆ ಬಾಯಿಪಾಠವಾಗಿದ್ದ ಕೆಲವು ಗೀತೆಗಳು - "ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ" ಅಥವಾ "ಸಿಂಹನೊಡನಾಡುತ್ತ ಹಲ್ಲುಗಳನೆಣೆಸಿದವ ಹಾಲ್ಗಲ್ಲ ಹಸುಳೆಯವ ನಮ್ಮ ಭರತ..." ಎಂಬ ಕಾಳಿಂಗರಾಯರ ಕಂಠದಿಂದ ಹೊರಬರುತ್ತಿದ್ದ ಹಾಡುಗಳು.

ಬೇಂದ್ರೆಯವರ ವಾರೆನೋಟ, ಇನ್ನು ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಂವಾ.., ಒಂದೇ ಬಾರಿ ನನ್ನ ನೋಡಿ, ಕೆ.ಎಸ್. ನರಸಿಂಹ ಸ್ವಾಮಿಯವರ ರಾಯರು ಬಂದರು ಮಾವನ ಮನೆಗೆ..., ಬಳೆಗಾರ ಚನ್ನಯ್ಯ ಬಾಗಿಲಿಗೆ ಬಂದಿಹೆನು... ಮುಂತಾದ ಅನೇಕ ಹಾಡುಗಳು ಜನಪ್ರಿಯತೆ ಗಳಿಸಿ ಅವನ್ನು ಮತ್ತೆ ಮತ್ತೆ ಕೇಳಬೇಕು ಎಂದು ಅನಿಸುತ್ತಿದ್ದುದು ಸಹಜ.

ಆಗ ಆಕಾಶವಾಣಿಯಲ್ಲಿ ಬರುತ್ತಿದ್ದ ಮತ್ತೊಂದು ಜನಪ್ರಿಯ ಗೀತೆ "ತುಂಗಾ ಪ್ರವಾಹ ಬಳಿಸಾರಿ ಗಭೀರ ಗಂಗಾ ಪ್ರವಾಹ ಬಳಿಸಾರಿ... ". ಹೆಣ್ಣು ಧ್ವನಿಯಲ್ಲಿ ಸುಮಧುರವಾಗಿ ಬರುತ್ತಿದ್ದ ಆ ಹಾಡು ಆಗ ಪೂರ್ತಿ ಬಾಯಿಗೆ ಬರುತ್ತಿತ್ತು. ಈಗ ಸಂಪೂರ್ಣವಾಗಿ ಮರೆತು ಹೋಗಿದೆ.

ನಿಮಗೆ ಯಾರಿಗಾದರೂ ಆ ಹಾಡಿನ ಬಗ್ಗೆ ಗೊತ್ತೇ? ಸಂಪೂರ್ಣ ಕವಿತೆ, ಅದನ್ನು ಬರೆದ ಕವಿಯ ಬಗ್ಗೆ ಗೊತ್ತೇ? ದಯವಿಟ್ಟು ತಿಳಿಸುತ್ತೀರಾ? ಅದನ್ನು ಯಾರಾದರೂ ಮತ್ತೆ ಹಾಡಿ ನಮಗೆಲ್ಲಾ ಕೇಳಿಸಿದರೆ ಇನ್ನೂ ಸಂತೋಷ.

ತಾಯಿಗೆ ಬಾಯಲ್ಲಿ ಜಗವನು ತೋರಿದ

ಅಮ್ಮನ ಮೆದು ಗಲ್ಲ ತಟ್ಟಿ,,
ಗೆಜ್ಜೆ ತೊಟ್ಟ ಕಾಲು ಕುಣಿಸಿ,
ಕಣ್ಣುಗಳಾ ಧೀಂ ಕಿಟದಿ,
ಹುಬ್ಬುಗಳಾ ಧಿರಿ..ಕಿಟದಿ,
ಕತ್ತಿನಾ ಕಿಟ..ತಕಿಟಕೆ,
ಕೈಗಳಾಡಿ ತಕುತರಿಕಿಟಕೆ,
ಕಂಕುಳ ತೂಗಾಟ ಲಯಕೆ,
ತುಟಿಗಳಲದೊ ತಿಲ್ಲಾನದ ಹಾತೆ,
ಆಲೌಕಿಕ ಪದಗಳೊರತೆ,
ಕಂದ...
ಕಥೆಯ ಉಲಿಯುತಿರೆ...

ನೆನಪಾಗಿರಬಹುದೆ ಭೂತ!
ಹಿಂದಿನ ಜನುಮದ ಅನುಬಂಧ?
ತನ್ನವರಾ ಮೇರು ಪ್ರವರ,
ತಾ ಬಾಳಿದ ಬೀದಿ, ನಗರ..
ಆರಿಸಿದ್ದ ತನ್ನ ವೃತ್ತಿ,
ಗಳಿಸಿದ್ದ ಸಿರಿ-ಸಂಪತ್ತು..
ಹತ್ತಿರದವರ ಗಾಢ ರಂಗು,
ಹಗೆ ಸಾಧಿಸಿದವರ ಕಪ್ಪು..
ಅರಿತು ಕೊಟ್ಟ ಆಣೆ-ಭಾಷೆ,
ಧಿಕ್ಕರಿಸಿ ಕೂಗಿದ ಘೋಷ..

ನೆನ್ನೆಯ ತೆರೆ- ಮರೆಯೇ?
ರೂಪ ತಾಳಿದ ಗುಹೆಯೆ!
ಕೆಂಪಾದ ಮಿದು ಮೂಟೆ,
ಸುತ್ತಾ.. ರಸದ ಊಟೆ..
ಬೆಚ್ಚಗಿನಾ ಆ ಮುಸುಕು,
ಒಡಲ ಕತ್ತಲಿನ ಮಿಸುಕು..

ತಿಪ್ಪೆಯಂತೆ ಬೆಳೆದು ಕೋಶ,
ಹೆಣೆದುಕೊಂಡು ತಂತ್ರಾಂಶ..
ಒಮ್ಮೆಲೆದ್ದ ಅಟ್ಟುವಲೆಯ ನೋವು,
ಬಟ್ಟ ಬಯಲಿಗಿಳಿಯೆ ಬೆಳಕು...

ಈ ಕ್ಷಣದಲೂ ಪೊಳ್ಳು,
ಸೋಗಲಾಡಿ ಜಗವಿದೆ..
ದಂಡು ಕಟ್ಟಿ ದರ್ಪವಿಡಲು,
ದಾನವ ಸೈನ್ಯ ಕಟ್ಟಿದೆ..
ಒಮ್ಮೆ ನೀರು, ಒಮ್ಮೆ ಹುಳು,
ಒಮ್ಮೆ ಯುದ್ಧ, ಒಮ್ಮೆ ಹಗೆ..
ಲಕ್ಷ ಲಕ್ಷ ಜೀವಗಳು,
ಬೆಳಕು ಅರಸಿ ಹೊರಟಿವೆ..
ಕಾಣ ರಾಮ, ಖುದಾ, ಏಸು,
ಕಾಲನ ವಿಹಾರ ನಡೆದಿದೆ..

ಮುಂದುಂಟೇ ಹಸಿರು ತೋಟ?
ಬೆಳೆಯಬಹುದೇ ಸಾಧು ಕಾಳು?!
ಸ್ವಚ್ಛ ಮನಸು ಗಾಢ ನಿದ್ರೆ,
ನಕ್ಷತ್ರ ಕಡ್ಡಿ ಬೆಳಗೋ ಬಾಳು!!?
ಹಂಚಿ ಶಾಂತಿ, ಹೊದ್ದು ಕ್ಷಮೆ,
ತಿದ್ದುತ್ತ ಓರೆ, ಒಪ್ಪಲೆ ಅಮಲ!!??
ಬೇಟೆ ಬಿಟ್ಟು, ಹೊಟ್ಟೆ ನೋಡಿ,
ಭಂಗು ಬಿಡಿಸಿ, ಅರಸಲೇ ದೈವ?
ತೊದಲು ತಂಪು ಮಾತೆಂದಿಹೆ ನೀನು,
ತಾಂಡವ ಕಿಡಿಗೆ ಮದ್ದು ನಾನು...

ಇಂದು ಕಂಕುಳ ಬಾಲಕೃಷ್ಣ,
ನಾಳೆ ಭಗವದ್ಗೀತೆ ನಾನು....

– **ರಾಧಿಕಾ**

ಒಂದು ಚಿಂತನೆ

ಮುಗ್ಧ ಬಾಲೆ ಮತ್ತು ಅಂತರ್ಜಾಲದ ಪಾಠ

– **ರೇಣುಕಾ ದಾಸಾಯಿ**

ಟ್ರಿಣ್ .. ಟ್ರಿಣ್ .. ಕರೆ ಗಂಟೆ ಸದ್ದಾಯ್ತು. ಬಾಗಿಲು ತೆರೆದರೆ ೧೦ -೧೨ ವರುಷದ ಸುಂದರ, ಮುದ್ದಾದ, ಮುಗ್ಧ ಮುಖದ ಬಾಲೆ .



"ಯಾರಮ್ಮಾ?"

"ನಾನು ಸುಮೇಧಾ", ಉಲಿದಳು ಹುಡುಗಿ ಹಕ್ಕಿಯಂತೆ. ಸುಂದರ ಅರ್ಥಪೂರ್ಣ ಹೆಸರು.

ಕೈಯಲ್ಲಿ ಒಂದು ಪ್ಲಾಸ್ಟಿಕ್ ಡಬ್ಬಿ, ಅದರ ಪಾರದರ್ಶಕತೆಯಲ್ಲಿ ಕಾಣಿಸಿದ್ದು ಅದರ ತುಂಬಾ ಜೋಡಿಸಿಟ್ಟ ಹಲಸಿನ ತೊಳೆ. ತಕ್ಷಣಕ್ಕೆ ಹೊಳೆಯಿತು ಈ ಹುಡುಗಿ ನಮ್ಮ ಮನೆಯ ಪಕ್ಕದ ಕಂಪೋಂಡಿನಲ್ಲಿರುವ ಮನೆಯವಳೆಂದು. ಹಲಸು, ತೆಂಗು, ಮಾವು, ಬೇವು ಮರಗಳ ಮಧ್ಯದ ಮನೆಯವಳೆಂದು.

ನೋಡಿ, ಮೊದಲೆಲ್ಲಾ 'ನೆರೆಹೊರೆ' ಎಂಬ ದ್ವಿರುಕ್ತಿ ಪದ ಪ್ರಚಲಿತವಿತ್ತು. ಈಗ ಕಾಲ ಬದಲಾದಂತೆ ಅದು ಅರ್ಥ ಕಳೆದುಕೊಂಡು ಹೊಸ ರೂಪಾಂತರ ಹೊಂದಿತೇನೋ 'ನೆರೆ ಮರೆ' ಎಂದು. ನಮ್ಮ ಈ ಜೀವನ ಶೈಲಿಯಲ್ಲಿ ನೆರೆಮನೆಯವರ್ಯಾರು ಎನ್ನುವದೇ ಗೊತ್ತಿರುವದಿಲ್ಲ,. ಆದರೆ ಟ್ವಿಟರ್, ಫೇಸ್ ಬುಕ್, ವಾಟ್ಸಾಪ್ ನಲ್ಲಿ ವಿಶ್ವ ಸುತ್ತುತ್ತೇವೆ. ಜಗತ್ತಿನ ಆಗುಹೋಗು ಗೊತ್ತಿರುತ್ತೆ ನಮ್ಮ ಪಕ್ಕದಲ್ಲಿ ಇರುವವರು ಯಾರು? ಅಕ್ಕಪಕ್ಕದಲ್ಲಿ ಏನಾಗುತ್ತಿದೆ ಎನ್ನುವದೇ ಗೊತ್ತಿರುವದಿಲ್ಲ. ಈ ಪುಟ್ಟಿಯ ಅಮ್ಮ ಇಲ್ಲವೇ ದೊಡ್ಡಮ್ಮ ಅವರ ಹಿತ್ತಲನ್ನು ಕಸ ಗುಡಿಸುವಾಗ ನಾನೇನಾದರೂ ನನ್ನ ಕಾರು ನಿಲ್ಲಿಸುವ ಜಾಗದಲ್ಲಿ ಕಸ ಗುಡಿಸಲು ಹೋದರೆ ಒಂದು ಮುಗುಳುನಗೆ ಬಿಟ್ಟರೆ ಮಾತಿಲ್ಲ . ಮೊನ್ನೆ ನನ್ನ ಕಾಂಪೊಂಡಿನಲ್ಲಿ ಅವರ ಮರದ ಹಲಸಿನ ಹಣ್ಣು ಬಿದ್ದಿತ್ತು, ರಾತ್ರಿಯ ಸಮಯವಾಗಿತ್ತು ಹೀಗಾಗಿ ಅದನ್ನು ಎತ್ತಿಟ್ಟು ಬೆಳಿಗ್ಗೆ ಕೊಟ್ಟಿದ್ದೆ, ಅದರ ಸ್ಮರಣಾರ್ಥ ಈ ಕೊಡುಗೆ ಎನ್ನುವದು ಒಂದೆರಡು ಸೆಕೆಂಡಿನಲ್ಲಿ ಹೊಳೆಯಿತು.

"ತೊಗೊಳ್ಳಿ" ಎಂದು ಹಲಸಿನ ಹಣ್ಣಿರುವ ಡಬ್ಬಿಯನ್ನು ನನ್ನೆಡೆಗೆ ಚಾಚಿದಾಗ ಸಂತೋಷದಿಂದಲೇ ಸ್ವೀಕರಿಸಿದೆ. ಹಲಸಿನ ಹಣ್ಣು ನನಗೆ ಇಷ್ಟ. ಅಲ್ಲದೆ ತಾಜಾ ಹಣ್ಣು ಈಗ ತಾನೇ ಮರದಿಂದ ಕಿತ್ತು, ಸ್ವಚ್ಚವಾಗಿ ಮನೆಯಲ್ಲೇ ಬಿಡಿಸಿದ್ದು. ಅವಳಿಗೆ ಕೃತಜ್ಞತೆ ಹೇಳುವದು ಹೇಗೆ? ಶುಕ್ರವಾರ ಪುಟ್ಟ ಗೌರಿಯ ತರಹ ಬಂದವಳಿಗೆ ಹಣೆಗೆ ಕುಂಕುಮವಿಟ್ಟು ಮಾವಿನ ಹಣ್ಣಿನ ತಾಂಬೂಲ ಕೊಟ್ಟೆ. ಅವಳು ಅದನ್ನು

ಸ್ವೀಕರಿಸಿದ ರೀತಿ ನನಗೆ ಸಂತೋಷ ತಂದಿತ್ತು. ಪದ್ಧತಿಯಂತೆ ಉಂಗುರದ ಬೆರಳಿನಿಂದ ಕುಂಕುಮ ಹಣೆಯ ಮಧ್ಯ ಇಟ್ಟು ಎರಡೂ ಕೈಗಳಿಂದ ಭಯ ಭಕ್ತಿಯಿಂದ ತಾಂಬೂಲ ತೆಗೆದುಕೊಂಡ ಬಗೆ ನನಗೆ ಸಂತೋಷ ತಂದಿತ್ತು. ಸಂಸ್ಕಾರವಂತ ಮಗು ಎನ್ನಿಸಿತು .

"ಯಾವ ಕ್ಲಾಸಿನಲ್ಲಿ ಓದುತ್ತಿರುವೆ ಸುಮೇಧಾ?"

"ಈಗ ಏಳನೇ ತರಗತಿ ಮುಗಿಸಿ ಎಂಟನೇ ತರಗತಿ"

ಹೌದು ಎಲ್ಲವೂ ಸರಿಯಾಗಿದ್ದಿದ್ದರೆ, ನಿಯಮದಂತಿದ್ದಿದ್ದರೆ ಹೊಸ ತರಗತಿಗೆ ಸಡಗರದಿಂದ ಪಾದಾರ್ಪಣೆ ಮಾಡುವ ದಿನ .ಮುಂದಿನ ತರಗತಿಗೆ ಪ್ರವೇಶ ಪಡೆಯುವ ಕಾಲ. ಜೂನ್ ಎರಡನೇ ವಾರದಿಂದ ಎಲ್ಲಾ ಶಾಲೆಗಳು ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಿವೆ. ಆದರೆ ಎಲ್ಲೂ ಸಡಗರ, ಸಂಭ್ರಮವಿಲ್ಲ. ಎಲ್ಲದನ್ನೂ ಎಲ್ಲರಿಂದ ಕಿತ್ತುಕೊಂಡಿದೆ ಕರೋನಾ ಎನ್ನುವ ಸಾಂಕ್ರಾಮಿಕ ಖಾಯಿಲೆ.

ನೆರೆಮನೆಯ ಈ ಬಾಲೆಯನ್ನು ಇನ್ನಷ್ಟು ಆಪ್ತಳನ್ನಾಗಿ ಮಾಡಿಕೊಳ್ಳುವ ಹಂಬಲ ಮನಕ್ಕೆ.

"ಏಳನೇ ಕ್ಲಾಸು ಶಾಲೆಗೆ ಹೋಗದೇ ಮುಗಿಸಿದಿರಿ ಹೇಗನ್ನಿಸುತ್ತದೆ? ಏಳನೇ ಕ್ಲಾಸಿನ ಪಾಠ ಎಲ್ಲಾ ಓದಿದೆ ಅನ್ನಿಸುತ್ತಿದೆಯಾ? ವಿಷಯ ಪೂರ್ತಿ ಅರ್ಥ ಆಗಿದೆಯಾ? ಶಾಲೆಯಲ್ಲಿ ಪಠ್ಯಕ್ರಮ ಪೂರ್ತಿ ಮುಗಿಸಿದರಾ?" ಶೈಕ್ಷಣಿಕ ಸಾಲ ಕೊಡುವ ಬ್ಯಾಂಕರನಂತೆ ನನ್ನ ಪ್ರಶ್ನೆಗಳ ಸುರಿಮಳೆ.

ಹುಡುಗಿ ಚೂಟಿ, ನನ್ನ ಪ್ರಶ್ನೆಗಳಿಂದ ಗಲಿಬಿಲಿಗೊಳ್ಳಲಿಲ್ಲ. ಧೃಢವಾದ ಧ್ವನಿಯಲ್ಲಿ "ಹೌದು ನನಗೆ ಏಳನೇ ಕ್ಲಾಸಿನ ಪಾಠ ಸಂಪೂರ್ಣವಾಗಿ ಅರ್ಥವಾಗಿದೆ. ಗಣಿತ, ವಿಜ್ಞಾನ, ಸಾಮಾನ್ಯ ವಿಜ್ಞಾನ, ಭೂಗೋಳ ಎಲ್ಲಾ ಬರುತ್ತೆ. ನಮ್ಮ ಶಾಲೆಯಲ್ಲಿ ಎಲ್ಲಾ ಟೀಚರ್ ಅಂತರ್ಜಾಲದಲ್ಲಿ ಪ್ರತಿದಿನ ನಾಲ್ಕರಿಂದ ಐದು ತಾಸು ಪಾಠ ಮಾಡಿದರು. ವರ್ಷದ ಕೊನೆಗೆ ಮೂರು ತಾಸಿನ ಪರೀಕ್ಷೆ ನೆಡೆಸಿದರು. ನಾವು ಪರೀಕ್ಷೆ ಮುಗಿಯುವವರೆಗೂ ಚಚ್ಚಿತ್ರದಿಂದ ಕಣ್ಮರೆಯಾಗುವಂತಿಲ್ಲ, ನಕಲು ಮಾಡುವಂತಿಲ್ಲ, ಮೂರು ಮೂರು ಜನ ಟೀಚರ್ ನಮ್ಮನ್ನು ಪಹರೆ ಕಾದಿದ್ದಾರೆ. ಇಷ್ಟೆಲ್ಲಾ ಮಾಡಿದ ಶಾಲೆಗೆ ಒಂದಿಷ್ಟು ಪಾಲಕರು ಶುಲ್ಕ ಯಾಕೆ ಕೊಡಬೇಕು ಎಂದು ಜಗಳವಾಡುತ್ತಿದ್ದಾರೆ, ತಪ್ಪು ಇದು. ನಮ್ಮ ಟೀಚರ್ ನಮಗೆ ಅಂತರ್ಜಾಲದಲ್ಲಿ ಎಷ್ಟೆಲ್ಲಾ ಕಷ್ಟಪಟ್ಟು ಕಲಿಸಿದ್ದಾರೆ. ಹಾಗೆನೋಡಿದರೆ ಅವರಿಗೆ ಇನ್ನೂ ಹೆಚ್ಚು ಹಣ ಕೊಡಬೇಕು"

ಎಲಾ ಮುಗುದೆ!! ಶಾಲೆಯ ಬಗೆಗೆ ಸಧ್ಯ ಬಿಸಿಬಿಸಿಯಾಗಿ ಚರ್ಚೆಯಾಗುತ್ತಿರುವ ವಿಷಯದ ಬಗೆಗೆ ಒಂದು ನಿರ್ದಿಷ್ಟ ನಿರ್ಧಾರವನ್ನು ಧೃಢವಾಗಿ ಹೊಂದಿರುವಳು. ಈ ವಯಸ್ಸಿನಲ್ಲಿ ಹೆಚ್ಚು ಮಕ್ಕಳಿಗೆ ಇದರ ಗೊಡವೆಯೇ ಅರ್ಥವಾಗಿರುವದಿಲ್ಲಾ. ರಾಜ್ಯದಲ್ಲಿ ಸರಣಿ ಚರ್ಚೆಗಳು ಶಿಕ್ಷಣ ಸಚಿವರ ಸಭೆ ಎಲ್ಲಾ ಶಾಲೆಗಳೊಂದಿಗೆ ಶಾಲಾ ಶುಲ್ಕದ ಬಗೆಗೆ ಗರಂ ಆಗಿಯೇ ನೆಡೆಯುತ್ತಿದೆ. ಈ ಮಗು ತನ್ನ ಶಾಲೆ ಬಗ್ಗೆ, ಶಾಲಾ ಸಿಬ್ಬಂದಿ ಬಗ್ಗೆ ಎಂತಹ ಧನಾತ್ಮಕ ಚಿಂತನೆ ಇಟ್ಟುಕೊಂಡಿದೆ ಎಂದು ಸಂತೋಷ. ಈಗಿನ ದಿನಗಳಲ್ಲಿ ಎಲ್ಲರೂ ಎಲ್ಲರನ್ನೂ ದೂಷಿಸುವವರೆ. ಅಂತಹದರಲ್ಲಿ ಬಾಯಿತುಂಬಾ ಹೋಗಳುತ್ತಿದ್ದಾಳೆ ತನ್ನ ಸ್ಕೂಲನ್ನು.

ನಮ್ಮ ಸಮುಚ್ಚಯದಲ್ಲಿರುವ ಗೀತಾ ಮೊನ್ನೆ ತರಕಾರಿ ತರಲು ಹೊರಗೆ ತಳ್ಳುಗಾಡಿಯ ಹತ್ತಿರ ಬಂದಾಗ ಅಸಮಾಧಾನದಿಂದ ದೊಡ್ಡದಾಗಿ ಹೇಳುತ್ತಿದ್ದಳು, "ಈ ವರ್ಷ ಶಾಲೆಗೆ ಕೊಡುವ ಶುಲ್ಕ ಬರೀ ದಂಡ. ಮಕ್ಕಳಿಗೆ ಅಂತರ್ಜಾಲದಲ್ಲಿ ನೆಡೆಯುವ ಪಾಠ ಬರೀ ಡಂಬಾಚಾರ, ಸದಾ ಸಂಪರ್ಕವೇ ಇರುವದಿಲ್ಲಾ."

ಅಲ್ಲೇ ರಸ್ತೆ ಗುಡಿಸಿ ಸ್ವಚ್ಛ ಮಾಡುತ್ತಿರುವ ಶಾಂತಮ್ಮ, "ಅಮ್ಮೋರೇ... , ನಿಮ್ಮ ಮಕ್ಕಳಿಗೆ ಅಂತರ್ಜಾಲದಲ್ಲಿ ಶಾಲೆ, ನೀವು ಜೊತೆಗೆ ಕುಳಿತು ಗಮನ ಕೊಡ್ತೀರ. ನಮ್ಮ ಮಕ್ಕಳಿಗೆ? ಅಂತಹ ದೊಡ್ಡ ಮೊಬೈಲ್ ಎಲ್ಲಿ ಕೊಳ್ಳೋಣ? ಅದೇನೋ ಸಂಪರ್ಕ ಅಂದಿರೆಲ್ಲಾ ಅದಕ್ಕೆ ಎಲ್ಲಿ ಹಣ ತರೋಣ? ನಮ್ಮ ವಿದ್ಯಾ ಮಂತ್ರಿಗಳು ಅದೇನೋ 'ವಿದ್ಯಾಗಮ' ವೆಂದು ಪ್ರಾರಂಭಿಸಿದರು. ಗಲ್ಲಿಗಲ್ಲಿಗೆ ಶಿಕ್ಷಕರು ಬಂದು ಅಲ್ಲಲ್ಲೇ ಮಕ್ಕಳ ಚಿಕ್ಕ ಗುಂಪುಗಳನ್ನು ಮಾಡಿ, ದೂರ ದೂರ ಕುಳ್ಳಿರಿಸಿ, ಪಾಠದ ಪರಿಪಾಟ ಪ್ರಾರಂಭಿಸಿದರು. ಅದು ಚೆಂದಾಗೆ ನಡೀತಿತ್ತು ಆದರೆ ಆ ಮಂತ್ರಿಗಳಿಗೆಲ್ಲಿ ಹೆಸರು ಬರುತ್ತೋ ಎನ್ನುವ ಜನ, ವಿರೋಧಕ್ಕಾಗಿ ವಿರೋಧ ಎನ್ನುವ ರೀತಿಯಲ್ಲಿ ಅದನ್ನು ನಿಲ್ಲಿಸಿದರು. ನಮ್ಮ ಮಕ್ಕಳು ಬರುವ ಎಲ್ಲಾ ಪಾಠ ಮರೆತು ಮನೆಯಲ್ಲೇ ಕುಳಿತಿವೆ."

ಮೊನ್ನೆ ಮನೆಯ ಹತ್ತಿರ ಇರುವ ನಮ್ಮ ಬ್ಯಾಂಕಿನ ಶಾಖೆಗೆ ಹೋಗಿದ್ದೆ, ಸಹೋದ್ಯೋಗಿ ಗೋಳಾಡಿದಳು "ಅದೇನು ಅಂತರ್ಜಾಲದ ಪಾಠವಪ್ಪ, ಮಕ್ಕಳು ಯೂನಿಫಾರಂ ಹಾಕಿ ಶಿಸ್ತಿನಲ್ಲಿ ಸಮಯಕ್ಕೆ ಸರಿಯಾಗಿ ಶಾಲೆಗೆ ಹೋಗಿ ಪಕ್ಕಪಕ್ಕದಲ್ಲಿ ಹಕ್ಕಿಯಂತೆ ಕುಳಿತು ಆಲಿಸಿದ ಪಾಠ ಮನಸ್ಸಿಗೆ ನಾಟಿದಂತೆ ಇದು ಆಗುತ್ತಾ? ಎರಡು ವರ್ಷ ಶಾಲೆ ನಿಲ್ಲಿಸಿ ಮತ್ತೆ ಕರೋನಾ ಹೋದ ನಂತರ ಅವರು ಬಿಟ್ಟಿರುವ ತರಗತಿಯಿಂದಲೇ ಪಾಠ ಪ್ರಾರಂಭಿಸಿದರೆ ಗಂಟೇನು ಹೋಗುತ್ತೇ? ಈ ಎರಡು ವರುಷ ಮಕ್ಕಳು ಮುಕ್ತವಾಗಿ ಮನೆಯಲ್ಲೇ ಕಲಿಯುವ ವಿಷಯ ಬೇಕಾದಷ್ಟಿವೆ. ಅಂತರ್ಜಾಲದ ಶಿಕ್ಷಣದಿಂದ ಗುಣಮಟ್ಟ ಕುಸಿದು, ಶೈಕ್ಷಣಿಕ ಕಂದಕ ಉಂಟಾಗಿದೆ. ಮಕ್ಕಳು ಮತ್ತು ಪಾಲಕರಲ್ಲಿ ಒತ್ತಡ, ಆತಂಕ ಖಿನ್ನತೆಗೆ ಕಾರಣವಾಗಿದೆ."

ಇವರೆಲ್ಲರ ಆತಂಕ ನಿಜಾನೇ ಅನ್ನಿಸಿತು. ಇದೆಲ್ಲಾ ಈ ಕರೋನಾಕ್ಕೇನು ಗೊತ್ತಾಗಬೇಕು? ಅದು ಎಲ್ಲೆಂದರಲ್ಲಿ ಸುತ್ತುತ್ತಾ, ರೂಪಾಂತರ ಹೊಂದುತ್ತಾ ಎಲ್ಲರನ್ನೂ ಬೆದರಿಸುತ್ತಿದೆ.

———

ಸಣ್ಣ ಕಥೆ

ಆಸರೆ

– ಪ್ರಮೋದಾ ಎಸ್. ಮೂರ್ತಿ

ಕರೆಗಂಟೆ ಸದ್ದು ಮಾಡಿದಾಗ ಲೀನಾ ಡಿಸೋಜಾ ಮುಂಬಾಗಿಲ ಕಡೆ ನಡೆದರು. ಬಾಗಿಲಲ್ಲಿ ಮೋಹಕವಾಗಿ ನಗುತ್ತಾ ನಿಂತಿದ್ದಾಳೆ ಬೆಡಗಿನ ಚೆಲುವೆ. ಒಂದು ಗಳಿಗೆ ಯಾರಿರಬಹುದು ಎಂದು ಯೋಚಿಸುತ್ತಿದ್ದಂತೆ “ಅಮ್ಮ, ನಾನು ಶಾಂಭವಿ” ಎಂದು ಕಾಲಿಗೆ ನಮಸ್ಕರಿಸಿ ತಬ್ಬಿಕೊಂಡಿದ್ದಳು. “ಅಯ್ಯೋ ನೀನಾ! ಗುರುತೇ ಸಿಗಲಿಲ್ಲವಲ್ಲೇ, ತುಂಬಾನೇ ಬದಲಾಗಿದೀಯಾ” ಎಂದರು ಲೀನಾ. ಎರಡು ಮೂರು ತಿಂಗಳಿಂದ ಅವಳ ಫೋನಾಗಲೀ, ಕಾಗದವಾಗಲೀ ಬಾರದೆ ಆಲೋಚನೆ ಮಾಡುತ್ತಿದ್ದ ಲೀನಾರಿಗೆ ನಿರಾಳವಾಯಿತು. ಅವರ ಹಿಂದೆಯೇ ಬಂದ ಡಾಲಿ, "ಹಾಯ್...ಶಾಂಭವಿ" ಎನ್ನುತ್ತಾ ಅವಳನ್ನು ತಬ್ಬಿಕೊಂಡಳು. "ತುಂಬಾನೇ ಬದಲಾಗಿದ್ದಿಯೇ ನೀನು, ಬಾ ಒಳಗೆ" ಎಂದು ಅವಳನ್ನು ಎಳೆದುಕೊಂಡು ಹೋದಳು. "ಸರಿ, ನೀವುಗಳು ಮಾತಾಡ್ತಾ ಇರಿ, ನಾನು ನನ್ನ ಅರ್ಧಂಬರ್ಧ ಮಾಡಿರೋ ಕೆಲಸಾನ ಪೂರ್ತಿಮಾಡಿ ಬರ್ತೀನಿ" ಎಂದು ಅಡುಗೆಮನೆ ಕಡೆಗೆ ನಡೆದ ಲೀನಾರವರ ಕೈ ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದರೂ, ಮನಸ್ಸು ತಮ್ಮ ಮನೆಗೆ ಬಂದು ತಮ್ಮ ಸಂಸಾರದಲ್ಲಿ ಒಬ್ಬಳಂತಾಗಿದ್ದ ಶಾಂಭವಿಯ ಬಗ್ಗೆ ನೆನಪಿಸಿಕೊಳ್ಳುತ್ತಾ ಮನದಾಳಕ್ಕೆ ಇಳಿಯಿತು...ಸುಮಾರು 20 ವರ್ಷಗಳ ಹಿಂದಕ್ಕೆ.

ಬಹಳ ದಿನಗಳಿಂದ ಬೆಂಗಳೂರು ನಗರದ ಜಂಜಾಟದಿಂದ ಬೇಸತ್ತಿದ್ದ ನಿವೃತ್ತ ಮಿಲಿಟರಿ ಅಧಿಕಾರಿ ಡಿಸೋಜಾ ದಂಪತಿಗಳು ಕುಟುಂಬದ ಸ್ನೇಹಿತ ಚೆಂಗಪ್ಪನವರ ಆಮಂತ್ರಣದ ಮೇರೆಗೆ ಚಿಕ್ಕಮಗಳೂರಿನಲ್ಲಿರುವ ಅವರ ಕಾಫಿ ತೋಟದ ಬಂಗಲೆ ಮನೆಗೆ ಬಂದು ಒಂದು ವಾರವಾಗಿತ್ತು. ಅವರು ಬಂದ ನಂತರದ ಮೂರು ದಿವಸಕ್ಕೇ ಚೆಂಗಪ್ಪನವರು ತುರ್ತು ವ್ಯವಹಾರದ ನಿಮಿತ್ತ ವಿದೇಶಕ್ಕೆ ಹೊರಟಿದ್ದರಿಂದ ತಮ್ಮ ಆಪ್ತ ಬಂಟ ಸೋಮಯ್ಯನಿಗೆ ಅತಿಥಿಗಳ ಆತಿಥ್ಯದ ಜವಾಬ್ದಾರಿಯನ್ನು ವಹಿಸಿದ್ದರು. ಅಲ್ಲಿಗೆ ಬಂದ ಎರಡನೇ ದಿನಕ್ಕೇ ಲೀನಾರವರ ಮನ ಸೆಳೆದದ್ದು ಸೋಮಯ್ಯನ ಮಗಳು ಶಾಂಭವಿ. ಸುಂದರವಾದ ಮುಗ್ಧವಾದ ಹದಿನಾರು ವರ್ಷದ ಬಾಲೆ. ಅಪ್ಪನಿಗೆ ಎಲ್ಲಾ ರೀತಿಯಲ್ಲೂ ಸಹಾಯಕಳಾಗಿದ್ದು, ತನ್ನ ಬಲತಮ್ಮ ಮತ್ತು ಬಲತಂಗಿಯನ್ನು ಅಷ್ಟೇ ಮುತುವರ್ಜಿಯಿಂದ ನೋಡಿಕೊಳ್ಳುತ್ತಾ, ತನ್ನ ಚಿಕ್ಕಮ್ಮನಿಗೆ ನೆರವಾಗಿ ಎಲ್ಲಾ ಕೆಲಸದಲ್ಲೂ ಸಹಾಯಕಳಾಗಿದ್ದಳು. ಆದರೆ ಆ ಮುಗ್ಧ ಮಗುವಿನ ಮುಖದಲ್ಲಿ ಸಂತಸದ ಎಳೆ ಇರಲಿಲ್ಲ. ಅವಳ ಮನಸ್ಸಿನಲ್ಲಿ ಏನೋ ಕೊರೆಯುತ್ತಿದೆ ಎಂಬ ಅನಿಸಿಕೆ ಅವಳನ್ನು ಕಂಡಾಗಲೆಲ್ಲ ಅನ್ನಿಸುತ್ತಿತ್ತು. ಅಪ್ಪ, ಚಿಕ್ಕಮ್ಮ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಆದರೂ ಈ ಮಗುವಿಗೆ ಏನು ಕೊರತೆ ಎಂಬುದು ಅರ್ಥವಾಗುತ್ತಿರಲಿಲ್ಲ. ಹೆತ್ತಮ್ಮನನ್ನೇ ಏನಾದರೂ ಹಚ್ಚಿಕೊಂಡಿದ್ದಾಳೇನೋ ಎಂದು ಅಂದುಕೊಂಡರೆ, "ಅವಳಮ್ಮ ಇವಳು ಮಗುವಾಗಿದ್ದಾಗಲೇ ತೀರಿಕೊಂಡಿದ್ದಳು" ಎಂದಿದ್ದ ಸೋಮಯ್ಯ. "ಮೊದಲೆಲ್ಲಾ ತುಂಬಾ ಸಂತೋಷವಾಗಿ ಇದ್ದವಳು ಈಗ ಆರೇಳು ತಿಂಗಳುಗಳಿಂದ ಮೌನಿಯಾಗಿದ್ದಾಳೆ. ಏನು ಕೇಳಿದರೂ ಸುಮ್ಮನೆ ನಿಂತಿರುತ್ತಾಳೆ. ಓದಿನ ಮೇಲೂ ಗಮನವಿಲ್ಲ. ಚೆನ್ನಾಗಿ ಓದುತ್ತಿದ್ದಳು. ಆದರೆ ಈಗ ಇದ್ದಕ್ಕಿದ್ದಹಾಗೆ ಆಸಕ್ತಿ ಕಡಿಮೆ ಆಗಿದೆ. ಬಲವಂತವಾಗಿ ಎಸೆಸೆಲ್ಸಿ ಪರೀಕ್ಷೆಗೆ ಕಳುಹಿಸಿದಾಗ ಎರಡು ಪೇಪರ್ ಬರೆದು ಆಮೇಲೆ ಪರೀಕ್ಷೆಗೆ ಹೋಗಲ್ಲ ಅಂತ ಅಂದಳು. ಏನಾಯಿತು ಎಂದು ನನಗೆ ಅರ್ಥವೇ ಆಗುತ್ತಿಲ್ಲ. ಅವಳದೇ ಆಲೋಚನೆ ಆಗಿದೆ" ಎಂದು ನೊಂದು ನುಡಿದ್ದಿದ್ದ. ಒಂದು ತಿಂಗಳು ಅಲ್ಲಿದ್ದಷ್ಟು ದಿನವೂ ಲೀನಾರವರಿಗೆ ಎಲ್ಲಾ ರೀತಿಯಲ್ಲೂ ನೆರವಾಗುತ್ತಾ ಸುತ್ತಮುತ್ತಲಿನ ಜಾಗವನ್ನು ಅವಳೇ ತೋರಿಸಿಕೊಂಡು ಬಂದಿದ್ದಳು. ಆದರೆ ಜಾಸ್ತಿ ಮಾತುಕತೆ ಇಲ್ಲ, ದಿನದಿಂದ ದಿನಕ್ಕೆ ಲೀನಾರವರಿಗೆ ಅವಳ ಮೇಲೆ ಏನೋ ಒಂದು ರೀತಿಯ ಅಭಿಮಾನ,

ಪ್ರೀತಿ ಹೆಚ್ಚುತ್ತಾ ಹೋಯಿತು. ಶಾಂಭವಿಯೂ ಅವರ ಭಾವನೆಗಳನ್ನು ಮನದಲ್ಲೇ ಅರಿತು ಮೌನವಾಗಿಯೇ ಸ್ಪಂದಿಸುತ್ತಿದ್ದಳು. ಇದು ಯಾವ ಋಣಾನುಬಂಧ ಎಂದು ಲೀನಾರವರಿಗೆ ಅಚ್ಚರಿ ಆಗುತ್ತಿತ್ತು. ಬೆಂಗಳೂರಿಗೆ ಹೊರಡುವ ದಿನವಂತೂ ಬಿಕ್ಕಿಬಿಕ್ಕಿ ಅಳುತ್ತಾ ವಿದಾಯ ಕೋರಿದ್ದಳು.

ವಾಪಸು ಬಂದಮೇಲೂ ಲೀನರಾವರಿಗೆ ಏನೋ ಕಳವಳ. ಏನೋ ಕಳೆದುಕೊಂಡ ಅನುಭವ. ಶಾಂಭವಿಯನ್ನು ಬಿಟ್ಟಿರಲಾರದೆ ಅವಳ ನೆನಪಿನಲ್ಲಿ ಹಿಂಸೆಪಡತೊಡಗಿದರು. ನನಗೇಕೆ ಅವಳ ಮೇಲೆ ಇಷ್ಟು ವ್ಯಾಮೋಹ ಎಂದು ಅವರಿಗೇ ಅಚ್ಚರಿ ಆಗುತ್ತಿತ್ತು. ಹಿಂಸೆ ಜಾಸ್ತಿ ಆಗುತ್ತಿದ್ದಂತೆ ಗಂಡನಿಗೆ ಹೇಳಿ ಅವರ ಸ್ನೇಹಿತರ ಜೊತೆ ಹಾಗೂ ಸೋಮಯ್ಯನ ಜೊತೆ ಮಾತನಾಡಿ, ಅವನ ಒಪ್ಪಿಗೆ ತೆಗೆದುಕೊಂಡು ಶಾಂಭವಿಯನ್ನು ತಮ್ಮ ಸಂಸಾರಕ್ಕೆ ಸಹಾಯಕಳಾಗಿ ಕರೆದುಕೊಂಡು ಬರುವಲ್ಲಿ ಯಶಸ್ವಿಯಾದರು.

ಲೀನಾರವರ ಮನೆಗೆ ಶಾಂಭವಿ ಸಂತೋಷದಿಂದಲೇ ಒಪ್ಪಿ ಬಂದಿದ್ದಳು. ಅವಳಿಗೆ ಹದಿನಾರು ವರುಷಗಳಾಗಿದ್ದುದರಿಂದ ಮಕ್ಕಳ ಕಾನೂನಿನ ಪ್ರಕಾರ ಯಾವ ತೊಂದರೆಯೂ ಇಲ್ಲದೆ ಮನೆಯಲ್ಲಿದ್ದ ಎರಡು ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಅವರ ಸೊಸೆಗೆ ಸಹಾಯ ಹಸ್ತವಾಗಿ ಒದಗಿ ಬಂದಿದ್ದಳು. ಚಿಕ್ಕಮಗಳೂರಿನಲ್ಲಿ ಕಾಣದ ಚುರುಕು ಅವಳಲ್ಲಿ ಇಲ್ಲಿ ಕಾಣುತ್ತಿತ್ತು. ನಿಧಾನವಾಗಿ ಮೂರು ವರುಷದ ಮೆಲ್ವಿನ್, ಏಳು ವರುಷದ ಶಾಂತಿ, ಇಬ್ಬರು ಮೊಮ್ಮಕ್ಕಳೂ ಅವಳಿಗೆ ಹೊಂದಿಕೊಳ್ಳತೊಡಗಿದ್ದರು. ಸೋಮಯ್ಯ ಅವಾಗಾವಾಗ ಬಂದು ಮಗಳನ್ನು ನೋಡಿಕೊಂಡು ಹೋಗುತ್ತಿದ್ದ. ಲೀನಾರವರ ಹನ್ನೊಂದು ವರುಷದ ದೊಡ್ಡ ಮೊಮ್ಮಗಳು ಡಾಲಿಗೆ ಶಾಂಭವಿಯನ್ನು ಕಂಡು ಜೊತೆಗೊಬ್ಬಳು ಆಟವಾಡುವವಳು ಬಂದಳೆಂದು ಖುಷಿಯಾಗಿತ್ತು. ಮಕ್ಕಳೊಂದಿಗೆ ಶಾಂಭವಿಯೂ ಚಳಿ ಬಿಟ್ಟು ಬೆರೆಯತೊಡಗಿದಳು. ಮಗಳು ಸಮಾಧಾನವಾಗಿರುವುದನ್ನು ತಿಳಿದ ಸೋಮಯ್ಯನೂ ಖುಷಿಪಟ್ಟಿದ್ದ. ಹೇಗೋ, ಅವಳು ಸರಿಹೋದರೆ ಸಾಕು ಎಂದು ಭಗವಂತನಲ್ಲಿ ಪ್ರಾರ್ಥಿಸಿದ್ದ.

ಒಂದು ಬಾರಿ ಅವನು ಅವಳನ್ನು ನೋಡಲು ಬೆಂಗಳೂರಿಗೆ ಬರುವಾಗ ಜೊತೆಯಲ್ಲಿ ಭಾವಮೈದುನನ ಮಗ ವೆಂಕಟೇಶನನ್ನು ಕರೆದುಕೊಂಡು ಬಂದಿದ್ದಾಗ, ಆ ವೆಂಕಟೇಶನ ಧ್ವನಿಯನ್ನು ಅವನು ಗೇಟಿನಲ್ಲಿದ್ದಾಗಲೇ ಕೇಳಿಸಿಕೊಂಡ ಶಾಂಭವಿ ಒಂದೇ ಸಮನೆ "ಅಮ್ಮಾ ಅಮ್ಮಾ" ಎಂದು ಜೋರಾಗಿ ಕೂಗುತ್ತಾ ರೂಮಿನೊಳಗೆ ಹೋಗಿ ಬಾಗಿಲು ಮುಚ್ಚಿ, ಚಿಲಕ ಹಾಕಿದ್ದಳು. ಲೀನಾರವರಿಗೆ ಇದೇನಪ್ಪಾ ಎಂದು ಗಾಬರಿಯಾಗಿತ್ತು. ಸ್ವಲ್ಪ ಸಮಯ ಪುಸಲಾಯಿಸಿದ ಮೇಲೆ ಅಳುತ್ತಾ ಬಾಗಿಲು ತೆರೆದಾಗ, ನಡುಗುತ್ತಿದ್ದ ಹುಡುಗಿ ಅವರನ್ನು ಭದ್ರವಾಗಿ ಹಿಡಿದುಕೊಂಡು ಮತ್ತಷ್ಟು ಜೋರಾಗಿ ಅಳಲು ಶುರುಮಾಡಿದಳು. "ಏನಾಯ್ತು ಶಾಂಭವಿ?" ಎಂದು ಅವರು ಕೇಳುತ್ತಿದ್ದರೆ, ಬಾಗಿಲ ಕಡೆ ಕೈ ತೋರಿಸಿ "ನನ್ನ ಎಲ್ಲಿಗೂ ಕಳಿಸಬೇಡಿ. ನಾನು ಅಲ್ಲಿಗೆ ಹೋಗುವುದಿಲ್ಲ" ಎಂದು ಅಳುತ್ತಾ ಕಿರುಚುತ್ತಿದ್ದ ಹುಡುಗಿಯನ್ನು ಸುಧಾರಿಸುವಷ್ಟರಲ್ಲಿ ಅವರಿಗೆ ಸುಸ್ತಾಗಿ ಹೋಯಿತು. "ಯಾಕೆ? ಏನಾಯ್ತು ನಿಧಾನವಾಗಿ ನನಗೆ ಹೇಳು" ಎಂದು ಅವರು ಅನ್ನುತ್ತಿದ್ದಂತೆ "ನಾನು ಅವನನ್ನು ನೋಡೋದಿಲ್ಲ, ನಾನು ಎಲ್ಲಿಗೂ ಹೋಗೋದಿಲ್ಲ" ಎಂದಷ್ಟೇ ಅನ್ನುತ್ತಿದ್ದಳು. "ಯಾರನ್ನು ನೋಡೋದಿಲ್ಲ, ಎಲ್ಲಿಗೆ ಹೋಗೋದಿಲ್ಲ, ಬಿಡಿಸಿ ಹೇಳು" ಎಂದು ಅವರು ಕೇಳಿದಾಗ ಬರೇ ಬಿಕ್ಕುತ್ತಿದ್ದಳು. ಮತ್ತೆ ಮತ್ತೆ ಅದೇ ಮಾತನ್ನು ಆಡುತ್ತಿದ್ದಳು. ಅಷ್ಟರಲ್ಲಿ ಸೊಸೆ ಬಂದು ಬಾಗಿಲು ತಟ್ಟಿ ಸೋಮಯ್ಯ ಹಾಗೂ ವೆಂಕಟೇಶ ಮನೆಯೊಳಗೆ ಬಂದಿರುವ ವಿಷಯ ತಿಳಿಸಿದಾಗ ಲೀನಾರವರು ಶಾಂಭವಿಯನ್ನು ಸೊಸೆಗೆ ಒಪ್ಪಿಸಿ ಹೊರಗೆ ನಡೆದಿದ್ದರು.

ಸೋಮಯ್ಯನೊಡನೆ ಒಂದೆರಡು ಮಾತನಾಡಿ ಅವನನ್ನು ಶಾಂಭವಿ ಇದ್ದ ರೂಮಿಗೆ ಕರೆದುಕೊಂಡು ಬಂದು ಶಾಂಭವಿಯ ಮುಂದೆ ನಿಲ್ಲಿಸಿದಾಗ, ಅವಳು "ಅಪ್ಪಯ್ಯ ನಾನು ಬರುವುದಿಲ್ಲ" ಎಂದು ಕೂಗುತ್ತಿದ್ದಳು. ಕದ ಮುಚ್ಚಿದ ಲೀನಾರವರು ಅವಳನ್ನು ಸಮಾಧಾನ ಮಾಡುತ್ತಾ "ಏನಾಯಿತು ನಿಧಾನವಾಗಿ ಹೇಳು ಪುಟ್ಟಾ" ಅಂದಾಗ ಅವಳು ನುಡಿದದ್ದು ಹೀಗೆ... ಅವಳು ಹತ್ತನೇ ಕ್ಲಾಸಿನಲ್ಲಿ ಓದುತ್ತಿರುವ ಸಮಯದಲ್ಲಿ ಅವಳ ಮನೆಯಿಂದ ಸ್ವಲ್ಪ ದೂರ ದಿಬ್ಬದ ಕೆಳಗಡೆಯ ಮನೆಯಲ್ಲಿದ್ದ ಸೋದರಮಾವನ ಮಗ ವೆಂಕಟೇಶ ಇವಳು ಶಾಲೆಗೆ ಹೋಗುವ ಸಮಯ ಕಾದಿದ್ದು ಅವಳನ್ನು ಮಾತನಾಡಿಸುವ ನೆಪದಲ್ಲಿ ಜೊತೆಯಲ್ಲೇ ಹೋಗಿ ಅವಳೊಡನೆ ಏನೇನೋ ಮಾತನಾಡುತ್ತ, ಸಮಯ ಸಿಕ್ಕಾಗ ಅವಳ ಮೈಕೈ ನೇವರಿಸುತ್ತಾ ಕಿರುಕುಳ ಕೊಡುತ್ತಿದ್ದ ಅವನಿಂದ ಕಷ್ಟಪಟ್ಟು ಬಿಡಿಸಿಕೊಂಡು ಓಡಿ ಹೋಗುತ್ತಿದ್ದಳು. ಕ್ರಮೇಣ ಶಾಲೆಯ ಸಮೀಪಕ್ಕೇ ಬರಲಾರಂಭಿಸಿದ್ದ. ಒಮ್ಮೆ ತೋಟದ ದಾರಿಯಲ್ಲಿ ಯಾರೂ ಇಲ್ಲದಿದ್ದಾಗ ಬಟ್ಟೆ ಎಳೆದು ಮೈಮೇಲೆ ಎರಗಲು ಪ್ರಯತ್ನಿಸಿದ್ದ. ಅವಳು ಜೋರಾಗಿ ಕಿರುಚಿಕೊಂಡಾಗ ತೋಟದ ಕೆಲಸಗಾರರು ಬರುತ್ತಿದ್ದುದನ್ನು ನೋಡಿ ಪರಾರಿಯಾಗಿದ್ದ. ಸಂಜೆ ಪುನಃ ಅವಳನ್ನು ಹೇಗೋ ಹಿಡಿದು ನಿಮ್ಮಪ್ಪನಿಗೆ ಈ ವಿಷಯ ಏನಾದರೂ ಹೇಳಿದರೆ ನಿನ್ನ ಕೈಕಾಲು ಮುರಿಯುವೆನೆಂದು ಹೆದರಿಸಿದ್ದ. ಏನೂ ಮಾಡಲು ತೋಚದೆ ಅವಳು ಭಯದಿಂದ ಶಾಲೆಗೆ ಹೋಗುವುದನ್ನು ನಿಲ್ಲಿಸಿಬಿಟ್ಟಳು. ಯಾರು ಬಲವಂತ ಮಾಡಿದರೂ ಹೋಗಲು ಒಪ್ಪಲಿಲ್ಲ. ಯಾವಾಗ ನೋಡಿದರೂ ನೀರಿನಿಂದ, ಸೋಪಿನಿಂದ ಮೈ ಉಜ್ಜಿ ಉಜ್ಜಿ ಚರ್ಮ ಕಿತ್ತು ಬರುವಂತೆ ಮೈತೊಳೆಯುತ್ತಿದ್ದಳು. ಆದರೂ ಅವಳಿಗೆ ಅವನು ಮೈ ಮುಟ್ಟಿದ ಅಸಹ್ಯ ಕೊಳೆ ಹೋದಂತೆ ಅನ್ನಿಸುತ್ತಿರಲಿಲ್ಲ. ಮಾನಸಿಕವಾಗಿ ಕುಗ್ಗತೊಡಗಿದಳು. ಹುಲಿಯಿಂದ ತಪ್ಪಿಸಿಕೊಳ್ಳುವ ಹುಲ್ಲೆಯಂತೆ ಯಾವಾಗಲೂ ಆತಂಕದಿಂದ ನಡುಗುತ್ತಾ ಇದ್ದ ಸಮಯದಲ್ಲೇ ಅವಳಿಗೆ ಡಿಸೋಜ ದಂಪತಿಗಳ ಭೇಟಿ ಸ್ವಲ್ಪಮಟ್ಟಿನ ಧೈರ್ಯ ತುಂಬಿಸಿತ್ತು. ಅವಳ ಮಾತು ಕೇಳಿ ಕೋಪ ಉಕ್ಕರಿಸಿದ ಸೋಮಯ್ಯ ಬಾಗಿಲು ತೆಗೆದು "ವೆಂಕಟೇಶ......ವೆಂಕಟೇಶಾ" ಎಂದು ಕೂಗಿಕೊಂಡು ಹೊರಬರುತ್ತಿದ್ದಂತೆ ವೆಂಕಟೇಶ ಅಲ್ಲಿಂದ ಯಾವಾಗಲೋ ಕಾಲ್ಕಿತ್ತಿದ್ದ. ಲೀನಾರವರ ಸೊಸೆ ಅವನಾಗಲೇ ಹೊರಟು ಹೋಗಿದ್ದಾನೆ ಎಂದು ಹೇಳಿದಾಗ ಅಲ್ಲೇ ತಲೆಯ ಮೇಲೆ ಕೈಹೊತ್ತು ಕುಳಿತು ಅಳತೊಡಗಿದ. "ಅಮ್ಮಾ, ಅವಳು ಇಷ್ಟು ಮನಸ್ಸಿನಲ್ಲಿ ಇಟ್ಟುಕೊಂಡು ಒದ್ದಾಡುತ್ತಿದ್ದಾಳೆ ಎಂದು ನನಗೆ ತಿಳಿಯಲೇ ಇಲ್ಲವಲ್ಲಮ್ಮ.ಎಂಥಾ ತಂದೆ ನಾನು, ನನ್ನ ಮಗುವಿಗೆ ಏನಾಗುತ್ತಿದೆ ಅನ್ನುವುದನ್ನು ತಿಳಿಯದೆ ಹೋದೆ. ಈಗ ಏನು ಮಾಡೋದಮ್ಮ?" ಎಂದು ಅವನು ದುಃಖದಿಂದ ನುಡಿದಾಗ ಲೀನಾರವರು "ಅವಳು ಭಯಪಟ್ಟಿದ್ದಾಳೆ ಸೋಮಯ್ಯ. ನೀನು ಹೀಗೆ ಅಳುತ್ತಾ ಕುಳಿತರೆ ಅವಳಿಗೆ ಧೈರ್ಯ ಹೇಳುವವರಾರು? ಕಣ್ಣು ವರೆಸಿಕೊಂಡು ಅವಳಿಗೆ ಏನು ಆಗುವುದಿಲ್ಲ ಎಂದು ಸಮಾಧಾನ ಮಾಡು. ಅವಳು ಆವಾಗಲೇ ನಿನ್ನ ಬಳಿ ಹೇಳಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಹೆದರಿ ಸುಮ್ಮನಾಗಿಬಿಟ್ಟಿದ್ದಾಳೆ. ಈಗಲೂ ಕಾಲ ಮಿಂಚಿಲ್ಲ. ನಾನು ಅವಳ ಬಳಿ ಮಾತನಾಡುತ್ತೇನೆ. ನಾಳೆ ನಾನು ಯಾರಾದರೂ ಒಳ್ಳೆಯ ಮಾನಸಿಕ ವೈದ್ಯರ ಸಲಹೆ ಪಡೆಯುತ್ತೇನೆ. ಅವಳಿಗೆ ಸರಿಯಾದ ಚಿಕಿತ್ಸೆ ಸಿಗುವಂತೆ ಮಾಡೋಣ. ನೀನು ಒಳಗೆ ಹೋಗಿ ಅವಳಿಗೆ ಧೈರ್ಯ ಹೇಳು" ಎಂದರು. ಸೋಮಯ್ಯ ಮಗಳ ಬಳಿ ಕುಳಿತು "ನಿನಗೇನೂ ಆಗುವುದಿಲ್ಲ ಬಿಡು. ಅವನ ಕೈಕಾಲು ನಾನು ಮುರಿಯುತ್ತೇನೆ. ನನ್ನ ಬಳಿ ನೀನು ಆವಾಗಲೇ ಹೇಳಿದ್ದರೆ ಇಷ್ಟೊಂದು ಒತ್ತಡದಿಂದ ನರಳುವ ಸಂದರ್ಭವೇ ಬರುತ್ತಿರಲಿಲ್ಲ ಮಗಳೇ, ಅಳಬೇಡ ಎಲ್ಲಾ ಸರಿಹೋಗುತ್ತೆ" ಎಂದು ಅವಳ ತಲೆ ನೇವರಿಸುತ್ತಿದ್ದ. "ಅಪ್ಪಯ್ಯ" ಎಂದು ಅವನನ್ನು ತಬ್ಬಿ ಅಳುತ್ತ ಕುಳಿತಿದ್ದಳು.

ಸೋಮಯ್ಯನನ್ನು ಸಮಾಧಾನ ಮಾಡಿ ಊರಿಗೆ ಕಳುಹಿಸಿದ ಮೇಲೆ ಲೀನಾರಿಗೂ ಅವಳ ಮನಸ್ಥಿತಿಯ ಅರಿವಾಗಿತ್ತು. ದೇವರು ಶಾಂಭವಿಯನ್ನು ಈ ಉದ್ದೇಶದಿಂದಲೇ ನನ್ನ ಕೈಗೆ ತಂದುಹಾಕಿದ್ದಾನೆ. ನನ್ನ ಕೈಲಾದ ಪ್ರಯತ್ನ ನಾನು ಮಾಡಬೇಕು ಎಂದು ಮನಸ್ಸಿನಲ್ಲೇ ನಿರ್ಧರಿಸಿ, ಗಂಡ, ಮಗ ಹಾಗೂ ಸೊಸೆಯೊಂದಿಗೆ ಈ ಬಗ್ಗೆ ಚರ್ಚಿಸಿ ಒಂದು ಒಮ್ಮತಕ್ಕೆ ಬಂದರು. ಡಾಕ್ಟರರ

ಸಲಹೆಯಂತೆ ಅವರ ದೊಡ್ಡ ಮೊಮ್ಮಗಳು ಡಾಲಿ ಯಾವಾಗಲೂ ಶಾಂಭವಿಯ ಜೊತೆಯಲ್ಲೇ ಇರತೊಡಗಿದಳು. ರಾತ್ರಿಯಲ್ಲಿ ಅವಳ ಕೊಠಡಿಯಲ್ಲೇ ಮಲಗುವುದು, ಆಡುವುದು ಟಿ.ವಿ. ನೋಡುವುದು, ಶುರುವಾಯಿತು. ಸರಿಯಾದ ಸಮಯದಲ್ಲಿ ಚಿಕಿತ್ಸೆ ಕೊಡಿಸಿ ಅವಳ ಮನಸ್ಸಿನಲ್ಲಿ ಆಳವಾಗಿ ಹುದುಗಿದ್ದ ಭಯದಿಂದ ಹೊರಬರಲು ಎಲ್ಲರೂ ಅವಳಿಗೆ ಊರುಗೋಲಾಗಿ ನಿಂತರು. ಲೀನಾರವರು ಅವಳ ಬಳಿ ಕುಳಿತು "ನಿನಗೇನೂ ಆಗಿಲ್ಲ, ನೀನು ಹೆದರುವ ಅವಶ್ಯಕತೆಯೇ ಇಲ್ಲ, ಯಾವಾಗಲೂ ಇಂತಹ ವಿಷಯಗಳನ್ನು ನಿನಗೆ ಆಪ್ತರಾದವರೊಡನೆ ತಕ್ಷಣ ಹಂಚಿಕೊಳ್ಳಬೇಕು. ನೀನೇನು ತಪ್ಪು ಮಾಡಿಲ್ಲದಿರುವಾಗ ನಿನಗೇಕೆ ಭಯ? ನೀನು ಹೀಗೆ ಮನಸ್ಸು ಕೆಡಿಸಿಕೊಂಡರೆ ನಿನ್ನ ಮೇಲೆ ಅವನು ವಿಜಯ ಸಾಧಿಸಿದಂತಾಗುವುದು. ಅದಕ್ಕೆ ಅವಕಾಶ ಕೊಡಬೇಡ. ಧೈರ್ಯವಾಗಿ ಪರಿಸ್ಥಿತಿಯನ್ನು ಎದುರಿಸಿ ನಿಲ್ಲು. ಆತ್ಮವಿಶ್ವಾಸ ಕಳೆದುಕೊಳ್ಳಬೇಡ. ನೀನು ನಗುನಗುತ್ತಾ ನಿನ್ನ ಜೀವನದಲ್ಲಿ ಮುಂದೆ ಬರಬೇಕು. ಚೆನ್ನಾಗಿ ಓದಿ ನಿನ್ನ ಆರ್ಥಿಕ ನೆಲೆ ಹಾಗೂ ಬಾಳನ್ನು ರೂಪಿಸಿಕೋ" ಎಂದ ಹೇಳಿದ ಧೈರ್ಯದ ಮಾತುಗಳಿಂದ ಅವಳು ಚೇತರಿಸಿಕೊಳ್ಳುವಂತಾಗಿತ್ತು. ಅವಳ ಬದುಕಿನಲ್ಲಿ ನಡೆದ ಘಟನೆಗಳನ್ನು ಮರೆತು ಮುನ್ನಡೆದಿದ್ದಳು. ಲೀನಾರವರ ಸೊಸೆಯ ಮುತುವರ್ಜಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಮತ್ತೆ ಬರೆದು ಉತ್ತೀರ್ಣಳಾದಳು. ಆಮೇಲೆ ಡಾಲಿಗೆ ಪಾಠಮಾಡುತ್ತಿದ್ದ ಟೀಚರ್ ಮಾರ್ಗದರ್ಶನದಲ್ಲಿ ಇಂಗ್ಲಿಷ್ನಲ್ಲಿ ಸಂಭಾಷಣೆ ಮಾಡುವುದನ್ನು ಕಲಿತಳು. ಪ್ರತಿಯೊಂದು ಕೆಲಸ ಕಾರ್ಯದಲ್ಲಿ ಅವಳ ಅಚ್ಚುಕಟ್ಟುತನ ಎದ್ದುಕಾಣುತ್ತಿತ್ತು. ಎಲ್ಲರ ಪರಿಶ್ರಮದಿಂದ ಶಾಂಭವಿ ಹೊಸಹುಟ್ಟು ಪಡೆದಳು.

ಮೊಮ್ಮಕ್ಕಳು ದೊಡ್ಡವರಾದಂತೆ ಶಾಂಭವಿ ಲೀನಾರಲ್ಲಿ ತಾನು ಬ್ಯೂಟಿಷಿಯನ್ ಕೋರ್ಸ್ ಮಾಡುವ ಇಚ್ಛೆಯನ್ನು ತೋಡಿಕೊಂಡಾಗ ಲೀನಾರವರು ಎಲ್ಲಕಡೆ ವಿಚಾರಿಸಿ ಆ ಕೋರ್ಸಿಗೆ ಸೇರಿಸಿದರು. ಮನೆಯಲ್ಲಿ ಗಂಡ ಸೊಸೆ ಅವರನ್ನು ಶಾಂಭವಿಯ "ಗಾಡ್ ಮದರ್" ಎಂದು ಹಾಸ್ಯ ಮಾಡುತ್ತಿದ್ದರು. ಕೋರ್ಸ್ ಮುಗಿದ ಮೇಲೆ ಅವಳ ಮೊದಲ ಪ್ರಯತ್ನ ಲೀನಾರವರ ಮೇಲೆಯೇ! ಅವರ ಸೊಸೆಯ ಜೊತೆ ಅಲಂಕಾರ ಸಾಮಗ್ರಿಗಳನ್ನು ಖರೀದಿಸಿ ಒಂದು ದಿವಸ ಮನೆಯಲ್ಲೇ ಸೊಸೆ ಹಾಗೂ ಅತ್ತೆಗೆ ಫೇಸ್-ಪ್ಯಾಕ್, ಫೇಸ್-ಸ್ಕ್ರಬ್ ಮಾಡಿ ತನ್ನ ಕೆಲಸ ಶುರು ಮಾಡಿಯೇಬಿಟ್ಟಳು. ಅಲ್ಲಿಂದ ಅಕ್ಕಪಕ್ಕದ ಮನೆಯ ಹೆಂಗಸರಿಗೆಲ್ಲಾ ಪೆಡಿಕ್ಯೂರ್, ಮೆನಿಕ್ಯೂರ್, ಕೇಶವಿನ್ಯಾಸ, ಫೇಷಿಯಲ್ ಎಲ್ಲಾ ಬಿಡುವಿನ ವೇಳೆಯಲ್ಲಿ ಮಾಡಿ ದುಡಿಯತೊಡಗಿದಳು. ಬೆಳಿಗ್ಗೆ ಅಡುಗೆ ಕೆಲಸವೆಲ್ಲ ಮಾಡಿಟ್ಟು ಹನ್ನೊಂದರ ಮೇಲೆ ತನ್ನ ಕೆಲಸ ಶುರು ಹಚ್ಚಿಕೊಳ್ಳುತ್ತಿದ್ದಳು. ಚುರುಕಾಗಿದ್ದ ಶಾಂಭವಿಗೆ ಮದುವೆ ಮಾಡುವ ಸಮಯ ಬಂದಾಗ ಒಳ್ಳೆಯ ಕಡೆ ಮಂಗಳೂರು ಕೆಮಿಕಲ್ ಮತ್ತು ಫರ್ಟಿಲೈಸರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಹುಡುಗನೊಡನೆ ಮದುವೆಯೂ ಆಗಿತ್ತು. ಹುಡುಗ ಒಳ್ಳೆಯವನಾಗಿದ್ದು ಅವಳಿಗೆ ಮುಂದೆ ಬ್ಯೂಟಿಪಾರ್ಲರ್ ಸ್ವಂತವಾಗಿ ನಡೆಸಲು ಅವನೇ ಬಂಡವಾಳ ಹೂಡಿದ್ದ. ಪಳಗಿದ ಹಾಗೂ ಪರಿಣಿತಳಾದ ಅವಳು ಅದರಲ್ಲಿ ಯಶಸಸ್ಸಿನ ಹಾದಿ ತುಳಿದಿದ್ದಳು.

ಯಾವಾಗಲೂ ಫೋನು ಅಥವಾ ಕಾಗದ ಬರೆದು ಲೀನಾರಿಗೆ ವರದಿ ಒಪ್ಪಿಸುತ್ತಿದ್ದ ಶಾಂಭವಿಯಿಂದ ಎರಡು-ಮೂರು ತಿಂಗಳುಗಳಿಂದ ಏನೂ ವಿಷಯವೇ ತಿಳಿದಿರಲಿಲ್ಲ. ಅವರು ಆಲೋಚನೆ ಮಾಡುತ್ತಿರುವಾಗಲೇ ಇಂದು ಬಂದು ಎದುರಿಗೆ ನಿಂತಿದ್ದಳು.

ಹೊರಗಡೆ ಸುಮಾರು ಹೊತ್ತು ಮಾತನಾಡುತ್ತಾ ಇದ್ದ ಡಾಲಿ ಮತ್ತು ಶಾಂಭವಿ ಅಡುಗೆ ಮನೆಗೆ ಬಂದರು. "ಯಾಕಮ್ಮ, ಇವತ್ತು ಅಡುಗೆಯವರು ಬರಲಿಲ್ಲವೇ? ನಾನು ಮಾಡುತ್ತೀನಿ ಬನ್ನಿ" ಎಂದು ಶಾಂಭವಿ ಹೇಳಿದಾಗ "ನೀನೇನು ಮಾಡೋದು. ಎಲ್ಲಾ ನಾನು

ಮಾಡಿದ ಮೇಲೆ" ಎಂದು ತಮಾಷೆ ಮಾಡಿ ಅವಳ ಕೈಗೆ ತಿಂಡಿಯ ತಟ್ಟೆ ಕೊಟ್ಟಿದ್ದರು. ತಟ್ಟೆಯನ್ನು ಪಕ್ಕಕ್ಕೆ ಇಟ್ಟು ಅವರನ್ನು ತಬ್ಬಿಕೊಂಡು ಅವಳು ಅಳತೊಡಗಿದಾಗ ಲೀನಾರವರಿಗೆ ಗಾಬರಿಯಾಯ್ತು. "ಏನಾಯ್ತಮ್ಮಾ" ಎಂದು ಅವರು ಕೇಳಿದಾಗ, ಕಣ್ಣೊರೆಸಿಕೊಂಡು "ಇದು ಆನಂದ ಬಾಷ್ಪ, ಅಮ್ಮ" ಎಂದು ನಕ್ಕಿದ್ದಳು. "ನಿಮ್ಮೆಲ್ಲರ ಆಸರೆಯಿಂದ ನಾನು ಇಷ್ಟರಮಟ್ಟಿಗೆ ಆಗಿದ್ದೀನಿ. ನಿಮಗೆ ನಾನು ಚಿರಋಣಿ" ಎಂದು ಭಾವುಕಳಾಗಿ ನುಡಿದಾಗ ಲೀನಾರವರ ಮುಖದಲ್ಲಿ ಅಭಿಮಾನ, ತೃಪ್ತಿ ಎದ್ದುಕಾಣುತ್ತಿತ್ತು. ಅದನ್ನು ಗುರುತಿಸಿದ ಶಾಂಭವಿಯ ಕಣ್ಣುಗಳು ಧನ್ಯತಾಭಾವವನ್ನು ಹೊರಸೂಸಿದ್ದವು. ***

ಕೋರಿಕೆ

ಬೇಸಿಗೆಯ ಸುಡುಸುಡುವ
ಬಿಸಿಲ ಮಧ್ಯದಿ ಬೀಸಿ
ಬರುವ ತಂಗಾಳಿಯೊಲು
ನಾನಾಗಬೇಕು|
ಮಲೆನಾಡ ಉಡುಗಿಸುವ
ಕಾರ್ಗಾಲದಾ ಮಳೆಗೆ
ಎಳೆಯರಲೆದಾಡಿಸುವ
ಕೋಟಾಗಬೇಕು||

ಗಡಗಡನೆ ನಡುಗಿಸುವ
ಮುದುಗಿಸುವ ಕಡುಚಳಿಯ
ಥಳಿಸಿ ಓಡಿಸಿಬಿಡುವ
ಶಾಲಾಗಬೇಕು|
ಥಳಥಳನೆ ಹೊಳೆಯುತಿಹ
ಶರದ ದಾ ಅಂಬರದ
ಪರಿಶುದ್ಧ ಸುವಿಶಾಲ
ಸುಮನವಿರಬೇಕು||

ಪಾಪ ಬುದ್ಧಿಯನಳಿಪ
ಕಾಕು ಜನರನು ಸೆಳೆವ
ನೀತಿಯುತ ಸಜ್ಜನರ
ಸಹವಾಸಬೇಕು||

ಆತಪದಿ ನಿಲುವ ಘನ
ತಾಪವಳಿಸುವ ನೆರಳ
ಕುಸುಮ ಫಲಭರಿತ ಪಾ
ದಪವಾಗಬೇಕು||

ಲವಣ ಜಲವನು ಕುಡಿದು
ಜೀವಜಲ ನೀಡುತಿಹ
ಜಲಧರನ ತೆರದಿ ಸವಿ
ಸೆಲೆಯಾಗಬೇಕು|
ಹರಿ ಹರಿವ ದಾರಿಯಲಿ
ಸಿಗುವ ಧರೆಯನು ಉಣಿಸಿ
ಸಾಗರವ ಸೇರುತಿಹ
ಸರವಾಗಬೇಕು||

ಮಲಿನ ಜಲದಲಿ ಅರಳಿ
ನಳಿನನಾಭಗೆ ಸಲುವ
ಕಮಲದೊಲು ಭವದಲ್ಲಿ
ಭವಿಯಾಗಬೇಕು|
ಬರಿದೆ ಬಯಕೆಯಿದಲ್ಲ
ಒಡಲಾಳದಾ ಬಯಕೆ
ಅರಿಕೆಯಿದು ಜಗದೊಡೆಯ
ದಯಮಾಡಬೇಕು||

– **ಪಾರ್ವತಿ.ವಿ .ಹೆಗಡೆ**

ಸ್ವಾನುಭವ

ನನ್ನ ಕಣ್ಣೀರಿನ ಕತೆ ವ್ಯಥೆ - ನಸ್ಯ ಚಿಕಿತ್ಸೆಯ ಸ್ವಾರಸ್ಯ

– ದಾ.ಭೀ. ಪ್ರಾಣೇಶ ರಾವ್

ವೈದ್ಯರು ಹೇಳಿದ್ದು: "ದೈವ ಸೃಷ್ಟಿಯಲ್ಲಿ ನಮ್ಮ ಮುಖದಲ್ಲಿ ನರಮಂಡಲದ ನೆಟ್ವರ್ಕ್ ಇದೆ. ಅದರಲ್ಲಿರುವ ಸಪ್ತದ್ವಾರಗಳಲ್ಲಿನ ಕಲ್ಮಶವನ್ನು ಶುಚಿಗೊಳಿಸುವುದೇ ನಸ್ಯ ಚಿಕಿತ್ಸೆ. ನಮ್ಮ ಶರೀರದ ನವದ್ವಾರಗಳ ಪೈಕಿ ಉಳಿದೆರಡು ದ್ವಾರಗಳ ಶುಚಿಗೆ ವಿರೇಚನ ಚಿಕಿತ್ಸೆ ಮೊದಲೇ ನೀಡಲಾಗಿರುತ್ತದೆ. ವೈದ್ಯರ ಸೂಚನೆಯಂತೆ ನುರಿತ ಸಿಬ್ಬಂದಿ ಈ ಚಿಕಿತ್ಸೆ ಮಾಡುವರು. ಮಹಿಳೆಯರಿಗೆ ಮಹಿಳಾ ಚಿಕಿತ್ಸಕಿಯರಿರುವರು".

ಸಾಮಾನ್ಯವಾಗಿ ಈ ಚಿಕಿತ್ಸೆ ಮಾಡುವರು ಕೇರಳೀಯರು. ನನ್ನ ಚಿಕಿತ್ಸೆಗೂ ಇಬ್ಬರು ಶಿಷ್ಯರು ಸಿದ್ಧವಾಗಿದ್ದರು. ಒಬ್ಬನಿಗೆ ಮಲಯಾಳಂ ಮಾತ್ರ ಗೊತ್ತಿತ್ತು. ಇನ್ನೊಬ್ಬನಿಗೆ ಹರಕು ಮುರುಕು ಇಂಗ್ಲಿಷ್ ಮತ್ತು ಅಲ್ಪ ಸ್ವಲ್ಪ ಕನ್ನಡ ಗೊತ್ತಿತ್ತು.

ಚಿಕಿತ್ಸಾ ಕೋಣೆಯಲ್ಲಿ ಮೂರು ಅಡಿಗಿಂತ ಎತ್ತರದ ಅಭ್ಯಂಜನ ಮೇಜು. ಅದನ್ನು ಹತ್ತಲು ಎರಡು ಮೆಟ್ಟಿಲ ಕಾಲು ಸ್ಟೂಲು. ಷರಟು ಬನೀನು ತೆಗೆಯಲು ಸೂಚನೆ. ಮೇಜಿನ ಮೇಲೆ ಅಂಗಾತ ಮಲಗಿಸಿ ಹಣೆಗೆ ಬೆಚ್ಚನೆಯ ತೈಲ ಹಚ್ಚಿ ಮೃದುವಾಗಿ ತಲೆನೋವಿಗೆ ತಿಕ್ಕುವಂತೆ ಹಣೆಯ ಪಕ್ಕಗಳಲ್ಲಿ ಒಬ್ಬ ಶಿಷ್ಯನಿಂದ ಚಿಕಿತ್ಸೆ ಆರಂಭ. ಕೆಲವು ನಿಮಿಷಗಳ ನಂತರ ಕಣ್ಣಿನ ರೆಪ್ಪೆಗಳ ಮೇಲೆ ಮೃದುವಾಗಿ ತಬಲ ನುಡಿಸುವಂತೆ ಬೆರಳುಗಳನ್ನಾಡಿಸಿದ. ನಂತರ ಎಳೆಯ ಕಂದಗಳಿಗೆ ಎಣ್ಣೆ ನೀರು ಹಾಕುವಾಗ ಮಾಡಿದಂತೆ ಮೂಗನ್ನು ನೀವಿದ. ನಂತರ ಮೆಲ್ಲಗೆ ಮೂಗಿನ ಕೆಳಗೆ ತುಟಿಯ ಮೇಲೆ ಬೆರಳಾಡಿಸಿದ. ಆಮೇಲೆ ಎರಡೂ ಕೆನ್ನೆಗಳನ್ನು ಮೆಲ್ಲಮೆಲ್ಲಗೆ ಬಲಸುತ್ತು (Clockwise), ಎಡಸುತ್ತು (anticlockwise) ನೀವುತ್ತ ಸ್ವಲ್ಪ ಜೋರು ಮಾಡಿದ. ದವಡೆಗಳು ನೋಯುತ್ತೆ, ಸ್ವಲ್ಪ ಮೆಲ್ಲಗೆ ಮಾಡಲು ಹೇಳಿದೆ. ಕೆಲ ನಿಮಿಷಗಳ ನಂತರ ಗಲ್ಲದ ಮೇಲೆ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಎರಡು ಸಲ ಭಸಭಸ ತಿಕ್ಕಿದ. ನನ್ನ ಹದಿನೈದೂವರೆ ಹಲ್ಲುಗಳ ಕೃತಕ ದಂತ ಪಂಕ್ತಿಗಳು (Dentures) ಕಳಚಿ ಮೇಲೆದ್ದವು. ಅವನ್ನು ಆಚೆ ತೆಗೆದಿಟ್ಟೆ. ಉಳಿದ ಹದಿನಾರೂವರೆ ಹಲ್ಲುಗಳು ಕುರುಕಲು ತಿಂಡಿ ತಿನ್ನಲು ಅವಶ್ಯ. ಸ್ವಲ್ಪ ಮೆಲ್ಲಗೆ ಮಸಾಜು ಮಾಡಲು ಹೇಳಿದೆ. ಸಾರಿ ಎನ್ನುತ್ತ ಮಸಾಜು ಮುಂದುವರೆಸಿದ. ಮುಂದೆ ಗಲ್ಲದ ಕೆಳಗಿನ ಕತ್ತಿನ ಮೇಲೂ, ಕತ್ತಿನ ಹಿಂಭಾಗವನ್ನೂ ಮಸಾಜು ಮಾಡಿದ. ನಂತರ ಎದೆಯ ಮೇಲೂ ಬೆಚ್ಚನೆಯ ತೈಲ ಸುರಿದು ಹೊಕ್ಕಳಿನವರೆಗೂ ಹತ್ತು ಹದಿನೈದು ನಿಮಿಷಗಳು ನೀವಿದ. ಆಮೇಲೆ 'ಸಿಟ್' ಎಂದ.

ಎದ್ದು ಕೂತೆ. ಎದುರಿಗೆ ಕುಕ್ಕರಿನಲ್ಲಿ ನೀರು ಕುದ್ದು ಹಬೆ ಬರುತ್ತಿತ್ತು. ಅದಕ್ಕೆ ಅಡಿಗೆ ಸಿಲಿಂಡರಿನ ರಬ್ಬರ್ ಟ್ಯೂಬನ್ನು ಜೋಡಿಸಿದ. ಹಬೆ ಬರುತ್ತಿರುವ ತುದಿಗೆ ಟವಲನ್ನು ಸುತ್ತಿಹಿಡಿದು ಹಬೆಯ ಶಾಖ ಹಿತವಾಗಿದೆಯಾ ಎಂದು ಕೇಳಿದ. ಆ ಹಬೆಯ ಕೊಳವೆ ನನ್ನ ಮುಖದ ಕಡೆಗೆ ತಿರುಗಿಸಿದ. ಸುಮಾರು ಹತ್ತು ಹದಿನೈದು ನಿಮಿಷಗಳು ಮುಖ, ಎದೆಗೆ ಹಬೆಯ ಸ್ನಾನವಾಯಿತು. ಇನ್ನೊಬ್ಬ ಶಿಷ್ಯ ಸ್ಟೌವಿನ ಉರಿಯನ್ನು ಹೆಚ್ಚು ಕಡಿಮೆ ಮಾಡುತ್ತ ಸಹಾಯ ಮಾಡುತ್ತಿದ್ದ. ನಂತರ ಟವಲಿನಿಂದ ಒರೆಸಿ ಮತ್ತೆ ಮೇಜಿನ ಮೇಲೆ ಮಲಗಲು ಹೇಳಿದರು.

ಬೆನ್ನ ಹಿಂದೆ ಸಣ್ಣ ದಿಂಬು ಇಟ್ಟು ಕತ್ತು ಮೇಲೆ ಮಾಡಿಸಿದರು. ಮೂಗಿನ ಎರಡೂ ಹೊಳ್ಳೆಗಳಿಗೆ ನಾಲ್ಕು ನಾಲ್ಕು ಹನಿ ಬೆಚ್ಚನೆಯ ತೈಲವನ್ನು ತೊಟ್ಟಿಕ್ಕಿಸುತ್ತ ಬ್ರೀತ್ ಬ್ರೀತ್ ಎಂದರು. ತೈಲ ಗಂಟಲಿಗೆ ಇಳಿದು ಕಫ ಬರುವಂತೆ ಆಯಿತು. ಸ್ಪಿಟ್ ಎಂದು ಬಾತ್ರೂಮ್ ತೋರಿಸಿದರು. ವಾಷ್ ಬೇಸನ್ನಿನಲ್ಲಿ ಉಗುಳಿದೆ. ಒಂದು ಲೋಟ ಬೆಚ್ಚನೆಯ ಕಷಾಯ (ತ್ರಿಫಲಾ ಚೂರ್ಣದ) ಕೊಟ್ಟು ಗಾರ್ಗಲ್ ಎಂದ. ಅರ್ಥವಾಯಿತು

ಎಂದು ಅದನ್ನು ಮೂರು ನಾಲ್ಕು ಸಲ ಗಂಟಲಿಗೆ ಸುರಿದು ಗಳಗಳ ಮಾಡಿ ಉಗುಳಿದೆ. ಹೊರಗೆ ಬಂದು ಮತ್ತೆ ಮೇಜಿನ ಮೇಲೆ ಸಿಟ್ ಎಂದು ತೋರಿಸಿದರು. ಒಬ್ಬ ಒಂದು ಚುಟ್ಟಾ ಹೊತ್ತಿಸಿ ಮೂಗಿನ ಹೊಳ್ಳೆಗಳಿಗೆ ಹಿಡಿಯುತ್ತ ಬ್ರೀತ್ ಬ್ರೀತ್ ಎಂದ. ಹೊಗೆ ಗಂಟಲಿಗೆ ಸುತ್ತಿ ಕೆಮ್ಮು ಬಂತು. ಮತ್ತೆಮತ್ತೆ ಬ್ರೀತ್ ಬ್ರೀತ್ ಎಂದ. ಇನ್ನೊಬ್ಬ ಶಿಷ್ಯ ಬಂದು ಮೂಗಿನಿಂದ ಬಾಯಿ ಹೊರಗೆ, ಬಾಯಿಯಿಂದ ಮೂಗಿನ ಹೊರಗೆ ಹೊಗೆ ಬಿಡುವಂತೆ ಹೇಳಿದ. ಅಭ್ಯಾಸವಿಲ್ಲದ ಬ್ರಾಹ್ಮಣ ಅಗ್ನಿಹೋತ್ರ ಮಾಡಿದ ಗಾದೆ ನೆನಪಾಯಿತು. ಚುಟ್ಟ ಮುಗಿಯಿತು. ನಸ್ಯ ಚಿಕಿತ್ಸೆಯೂ ಮುಗಿಯಿತು.

ನೇತ್ರ ತರ್ಪಣ ಚಿಕಿತ್ಸೆ: ಮೊದಲ ಎರಡು ದಿನಗಳು ನಸ್ಯ ಚಿಕಿತ್ಸೆ ಮಾತ್ರ. ಮೂರನೇ ದಿನ ನಸ್ಯ ಚಿಕಿತ್ಸೆ ಜೊತೆಗೆ ಮೂಗಿನ ಹೊಳ್ಳೆಗಳಿಗೆ ಆರು ಹನಿ ತೈಲ ತೊಟ್ಟಿಕ್ಕಿಸಲಾಯಿತು. ನಂತರ ಅಭ್ಯಂಜನದ ಮೇಜಿನ ಮೇಲೆ ಅಂಗಾತ ಮಲಗಿಸಿದರು. ಚಪಾತಿ, ಪೂರಿ ಮಾಡುವಾಗ ಕಲೆಸುವ ಹಾಗೆ ಕಲೆಸಿದ ಗೋಧಿ ಹಿಟ್ಟಿನಿಂದ ಹುಬ್ಬಿನ ಮೇಲೂ ಮೂಗಿನ ಕಂಬದ ಮೇಲೂ ಕೂಡುವಂತೆ ಬಟ್ಟಲನ್ನು ಮಾಡಿ ಕಣ್ಣುಗಳ ಮೇಲಿರಿಸಿದರು. ಕೆಳಗೆ ಸೋರದಂತೆ ಒದ್ದೆಮಾಡಿ ಚೆನ್ನಾಗಿ ಮೆತ್ತಿದರು. ನನ್ನ ತಲೆಗೆ ಆಸ್ಪತ್ರೆಯವರು, ಅಡಿಗೆಯವರು ಹಾಕುವಂತಹ ಟೋಪಿ ಹಾಕಿದ್ದರು. ನಂತರ ಬಲ ಮಗ್ಗುಲಿಗೆ ತಿರುಗಿಸಿ ಕಿವಿ ಆಕಾರದ ಬೌಲನ್ನು ಕಿವಿ ಪಕ್ಕ ಒಬ್ಬ ಹಿಡಿದ. ಇನ್ನೊಬ್ಬ ತ್ರಿಫಲಾ ಚೂರ್ಣದ ಬೆಚ್ಚನೆಯ ನೀರನ್ನು ಕಣ್ಣಿಗೆ ಸುರಿಸುತ್ತಾ, ' ಓಪನ್ ಐಸ್ ' ಎಂದ. ನಾನು ಬಾಯಿ ಬಿಟ್ಟು ಕಣ್ಣು ಮುಚ್ಚಿದೆ. ಅವನು 'ನೋ ನೋ, ಐಸ್ ಓನ್ಲಿ ಓಪನ್' ಎನ್ನುತ್ತ ಗಲ್ಲ ಅದುಮಿ ಬಾಯಿ ಮುಚ್ಚಿದ. ಕಣ್ಣನ್ನು ಬೆರಳಿನಿಂದ ಅರಳಿಸಿ 'ಬ್ಲಿಂಕ್, ಬ್ಲಿಂಕ್' ಎಂದ. ಆಗ ನನಗೆ ವೈದ್ಯರು ಹಿಂದೆ ಕಣ್ಣು ಪಿಳಿಪಿಳಿ ಮಾಡುವ ಬಗ್ಗೆ ಹೇಳಿದ್ದು ನೆನಪಾಯಿತು. ಕಷ್ಟದಿಂದ ಕಣ್ಣು ಪಿಳಿಪಿಳಿ ಮಾಡಿದೆ. ಮೂರು ನಾಲ್ಕು ಸಲ ಹೀಗೇ ಕಣ್ಣನ್ನು ತೊಳೆದರು. ಇನ್ನೊಂದು ಕಣ್ಣಿಗೂ ಹೀಗೇ ಮಾಡಿದರು. ನಂತರ ಮತ್ತೆ ಅಂಗಾತ ಮಲಗಿಸಿ ಕಣ್ಣುಗಳಿಗೆ ಬೆಚ್ಚನೆಯ ತುಪ್ಪ ಹಾಕಿ ಕಣ್ಣು ಪಿಳಿಪಿಳಿ ಮಾಡಲು ಹೇಳಿದರು. ಮೂರು ನಾಲ್ಕು ಸಲ ಈ ಘೃತ ತರ್ಪಣವಾಯಿತು.

ಹೀಗೇ ಐದು ದಿನಗಳು ಚಿಕಿತ್ಸೆ ಮುಂದುವರೆಯಿತು. ನಂತರ ವೈದ್ಯರ ಭೇಟಿ. ಮನೆಯಲ್ಲಿ ಕಣ್ಣುಗಳಿಗೆ ಹಾಕುವ ಔಷಧಿ, ಇತ್ಯಾದಿ ನಿಯಮ ಪಾಲನೆಯ ಸಲಹೆ. ಮನೆಯವರಿಗೆಲ್ಲಾ ಅನುಭವದ ವಿವರಣೆ ಕೊಟ್ಟಾಯಿತು.

ಆಲೋಪತಿಯ ಶಸ್ತ್ರ ಚಿಕಿತ್ಸೆಯ ಬದಲು, ಆಯುರ್ವೇದದಲ್ಲಿ ಈ ರೀತಿಯ ಚಿಕಿತ್ಸೆ ಇರುವುದು ನನಗೆ ಗೊತ್ತಾದದ್ದು ಈಗಲೇ. ಅಲೋಪತಿ ಶಸ್ತ್ರ ಚಿಕಿತ್ಸೆ ಕೆಲವು ಗಂಟೆಗಳು ಮಾತ್ರ. ಆದರೆ ಅನೆಸ್ತೇಷಿಯಾ ನೆರವು ಕಡ್ಡಾಯ. ಆಯುರ್ವೇದ ಚಿಕಿತ್ಸೆ ಹಲವು ದಿನಗಳು. ಯಾವುದೇ ಆರಿಸಿಕೊಂಡರೂ ಧೈರ್ಯ, ತಾಳ್ಮೆ ಮುಖ್ಯ.

ಆಯುರ್ವೇದದಲ್ಲಿ ಖರ್ಚು ಸ್ವಲ್ಪ ಕಡಿಮೆ. ದೇಹಕ್ಕೆ ಯಾವುದೇ ಔಷಧ ಸೇವನೆಯ ಸೈಡ್ ಎಫೆಕ್ಟ್ಸ್ ಇರಲ್ಲ ಅನ್ನುವುದು ಅನುಭವ ಆಯಿತು

ನಗೆ ಬರಹ

ಮರೆಯಲಿ ಹ್ಯಾಂಗ ನಮ್ಮೂರ ಚಕೋತ

- ನಾಗರತ್ನ ಚಂದ್ರಶೇಖರ್

ಬಾಳೆ, ಸೇಬು, ಕಿತ್ತಳೆ, ಸೀಬೆ, ಮೂಸಂಬಿ, ಪರಂಗಿ ಇಂಥ ಹಣ್ಣುಗಳ ರುಚಿ ಸರ್ವೇಸಾಮಾನ್ಯವಾಗಿ ಪ್ರತಿಯೊಬ್ಬರೂ ಸವಿದೇ ಇರುತ್ತೀರಿ. ಚಕೋತ! ಹಾಗೆಂದರೇನು ಎಂದು ಇಂದಿನ ಎಷ್ಟೋ ಮಕ್ಕಳು ಕುತೂಹಲದಿಂದ ಪ್ರಶ್ನಿಸಿದರೆ ಆಶ್ಚರ್ಯವಿಲ್ಲ. ಹಣ್ಣಿನ ಅಂಗಡಿಗಳಲ್ಲೋ ಅಥವಾ ರಸ್ತೆ ಬದಿ ತಳ್ಳುಗಾಡಿಗಳಲ್ಲೋ ಈ ಹಣ್ಣು ಅಷ್ಟು ಸುಲಭವಾಗಿ ಕಾಣಸಿಗುವುದಿಲ್ಲ. ರುಚಿ ಹತ್ತಿದವರು ಹುಡುಕಾಡಿದರೆ ದೊಡ್ಡದೊಡ್ಡ ಮಾರುಕಟ್ಟೆಗಳಲ್ಲಿ ದೊರಕಬಹುದು. ಚಕೋತವನ್ನು ಮೂಸಂಬಿಯ ಅಪ್ಪ ಎಂದು ಬೇಕಾದರೆ ಕರೆಯಬಹುದು. ನೋಡಲು ಸ್ವಲ್ಪ ರೂಪದಲ್ಲಿ ಹಾಗೇ ಕಂಡರೂ ರುಚಿ ಸ್ವಲ್ಪ ಭಿನ್ನ, ಗಾತ್ರ ದೊಡ್ಡದು. ಕಿತ್ತಳೆಯಂತೆ ಸುಲಭವಾಗಿ ಬಿಡಿಸಲಾಗದಿದ್ದರೂ ಮೂಸಂಬಿಯಷ್ಟು ಗಟ್ಟಿ ಸಿಪ್ಪೆ ಇಲ್ಲ. ಒಳಗಿನ ನಸುಗೆಂಪಿನ ತೊಳೆಗಳನ್ನು ಬಿಡಿಸಿ ಉಪ್ಪು ಖಾರ ಬೆರಸಿ ತಿನ್ನುವ ಮಜ ತಿಂದವರಿಗಷ್ಟೇ ಗೊತ್ತು.

ನೋಡಲು ಕರಬೂಜದಷ್ಟು ಗಾತ್ರವಿರುವುದರಿಂದ ಹೆಚ್ಚು ತೂಕವೂ ಇದ್ದು, ಸಿಹಿ, ಹುಳಿ, ಒಗರುಗಳ ಮಿಶ್ರ ರುಚಿಯ ಇದರ ತೊಳೆಗಳನ್ನು ಮಕ್ಕಳು ಅಷ್ಟು ಇಷ್ಟಪಟ್ಟು ತಿನ್ನುವುದಿಲ್ಲ. ಹಿಂದೆಲ್ಲಾ ಮನೆಗಳಲ್ಲಿ ಈ ಗಿಡಗಳನ್ನು ಬೆಳೆಸುತ್ತಿದ್ದರು. ಮಾವು, ಹಲಸಿನಂತೆ ಋತುಮಾನದ ಹಣ್ಣು ಚಕ್ಕೋತ.

ಇಷ್ಟೆಲ್ಲಾ ಪೀಠಿಕೆ ಯಾಕೆಂದರೆ ನಾನು ಚಿಕ್ಕಂದಿನಿಂದಲೇ ಈ ಹಣ್ಣಿನ ಪರಮ ಪ್ರೀತಿಯ ಆರಾಧಕಿ. ನನ್ನ ತೌರು ಮನೆಯ ಹಿತ್ತಲಿನಲ್ಲಿದ್ದ ಎರಡು ಗಿಡಗಳಲ್ಲಿ ಸಮೃದ್ಧವಾಗಿ ತೂಗಾಡುತ್ತಾ ಎಲ್ಲರನ್ನು ಆಕರ್ಷಿಸುತ್ತಿದ್ದ ಚಕ್ಕೋತವನ್ನು ಮರೆಯಲಿ ಹ್ಯಾಂಗ? ಕೈಗೆಟುಕದಷ್ಟು ದೂರದಲ್ಲಿ ನಸುಹಳದಿ ಬಣ್ಣಕ್ಕೆ ತಿರುಗಿ ಎಲೆಗಳ ಮರೆಯಿಂದ ಇಣುಕುವ ಇವುಗಳನ್ನು ಅಮ್ಮ ದೊಡ್ಡ ಕೋಲಿನ ಸಹಾಯದಿಂದ ಚುಚ್ಚಿದರೆ ಅವು ಕೆಳಕ್ಕೆ ಬೀಳುತ್ತಿದ್ದವು. ಒಮ್ಮೊಮ್ಮೆ ಒಂದಕ್ಕಿಂತ ಹೆಚ್ಚು ಜೊತೆಯಲ್ಲಿದ್ದವು ಬಿದ್ದಾಗ ನಮಗೆಲ್ಲಾ ಖುಷಿಯೋ ಖುಷಿ. ಇವುಗಳನ್ನು ತಾವರೆ ಎಲೆಯಂತೆ ಬಿಡಿಸಿ ತಲೆಗೆ ಟೊಪ್ಪಿ ಮಾಡಿ ಹಾಕಲು ಅಮ್ಮ ಕೊಡುತ್ತಿದ್ದರು. ಕಿತ್ತ ಕೂಡಲೇ ಅವು ತಿನ್ನಲು ಸುಲಿಯದೆ ಮೂರು ನಾಲ್ಕು ದಿನ ಹಾಗೇ ಇಟ್ಟರೆ ಅದರ ಒಗರು ಕಡಿಮೆಯಾಗುತ್ತದೆ ಎನ್ನುವ ಗುಟ್ಟು ನಮಗೆ ತಿಳಿದಿದ್ದರೂ, ಮಕ್ಕಳಿಗೆ ಅದನ್ನು ತಿನ್ನಲು ಕಾಯುವ ತಾಳ್ಮೆ ಇರುವುದಾದರೂ ಹೇಗೆ? ನಮ್ಮ ಮನೆಯ ಚಕೋತ ತುಂಬಾ ಸಿಹಿಯಾಗಿದ್ದು, ಒಳಗಿನ ತೊಳೆಗಳಂತೂ ಎಷ್ಟು ದೊಡ್ಡದಾಗಿರುತ್ತಿತ್ತೆಂದರೆ ಒಂದು ಬಿಡಿಸಿದರೆ ಒಂದು ತಟ್ಟೆ ತುಂಬಾ ಎಸಳುಗಳು ಸಿಗುತ್ತಿದ್ದವು. ಅಪ್ಪ, ಅಮ್ಮ ಅಪರೂಪಕ್ಕೆ ಬೆಂಗಳೂರಿಗೆ ಹೋಗುತ್ತಿದ್ದರು. ಆಗ ನಾನು, ನನ್ನ ತಂಗಿ ಇಬ್ಬರೂ ಇಂಥ ಅವಕಾಶಕ್ಕೆ ಕಾಯುತ್ತಿದ್ದೆವು. ಒಂದಾದರೂ ಹಣ್ಣು ಗುಟ್ಟಾಗಿ ನಮ್ಮ ಕೈ ಸೇರಿ, ಬಾಯಿಗೆ ಹೋಗಿರುತ್ತಿತ್ತು. ಕೆಲವೊಮ್ಮೆ ಕೋತಿಗಳು ಲಗ್ಗೆ ಇಟ್ಟಾಗ ಹಲವಾರು ಹಣ್ಣುಗಳನ್ನು ಅವು ಬೀಳಿಸಿಯೇ ಅಲ್ಲಿಂದ ಹೋಗುತ್ತಿದ್ದವು. ಕೋತಿಗಳಿಗೆ ಅವುಗಳನ್ನು ಬಿಡಿಸಿ ತಿನ್ನಲು ಆಗದ ಕಾರಣ ಮಂಗನ ಚೇಷ್ಟೆಗೆ ಬಲಿಯಾದ ಹೀಚು, ಪೀಚುಗಳೆಲ್ಲ ಉದುರಿ ಹೋಗುತ್ತಿದ್ದವು. ಅವುಗಳನ್ನು ಓಡಿಸಲೆಂದೇ ಕ್ಯಾಟರ್ ಪಿಲ್ಲರ್ ಸಿದ್ಧವಾಗಿರುತ್ತಿತ್ತು ಬೇರೆ. ಪಾಪ ಕೈಗೆ ಸಿಕ್ಕರೂ ಬಾಯಿಗೆ ಬಾರದ ಹಣ್ಣುಗಳನ್ನು ಕಂಡು ಅವು ಬೇಸರದಿಂದಲೇ ಕಾಲು ಕೀಳುತ್ತಿದ್ದಿರಬಹುದು.

ನಮ್ಮ ಮನೆಯ ಚಕೋತದ ರುಚಿ ಹತ್ತಿದ ಸ್ನೇಹಿತರು, ನೆಂಟರು, ಅಕ್ಕಪಕ್ಕದವರಿಗೆಲ್ಲಾ ಆಗಾಗ ಸಂತರ್ಪಣೆಯೂ ಆಗುತ್ತಿದ್ದುದರಿಂದ ಅದರ ಖ್ಯಾತಿ ನಮ್ಮೂರನ್ನು ದಾಟಿ ಎಲ್ಲ ಕಡೆ ಹರಡಿತ್ತು. ಕೆಲವೊಮ್ಮೆ ಮನೆಯ ಹಿಂದೆ ಬಾಡಿಗೆಗಿದ್ದವರು ನಮ್ಮ ಕಣ್ತಪ್ಪಿಸಿ ಅವರ ಮನೆ ಕಡೆ ಚಾಚಿದ ರೆಂಬೆಕೊಂಬೆಗಳಲ್ಲಿದ್ದ ಹಣ್ಣುಗಳನ್ನು ಮಾಯ ಮಾಡಿರುತ್ತಿದ್ದರು. ಈ ವಿಶಿಷ್ಟ ರುಚಿಯ ಹಣ್ಣಿನ ತಳಿಯನ್ನು ಕಾಪಾಡಿ ಸಸಿ ಮಾಡುವ ಆಲೋಚನೆ ಆಗ ನಮಗ್ಯಾರಿಗೂ ಬರಲೇ ಇಲ್ಲ ಎನ್ನುವುದು ದುಃಖದ ಸಂಗತಿ. ನಮ್ಮ ನೆಂಟರಲ್ಲಿ ಕೆಲವರು ಅದರ ಬೀಜದಿಂದ ಸಸಿ ಮಾಡಿದ್ದ ಸುದ್ದಿ ಒಮ್ಮೆ ಸಿಕ್ಕಿದರೂ ಅದನ್ನು ನಾವು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಕಾಲಾಂತರದಲ್ಲಿ ಎರಡು ಗಿಡಗಳು ಇದ್ದಕ್ಕಿದ್ದಂತೆ ಒಣಗಿಹೋದ ಸುದ್ದಿಯಷ್ಟೇ ಈಗ ನೆನಪಿನಾಳದಲ್ಲಿ ಹುದುಗಿ ಹೋಗಿತ್ತು.

ಎಷ್ಟೋ ವರ್ಷಗಳ ನಂತರ ನಾವು ವಿದೇಶ ಪ್ರವಾಸ ಮಾಡಲು ಪ್ರಾರಂಭಿಸಿದಾಗ ಬೆಳಗಿನ ಉಪಾಹಾರಕ್ಕೆ ಗ್ರೇಪ್ ಫ್ರೂಟ್ ಎಂದು ಕರೆಯಲಾಗುವ ಇದೇ ಚಕ್ಕೋತದ ತಮ್ಮನೋ, ತಂಗಿಯೋ ಎನ್ನಬಹುದಾದ ಹಣ್ಣುಗಳನ್ನು ನೋಡಿ ಆಶ್ಚರ್ಯ, ಸಂತೋಷವಾಯಿತು. ಇದರ ರಸವನ್ನು ಕಾರ್ಟನ್ ಪೆಟ್ಟಿಗೆಯಲ್ಲಿ ಶೇಖರಿಸಿ ಮಾರುತ್ತಾರೆ. ಆರೋಗ್ಯದ ದೃಷ್ಟಿಯಿಂದ ಇದು ತುಂಬಾ ಒಳ್ಳೆಯ ಪೇಯ ಕೂಡ. ಅಮೇರಿಕದಲ್ಲಿದ್ದ ಮಕ್ಕಳ ಮನೆಗೆ ನಾವು ಆಗಾಗ ಹೋಗಿ ಇದ್ದು ಬರಲು ಪ್ರಾರಂಭಿಸಿದಾಗ ಈ ಚಕ್ಕೋತದ ಪೂರ್ಣ ಪರಿಚಯವಾದದ್ದು. ನೆನಪಿನಾಳದಲ್ಲಿ ಜಾರಿ ಹೋಗಿದ್ದ ನಮ್ಮೂರ ಚಕ್ಕೋತದ ರುಚಿ ಜಾಗೃತವಾದದ್ದು ಆಗಲೇ. ಸೂಪರ್ ಮಾರ್ಕೆಟ್ ಗಳಲ್ಲಿ ಯಥೇಚ್ಛವಾಗಿ ಮಾರಾಟಕ್ಕೆ ಇಟ್ಟಿರುತ್ತಿದ್ದರು. ಅದರಲ್ಲೂ ಟೆಕ್ಸಾಸ್ ರಾಜ್ಯದಲ್ಲಿ ಮೆಕ್ಸಿಕೋದಿಂದ ಬರುತ್ತಿದ್ದ ಈ ಗ್ರೇಪ್ ಫ್ರೂಟ್ ಗಳ ಗುಣಮಟ್ಟ, ರುಚಿ ತದ್ರೂಪು ನಮ್ಮೂರ ಚಕ್ಕೋತದಂತೇ ಇರುತ್ತಿದ್ದವು. ಕ್ಯಾಲಿಫೋರ್ನಿಯ ರಾಜ್ಯದಲ್ಲಿಯೂ ನಾವು ಸಾಕಷ್ಟು ತಿಂದೆವು. ಮಕ್ಕಳು, ಮೊಮ್ಮಕ್ಕಳಿಗೂ ನಮ್ಮಿಂದಾಗಿ ಈ ಹಣ್ಣಿನ ಅಭ್ಯಾಸ ಆಗುವಂತಾಯಿತು. ಹೆಚ್ಚಿನವು ಬೀಜರಹಿತವಾಗಿರುತ್ತಿದ್ದವು. ಒಮ್ಮೊಮ್ಮೆ ಒಂದೋ, ಎರಡೋ ಬೀಜ ಸಿಕ್ಕರೆ.....ಅಬ್ಬಾ ಅವುಗಳು ಕಪ್ಪೆ ಚಿಪ್ಪಿನೊಳಗಿನ ಮುತ್ತುಗಳೋ ಎಂಬಂತೆ ಜೋಪಾನವಾಗಿ ಆರಿಸಿಡುತ್ತಿದ್ದೆ.

ಒಂದು ದಿನ ಹೀಗೆ ಹಣ್ಣು ಬಿಡಿಸುವಾಗ ಒಳಗೆ ಮೊಳಕೆಯೊಡೆದ ಬೀಜ ಸಿಕ್ಕಿತು. ಆನಂದಕ್ಕೇ ಪಾರವೇ ಇಲ್ಲ. ಅದನ್ನು ಪುಟ್ಟ ಕುಂಡದಲ್ಲಿ ಹಾಕಿದ್ದಷ್ಟು ಖುಷಿ. ಆ ಬೀಜಗಳನ್ನು ಜೋಪಾನವಾಗಿ ಒಣಗಿಸಿಟ್ಟುಕೊಳ್ಳತೊಡಗಿದೆ. ಒಮ್ಮೆಯಂತೂ ಮೊಳಕೆಯೊಡೆದ ಬೀಜ ಸಿಕ್ಕಿದಾಗಲಂತೂ ನನಗೆ ಪರಮಾನಂದ. ಅದನ್ನು ಒದ್ದೆಮಾಡಿದ ಟಿಶ್ಯೂ ಕಾಗದದಲ್ಲೇ ಕೆಲವು ದಿನ ಇಟ್ಟು, ಅದು ಸ್ವಲ್ಪ ಬೆಳೆಯತೊಡಗಿದಾಗ ಪುಟ್ಟ ಹಳೆಯ ಟೀ ಕಪ್ಪಿನಲ್ಲಿ ಮಣ್ಣು ಹಾಕಿ ಮೊಳಕೆಯೊಡೆದ ಬೀಜವು ಪುಟ್ಟ ಸಸಿಯಾಗುವುದನ್ನೇ ಕಾತರದಿಂದ ಕಾಯುತ್ತಿದ್ದೆ. ನಮ್ಮ ವಾಸ್ತವ್ಯದ ಅವಧಿ ಮುಗಿದು ವಾಪಸ್ಸು ಬೆಂಗಳೂರಿಗೆ ಬಂದ ಮೇಲೂ ಆಗಾಗ ಮಗಳಿಗೆ ಸಸಿಯ ಬೆಳವಣಿಗೆಯ ಬಗ್ಗೆ ಕೇಳತೊಡಗಿದೆ. ಚಳಿಗಾಲ ಪ್ರಾರಂಭವಾಗುತ್ತಿದ್ದಂತೆ ಸಸಿ ಸತ್ತು ಹೋಯಿತೆಂದು ಅವಳು ಹೇಳಿದಾಗ ಬೆಂಗಳೂರಿನಲ್ಲಿ ಭದ್ರವಾಗಿಟ್ಟ ಬೀಜಗಳನ್ನು ಸಸಿ ಮಾಡುವ ಕನಸು ಕಟ್ಟತೊಡಗಿದೆ.

ಚಕ್ಕೋತ ಪುರಾಣ ನಿಮಗೆ ಬೇಸರವಾಗಿದ್ದರೆ ಕ್ಷಮಿಸಿ. ಮುಂದೊಂದು ದಿನ ನಾನು ಅಮೇರಿಕದಿಂದ ತಂದ ಚಕ್ಕೋತ ಅಂದರೆ ಗ್ರೇಪ್ ಫ್ರೂಟ್ ನ ಬೀಜಗಳಿಂದ ಸಸಿ ಮಾಡಿ, ಆ ಸಸಿ ಬೆಳೆದು ಮರವಾಗಿ ಹಣ್ಣುಗಳಿಂದ ತುಂಬಿಕೊಳ್ಳುವದನ್ನು ಫೋಟೊ ಹಿಡಿದು ನಿಮಗೆ ಕಳಿಸುವೆ. ಆಗ ನಮ್ಮ ದಾಸೋಹಕ್ಕೆ ಬಂದವರಿಗೆಲ್ಲಾ ಸಿಹಿಯಾದ, ರುಚಿಯಾದ ಚಕ್ಕೋತದ ತೊಳೆಗಳನ್ನು ಖಂಡಿತಾ ಕೊಡುವೆ.

ಕನ್ನಡ ಕಾದಂಬರಿ ಪರಿಚಯ

“ಚೆನ್ನಭೈರಾದೇವಿ (ಕರಿಮೆಣಸಿನ ರಾಣಿಯ ಅಕಳಂಕ ಚರಿತೆ)”

– ಕೆ. ಹೇಮಚಂದ್ರ, ರಾಯಚೂರು

ಕಾದಂಬರಿಯ ಹೆಸರು: ಚೆನ್ನಭೈರಾದೇವಿ (ಕರಿಮೆಣಸಿನ ರಾಣಿಯ ಅಕಳಂಕ ಚರಿತೆ), ಲೇಖಕರು: ಡಾ. ಗಜಾನನ ಶರ್ಮ, ಪುಟಗಳು: ೪೩೧, ಬೆಲೆ: ರೂ. ೩೯೫, ಪ್ರಕಾಶನ: ಅಂಕಿತ ಪುಸ್ತಕ, ಬೆಂಗಳೂರು

ಕನ್ನಡ ಸಾಹಿತ್ಯದಲ್ಲಿ ಇನ್ನು ಐತಿಹಾಸಿಕ ಕಾದಂಬರಿಗಳು ಬರುವುದೇ ಇಲ್ಲವೇನೋ ಅಂತಾ ಅಂದುಕೊಂಡಾಗ ವಸುಧೇಂದ್ರರ 'ತೇಜೋ ತುಂಗಭದ್ರ' ಹಾಗೂ ಡಾ. ಗಜಾನನ ಶರ್ಮರ 'ಚೆನ್ನಭೈರಾದೇವಿ' ಕೃತಿಗಳು ಪ್ರಕಟಗೊಂಡು ತಮ್ಮ ವಿಷಯ ಸಮೃದ್ಧತೆ ಹಾಗೂ ನಿರೂಪಣೆಯಿಂದಾಗಿ ಮಹತ್ವ ಪಡೆದಿವೆ.

ಕ್ರಿ.ಶಕೆ.೧೫೫೨ರಿಂದ ೧೬೦೬ರವರೆಗೆ ಒಟ್ಟು ೫೪ ವರ್ಷಗಳ ಕಾಲ ಗೇರುಸೊಪ್ಪೆ ಕಣಿವೆ ಪ್ರದೇಶದ ನಗಿರೆ ಮತ್ತು ಹಾಡುವಳ್ಳಿಯ ರಾಣಿಯಾಗಿ ನಾಡಿಗೆ ಭದ್ರ ಆಡಳಿತ ನೀಡಿದ ಜೈನ ಧರ್ಮದ ರಾಣಿ ಚೆನ್ನಭೈರಾದೇವಿಯ ಜೀವನ ಕಥನದ ಅನಾವರಣ ಈ ಕಾದಂಬರಿಯಲ್ಲಿದೆ. ಚೆನ್ನಭೈರಾದೇವಿಯನ್ನು ಇಂಗ್ಲೆಂಡಿನ ಒಂದನೇ ಎಲಿಜಬೆತ್ ರಾಣಿಗೆ ಹೋಲಿಸಲಾಗುತ್ತದೆ. ದಕ್ಷಿಣ ಕೊಂಕಣ ಹಾಗೂ ಮಲೆನಾಡನ್ನು ವಿಜಯನಗರದರಸರ ಒತ್ತಾಸೆಯಲ್ಲಿ, ಕೆಳದಿ ಸಂಸ್ಥಾನ ಹಾಗೂ ಗೋವೆಯ ಪೋರ್ಚುಗೀಸರ ಆಕ್ರಮಣಗಳಿಗೆ ತಡೆಗೋಡೆಯಾಗಿ ದಕ್ಷತೆ ಮೆರೆದ, ಎರಡು ತಲೆಮಾರನ್ನು ತಾಯಿಯಂತೆ ಕಾಪಾಡಿದ, ಜೈನ ಧರ್ಮದ ಈ ರಾಣಿಯ ಸಾಹಸ, ವಿವೇಚನೆ ಹಾಗೂ ತ್ಯಾಗದ ಬದುಕನ್ನು ಕಾದಂಬರಿಕಾರರು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ.

೬೨ ಆಕರ ಗ್ರಂಥಗಳು–ಮೂಲಗಳಿಂದ ಹೆಕ್ಕಿದ ವಿಷಯ ಸಾಮಗ್ರಿಯಿಂದ ಪರಿಪೂರ್ಣ ಐತಿಹಾಸಿಕ ಕಾದಂಬರಿಯಾಗಿ ರೂಪುಗೊಂಡಿದೆ. ಕಾದಂಬರಿಯ ಕೊನೆಯ ಭಾಗದ ೪೬ ಪುಟಗಳಲ್ಲಿ ಕಥೆಯು ತೀವ್ರತೆಯನ್ನು ಪಡೆದು ರಾಣಿ ಚೆನ್ನಭೈರಾದೇವಿಯ ರಾಜ್ಯದ ಪತನ ಹಾಗೂ ರಾಣಿಯ ದೇಹಾವಸಾನಕ್ಕೆ ಕಾರಣವಾದ ಕೆಳದಿ ನಾಯಕರ ವಿರುದ್ಧದ ಹೋರಾಟದ ವಿವರಗಳಿವೆ. ರಾಣಿಯ ನೆಚ್ಚಿನ ದಳವಾಯಿಯ ವಿಶ್ವಾಸಘಾತತನ, ಅಂದಿಗೆ ಬದಲಾದ ರಾಜಕೀಯ ಸ್ಥಿತಿಯಲ್ಲಿ ಮಿತ್ರರು ಶತೃಗಳಾಗುವದು, ಯುದ್ಧದ ವಿವರಗಳು ಈ ಕಾದಂಬರಿಯಲ್ಲಿ ಚೆನ್ನಾಗಿ ಮೂಡಿಬಂದಿವೆ. ಕಾದಂಬರಿ ಓದಿ ಮುಗಿಸಿದ ಮೇಲೆ ಚೈನ್ನಭೈರಾದೇವಿಯ ಚಿತ್ರಣ ಮನಸ್ಸಿನಾಳದಲ್ಲಿ ಉಳಿದುಬಿಡುತ್ತದೆ.

ಈ ಕಾದಂಬರಿಯ ಪು.ಸಂ.೩೬೦ರಲ್ಲಿ, ಕ್ರಿ.ಶಕೆ ೧೫೭೧ರಲ್ಲಿ ಪೋರ್ಚುಗೀಸರ ಮೇಲಿನ ದಾಳಿಯಲ್ಲಿ ಚೆನ್ನಭೈರಾದೇವಿಯ ನೆರವಿಗೆ ಬರಬೇಕಾಗಿದ್ದ ಇಸ್ತಾಂಬುಲ್ ನ ಒಟ್ಟೋಮನ್ ದೊರೆಯು ತನ್ನ ಸೈನ್ಯವನ್ನು ಸುಯೆಜ್ ಕಾಲುವೆಯ ಮೂಲಕ ಹಿಂದಕ್ಕೆ ಕರೆಸಿಕೊಂಡ ಎಂದು ಲೇಖಕರು ಬರೆದಿದ್ದಾರೆ. ಆದರೆ ಕ್ರಿ.ಶಕೆ ೧೫೭೧ರಲ್ಲಿ ಸುಯೆಜ್ ಕಾಲುವೆಯು ಹಡಗು ಸಂಚಾರಕ್ಕೆ ಮುಕ್ತವಾಗಿತ್ತೇ ಎಂಬ ಸಂದೇಹವಿದೆ. ನಮ್ಮ ಕಡೆಯ, ಉತ್ತರ ಕರ್ನಾಟಕದ ಬಯಲು ಸೀಮೆಯ ಇತಿಹಾಸದಲ್ಲಿ ಹೇಳ ಹೆಸರಿಲ್ಲದಂತಾಗಿರುವ ಸಂಸ್ಥಾನ/ದೇಸಗತಿಗಳ ಮೇಲೆ ಬೆಳಕು ಚೆಲ್ಲುವ ಕೃತಿಗಳು ಬಂದರೆ ಎಷ್ಟು ಚೆನ್ನ.

ಹರಟೆ

ಅವರೇಕಾಯಿ ಸಾರು

– ವಿಜಯಕುಮಾರಿ

ಶೀರ್ಷಿಕೆ ಕೇಳಿದ ತಕ್ಷಣ ಎಲ್ಲರ ಮೂಗಿಗೂ ಅವರೆಕಾಯಿಯ ಸೊಗಡು ವಾಸನೆ ಬಡಿದಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ ಬಿಡಿ. ಕರ್ನಾಟಕದ ಮಲೆನಾಡಿಗರಿಗೆ, ಮೈಸೂರಿನ ಸುತ್ತಮುತ್ತ ವಾಸಿಸುವವರಿಗೆ ಸೊಗಡವರೆ ಸಾರಿನ ರುಚಿ ಚೆನ್ನಾಗಿಯೇ ಗೊತ್ತಿರುತ್ತದೆ.

ಅವರೆಕಾಯಿಯಿಂದ ಮಾಡಿದ ರೊಟ್ಟಿ, ಉಪ್ಪಿಟ್ಟುಗಳೂ ಬಹಳ ಪ್ರಸಿದ್ಧ. ಅವರೆಕಾಯಿ ಚಿತ್ರಾನ್ನ, ಹಿದಕವರೆ ತೊವ್ವೆ, ಕೂಟು ಇವುಗಳ ಬಗ್ಗೆ ಕೇಳದೆ ಇರುವವರೇ ಇಲ್ಲ. ಧನುರ್ಮಾಸದಲ್ಲಿ ಅವರೆಕಾಯಿ ಹಿದುಕಿ ಪೊಂಗಲ್ ಮಾಡುವುದರಲ್ಲಿ ಶ್ರೀವೈಷ್ಣವರು ಸಿದ್ಧಹಸ್ತರು. ಅವರೆಕಾಯಿ ಹಿದುಕಿ ಪಾಯಸ ಕೂಡಾ ಮಾಡ್ತಾರಂತೆ. ನಂಗೆ ಬರೋಲ್ಲ. ಅವರೆಕಾಯಿ ಕೋಡುಬಳೆ, ನಿಪ್ಪಟ್ಟು ಇವುಗಳ ಬಗ್ಗೆ ಗೊತ್ತಿಲ್ಲದವರೇ ಇಲ್ಲ. ಹಿದುಕಿದ ಅವರೆಕಾಯಿ ಸಿಪ್ಪೆಯನ್ನು ಮನೆ ಮುಂದಿನ ರಸ್ತೆಯಲ್ಲಿ ಚೆಲ್ಲಿ ತಮ್ಮ ಮನೆಯಲ್ಲಿಂದು ಅವರೆಕಾಯಿ ಅಡುಗೆ ಎಂದು ಪ್ರತಿಷ್ಟೆ ಮೆರೆಸುವ ಕಾಲವೂ ಇತ್ತೆನ್ನಿ. ಹಿದಕವರೆ ಕರಿದು ಕಡಲೆಕಾಯಿ ಬೀಜ ಹಾಕಿ ಮಾಡುವ ಹುರಿಗಾಳು ಈಗಲೂ ಎಲ್ಲರ ಮೆಚ್ಚಿನ ಕುರುಕಲು ಎನ್ನಲು ಅಡ್ಡಿಯಿಲ್ಲ. ಇಷ್ಟೆಲ್ಲಾ ಇದ್ದರೂ ಸೊಗಡವರೆ ಸಾರಿನ ಸ್ಥಾನವನ್ನು ಮೇಲಿನ ಯಾವುದೇ ಅಡುಗೆ ಆಕ್ರಮಿಸಲು ಸಾದ್ಯವೇ ಇಲ್ಲ.

ನನ್ನ ತವರು ಹಾಸನ. ಅಲ್ಲಿನ ಅವರೆಕಾಯಿ ಬಹಳ ಪ್ರಸಿದ್ಧ. ಅಲ್ಲಿ ಮಂಗಳವಾರ ಸಂತೆ. ಸಂತೆಯ ದಿನ ನಮ್ಮ ಬೀದಿಯ ನಾಲ್ಕೈದು ಜನ ಹೆಂಗಸರು ಒಟ್ಟಿಗೆ ಸೇರಿ ಮಾತನಾಡಿಕೊಂಡು ಕುದುರೆಗಾಡಿಯಲ್ಲಿ ಸಂತೆ ಮೈದಾನಕ್ಕೆ ಹೋಗಿ ಒಟ್ಟಿಗೆ ಹತ್ತು ಹನ್ನೆರಡು ಕೆಜಿ ಅವರೆಕಾಯಿ ತರುತ್ತಿದ್ದರು. ಮದ್ಯಾಹ್ನ ಊಟವಾದ ಮೇಲೆ ಎಲ್ಲರೂ ಮನೆಯ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾ, ತಮಾಷೆಯಾಗಿ ಮಾತನಾಡುತ್ತಾ ಅವರೆಕಾಯಿ ಸುಲಿಯಲು ಪ್ರಾರಂಭಿಸಿದರೆ ಒಂದೆರಡು ಗಂಟೆಗಳಲ್ಲೇ ಚರ್ಮ ಸುಲಿಸಿಕೊಂಡ ಅವರೆಕಾಯಿ ಅಡುಗೆಗೆ ತಯಾರಾಗಿ ಬಿಡುತ್ತಿತ್ತು. ಸಿಪ್ಪೆಯನ್ನೆಲ್ಲಾ ಒಂದುಚೂರೂ ಬಿಡದಂತೆ ಚೀಲಕ್ಕೆತುಂಬಿ ಬಾಯಿಕಟ್ಟಿ ಮರುದಿನ ಬರುವ ಹಾಲಿನವನಿಗೆ ಗೋಗ್ರಾಸವಾಗಿ ಸರಬರಾಜು ಮಾಡಲ್ಪಡುತ್ತಿತ್ತು.

ನಾವೆಲ್ಲಾ ಕಾಲೇಜಿನಿಂದ ಮನೆಗೆ ಬರುವ ವೇಳೆಗೆ ಅವರೇಕಾಯಿನ ಸೊಗಡಿನ ವಾಸನೆ ರಸ್ತೆಯ ತುದಿಗೇ ಬಂದು ನಮ್ಮ ನಾಸಿಕಾಘ್ರಗಳನ್ನು ಪ್ರೀತಿಯಿಂದ ಸವರಿ ಮೆದುಳನ್ನು ತಲುಪಿ ಆನಂದಾನುಭೂತಿಯನ್ನು ಉಂಟುಮಾಡುತ್ತಿತ್ತು. ನಂತರದ್ದು ಬಿಡಿಸಿದ ಅವರೇಬೀಜಗಳಿಂದ ಸಾರು ಮಾಡುವ ಸಂಭ್ರಮ, ಅದೇ ಒಂದು ತಪಸ್ಸು. ಬಿಡಿಸಿದ ಅವರೇಕಾಯಿ ಬೀಜಗಳನ್ನು ನೇರವಾಗಿ ಸಾರು ಮಾಡುವ ಪಾತ್ರೆಗೇ ಹಾಕಬೇಕು. ಬೇರೆ ಪಾತ್ರೆಯಿಂದ ಸಾರುಮಾಡುವ ಪಾತ್ರೆಗೆ ಬಿಡಿಸಿದ ಬೀಜಗಳನ್ನು ವರ್ಗಾಯಿಸಿದರೆ ಸೊಗಡು ಕಡಿಮೆ ಆಗಿಬಿಡುತ್ತದೆ. ಇದು ಬಹಳ ಏಕಾಗ್ರತೆಯನ್ನು ಬೇಡುವ ಕೆಲಸ. ಏಕೆಂದರೆ ಪಾತ್ರೆಗೆ ಬಿಡಿಸಿ ಹಾಕುವ ಬೀಜದಲ್ಲಿ ತಪ್ಪಿಯೂ ಒಂದು ಹುಳವೂ ಬೀಳದಂತೆ ಎಚ್ಚರಿಕೆ ವಹಿಸಬೇಕು. ಹೀಗೆ ಸಾರಿನ ಪಾತ್ರೆಯಲ್ಲಿ ಸಂಗ್ರಹಿಸಿದ ಅವರೆ ಬೀಜಗಳಿಗೆ ಸಾಕಷ್ಟು ನೀರು ಹಾಕಿ ನನ್ನ ದೊಡ್ಡಮ್ಮ ಸೌದೆ ಒಲೆಯ ಮೇಲಿಟ್ಟು ಬೇಯಿಸುತ್ತಿದ್ದರು.

ಬೆಂದ ಅವರೇಬೀಜಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಒಂದೆರಡು ಕುದಿ ಹತ್ತಿದ ಮೇಲೆ ಇದ್ದರೆ ಹಸಿ ಹುಣಸೆಕಾಯಿ ರಸ ಇಲ್ಲವಾದರೆ ಹುಣಿಸೆಹಣ್ಣಿನ ರಸವನ್ನು ಕಿವುಚಿಹಾಕಿ, ಅದಕ್ಕೆ ಸಾರಿನ ಪುಡಿ ಹಾಕಿ ಇನ್ನೂ ಒಂದೆರಡು ಕುದಿ ಬಂದ ನಂತರ ತಾಜಾ ಕೊತ್ತಂಬರಿ ಸೊಪ್ಪು ಹಾಕಿ, ಇಂಗು ಸಾಸಿವೆ ಒಗ್ಗರಣೆ ಕೊಟ್ಟರೆ ಸಾರು ಆಸ್ವಾದನೆಗೆ ಸಿದ್ದವಾಗಿರುತ್ತಿತ್ತು. ಹೀಗೆ ತಯಾರಾದ ಸಾರಿನಲ್ಲಿ ಸಾರಿಗೆ ತುಪ್ಪ ಹಾಕಿದ್ದಾರೆಂಬಂತೆ ಜಿಡ್ಡು ತೇಲುತ್ತಿರುತ್ತಿತ್ತು.

ನಾವೆಲ್ಲಾ ನೆಪಮಾತ್ರಕ್ಕೆ ಪುಸ್ತಕ ಹಿಡಿದು ಕುಳಿತಿದ್ದರೂ ಕಿವಿಗೆ ಒಗ್ಗರಣೆ ಸದ್ದು ಬಿದ್ದೊಡನೆ ಕಣ್ಣು ಅಡುಗೆಮನೆ ಕಡೆಗೆ ತಿರುಗಿ ಕರೆಬರುವ ನಿರೀಕ್ಷಣೆಯಲ್ಲಿ ಕಿವಿಯಾಲೆಗಳನ್ನು ಚುರುಕುಗೊಳಿಸಿ ಜಾಗೃತವಾಗುವಂತೆ ಮಾಡುತ್ತಿತ್ತು. ಕರೆ ಬಂದೊಡನೆ ಎಲ್ಲರೂ ಪೈಪೋಟಿಯ ಮೇಲೆ ಅಡುಗೆಮನೆ ಕಡೆಗೆ ಓಡುತ್ತಿದ್ದೆವು. ಎಲ್ಲರೂ ಸಾಲಾಗಿ ಚಕ್ಕಳಮಕ್ಕಳಹಾಕಿ ಕುಳಿತು ಒಂದೂ ಮಾತನಾಡದೆ ತದೇಕಚಿತ್ತದಿಂದ ಊಟಮಾಡುತ್ತಿದ್ದೆವು. ಮಾತೇನಿದ್ದರೂ ಸಾರನ್ನ ಮುಗಿದ ನಂತರವೇ. ಊಟ ಮುಗಿದ ನಂತರವೂ ತೊಳೆದ ಕೈಗಳನ್ನು ಮೂಸಿ ನೋಡುತ್ತಾ ಸಂಭ್ರಮಿಸುತ್ತಿದ್ದೆವು.

ಸಾರೇನೋ ಸವಿಸವಿ. ಆದರೆ ಅದಕ್ಕಾಗಿ ತರುತ್ತಿದ್ದ ಅವರೆಕಾಯಿಯನ್ನು ಬಿಡಿಸಲು ಅಪ್ಪಿತಪ್ಪಿ ನಮ್ಮನ್ನು ಕರೆದರೆ ನಮಗೆ ಎಲ್ಲಿಲ್ಲದ ತಲೆನೋವು. ಹಸಿರಾಗಿ ಮಿರಿಮಿರಿ ಮಿಂಚುವ ಕಾಯೊಳಗೆ ಹರಿದಾಡುವ ಹುಳಗಳು ಬಹಳ ಹೆದರಿಕೆ ಹುಟ್ಟಿಸುತ್ತಿದ್ದವು. ನಾನಂತೂ ಅವರೆಹುಳ ಲಂಗದೊಳಗೆ ಎಲ್ಲಿ ಸೇರಿಬಿಡುವುದೊ ಎಂದು ಹೆದರಿ ಕುರ್ಚಿಹತ್ತಿ ಕುಳಿತುಬಿಡುತ್ತಿದ್ದೆ. ನನ್ನಜ್ಜಿ ಬಲವಂತಮಾಡಿ ಕಾಯಿ ಬಿಡಿಸಲು ಕರೆದರೆ ಒಂದೊಂದೇ ಕಾಯಿಯನ್ನ ಹಿಂದೆ ಮುಂದೆ ತಿರುಗಿಸಿ ನೋಡಿ ಹುಳ ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ನಿಧಾನವಾಗಿ ಬಿಡಿಸುತ್ತಿದ್ದೆ. ನಾನು ಹತ್ತೋ ಹನ್ನೆರಡೋ ಕಾಯಿ ಬಿಡಿಸುವಷ್ಟರಲ್ಲಿ ನನ್ನಮ್ಮ ಮತ್ತು ಅಜ್ಜಿ ಒಂದು ಕೆಜಿಯಷ್ಟು ಕಾಯಿಯನ್ನು ಬಿಡಿಸಿ ಮುಗಿಸ್ತಾ ಇದ್ರು.

ಒಂದು ಸಲ ಅವರೆಕಾಯಿ ಸುಲಿದ ಕೈಯ್ಯನ್ನು ಬಿಸಿ ನೀರಲ್ಲಿ ತೊಳೆದುಕೊಂಡು ಕಾಫಿ ಮಾಡಿಕೊಟ್ಟಿದ್ದೆ. ನನ್ನ ದುರಾದೃಷ್ಟ. ಕಾಫಿ ಲೋಟಕ್ಕೆಲ್ಲಾ ಅವರೆಕಾಯಿ ವಾಸನೆ ಅಡರಿ ಕಾಫಿ ಕೂಡ ಅವರೆಕಾಯಿ ವಾಸನೆ ಸೂಸ್ತಾಯಿದೆ ಎನ್ನುವಂತಾಗಿ ಯಾರೂ ಆ ಕಾಫಿ ಕುಡೀಲೇ ಇಲ್ಲ. ಅಂದಿನಿಂದ ಕೈಗಳಿಗೆ ವಿಳ್ಯೆದೆಲೆ ರಸ ಅಥವಾ ತುಳಸಿ ಹಚ್ಚಿಕೊಂಡು ಸೊಗಡು ವಾಸನೆಯನ್ನು ದೂರ ಮಾಡಬಹುದೆಂಬ ಪಾಠ ಕಲಿತಿದ್ದೇನೆ.

ಸೊಗಡವರೆಯ ಕಥೆ ಇಷ್ಟಕ್ಕೇ ಮುಗಿಯಲಿಲ್ಲ. ಅವರೇಕಾಯಿಯನ್ನು ಬಿಡಿಸಿದ ನಂತರ ಅದರಲ್ಲಿದ್ದ ಬಲಿತ ಬೀಜಗಳನ್ನು ಶ್ರದ್ಧೆಯಿಂದ ಒಂದೊಂದೇ ಹೆಕ್ಕಿ ತೆಗೆದು ನೀರಿರುವ ಪಾತ್ರೆಗೆ ಹಾಕುವ ಕಾಯಕ ಪ್ರಾರಂಭವಾಗುತ್ತದೆ. ನೆಂದ ಬೀಜಗಳನ್ನು ಮಾರನೇ ಬೆಳಿಗ್ಗೆ ಹಿದುಕಿ ಸಿಪ್ಪೆಯಿಂದ ಬೇರೆಮಾಡುವ ಕ್ರಿಯೆ ಬಹಳ ಶ್ರಮದಾಯಕವಾದದ್ದು.

ನಾನು ಮದುವೆಯಾಗಿ ಆನೇಕಲ್ಲಿಗೆ ಬಂದ ಹೊಸತರಲ್ಲಿ ನನ್ನ ಅತ್ತೆಯವರು ಈ ಕೆಲಸವನ್ನು ಆವಲೀಲೆಯಿಂದ ಮಾಡುವುದನ್ನು ನೋಡಿ ಬೆರಗಾಗುತ್ತಿದ್ದೆ. ಅವರಂತೂ ಎರಡೂ ಕೈಗಳಿಂದಲೂ ಬೀಜವನ್ನು ಹಿದುಕಿ ಸಿಪ್ಪೆಯನ್ನು ಬೇರ್ಪಡಿಸುತ್ತಿದ್ದರೆ ಎರಡೂ ಕೈಗಳಿಂದ ಬಾಣಪ್ರಯೋಗ ಮಾಡಬಲ್ಲ ಸವ್ಯಸಾಚಿಯಂತೆ ನನಗೆ ತೋರುತ್ತಿದ್ದರು. ನಾನೇನಾದರೂ ಅವರೇಬೀಜವನ್ನು ಹಿದುಕಲು ಕುಳಿತರೆ ಉಗುರಿನಿಂದ ಸಿಪ್ಪೆಯ ಮೇಲ್ಭಾಗವನ್ನು ಗಿಳ್ಳಿ ಸಿಪ್ಪೆ ಸುಲಿಯಲು ಪ್ರಯತ್ನಿಸುತ್ತಿದ್ದೆ. ಈ ಕೆಲಸ ಬಹಳ ಕಷ್ಟ ಎಂದು ನನಗೆ ಭಾಸವಾಗುತ್ತಿತ್ತು.

ಮೈಸೂರಿನ ಸುತ್ತಮುತ್ತಲೂ ಈಗಲೂ ಸೊಗಡವರೆ ಸಿಗುತ್ತದೆ. ಆನೇಕಲ್ಲಿಗೆ ತಮಿಳುನಾಡಿನ ಥಳಿಯಿಂದ ಹಾಗೂ ಸುತ್ತಮುತ್ತಲ ಹಳ್ಳಿಗಳಿಂದಲೂ ಸೊಗಡವರೆ ಸರಬರಾಜಾಗುತ್ತದೆ. ಆದರೆ ಕಾಯಿಗಳಲ್ಲಿ ಮೊದಲಿನಷ್ಟು ಗಾಢವಾದ ಸೊಗಡುವಾಸನೆ ಈಗ ಕಂಡು ಬರುತ್ತಿಲ್ಲ.

ಅವರೆಕಾಯಿಯಿಂದ ವಿವಿಧ ಖಾದ್ಯಗಳನ್ನು ತಯಾರಿಸುತ್ತಾರಾದರೂ ಸೊಗಡು ಸಾರಿಗೇ ಫಸ್ಟ್ ಪ್ರೈಸು ಎಂಬುದು ನನ್ನ ಅಭಿಪ್ರಾಯ. ನೀವೇನಂತೀರ?.

ಏನಂತೀರಿ?

ಹೀಗೆ ಎರಡು ಮದುವೆಗಳು. ಒಂದು ಜಿಜ್ಞಾಸೆ

– ಲಕ್ಷ್ಮೀ ವಿಠಲ್

ಈಗ ಮಕ್ಕಳು ವಿದೇಶದಲ್ಲಿ ಕಲಿಯುವುದು ಸರ್ವೇ ಸಾಮಾನ್ಯ ವಿಷಯವಾಗಿದೆ. ಯಾವುದೇ ಡಿಗ್ರಿ ಗಳಿಸಿದ ನಂತರ, ಮಕ್ಕಳ ಮನಸ್ಸು ಹೊರಳುವುದು ಇನ್ನೂ ಹೆಚ್ಚಿನ ವಿದ್ಯಾಭ್ಯಾಸದತ್ತ. ಅದಕ್ಕೆ ತಕ್ಕಂತೆ ಕೆಲವು ಪರೀಕ್ಷೆಗಳಲ್ಲಿ ತೇರ್ಗಡೆ ಅವಶ್ಯ. ಈ ಮೊದಲೇ ಈ ಪರೀಕ್ಷೆಗಳಿಗೆ ತಯಾರಿ ಮಾಡಿಕೊಂಡು ಬರೆದು ಹೆಚ್ಚಿನ ಅಂಕ ಗಳಿಸುವುದರಲ್ಲಿ ಸಫಲರಾಗಿರುತ್ತಾರೆ.

ಮುಂದೆ ಯಾವ ಯೂನಿವರ್ಸಿಟಿ ಸೂಕ್ತ ಅಂದುಕೊಂಡು ಅಲ್ಲೆಲ್ಲಾ ಅರ್ಜಿ ಗುಜರಾಯಿಸಿ, ಎಲ್ಲಿ ಅವಕಾಶ ದೊರೆಯುವುದೋ ಎಂದು ಕಾತರದಿಂದ ಕಾಯುತ್ತಿರುತ್ತಾರೆ.

ಅಪ್ಪ, ಅಮ್ಮ ಅನುಕೂಲಸ್ತರಾದರೆ ಸರಿ, ಇಲ್ಲವೇ ಇದ್ದೇ ಇದೆಯಲ್ಲ ನಮ್ಮ ವಾಣಿಜ್ಯ ಬ್ಯಾಂಕುಗಳು. ಎಜುಕೇಶನ್ ಲೋನ್ ಕೊಡಲು ತುದಿಗಾಲಲ್ಲಿ ಕಾದಿರುತ್ತವೆ. ನನಗೆ ತಿಳಿದಂತೆ ಈ ಎಜುಕೇಶನ್ ಲೋನ್ ಕೊಡಲು ಪ್ರಾರಂಭಿಸಿದ ಬ್ಯಾಂಕುಗಳಲ್ಲಿ ಕೆನರಾ ಬ್ಯಾಂಕ್ ಮೊದಲನೆಯದು. ನಂತರ SBI ಮೊದಲಾದ ಇತರ ಬ್ಯಾಂಕುಗಳು.

ಹೀಗೆ ಲೋನ್ ಕೊಡಲು ಕಾರಣ, ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ಸೌಲಭ್ಯವಿಲ್ಲದೆ, ಉನ್ನತ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗದೆ, ಎಲ್ಲಾ ಸಾಮಾನ್ಯರಂತಾಗಿ ಜೀವಿಸಬಾರದು, ಹಾಗೇ ಉನ್ನತ ವಿದ್ಯಾರ್ಜನೆ ಮುಗಿಸಿ ಸ್ವದೇಶಕ್ಕೆ ಹಿಂತಿರುಗಿ, ದೇಶಕ್ಕೆ ಸೇವೆ ಸಲ್ಲಿಸಲಿ ಎನ್ನುವ ಮಹದಾಶಯದೊಂದಿಗೆ ಬ್ಯಾಂಕುಗಳು ಪ್ರಾರಂಭಿಸಿದ ಉದಾರ ಸೇವಾ ನೀತಿಯಂತೆ ಹಾಕಿಕೊಂಡ ಕಾರ್ಯಕ್ರಮಗಳಲ್ಲಿ ಪ್ರಮುಖವಾದದು ಈ ಎಜುಕೇಶನ್ ಲೋನ್.

ಹೀಗೆ ಎಜುಕೇಶನ್ ಲೋನ್ ಪಡೆದು, ವಿದೇಶದಲ್ಲಿ ವಿದ್ಯಾಭ್ಯಾಸ ಪೂರೈಸಿ, ಅಲ್ಲಿಯೇ ಕೆಲಸ ಹಿಡಿದು, ವಿದೇಶದಲ್ಲೇ ನೆಲೆಸಿ, ಹುಟ್ಟಿದ ನೆಲ, ಅಪ್ಪ, ಅಮ್ಮ ಎಲ್ಲರನ್ನೂ ಕಡೆಗೆ ಬ್ಯಾಂಕ್ ಲೋನ್ ಕೂಡ ಮರೆಯುವುದು ಬಹಳಷ್ಟು ಸಾಮಾನ್ಯ, ಅಷ್ಟೇ ದೊಡ್ಡ ವಿಪರ್ಯಾಸ!...

ಈ ಬ್ಯಾಂಕ್ ಲೋನ್ ಗಳಿಸಲು, ಅಪ್ಪ ಅಮ್ಮ ಕಷ್ಟಪಟ್ಟು ಗಳಿಸಿದ ಚಿರಾಸ್ತಿಯನ್ನು, ಬ್ಯಾಂಕಿಗೆ ಅಡವಿಟ್ಟು ಮಕ್ಕಳಿಗಾಗಿ ಸಾಲ ಪಡೆದು, ಅವರು ತೀರಿಸಿದರೆ ಸರಿ, ಇಲ್ಲವಾದರೆ ಆ ಸಾಲದ ಜವಾಬ್ದಾರಿಯನ್ನು ಮೈಮೇಲೆ ಹೇರಿಕೊಂಡು, ನಿವೃತ್ತರಾದ ನಂತರವೂ ಹೆಣಗಾಡುತ್ತಾ ಸಾಲ ತೀರಿಸುತ್ತಿರುವುದನ್ನು ಕಣ್ಣಾರೆ ಕಂಡಿದ್ದೇನೆ.

ಇಂತಹುದೇ ಒಂದು ಕುಟುಂಬದ ಹೆಣ್ಣುಮಗಳು ಪ್ರತಿಭಾ. ಇಂಜಿನಿಯರಿಂಗ್ ಓದಬೇಕೆಂದಾಗ, ಸ್ವಲ್ಪ ದೂರದ ಕಾಲೇಜಿನಲ್ಲಿ ಫ್ರೀ ಸೀಟ್ ದೊರೆಯಿತು. ಅದನ್ನು ತ್ಯಜಿಸಿ, ಪ್ರತಿಷ್ಠಿತ ಕಾಲೇಜಿಗೆ ಪೇಮೆಂಟ್ ಸೀಟಿನಲ್ಲಿ ಸೇರ್ಪಡೆಯಾದಳು.

ವಿಚಾರ ಅದಲ್ಲ, ತಂದೆಯ ಅತ್ಯಲ್ಪ ಸಂಪಾದನೆ, ತಾಯಿ ಗೃಹಿಣಿ. ಹೀಗಿರುವಾಗ ಪೇಮೆಂಟ್ ಸೀಟ್ ಮನಸ್ಸನ್ನು ಕೊರಗಿಗೆ ದೂಡಿದರೂ ತಾಯ್ತಂದೆಯರು ಸಹಕರಿಸಿದರು. ಡಿಗ್ರಿ ಸುಲಭವಾಗೇ ದೊರೆಯಿತು. ಪ್ರತಿಭಾ, ಪ್ರತಿಭಾವಂತಳೇ!

ಮುಂದೆ ಉನ್ನತ ವಿದ್ಯಾಭ್ಯಾಸಕ್ಕೆ ವಿದೇಶ ಪ್ರಯಾಣ, ಹಣಕಾಸಿಗೆ ಬ್ಯಾಂಕಿನ ಸಹಕಾರ. ವಿದ್ಯಾಭ್ಯಾಸ ಪೂರೈಸಿ, ಹೆಸರಾಂತ ಕಂಪನಿಯಲ್ಲಿ ಕ್ಯಾಂಪಸ್ ಸೆಲೆಕ್ಷನ್ ನಿಂದ ಉದ್ಯೋಗ. ಸಂತಸದ, ಭರವಸೆಯ ದಿನಗಳು.

ಎಲ್ಲವೂ ನಮ್ಮ ಇಚ್ಛೆಯಂತೆ ನಡೆಯುವುದಾದರೆ ದೈವ ನಿರ್ಣಯವೊಂದಿದೆಯಲ್ಲಾ. ಎಲ್ಲಾ ಕಡೆಯಿಂದ ವರನ ತಾಯ್ತಂದೆಯರು ಮದುವೆಗಾಗಿ ಪ್ರಸ್ತಾಪ ಮಾಡಿದರು. ಪ್ರತಿಭಾಳ ಅಪ್ಪ, ಅಮ್ಮ ನಿರೀಕ್ಷೆಯಂತೆ ಒಂದೆರಡು ವರ್ಷಗಳ ಕಾಲ ಮದುವೆ ನಿಧಾನವೆಂದರು. ಕಾರಣ ಸ್ಪಷ್ಟವಿತ್ತಲ್ಲ ಬಹು ದೊಡ್ಡ ಮೊತ್ತದ ಬ್ಯಾಂಕ್ ಲೋನ್.

ಎಲ್ಲವೂ ಸರಿಯಾಗಿದೆ ಎನ್ನುವಾಗ ಮಗಳು ವಿಚಾರವೊಂದನ್ನು ಹೊರಗೆಡಹಿದಳು, ತನ್ನ ವಿದೇಶಿ ಗೆಳೆಯನನ್ನು ಮದುವೆಯಾಗುವೆನು ಎಂದು. ಮುಂದಿನ ಮಾತುಕತೆ ಅನವಶ್ಯ. ತಂದೆತಾಯಿಯರ ಯಾವ ಅನುನಯದ ಮಾತಿಗೂ ಸೋಲಲಿಲ್ಲ ಪ್ರತಿಭಾ. ಸೋತವರು ಪ್ರತಿಭಾಳ ಅಪ್ಪ, ಅಮ್ಮ.

ಮುಂದಿನ ದಿನಗಳಲ್ಲಿ, ಭಾರತದಲ್ಲೇ ಮದುವೆ ಎಂದು ತೀರ್ಮಾನವಾಯ್ತು.

ವಿಶ್ವವ್ಯಾಪಿ ಕೊರೋನ ಆಕ್ರಮಣ, ಎಲ್ಲರನ್ನು ಧೃತಿಗೆಡಿಸಿದ್ದೇ ಅಲ್ಲದೆ ಜನಜೀವನ ಅಸ್ತವ್ಯಸ್ತ. ಪ್ರತಿಭಾಳ ಮದುವೆ ಮುಂದೂಡಿತು. ಈ ಅವಸ್ಥೆ ಮುಗಿಯುವ ರೀತಿ ಕಾಣದಾದಾಗ, ಪ್ರತಿಭಾ ತನ್ನ ಗೆಳೆಯನೊಡನೆ ರಿಜಿಸ್ಟರ್ ಮದುವೆ ಮಾಡಿಕೊಂಡಳು. ತಾಯಿತಂದೆಯರ ಅನುಮತಿ ಪಡೆದೆ ಎನ್ನುವುದು ಅವಳ ಮಾತು.....

ಜೀವನ ನಿಂತ ನೀರಲ್ಲ, ಪ್ರತಿಭಾ ತನ್ನದೇ ಆದ ರೀತಿಯ ಬದುಕು ಕಟ್ಟಿಕೊಂಡಳು. ಭಾರತೀಯತೆಯ ಯಾವ ಸೋಂಕು ಇಲ್ಲದೆ ಆರತಿ ಅಕ್ಷತೆಗಳಿಲ್ಲದೇ, ಅಪ್ಪ ಅಮ್ಮನ ಆಶೀರ್ವಾದವಿಲ್ಲದೇ, ಹಿರಿಯರ ಹಾರೈಕೆಗಳಿಲ್ಲದೇ, ಕಿರಿಯರ ಮೋಜು ಮಸ್ತಿಯಿಲ್ಲದೇ, ನಾದಸ್ವರ, ಪುರೋಹಿತರ ಮಂತ್ರಗಳಿಲ್ಲದೇ..... ನಡೆದೇ ಹೋಯಿತು, ಪ್ರತಿಭಾಳ ಮದುವೆ.

ಸುಸಂಸ್ಕೃತರ, ಆರ್ಥಿಕವಾಗಿ ನೊಂದಿದ್ದ ಕುಟುಂಬದ ಕುಡಿ ತನ್ನ ಜೀವನವನ್ನು ತಾನೇ ರೂಪಿಸಿಕೊಂಡ ಪರಿ ವಿಸ್ಮಯ ಮೂಡಿಸಿ ಒಂದು ನಿಟ್ಟುಸಿರು ಬಿಡುವಂತೆ ಮಾಡಿತು.,,...

ಶ್ರೀರಂಗಂನಲ್ಲಿ ನೆಲೆಯಾಗಿರುವ ಗೆಳತಿ ಸುಧಾ ಫೋನ್ ಬಂತೆಂದರೆ ಅದು ಒಂದು ಗಂಟೆಯ ಕೊರೆತ. ನಾನು ಅವಳಿಗೆ ಕಿವಿ. ನನ್ನ ಮಾತು ಅಲ್ಲೊಂದು ಇಲ್ಲೊಂದು. ಅವಳದೇ ಮಾತಿನ ಆರ್ಭಟ, ಜಗದ ಕಸ್ಟವೆಲ್ಲವೂ ಅವಳಿಗೇ ಬಂದಂತೆ ಕೊರಗುವ ಸುಧಾ, ನಿಜ ಜೀವನದಲ್ಲಿ ಪರಮ ಸುಖಿ. ಜಾಣ, ವಿದ್ಯಾವಂತ, ಉತ್ತಮ ಉದ್ಯೋಗದಲ್ಲಿದ್ದು ನಿವೃತ್ತರಾದ ರಾಜನ್ ಅವಳ ಆಜ್ಞಾನುವರ್ತಿ. ಹೆಣ್ಣುಮಕ್ಕಳಿಬ್ಬರಿಗೂ ಮದುವೆಮಾಡಿ, ಸ್ವತಂತ್ರವಾಗಿರುವ ಗೆಳತಿ ಸುಧಾ ಮತ್ತು ನನ್ನ ಸ್ನೇಹ 12 ವರ್ಷಗಳಷ್ಟು ಹಳೆಯದು.

ಅವಳ ಸ್ನೇಹವಲಯ ಬಹು ದೊಡ್ಡದು. ಉದ್ಯೋಗದಲ್ಲಿದ್ದ ದಿನಗಳಲ್ಲಿ, ಬೇರೆಬೇರೆ ಊರುಗಳಲ್ಲಿ ಕೆಲಸಮಾಡಿ, ಅಸಾಧಾರಣ ಅನುಭವಗಳ ಜೊತೆಗೆ, ಗಳಿಸಿದ ಸ್ನೇಹಿತರು ಸಂಖ್ಯೆಗೆ ನಿಲುಕದಷ್ಟು. ಸುಧಾಳ ಹಿರಿಮಗಳ ಮದುವೆ ಮದ್ರಾಸಿನಲ್ಲಿ ನಡೆದಾಗ, ನಾನೂ ಹಾಜರಿದ್ದು ಸಂಭ್ರಮಿಸಿದ್ದು ಒಂದು ದೊಡ್ಡ ಲೇಖನ ಆಗುತ್ತದೆನೋ.

ಅಲ್ಲಿ ಬಂದಿದ್ದ ಅನೇಕ ಗೆಳೆಯ ಗೆಳತಿಯರಲ್ಲಿ, ಹೈದರಾಬಾದಿನ ಹೇಮಾ ನನ್ನನ್ನು ಆಕರ್ಷಿಸಿದ, ಸದಾ ನಗು ತುಂಬಿದ್ದ, ಸುಂದರಮೊಗದ ಹೆಣ್ಣುಮಗಳು. ಹಾಗೇ ಪರಿಚಯದೊಡನೆ ಬ್ಯಾಂಕಿನ ವಿಚಾರ, ವೈಯಕ್ತಿಕ ವಿಚಾರಗಳ ವಿನಿಮಯ ಮಾಡಿಕೊಂಡು ಇದ್ದ ಮೂರು ದಿನ ಖುಷಿಯಾಗಿ ಕಳೆದೆವು. ಬೆಂಗಳೂರಿಗೆ ಹಿಂತಿರುಗಿದ ಮೇಲೂ ನನ್ನ ವಿಚಾರವೆಲ್ಲವೂ ಹೇಮಳಿಗೂ, ಹೇಮಳ ಎಲ್ಲಾ ವೈಯಕ್ತಿಕ ವಿಚಾರಗಳು ನನಗೂ ಗೆಳತಿ ಸುಧಾಳ ಮೂಲಕ ವಿನಿಮಯ ಆಗುತ್ತಿತ್ತು.

ಹಾಗೇ ತಿಳಿದು ಬಂದ ವಿಚಾರವೊಂದು ನನ್ನ ಈ ಬರವಣಿಗೆಗೆ ಕಾರಣವಾಯ್ತು.

ಹೇಮಾಳಿಗೆ ಒಬ್ಬಳು ತಂಗಿ, ಒಬ್ಬ ಅಣ್ಣ ಮತ್ತು ತಂದೆ ತಾಯಿ. ಹೇಮಾಳ ತಾಯಿತಂದೆಯರು ಆರ್ಥಿಕವಾಗಿ ತಕ್ಕಮಟ್ಟಿಗೆ ಇದ್ದವರು. ಹೇಮಾಳ ಗಂಡನ ಕಡೆಯ ನೆಂಟರ ಹುಡುಗ ಪ್ರಭಾಕರನಿಗೆ ಹೇಮಾಳ ತಂಗಿ ಸುಮಾಳನ್ನು ಕೊಟ್ಟು ಮದುವೆ ಮಾಡಿದ್ದರು. ತುಂಬಿದ ಮನೆಯ ಸೊಸೆಯಾಗಿ ಬಂದಾಗ ಸುಮಾ ಚಿಕ್ಕವಳೇ, 22 -23ರ ವಯಸ್ಸು. ಗಂಡನಿಗೆ ವಯಸ್ಸು ಸ್ವಲ್ಪ ಹೆಚ್ಚೇ.

ದಾಂಪತ್ಯದ ಪ್ರಾರಂಭದ ದಿನಗಳು, ಸುಮಾ ಎಲ್ಲರೊಡನೆ ಹೊಂದಿಕೊಂಡು, ನಗುನಗುತ್ತಾ, ಅತೀವ ಚಟುವಟಿಕೆಯಿಂದ ಇದ್ದ ಹುಡುಗಿ. ಮದುವೆಯಾದ ಒಂದು ವರ್ಷದಲ್ಲೇ ಮುದ್ದಾದ ಹೆಣ್ಣುಮಗುವಿಗೆ ಜನ್ಮ ನೀಡಿದಳು. ಮುದ್ದು ನಂದಾ ಮನೆಯ ದೀಪವಾದಳು. ಮನೆ ಸಂತಸದ ಬೀಡಾಗಿ, ಸುಮಾ ನೆಮ್ಮದಿಯಿಂದ ಇದ್ದಳು ಅನಿಸುತ್ತೆ.

ಕೆಲವು ಸಮಯದ ನಂತರ ಮನೆಯೊಳಗಿನ ತಾರತಮ್ಯ, ಭೇದಭಾವಗಳು ಅವಳಿಗೆ ಇರಿಸುಮುರುಸಾಗಲು ಶುರುವಾಯ್ತು. ಮೊದಮೊದಲು, ಅದನ್ನೆಲ್ಲಾ ಲೆಕ್ಕಕ್ಕಿಡದ ಸುಮಾಳಿಗೆ, ಮುಂದೆ ಹೊಂದಿ ನಡೆಯಲು ಕಷ್ಟವಾಗತೊಡಗಿತ್ತು. ಮಾತಿಗೆ ಮಾತು ಬೆಳೆಯಲು ಪ್ರಾರಂಭವಾಗಿ, ಹಿರಿಯರೊಡನೆ ಅವಳ ಆತ್ಮೀಯತೆ ಕರಗಿ, ಅಲ್ಲೊಂದು ಅಸಮಾಧಾನದ, ಸಿಡುಕಿನ ಭಾವಗಳು ತಲೆದೋರತೊಡಗಿದವು. ಮೇಲಿಂದ ಮೇಲೆ ನಡೆಯುತ್ತಿದ್ದ ವಾಗ್ವಾದಗಳು ಜಗಳದ ಸ್ಥಾನ ಪಡೆದು, ಮುಂದೊಂದು ದಿನ ತೀರಾ ಸರಿಪಡಿಸಲಾಗದ ಮಟ್ಟಕ್ಕೆ ಹೋಯಿತು.

ಆಗಲೇ ಬೇರೆ ಮನೆ ಮಾಡಿ ಸುಮಾ, ಗಂಡ ಮಗಳೊಡನೆ ವಾಸಿಸಲು ಪ್ರಾರಂಭಿಸಿದಳು. ಬೇರೆ ಬಂದ ಸ್ವಲ್ಪ ಸಮಯ ಮನೆ ನೆಮ್ಮದಿಯ ಗೂಡಾಗಿತ್ತು. ಒಟ್ಟು ಕುಟುಂಬದಿಂದ ಹೊರಬಂದ ಮಗನ ಮೇಲೆ ತಾಯಿಯ, ಮತ್ತಿತರರ ಅಸಮಾಧಾನ ಹೆಚ್ಚಿತ್ತು. ಅದು ಮಾತಿನ ರೂಪ ತಳೆದು, ಸುಮಾಳ ಗಂಡ ಪ್ರಭಾಕರ ತನ್ನ ಮನೆಗೆ ಹೋದಾಗ ಅವನನ್ನು ಹಿಡಿದು ಅಪ್ಪಳಿಸುತ್ತಿತ್ತು. ಅದರ ಪರಿಣಾಮ ಸುಮಾಳ ಮೇಲೆ ಕ್ರೋಧದಲ್ಲಿ ಏಟಾಗಿ ಬೀಳುತ್ತಿತ್ತು. ಮತ್ತೆ ಮತ್ತೆ ಇದೇ ಪರ್ಯಾವರ್ತನೆ ಆಗುತ್ತಿದ್ದರೂ, ಮಗುವಿನ ಒಡನಾಟದಲ್ಲಿ ಅದನ್ನೆಲ್ಲಾ ಸಹಿಸಿಕೊಂಡು, ನೆಮ್ಮದಿಯನ್ನು ಕಾಣಲು ಪ್ರಯತ್ನ ಪಡುತ್ತಿದ್ದಳು ಸುಮಾ.

ಮಗುವಿಗೆ 2 ವರ್ಷ ತುಂಬಿತು. ಹೇಗೋ ದಿನಗಳು ಸರಿಯುತ್ತಿದ್ದವು. ಈ ನಡುವೆ ಸುಮಾಳ ಗಂಡ ಪ್ರಭಾಕರನ ನಡವಳಿಕೆ ಸುಧಾರಿಸಲಿಲ್ಲ. ಒರಟ, ಜೊತೆಗೆ ವಯಸ್ಸಿನ ಅಂತರ. ಸೂಕ್ಷ್ಮ ಮತಿಯಾದ, ಸುಂದರಳೂ ಆದ ಪತ್ನಿಯನ್ನು ಅರ್ಥ ಮಾಡಿಕೊಳ್ಳಲು ವಿಫಲನಾಗಿದ್ದ.

ದಿನಗಳು ಸರಿಯುತ್ತಿದ್ದಂತೆ ಸುಮಾ ಎರಡನೇ ಬಾರಿಗೆ ತಾಯಿಯಾಗುವ ಸೂಚನೆ ಕಾಣಿಸಿತು. ಒರಟ, ಹಿಂಸಕ ಗಂಡನ ವರ್ತನೆಗಳು ಅಕ್ಕ ಪಕ್ಕದವರಿಗೂ ಪರಿಚಯವಾಗಿತ್ತು. ಬಸುರಿ ಸುಮಾ ನೆರೆಹೊರೆಯವರ ಕನಿಕರ, ಅಭಿಮಾನ, ಪ್ರೀತಿಗೆ ಪಾತ್ರಳಾದಳು. ಮನೆಯ ವಾತಾವರಣ ಸಹಿಸಲು ಅಸಾಧ್ಯವಾದರೂ ಸಹಿಸಿದಳು.

2ನೇ ಮಗು ಗಂಡಾಗಿ ಹುಟ್ಟಿತು. ಕೆಲವು ದಿನಗಳು ಸಮಾಧಾನಕರವಾಗಿ ಕಾಣುತ್ತಿತ್ತು. ಅಷ್ಟೇ! ಹಸುಮಗುವನ್ನು ಕರೆದುಕೊಂಡು, ಗಂಡ ಮಗಳನ್ನು ಬಿಟ್ಟು, ಸುಮಾ ಒಂದು ದಿನ ಕಾಣೆಯಾದಳು.......

ಎಲ್ಲರ ನೆಮ್ಮದಿ ಕದಡಿತು. ನಂದಾ ತಾಯಿಯಿಂದ ದೂರವಾದ ನತದೃಷ್ಟ ಮಗುವಾಯ್ತು. ಅಪ್ಪನೊಡನೆ ಅಜ್ಜಿಯ ಮನೆ ಸೇರಿತು.

ಅಕ್ಕ ಪಕ್ಕದಲ್ಲಿ ಗುಲ್ಲು ಹರಡಿತು!! ಸುಮಾ ಅಲ್ಲೇ ಎಲ್ಲೋ ಹತ್ತಿರದಲ್ಲಿ ಬೇರೊಬ್ಬ ಗಂಡಸಿನೊಡನೆ ಇರುವಳೆಂದು!!

ಇದು ಮನೆಯವರಿಗೂ, ಸುಮಾಳ ಅಕ್ಕ ಹೇಮಾಳಿಗೂ ತಿಳಿದು ಎಲ್ಲರಿಗೂ ನುಂಗಲಾರದ ತುತ್ತಾಯ್ತು. ಸುಮಾಳ ತಂದೆ ತಾಯಿಯರು ಸ್ಥಿತಿವಂತರಲ್ಲ ಆದರೆ ಮಾನವಂತರು. ಹೇಮಾಳಿಗಂತೂ ನೆಂಟರ ನಡುವೆ ತಲೆ ಎತ್ತದಂತೆ ಆಯ್ತು. ಎಂತಹ ಅನಿಷ್ಟ ಬಂದೊದಗಿತು, ನೆಂಟರಿಷ್ಟರು, ಆಪ್ತರ ನಡುವೆ ತಲೆ ಎತ್ತದಂತಾಯ್ತು, ಸುಮಾಳ ಗಂಡ ಪ್ರಭಾಕರನ ಮನೆಯವರ ಪರಿಸ್ಥಿತಿ.

ಇದೆಲ್ಲಾ ನಡೆದು ಬಹಳ ವರ್ಷಗಳೇ ಕಳೆದು ಹೋಗಿದೆ. ಸಣ್ಣ ಮಗುವನ್ನು, ಗಂಡನನ್ನು ತೊರೆದ ಸುಮಾ ವಿಚ್ಛೇದನ ಪಡೆಯಲೂ ಪ್ರಯತ್ನಿಸಲಿಲ್ಲ, ಎಲ್ಲಿರುವಳು ಎಂಬ ಸುಳಿವೂ ದೊರೆಯದಂತೆ ಬದುಕು ನಡೆಸಿದಳು.

ಇತ್ತ 3 ವರ್ಷದ ನಂದಾ ತಾಯಿಯಿಲ್ಲದ ಕಂದನಾಗಿ, ತಂದೆಯ ಮನೆಯ ಎಲ್ಲರ ಪ್ರೀತಿಯ ಮುದ್ದಿನ ಕೂಸಾಗಿ ಬೆಳೆಯಿತು. ಇಂದು ಆಕೆ ವಿದ್ಯಾಭ್ಯಾಸ ಮುಗಿಸಿದ್ದಾಳೆ, ಚಿತ್ರಕಲೆಯಲ್ಲಿ ಸಾಧನೆ ಮಾಡಿದ್ದಾಳೆ.

ವಯಸ್ಸಿಗೆ ಬಂದ ಮಗಳ ಮದುವೆ ಮಾಡಲು, ಪ್ರಭಾಕರ ಮತ್ತವರ ಕುಟುಂಬ ತೀರ್ಮಾನಿಸಿದೆ. ಪ್ರಯತ್ನವೂ ನಡೆದಿದೆ.

ಈ ನಡುವೆ ಸುಮಾಳ ಮಗ ಸಂಗೀತದಲ್ಲಿ ಪರಿಣಿತಿ ಸಾಧಿಸಿ ಪ್ರಸಿದ್ಧ ವಿದ್ವಾಂಸ ಎನಿಸಿಕೊಂಡಿದ್ದಾನೆ. ಬದುಕಿನ ದಾರಿಯಲ್ಲಿ ಹೇಗೆಲ್ಲಾ ತಿರುವುಗಳು ಬರುತ್ತವೆ ಎನ್ನುವುದಕ್ಕೆ ಸಾಕ್ಷಿ ಇಂದಿನ ಕಾರ್ಯಕ್ರಮ.

ತಿರುಪತಿಯಲ್ಲಿನ ಸಹಸ್ರ ದೀಪಾಲಂಕಾರ ಸೇವೆಗೆ, ಹೈದರಾಬಾದಿನಿಂದ ಸುಮಾಳ ಗಂಡನ ಮನೆಯವರು ಬಂದಿದ್ದಾರೆ. ದೇವರ ದರ್ಶನ ಮುಗಿಸಿ, ದೀಪಾಲಂಕಾರ ಸೇವೆ ನಡೆಯುವ ಅಂಗಳದಲ್ಲಿ ಎಲ್ಲರೂ ಕುಳಿತಿದ್ದಾರೆ. ಈ ಸೇವೆಯ ವೈಶಿಷ್ಟ್ಯ ಅಂದರೆ, ಮೊದಲಿಗೆ ನಾದಸ್ವರದಿಂದ ದೇವರನ್ನು ಆಹ್ವಾನಿಸಿ ಪ್ರಾರಂಭ. ದೇವರನ್ನು ತೂಗುತ್ತಾ, ಸೇವೆಗೆ ಚೀಟಿ ಪಡೆದವರು, ಉಯ್ಯಾಲೆಯ ಸುತ್ತಾ ಇರುವ

ದೀಪಗಳನ್ನು, ಪುರೋಹಿತರ ಆದೇಶದ ಮೇರೆಗೆ, ಅಲ್ಲಿ ಹೋಗಿ ಹಚ್ಚಬೇಕು. ದೇವರ ಮೂರ್ತಿಯ ಹಿಂದೆ ನಕ್ಷತ್ರಗಳ ರೀತಿ ಬೆಳಗುವ ಸಹಸ್ರ ಹಣತೆಗಳು, ದೇವರನ್ನು ಮಂದಗತಿಯಲ್ಲಿ ತೂಗುವ ಆಗಮಿಕರು. ಮುಂದೆ ನಾದ ಸ್ವರ ವಾದನ. ಒಂದು ಘಳಿಗೆ ದೇವೇಂದ್ರನ ಅಮರಾವತಿ ಇರಬಹುದೆನ್ನುವ ಭಾವ ಎಲ್ಲಾ ಆಸ್ತಿಕರಿಗೂ ಅನಿಸುತ್ತದೆ. ನಾದಸ್ವರದ ನಂತರ ಸಂಗೀತ ಸೇವೆ. ಸಂಗೀತ ಮುಗಿದಮೇಲೆ, ವೇದಮಂತ್ರ ಪಠಣ. ನಂತರ ಮಹಾ ಮಂಗಳಾರತಿ. ಪ್ರಸಾದ ವಿನಿಯೋಗ. ನೆರೆದ ಜನಕ್ಕೆ ಜನ್ಮ ಸಾರ್ಥಕ ಭಾವ.

ಅದೇ ಸಮಯದಲ್ಲಿ ಸಂಗೀತ ಸೇವೆ ಆರಂಭವಾಯ್ತು. ಒಮ್ಮೆಲೇ ಎಲ್ಲರ ಕಿವಿಗಳೂ ಚುರುಕಾದವು. ದೃಷ್ಟಿಯೆಲ್ಲಾ ಆ ತರುಣನ ಮೇಲೆ ಕೇಂದ್ರೀಕೃತವಾಯ್ತು. ಎಂತಹ ಮೋಡಿಯ ಗಾಯನ. ಎಷ್ಟು ಚೆನ್ನಾಗಿ ಹಾಡುತ್ತಿರುವನು. ಹಾಡುಗಾರನ ವಿದ್ವತ್ ಎಂತಹ ಮಟ್ಟದ್ದು ಎಂದು ಸಂತೋಷಸುತ್ತಿರುವಾಗ, ಪ್ರಭಾಕರನ ದೃಷ್ಟಿ ತಂಬೂರಿ ಮೀಟುತ್ತಿದ್ದವಳ ಕಡೆ ತಿರುಗಿತು. ತಲೆಯಲ್ಲಿ ಝುಗ್ಗ್ ಎಂದು ಸಹಸ್ರ ದೀಪಗಳು ಹೊತ್ತಿಕೊಂಡಂತೆ ಆಯ್ತು. ದಿಗ್ಭ್ರಮೆಯಿಂದ ಮತ್ತೆ ಮತ್ತೆ ನೋಡಿದ. ಅವಳೇ ಅವಳೇ, ಸುಮಾ ಇದೇನು? ಅವಳೇಕೆ ಇಲ್ಲಿದ್ದಾಳೆ? ಅವಳಿಗೂ, ಈ ಸಂಗೀತಕ್ಕೂ ಎಲ್ಲಿಯ ಸಂಬಂಧ.

ಪ್ರಭಾಕರನ ತಲೆ ಕೆಟ್ಟು, ಚಿಂದಿಯಾಯ್ತು. ಮುಂದಿನ ಕಾರ್ಯದಲ್ಲಿ ಆಸಕ್ತಿ ಉಳಿಯಲಿಲ್ಲ. ಈ ವಿಚಾರ ಮನೆಯವರೆಲ್ಲರ ಗಮನಕ್ಕೂ ಬಂದಿತ್ತು. ಸಂತೋಷದಿಂದ ತಿರುಪತಿಗೆ ಬಂದ ಅವರೆಲ್ಲರಲ್ಲಿ ಒಂದು ರೀತಿಯ ನೋವಿನ, ವಿಷಾದ ಭಾವ ಆವರಿಸಿತು.

ಮುಂದೆ ಪ್ರಭಾಕರನ ಅವಿರತ ಶ್ರಮದಿಂದ ತಿಳಿದ ಸುದ್ದಿ, ತಂಬೂರಿ ಮೀಟುತ್ತಿದ್ದ ಸುಮಾ, ಸಂಗೀತಗಾರ ಆಕೆಯ ಮಗ ಸುನಾದ. ವಾಸ ವಿಶಾಖಾಪಟ್ಟಣದಲ್ಲಿ. ದೇಶಾದ್ಯಂತ ಹೆಸರಾದ ಕರ್ನಾಟಕ ಸಂಗೀತ ವಿದ್ವಾಂಸ ಸುನಾದ.

ಎಂದೋ ಕಳೆದು ಹೋಗಿದ್ದ ದಾಂಪತ್ಯ ಜೀವನದ ಕೊಂಡಿ ಈ ಮೂಲಕ ಅಂದಿನ ದಿನಗಳನ್ನು ನೆನಪಿಗೆ ತಂದಿತು.

ಪ್ರಭಾಕರ ತಡಮಾಡಲಿಲ್ಲ, ಮತ್ತೆ ಸುಮಾಳ ಬದುಕಿನ ಹಿಂದೆ ಹೊರಟ. ಮನೆಯವರೆಲ್ಲರ ಕಡು ಆಕ್ಷೇಪಣೆಯ ನಡುವೆಯೂ ಕಳೆದುಹೋಗಿದ್ದ ಹೆಂಡತಿ, ಮಗನನ್ನು ಪಡೆಯುವಲ್ಲಿ ಯಶಸ್ವಿಯಾದ.

ನಂದಾ ಈಗ ಬೆಳೆದ ಮಗಳು. ಮದುವೆ ಮಾಡಲು ಹೊರಟರೆ ನೂರೆಂಟು ತೊಡಕುಗಳು. ತಾಯಿ ಸರಿ ನಡತೆಯವಳಲ್ಲ, ಗಂಡನನ್ನು ತೊರೆದವಳು, ಯಾರ ಹಿಂದೆಯೋ ಓಡಿಹೋದವಳು ಎಂದು ಬರುತ್ತಿದ್ದ ಎಲ್ಲಾ ನೆಂಟಸ್ತಿಕೆಯೂ ದೂರವಾಗುತ್ತಿದ್ದವು.

ನಂದಾಳ ಮದುವೆ ಸಮಸ್ಯೆಯ ಸುಳಿಗೆ ಸಿಕ್ಕಿತು. ನಂದಾ ಒಳಗೇ ಕೊರಗಲು ಶುರುಮಾಡಿದಳು.

ಇಲ್ಲಿವರೆಗೂ ತಿರುಪತಿಯಲ್ಲಿ ಕಂಡ ಸುಮಾಳನ್ನು, ನಂದಾ ತಾಯಿಯೆಂದು ಗುರುತಿಸಲು ಆಗಿರಲಿಲ್ಲ. ಪ್ರಭಾಕರನಾಗಲಿ, ಮನೆಯವರಾಗಲಿ ಈ ಗುಟ್ಟನ್ನು ನಂದಾಳಿಗೆ ಬಿಟ್ಟುಕೊಟ್ಟಿರಲಿಲ್ಲ.

ಈ ಮಧ್ಯೆ ಹೈದರಾಬಾದಿನಲ್ಲಿ ಸುನಾದನ ಸಂಗೀತ ಕಾರ್ಯಕ್ರಮ ಏರ್ಪಟ್ಟು, ಪ್ರಭಾಕರನೂ ಆ ಸಂಗೀತ ಕಛೇರಿಗೆ ಹೋಗಿ ಬರುವಾಗ ಸುನಾದನನ್ನು ಮನೆಗೆ ಆಹ್ವಾನಿಸಿ ಬಂದಿದ್ದ.

ಸುನಾದ ಮನೆಗೆ ಆಹ್ವಾನಿತನಾಗಿ ಬಂದರೂ ಎಲ್ಲರ ವಿಶ್ವಾಸ ಗಳಿಸುವುದು ಸುಲಭವಾಗಿರಲಿಲ್ಲ. ಸುಮಾಳನ್ನು ಕ್ಷಮಿಸಲು ಅವರು ಯಾರೂ ತಯಾರಿರಲಿಲ್ಲ. ಆದರೆ ಸುನಾದ ತನ್ನ ಆತ್ಮೀಯ ನಡೆ ನುಡಿಯಿಂದ ಮನೆಯವರ ವಿಶ್ವಾಸ ಗಳಿಸಲು ಪ್ರಯತ್ನಿಸಿದ. ಒಂದು ದಿನ ತನ್ನ ಸಂಗೀತ ಆರಾಧನೆಯಿಂದ, ಅಜ್ಜಿಯ, ಮನೆಯವರ ಮನ ತಿಳಿಯಾಗುವಂತೆ ಮಾಡುವುದರಲ್ಲಿ ಯಶಸ್ವಿಯಾದ. ಅವನ ಗಾನ ಮಾಧುರ್ಯಕ್ಕೆ ಮನಸೋತ ಎಲ್ಲರೂ ಕಣ್ಣೀರಾದರು. ತಿಳಿಯಾದ ವಾತಾವರಣ ಏರ್ಪಟ್ಟು, ಸುನಾದ ಊರಿಗೆ ಹೊರಟ ಮೇಲೆ ಎಲ್ಲರ ಮನವೂ ಸಮಾಧಾನಗೊಂಡಿತ್ತು. ಊರಿಗೆ ಹೊರಡುವ ಮೊದಲು ಸುನಾದ ಎಲ್ಲರನ್ನೂ ಉದ್ದೇಶಿಸಿ ಹಳೆಯದೆಲ್ಲಾ ಮರೆತು ವಿಶಾಖಾಪಟ್ಟಣಕ್ಕೆ ಬರಬೇಕೆಂದು ಆಹ್ವಾನಿಸಿ ಅಕ್ಕ ನಂದಾಳಿಗೆ ವಿಶೇಷ ಆಹ್ವಾನವಿತ್ತ.

ನಂದಾ ಸಹಾ ತಾಯಿಯನ್ನು ಒಪ್ಪಿಕೊಂಡಿದ್ದಾಳೆ. ಎಷ್ಟಾದರೂ ತಾಯಿ ಮಗುವಿನ ಬಾಂಧವ್ಯ. ಅಲ್ಲಿ ತಾಯಿಯ ಹಿಂದಿನ ಚರಿತ್ರೆಯ ಯಾವ ಕುರುಹೂ ಇಲ್ಲಾ. ಒಂದೆರಡು ಬಾರಿ ವಿಶಾಖಾಪಟ್ಟಣಕ್ಕೆ ಹೋಗಿ, ತಾಯಿ ತಮ್ಮನೊಡನೆ ಖುಶಿಯಾಗಿದ್ದು ಬಂದಿದ್ದಾಳೆ.

ಇದಿಷ್ಟು ಸುಧಾಳಿಂದ ನನಗೆ ಆಗಾಗ್ಗೆ ವಿನಿಮಯವಾಗುತ್ತಿದ್ದ ಗೆಳತಿ ಹೇಮಾಳ ಕುಟುಂಬದ ವಿಚಾರ. ನನ್ನನ್ನು ಅಪಾರವಾಗಿ, ಗೌರವ, ಪ್ರೀತಿಯಿಂದ ಕಾಣುತ್ತಿದ್ದ ಸುಧಾ, ಈ ಸಂಗತಿಯನ್ನು ಒಂದು ಮಾನವೀಯ ದೃಷ್ಟಿಯಿಂದ ನನಗೆ ಹೇಳುತ್ತಿದ್ದಳು. ನಾನೂ ಅದೇ ಭಾವದಿಂದ ಸ್ವೀಕರಿಸುತ್ತಿದ್ದೆ ಎನ್ನುವುದೇ ಅವಳ ವಿಶ್ವಾಸದ ಮೂಲ.

ಬಹಳ ದಿನಗಳ ನಂತರ ಇಂದು ಸುಧಾಳಿಂದ ಫೋನ್ ಕರೆ. ನನಗೂ ಸಂತಸವಾಯ್ತು. ಈ ಕೊರೋನ ಗಲಾಟೆಯಲ್ಲಿ, ಎಲ್ಲಿಂದಾದರೂ ಫೋನ್ ಬಂತೆಂದರೆ ಜೀವದ್ರವ ಹರಿದ ಸಂತಸದ ಭಾವ. ಮಾತನಾಡುತ್ತಾ, ತಿಳಿದ ವಿಚಾರ

ನಂದಾಳ ಮದುವೆ ಆಯ್ತು, ವಿಶಾಖಾಪಟ್ಟಣದಲ್ಲಿ. ಹುಡುಗ ಸುಮಾಳ ಸ್ನೇಹಿತೆಯ ಮಗ. ಸುಂದರ, ಯೋಗ್ಯ ಅನುಕೂಲಸ್ಥ. ಮೊದಲಮಗ. ಹಿರಿಯರೂ ಸುಸಂಸ್ಕೃತರು.

ತಾನು ನಡತೆಗೆಟ್ಟವಳೆನಿಸಿಕೊಂಡರೂ ಸುಮಾ ತನ್ನ ಮಗಳ ಬಾಳನ್ನು ಕಟ್ಟುವುದರಲ್ಲಿ ಯಶಸ್ವಿಯಾಗಿದ್ದಳು.

ನಂದಾಳಿಗೆ ಮನದಲ್ಲೇ ಆಶೀರ್ವದಿಸಿದೆ. ಕಂದ ಸುಖವಾಗಿರು ಸದಾ, ಯಾವ ಕೇಡೂ ನಿನ್ನನ್ನು ಕಾಡದಿರಲಿ ಎಂದು.

ಪ್ರಿಯ ಓದುಗರೇ, ಇದುವರೆಗೆ ಎರಡು ಮದುವೆಗಳ ವಿಚಾರವನ್ನು ನೀವು ಓದಿದ್ದೀರಿ. ನನ್ನದೊಂದು ಜಿಜ್ಞಾಸೆ

ಮದುವೆಗೆ ಮಾನದಂಡ ಯಾವುದು?

ಸುಸಂಸ್ಕೃತ ಮನೆತನ, ನಡವಳಿಕೆ, ಶೀಲ, ನೀತಿ ನಡಾವಳಿಗಳು, ಮಕ್ಕಳನ್ನು ಬೆಳೆಸುವ ಪರಿ........ ಯಾವುದು ಸರಿ......

ನೀವು ಹೇಳುವಿರಾ?

ಸಣ್ಣ ಕಥೆ

ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ

-ಸ್ನೇಹಲತಾ ಮೋಡಕ್

ಸಂಪ್ರದಾಯಸ್ಥ ಕುಟುಂಬದ ಶಾಮರಾಯ ರುಕ್ಮಿಣಿ ದಂಪತಿಗಳಿಗೆ ಇಬ್ಬರು ಪುತ್ರರು, ವಿಕಾಸ ಮತ್ತು ವಿನೋದ. ಇಬ್ಬರೂ ಒಳ್ಳೆಯ ವಿದ್ಯಾವಂತರು. ಮೊದಲೆಲ್ಲಾ ಒಬ್ಬ ಮಗ ಹೊರಗೆ ನೌಕರಿಗೆಂದು ಪಟ್ಟಣಕ್ಕೆ ಹೋದರೆ ಇನ್ನೊಬ್ಬ ಮಗನನ್ನು ತಂದೆ ತಾಯಿಯ ಜತೆಗೆ ಮನೆವಾರ್ತೆ ಮತ್ತು ಕೃಷಿಗೆ ಇರಿಸಿಕೊಳ್ಳುವುದು ವಾಡಿಕೆ. ವಿಕಾಸ ನೌಕರಿ ಸಿಕ್ಕಿದೊಡನೆ ಪಟ್ಟಣ ಸೇರಿಕೊಂಡ. ವಿಕಾಸನ ಸ್ವಭಾವಕ್ಕೆ ಹೊಂದಿಕೊಳ್ಳುವ ಹುಡುಗಿ ವಿನುತಾ ಹಾಗೂ ಮನೆವಾರ್ತೆಯನ್ನು ನೋಡಿಕೊಳ್ಳುತ್ತಿದ್ದ ವಿನೋದನಿಗೆ ಸಂಪ್ರದಾಯಸ್ಥ ಮನೆಯ ಹುಡುಗಿ ವಿಜಯಾ ಸೊಸೆಯಾಗಿ ಬಂದಿದ್ದರು.

'ಭಾರತವು ಹಳ್ಳಿಗಳ ನಾಡು, ಕೃಷಿಯೇ ನಮ್ಮ ಮುಖ್ಯ ಕಸುಬು' ಎಂದು ವಿಕಾಸ ತನ್ನ ಬಾಲ್ಯದ ದಿನಗಳಲ್ಲಿ ಉರು ಹೊಡೆಯುತ್ತಿದ್ದ. ಆದರೆ, ತನ್ನ ಮಕ್ಕಳಿಗೆ ತಾನು ಹುಟ್ಟಿದ ಊರಿನ ಬಗ್ಗೆ ಗೌರವ, ತನ್ನ ಭಾಷೆ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವಲ್ಲಿ ವಿಫಲನಾಗಿದ್ದ. ದಂಪತಿಗಳಿಬ್ಬರೂ "ಹಳ್ಳಿ ಬದುಕು ನಮಗೆ ಒಗ್ಗುವುದಿಲ್ಲ, ಅಭ್ಯಾಸವಿಲ್ಲ" ಎಂದು ಮನಸ್ಸಿಲ್ಲದ ಮನಸ್ಸಿನಿಂದ ಪೂಜೆ ಪುನಸ್ಕಾರಗಳಿಗೆ ಮಾತ್ರ ಬರುತ್ತಿದ್ದರು. ತಮ್ಮ ಮಕ್ಕಳನ್ನು ತೋಟಕ್ಕೆ ಹೋಗಲು ಬಿಡುವುದಿರಲಿ ಅಂಗಳದಲ್ಲಿ ಮಣ್ಣಿನಲ್ಲಿ ಆಡಲೂ ಬಿಡುತ್ತಿರಲಿಲ್ಲ. ಹಾಗಾಗಿ ಅವೂ ಆಧುನಿಕ ಜೀವನ ಶೈಲಿಗೆ ಒಗ್ಗಿ ಹೋಗಿದ್ದವು. ತಂದೆ ತಾಯಿ ಅಣ್ಣ ಅತ್ತಿಗೆಯನ್ನು, ಬಾಯಿ ಉಪಚಾರಕ್ಕಾದರೂ ತನ್ನ ಮನೆಗೆ ಕರೆಯುತ್ತಿರಲಿಲ್ಲ. ಅವರೆಲ್ಲರನ್ನು ಕಂಡರೆ ಇವರಿಗೆ ಒಂಥರದ ತಾತ್ಸಾರ. ರುಕ್ಮಿಣಿಯವರು ಹೊರಗಡೆ ಹೋಗಬೇಕಾದರೆ ಕಾಲಿಗೆ ಚಪ್ಪಲಿ ಹಾಕುತ್ತಿರಲಿಲ್ಲ, ಅಭ್ಯಾಸವಿರಲಿಲ್ಲ. ಹಳೆಯಕಾಲದ ಜನ. ಶಾಮರಾಯರದೋ ಅದೇ ಪಂಚೆಧೋತಿ, ಬಿಳಿ ಜುಬ್ಬಾ, ಅಷ್ಟೆ.!

ವಿದೇಶಕ್ಕೆ ಹೋಗುವ ಮೊದಲು ಪಟ್ಟಣದಲ್ಲಿ ವಾಸಿಸುತ್ತಿದ್ದ ಮಗ ವಿಕಾಸ, ಸೊಸೆ ವಿನುತಾರ ಆಧುನಿಕ ಜೀವನ ಶೈಲಿ ಶಾಮರಾಯ ದಂಪತಿಗಳಿಗೆ ಕೆಲವೊಮ್ಮೆ ಬೇಸರ ತರಿಸುತ್ತಿತ್ತು. ಅನಗತ್ಯ ವಸ್ತುಗಳ ಕೊಳ್ಳುಬಾಕತನ, ಮಕ್ಕಳ ತಪ್ಪುಗಳನ್ನು ತಿದ್ದದೆ ಬೇಡುಬೇಡಗಳಿಗೆಲ್ಲ ಸ್ಪಂದಿಸುವುದನ್ನು ನೋಡಿ ಬೇಸರಿಸುತ್ತಿದ್ದರು. ಹೀಗೆ ದಿನಗಳು ಉರುಳುತ್ತಿದ್ದವು. 'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಕೊಟ್ಟದ್ದು ಹಾಲು ಅನ್ನ' ಎಂಬ ಗಾದೆಯಂತೆ, ವಿದೇಶದ ಕನಸು ಕಂಡಿದ್ದ. ವಿಕಾಸನಿಗೆ ತನ್ನ ಕಂಪೆನಿಯಿಂದ ಪರದೇಶಕ್ಕೆ ಹೋಗುವ ಯೋಗ ಬಂದಾಗ 'ಸ್ವರ್ಗಕ್ಕೆ ಮೂರೇ ಗೇಣು' ಎಂಬಂತೆ ವಿದೇಶಕ್ಕೆ ಹೊರಟರು. ಹೊರಡುವಾಗ ತನ್ನ ತಂದೆತಾಯಿಗೆ ತಾನು ಕಾಯಂ ಆಗಿ ವಿದೇಶದಲ್ಲಿ ನೆಲೆಯೂರುವ ಆಸಕ್ತಿ ಇದೆ ಎಂಬ ಸೂಚನೆ ಕೊಟ್ಟಿದ್ದ. ಹಾಗೆ ಮಾತು ಬಂದಾಗ ಪ್ರಚಲಿತವಿರುವ ಹೈಟೆಕ್ ಶೈಲಿಯ ವೃದ್ಧಾಶ್ರಮಗಳ ಬಗ್ಗೆ ಸೂಕ್ಷ್ಮವಾಗಿ ತಂದೆ ತಾಯಿಗೆ ಅರಿವನ್ನು ಮೂಡಿಸಿದ್ದ. ಸಂಬಂಧಗಳಲ್ಲಿ ಬಿರುಕು ಮೂಡುವುದು ಹೀಗೆ ಅಲ್ಲವೇ?

ನಾವೊಂದು ಬಗೆದರೆ ವಿಧಿ ಇನ್ನೊಂದು ಬಗೆಯುತ್ತದಂತೆ. ಒಂದೆರಡು ವರ್ಷಗಳು ವಿದೇಶದಲ್ಲಿ ಕಳೆದ ನಂತರ ಎಂದೂ ಕೇಳರಿಯದ ಮಹಾಮಾರಿ ಕೊರೋನಾ ವಿಶ್ವದಾದ್ಯಂತ ಅಪ್ಪಳಿಸಿತು. ಆರಾಮದ ಜೀವನಕ್ಕೆ ಒಗ್ಗಿ ಹೋಗಿದ್ದ ದಂಪತಿಗಳಿಗೆ ಮನೆಯಲ್ಲೇ ಇದ್ದು ಬೇಸರವಾಗಿ ಕಾಲ ಕಳೆಯಲು ಕಷ್ಟವಾಗತೊಡಗಿತು. ಅಕ್ಕಪಕ್ಕದ ನಿವಾಸಿಗಳಿಗೂ ಕೊರೋನಾ, ಸೀಲ್ಡೌನ್, ಕೊರೋನಾದ ಅಬ್ಬರ, ಅತಿರೇಕವನ್ನು ತಲುಪಿತ್ತು. ಪರಿಚಯದವರ ಸಾವುನೋವು, ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದ ಉದ್ಯೋಗಿಗಳು, ಜೀವ ಇದ್ದರೆ ಜೀವನ ಎಂಬಂತಿದ್ದ ಜನ, ಮಕ್ಕಳಿಗೆ ಶಾಲೆಗಳೂ ಇಲ್ಲ. ಸಂಬಂಧ, ಆತ್ಮೀಯತೆ, ತನ್ನವರು ಎಂಬ

ಭಾವನೆಗಳನ್ನೇ ರೂಢಿಸಿಕೊಳ್ಳದ ಇವರಿಗೆ ಆರೋಗ್ಯವೇ ಭಾಗ್ಯ ಎಂಬ ನುಡಿಗಟ್ಟಿನ ಸತ್ಯದ ಅರಿವಾಗತೊಡಗಿತ್ತು. ವಿದೇಶದಲ್ಲಿ ತನ್ನವರು ಎಂದು ಹೇಳಿಕೊಳ್ಳುವವರು ಯಾರೂ ಇಲ್ಲ.

ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಯೋಗ, ಪ್ರಾಣಾಯಾಮ, ಕಲಿಯುತ್ತಿದ್ದಾಗ ತನ್ನ ತಂದೆಯವರು ಮಾಡುತ್ತಿದ್ದ ತ್ರಿಕಾಲ ಸಂಧ್ಯಾವಂದನೆಯ ಮಹತ್ವ ಅರಿತ ವಿಕಾಸ. ಮಾಧ್ಯಮಗಳಲ್ಲಿ ಸಾಂಪ್ರದಾಯಿಕ ಸಾತ್ವಿಕ ಅಡುಗೆ, ಮನೆಮದ್ದು, ತಂಬುಳಿ, ಕಷಾಯಗಳ ವಿವಿರ ಬಿತ್ತರವಾಗುತ್ತಿತ್ತು. ತನ್ನ ತಾಯಿ ಇಂತಹ ಅಡುಗೆಗಳನ್ನು ಮಾಡಿ ಬಡಿಸುತ್ತಿದ್ದಾಗ ಅಡುಗೆ ರುಚಿಯಿಲ್ಲ ತನಗೆ ಬೇಡ ಎಂದು ಊಟದ ಮಧ್ಯೆ ಸಿಟ್ಟಿನಿಂದ ಕಿರುಚಿದ್ದು ನೆನಪಿಸಿಕೊಂಡು ದುಃಖ ಉಮ್ಮಳಿಸಿತು. ಮಡಿ, ಮೈಲಿಗೆಯೆಂದು ಮಧ್ಯೆಮಧ್ಯೆ ಕೈ ತೊಳೆಯುತಿದ್ದ ಅತ್ತೆ, ಎಂಜಲು ಮುಸುರೆ, ಶುದ್ಧ ಅಶುದ್ಧವೆಂದು ಊಟ ಮಾಡುತ್ತಿದ್ದಾಗ ಎಡಗೈಯಲ್ಲಿ ಬಡಿಸಿಕೊಳ್ಳದೆ ಇರುತ್ತಿದ್ದದ್ದು ನೆನೆದು ಸ್ವಚ್ಛತೆಯ ಬಗೆಗಿನ ಮಾಹಿತಿ ಹಿರಿಯರಿಗೆ ಮೊದಲೇ ಅರಿವಿತ್ತೇ? ಎಂದು ಪ್ರಶ್ನಿಸಿಕೊಂಡಳು ವಿನುತಾ. ತನ್ನ ಊರಿನ ತೋಟದಲ್ಲೇ ಹಚ್ಚ ಹಸುರಿನ ಔಷಧೀಯ ಗಿಡಗಳನ್ನು ನೋಡಿ ಅರಿವಿದ್ದವರಿಗೆ ಅದೇ ಒಣಗಿದ ಕಡ್ಡಿಗಳಿಗೆ ಒಂದರ ದುಪ್ಪಟ್ಟು ಕಾಸು ಕೊಟ್ಟು ಖರೀದಿಸುವಾಗ ನೆನಪಾಗಿದ್ದು ತಾನು ಹುಟ್ಟಿ ಬೆಳೆದು, ಬಾಲ್ಯವನ್ನು ಕಳೆದ ಮನೆಯ ವಾತಾವರಣ. ತಾನು ತೋರಿದ್ದ ಅನಾದರ, ತಪ್ಪುಗಳ ಅರಿವಾಗತೊಡಗಿತ್ತು.

ಅಂತೂ ವಿದೇಶಿ ವಿಮಾನಗಳು ಆರಂಭವಾಗುತ್ತಿದ್ದಂತೆ ವಿಕಾಸ ದಂಪತಿಗಳು ತಮ್ಮಲ್ಲಿದ್ದ ಅಹಂಕಾರವನ್ನು ಅಲ್ಲೇ ಬಿಟ್ಟು ಆರೋಗ್ಯವಂತರಾಗಿ ತಾಯ್ನಾಡಿಗೆ ಬಂದಿಳಿದಿದ್ದರು. ಮಗ, ಸೊಸೆ ಮತ್ತು ಮೊಮ್ಮಕ್ಕಳ ಚಡಪಡಿಕೆಯನ್ನರಿತು ವ್ಯಾಮೋಹದಿಂದ ಹಳ್ಳಿಗೆ ಕರೆಸಿಕೊಂಡರು ಶಾಮರಾಯರು. ಅಜ್ಜ ಅಜ್ಜಿಯ ವಾತ್ಸಲ್ಯದಿಂದ ಮೊಮ್ಮಕ್ಕಳಿಗೆ ಹಳ್ಳಿಯ ಮನೆ, ತೋಟ ಪ್ರಕೃತಿಯ ಸೊಬಗು ಪಕ್ಷಿಗಳ ಕಲರವ, ಕಾಡುಹಣ್ಣುಗಳು, ದೇಸಿ ಆಟಗಳು ಪರಿಚಯವಾಗತೊಡಗಿದವು. ಸಾಯಂಕಾಲದ ಸಮಯದಲ್ಲಿ ಅಜ್ಜಿ ಮೊಮ್ಮಕ್ಕಳನ್ನು ಕೂಡಿಸಿಕೊಂಡು, ಸ್ತೋತ್ರ, ಭಜನೆ, ರಾಮಾಯಣ, ಮಹಾಭಾರತದ ಕಥೆಗಳನ್ನು ರಾಷ್ಟ್ರವೀರರ ಕಥೆಗಳನ್ನು ಹೇಳಿಕೊಡುತ್ತಿದ್ದ ರೀತಿಯನ್ನು ನೋಡಿ ವಿನುತಾ, ವಿಕಾಸ ಸಂತಸಪಟ್ಟರು. ಅಣ್ಣನ ಮಕ್ಕಳ ಮುಗ್ಧತೆ, ಸರಳತೆ ಹಾಗೂ ತನ್ನ ಮಕ್ಕಳ ಹಠಮಾರಿ ಸ್ವಭಾವದ ವ್ಯತ್ಯಾಸಗಳನ್ನು ಅರಿತರು. ಕಾಲಮಾನಕ್ಕನುಗುಣವಾಗಿ ಬರುವ ಹಬ್ಬಗಳ ವಿಶೇಷತೆ, ಅವುಗಳ ಪ್ರಾಮುಖ್ಯತೆ, ಹಿಂದಿನಿಂದಲೂ ಆಚರಿಸಿಕೊಂಡು ಬಂದ ರೀತಿ ರಿವಾಜುಗಳನ್ನು ತಿಳಿದುಕೊಂಡರು. ಕ್ರಮೇಣ ಸೊಸೆ ವಿನುತಾ ಮಗ ವಿಕಾಸನಲ್ಲಿಯೂ ಹಲವಾರು ಬದಲಾವಣೆಗಳಾದವು. ತನ್ನ ಅತ್ತೆ ಮಾಡುತ್ತಿದ್ದ ಹಳ್ಳಿಯ ಔಷಧಿಗಳನ್ನು ತಾವೂ ಅರಿತು ಅವುಗಳ ಪರಿಚಯ ಮಾಡಿಕೊಂಡರು. ತುಳಸಿ, ಅಶ್ವತ್ಥ ಮರ, ಔದುಂಬರ ವೃಕ್ಷಗಳ ಪೂಜೆಗಳ ಮಹತ್ವ ತಿಳಿದು ಹಿರಿಯರು ಎಂದೋ ಕಂಡುಕೊಂಡಿದ್ದ ವಿಶ್ವ ಪರಿಸರ ದಿನಾಚರಣೆಯ ಔಚಿತ್ಯ ತಿಳಿಯಿತು. ಭೂಮಿತಾಯಿ ಪೂಜೆ, ಗೋಪೂಜೆ, ಎತ್ತುಗಳ ಪೂಜೆಗಳಿಂದ ರೈತನಿಗೂ ಪ್ರಾಣಿಗಳಿಗೂ ಇರುವ ಅವಿನಾಭಾವ ಸಂಬಂಧ ತಿಳಿದುಕೊಂಡರು. ಕೂಡು ಕುಟುಂಬದ ಮಹತ್ವವನ್ನು ಅರಿತು ಹಿರಿಯರನ್ನು ಗೌರವಿಸತೊಡಗಿದರು. ವಿನುತಾ ವಿಕಾಸರಿಬ್ಬರೂ ಅಪ್ಪ ಅಮ್ಮನ ಕ್ಷಮೆ ಯಾಚಿಸಿದರು. ಎಲ್ಲರೂ ನಮ್ಮ ನೆಲದ ಸಂಸ್ಕೃತಿಯ ಅರಿವು, ದೇಶ ಪ್ರೇಮ ರೀತಿ ರಿವಾಜುಗಳ ತಿಳಿದುಕೊಳ್ಳಬೇಕೆಂಬ ನಿಟ್ಟಿನಲ್ಲಿ ಉತ್ತಮ ವಿಚಾರಧಾರೆಗಳ ತರಗತಿಗಳನ್ನು ಆನ್ಲೈನಿನಲ್ಲಿಯೇ ನಡೆಸತೊಡಗಿದರು.

ಕ್ರಮೇಣ ಕೊರೋನಾ ಪೀಡೆಯು ಕಮ್ಮಿಯಾಗುತ್ತಿದ್ದಂತೆ ಶಾಮರಾಯರು ಪತ್ನಿ ರುಕ್ಮಿಣಿಯ ಇಚ್ಛೆಯಂತೆ ಕಾಶಿ ಯಾತ್ರೆಗೆ ಹೊರಟರು. ಮನೆಯಲ್ಲಿ ಹಿರಿಯರಿರಬೇಕಂತೆ, ಮಠದಲ್ಲಿ ಗುರು ಇರಬೇಕಂತೆ. ಒಣ ಪ್ರತಿಷ್ಠೆಗೆ ಮಹತ್ವ ಕೊಡದೆ ತಮ್ಮ ಸಂಸ್ಕೃತಿಯನ್ನು ಅರಿತು ಕುಟುಂಬದವರೆಲ್ಲರೂ ಹೊಂದಿಕೊಂಡು ಹಾಯಾಗಿ ಜೀವನ ನಡೆಸತೊಡಗಿದರು. ***

ವಿಡಂಬನೆ

ವರಳ್ಕಲ್ಲು

– ಚಂದ್ರಶೇಖರ. ಆರ್.ಕೆ.

"ವರಳಕಲ್ಲಿಗೆ ಮೂಳೀ ಹಾಕಿಸತೀರೇನಮ್ಮ" ಮನೆ ಮುಂದೆ ಕೂಗಿ ಕೊಂಡು ಹೋಗುತ್ತಿದ್ದ. ಇದು ಸುಮಾರು ೫೦ ವರ್ಷಗಳ ಹಿಂದೆ.

"ಅಮ್ಮ, ಇದೇನಮ್ಮ ಮೂಳೀ ಹಾಕೋದು ಅಂದರೆ", ಅಮ್ಮನನ್ನು ಕೇಳಿದೆ.

"ಅದು ಮೂಳೀ ಅಲ್ಲ ಕಣೋ, ಮುಳ್ಳು. ವರಳಕಲ್ಲು ಬಳಸ್ತಾ ಬಳಸ್ತಾ ನುಣುಪಾಗಿ ಸವೆದು ಹೋಗುತ್ತೆ, ಹಿಟ್ಟು ರುಬ್ಬಿದಾಗ ಸರಿ ಬರಲ್ಲ, ಮುಳ್ಳು ಹೊಡಿಸಿದರೆ ಹದ ಚೆನ್ನಾಗಿರುತ್ತೆ" ಅಂದಳು

ಹೌದು ನಮ್ಮನೆ ಅಡುಗೆ ನಂಜುಂಡಪ್ಪ ಬಂದಾಗ್ಲೆಲ್ಲಾ ಹೇಳ್ತಾನೆ ಇರ್ತಾರೆ, ಅಮ್ಮ ವರಳಕಲ್ಲಿಗೆ ಮುಳ್ಳಾಕ್ಸಿ ಅಮ್ಮ, ನನಗೆ ರುಬ್ಬೋದು ಕಷ್ಟ ಆಗ್ತಾ ಇದೆ. ನಮ್ಮ ಮನೆಯ ಎಲ್ಲ ಸಮಾರಂಭ, ತಿಥಿ, ಹಬ್ಬಗಳಿಗೆ ಅವರೇ ಅಡುಗೆಯವರು. ಅವರು ಸೌದೆ ಒಲೆ ಮತ್ತು ಅಗ್ಗಿಷ್ಟಿಕೆ ಬಳಸಿ ಅಡುಗೆ ಮಾಡಬೇಕಿತ್ತು. ವರಳಕಲ್ ಚಿತ್ರಾನ್ನ, ಪುಳಿಯೋಗರೆ, ವಡೆ, ಆಂಬೊಡೆ, ಮಜ್ಜಿಗೆ ಹುಳಿ, ಗಸಗಸೆ ಪಾಯಸ, ಬೇಳೆ ಒಬ್ಬಟ್ಟು, ಹೂರಣದ ಹೋಳಿಗೆ, ಕಡಬು ಎಲ್ಲದಕ್ಕೂ ವರಳಕಲ್ಲು ಉಪಯೋಗ ಮಾಡಬೇಕಿತ್ತು. ಹೊಸದಾಗಿ ಪುಡಿ ಕುಟ್ಟಿ ಮಾಡಿದ ಸಾರು, ಕೂಟು, ಗೊಜ್ಜು, ಅಹಾ! ಅದರ ರುಚಿ ಬಲ್ಲವರೆ ಬಲ್ಲರು.

ಅಮ್ಮ ಕರೆದಳು, "ಏನು ಯೋಚನೆ ಮಾಡ್ತಿದ್ದೀಯ ಅವನನ್ನ ಕರಿ ವರಳಕಲ್ಲಿಗೆ ಮುಳ್ಳು ಹಾಕಿಸೋಣ" ಅಂದಳು. ಅವನು ಬಂದು ವರಳಕಲ್ಲು ಮತ್ತು ರುಬ್ಬೋ ಗುಂಡಿಗೆ ಉಳಿಯಲ್ಲಿ ಮುಳ್ಳು ಹೊಡೆದು ಹೋದಮೇಲೆ, ಅಮ್ಮ ವರಳಕಲ್ಲಿಗೆ ಸ್ವಲ್ಪ ಹೊಟ್ಟು ಮತ್ತು ಅಕ್ಕಿ ನುಚ್ಚು ಹಾಕಿ ಚೆನ್ನಾಗಿ ರುಬ್ಬಿ ನೀರು ಹಾಕಿ ತೊಳೆದು ಅದನ್ನು ಗಿಡದ ಪಾತಿಗೆ ಹಾಕಿದಳು.

"ಅಮ್ಮ ಹೀಗೇಕೆ ಮಾಡಬೇಕು" ಎಂದೆ.

"ಮುಳ್ಳು ಹಾಕಿದ ಮೇಲೆ ಕಲ್ಲಿನ ಪುಡಿ ಅದರಲ್ಲೇ ಇರೊತ್ತೆ, ಹೊಟ್ಟು ಅಕ್ಕಿ ಹಾಕಿ ರುಬ್ಬಿದರೆ ಕಲ್ಲು ಪುಡಿ ಅದರಲ್ಲಿ ಬೆರೆತು ಆಚೆ ಬರೊತ್ತೆ".

ಈ ವರಳಕಲ್ಲು ಒಂದು ಆವಿಷ್ಕಾರವೇ ಸರಿ. ಯಾರೋ ಪುಣ್ಯಾತ್ಮ, ಕಲ್ಲಿನ ಮೇಲೆ ಅರೆದು ಅರೆದು ಸುಸ್ತಾಗಿ ಇದನ್ನು ಕಂಡು ಹಿಡಿದಿರಬಹುದು. ಅಷ್ಟರಲ್ಲಿ ಆಚೆಮನೆ ಕಮಲಮ್ಮ ಬಂದರು. 'ಅಮ್ಮ ಇದಾಳೇನೋ' ಎಂದು ಸೀದ ಒಳಗೆ ಹೋದರು.

"ಶಾರದಮ್ಮ ನೀವು ಪುಡಿಗಳನ್ನ ಮಾಡಿಸಿ ತಿಂಗಳ ಮೇಲೆ ಹತ್ತು ದಿನ ಆಯ್ತು".

"ಇಲ್ಲ ಕಮಲಮ್ಮ, ವರಳಕಲ್ಲಿಗೆ ಮುಳ್ಳು ಹಾಕಿಸಿರಲಿಲ್ಲ, ಇವತ್ತು ಬಂದು ಹಾಕಿದ್ದಾನೆ, ನಾಳಿದ್ದು ಏಕಾದಶಿ. ಕೆಲಸ ಏನು ಇರಲ್ಲ ಬಂದು ಬಿಡಿ" ಎಂದಳು ಅಮ್ಮ.

"ಅಮ್ಮ, ಈ ವಾರ ಬೇಡಮ್ಮ, ನನಗೆ ಟೆಸ್ಟ್ ಇದೆ, ಪುಡಿ ಮಾಡುವಾಗ ಮನೆ ಎಲ್ಲ ಘಾಟು ಆಗೊತ್ತೆ, ನನಗೆ ಓದಲು ಅಡ್ಡಿ ಆಗೊತ್ತೆ" ಅಂತ ನಾನಂದೆ.

ಅದಕ್ಕೆ ಅಮ್ಮ, "ಪುಡಿಗಳು ಮುಗಿದು ಹೋಗಿವೆ, ಹಬ್ಬಗಳು ಬೇರೆ ಬರ್ತಾ ಇವೆ" ಅಂದರು. ನಾನು ಸುಮ್ಮನಾದೆ.

ಇಲ್ಲಿ ಕಮಲಮ್ಮನವರ ಬಗ್ಗೆ ಸ್ವಲ್ಪ ಹೇಳಲೇಬೇಕು. ಆಕೆಯ ಗಂಡ ರಾಯರ ಮಠದಲ್ಲಿ ಅಡಿಗೆ ಮಾಡುತಿದ್ದರು. ಅವರಿಗೆ ನಾಲ್ಕು ಗಂಡು ಮಕ್ಕಳು. ನಾಲ್ಕನೆ ಬಸುರಿಯಲ್ಲೆ ಗಂಡನನ್ನ ಕಳೆದುಕೊಂಡರು. ಹಾಗಾಗಿ ಜೀವನಕ್ಕೆ ಅವರಿವರ ಮನೆಯಲ್ಲಿ ಪುಡಿಗಳನ್ನು ಮಾಡಿಕೊಟ್ಟು ಜೀವನ ಸಾಗಿಸುತಿದ್ದರು. ಈಗ ಅವರ ಮಕ್ಕಳು ದೊಡ್ಡವರಾಗಿ ಒಳ್ಳೆಯ ಕೆಲಸದಲ್ಲಿ ಇದು, ಪುಡಿ ಮಾಡಲು ಅವರನ್ನು ಎಲ್ಲಿಗೂ ಕಳಿಸುವುದಿಲ್ಲ, ಆದರೆ ನಮ್ಮ ಮನೆಗೆ ಮಾತ್ರ ಬರುತ್ತಾರೆ. ಅವರ ಮಕ್ಕಳು ನಮ್ಮ ಮನೆಗೆ ವಾರಾನ್ನಕ್ಕೆ ಬರುತಿದ್ದರಂತೆ ಹಾಗಾಗಿ ಅವರು ನಮ್ಮ ಮನೆಯವರೇ ಆಗಿದ್ದರು.

ಸುಮಾರು ವರ್ಷಗಳ ತನಕ ಮನೆಗೆ ಮಿಕ್ಸಿ ಬಂದರೂ ವರಳಕಲ್ಲಿನ ಉಪಯೋಗ ನಡೆದೇ ಇತ್ತು, ಇದಕ್ಕೆ ಕಾರಣ, ಒಂದು ಮನೆಯಲ್ಲಿ ಜಾಸ್ತಿ ಜನ, ಎರಡನೇದು ಮಿಕ್ಸಿ ಮಡೀಗೆ ಬರುತಿರಲಿಲ್ಲ..

ಸುಮಾರು ವರ್ಷಗಳ ನಂತರ ನನ್ನ ವಿವಾಹವಾಯಿತು. ಎರಡು ವರ್ಷಗಳು ಕಳೆದವು. ನನ್ನ ತಮ್ಮ ಇಂಜಿನಿಯರಿಂಗ್ ಓದುತಿದ್ದ, ತಂಗಿ ಎಸ್ಎಸ್ಎಲ್ಸಿ ಓದುತಿದ್ದಳು, ಇನ್ನೊಬ್ಬಳು ತಂಗಿಗೆ ಮದುವೆಯಾಗಿತ್ತು. ನಮ್ಮ ಮನೆಯಲ್ಲಿ ಎರಡು ಕೊಠಡಿಗಳು ಇದ್ದವು, ಒಂದು ಕೊಠಡಿ ನಮ್ಮ ತಂದೆ ಮತ್ತು ಅವರ ಆಧ್ಯಾತ್ಮಕ್ಕೆ ಮೀಸಲಾಗಿತ್ತು. ಇನ್ನೊಂದು ಕೊಠಡಿಯಲ್ಲಿ ನಾವು ದಂಪತಿಗಳು ಇದ್ದೆವು. ತಮ್ಮ ತಂಗಿಗೆ ಓದುವುದಕ್ಕೆ ಕಷ್ಟವಾಗುತ್ತಿತ್ತು ಹಾಗಾಗಿ ನಾನು ಬೇರೆ ಮನೆ ಮಾಡಬೇಕಾಯಿತು. ನನ್ನ ಇಬ್ಬರು ಅಣ್ಣಂದಿರು ಇದೇ ಕಾರಣಕ್ಕಾಗಿ ಬೇರೆ ಮನೆ ಮಾಡಿದ್ದರು. ನಾನು ಮಾಡಿದ ಮನೆಗೆ ಎರಡು ಸಾವಿರ ರೂಪಾಯಿ ಮುಂಗಡ, ಮುನ್ನೂರು ರೂಪಾಯಿ ಬಾಡಿಗೆ. ಮನೆ ಚಿಕ್ಕದಾಗಿ ಚೊಕ್ಕದಾಗಿತ್ತು. ಆದರೆ ಅಡುಗೆ ಮನೆಯಲ್ಲಿ ವರಳಕಲ್ಲು ಇರಲಿಲ್ಲ, ಏನು ಮಾಡುವುದು, ಮಿಕ್ಸಿ ತೊಗೊಳೋಣ ಅಂದರೆ ಕೈಯಲ್ಲಿ ಕಾಸಿಲ್ಲ, ಮನೆಗೆ ಮುಂಗಡ ಕೊಡುವುದೇ ಕಷ್ಟವಾಗಿತ್ತು, ಮಗನನ್ನ ಪ್ಲೇಹೋಮ್ಗೆ ಬೇರೆ ಸೇರಿಸ ಬೇಕಿತ್ತು. ಸರಿ, ಸಮೀಪದ ಸುಂಕೇನಹಳ್ಳಿಗೆ ಹೋಗಿ ಒಂದು ಚಿಕ್ಕದಾದ ವರಳಕಲ್ಲು ತಂದೆವು.

ನನಗೆ ತರಬೇತಿ ಅದಿಕಾರಿಯಾಗಿ ಬಡ್ತಿ ಆಯಿತು. ಎರಡು ವರ್ಷದ ನಂತರ ಮಂಗಳೂರಿಗೆ ವರ್ಗವಾಯಿತು. ಆಗ ಬ್ಯಾಂಕಿನಿಂದ ಪೀಠೋಪಕರಣಗಳಿಗೆ ಸಾಲ ಕೊಡಲು ಶುರುಮಾಡಿದರು. ನಾನು ಮಿಕ್ಸಿ, ಟಿವಿ, ಫ್ರಿಡ್ಜ್ ತೆಗೆದುಕೊಂಡೆ. ಮಿಕ್ಸಿ ಇದ್ದರೂ ನಮ್ಮ

ಶ್ರೀಮತಿಯವರು ಚಟ್ನಿ ಮಾಡುವುದಕ್ಕೆ ವರಳಕಲ್ಲನ್ನೇ ಉಪಯೋಗಿಸುತ್ತಿದ್ದರು. ನಾವು ವರ್ಗಾವಣೆ ಆಗಿ ಹೋದಲ್ಲೆಲ್ಲ ನಮ್ಮ ವರಳಕಲ್ಲು ಜೊತೆಗೇ ಬರುತಿತ್ತು. ನಾವು ಬೀದರಿನಲ್ಲಿದ್ದಾಗ ವರಳಕಲ್ಲು ಬಹಳ ಉಪಯೋಗವಾಗುತ್ತಿತ್ತು ಎಕೆಂದರೆ ಅಲ್ಲಿ ವಿದ್ಯುಚ್ಛಕ್ತಿ ಅಭಾವವಿತ್ತು.

ನಾವು ಬೀದರಿನಿಂದ ಬೆಂಗಳೂರಿಗೆ ಬಂದಾಗ ನನ್ನ ಮಗ ಎಸ್ಎಸ್ಎಲ್ಸಿಗೆ ಬಂದಿದ್ದ, ಇನ್ನು ವರ್ಗಾವಣೆ ಆದರೆ ಸಂಸಾರ ತೆಗೆದುಕೊಂಡು ಹೋಗುವುದು ಕಷ್ಟ ಅಂತ ಬೆಂಗಳೂರಿನಲ್ಲೇ ಮನೆ ಮಾಡಿಬಿಡುವುದು ಎಂದು ನಿಶ್ಚಯ ಮಾಡಿದೆ. ಆಗ ನಮ್ಮ ತಂದೆಯವರು "ಬೇರೆ ಮನೆ ಯಾಕೆ ಮಾಡ್ತೀಯ, ನಮ್ಮ ಜಯನಗರದ ಮನೆಯವರು ಖಾಲಿ ಮಾಡ್ತಾ ಇದ್ದಾರೆ, ಅಲ್ಲಿಗೆ ಹೋಗಿಬಿಡು" ಎಂದರು. ನನಗೂ ಅನುಕೂಲವಾಯಿತು. ಅದು ಹಳೆಯ ಮನೆ, ರಿಪೇರಿ ಮಾಡಿಸಲು ಬ್ಯಾಂಕಿನವರು ಬರೀ ಅರವತ್ತು ಸಾವಿರ ಸಾಲ ಅಷ್ಟೇ ಕೊಟ್ಟರು. ಮೇಲೆ ಪಿಎಫ್ ಸಾಲ, ಬಂಗಾರದ ಮೇಲಿನ ಸಾಲ, ಸೊಸೈಟಿ ಸಾಲ ಎಲ್ಲ ತೆಗೆದಾಯಿತು ಆದರೂ ಸಾಲಲಿಲ್ಲ, ಎಸ್ ಬಿ ಐ ಶೇರುಗಳನ್ನು ಮಾರಲು ಕೊಟ್ಟೆ. "ಎರಡು ದಿವಸ ತಾಳಿ ಸಾರ್, ಶೇರ್ ಏರ್ತಾ ಇದೆ, ಆಮೇಲೆ ಮಾರೋಣ" ಎಂದು ಏಜೆಂಟ್ ಹೇಳಿದ, ನನ್ನ ದುರದೃಷ್ಟ ದೇವೇಗೌಡರ ಸರಕಾರ ಬಿದ್ದು ಶೇರು ಬೆಲೆ ನಲವತ್ತು ರೂಪಾಯಿ ಇಳಿದು ಹೋಯಿತು.

ಮನೆ ರಿಪೇರಿ ಶುರುವಾಯಿತು. ಅಡಿಗೆ ಮನೆಯಲ್ಲಿ ತುಂಬಾ ದೊಡ್ಡದಾದ ವರಳಕಲ್ಲು ಇತ್ತು ಅದನ್ನು ತೆಗಿಸಿ ನಮ್ಮಲ್ಲಿದ್ದ ಚಿಕ್ಕ ವರಳಕಲ್ಲನ್ನು ಹಾಕಿಸಿದೆವು. ಕಾಲ ಕ್ರಮೇಣ ವರಳಕಲ್ಲು ಉಪಯೋಗಿದುವುದು ವಿರಳವಾಯಿತು. ನಮ್ಮ ಶ್ರೀಮತಿಯವರು "ಗ್ರೈಂಡರ್ ಇರುವಾಗ ವರಳಕಲ್ಲು ವೇಷ್ಟು, ಅಡಿಗೆ ಮನೆಯಲ್ಲಿ ಜಾಗ ಬೇರೆ ಇಲ್ಲ, ಕಡಪಾ ಕಲ್ಲು ಹಳೆಯದಾಗಿದೆ. ಅದನ್ನ ತೆಗೆದು ಗ್ರಾನೈಟ್ ಹಾಕಿಸಿಬಿಡೋಣ" ಎಂದರು. ಸರಿ ಎಂದು ವರಳಕಲ್ಲು ತೆಗೆದು ಮಹಡಿಯ ಮೇಲೆ ಇಟ್ಟಿದ್ದಾಯಿತು.

ದಿನವೂ ಬೆಳಿಗ್ಗೆ ಗಿಡಗಳಿಗೆ ನೀರು ಹಾಯಿಸಲು ಹೋದಾಗ ಅದು ನನ್ನನ್ನು ನೋಡಿ ಏನೋ ಹೇಳಿದಂತಾಗುತ್ತದೆ-. 'ನಾನು ಮೂವತ್ತೇಳು ವರ್ಷ ನಿಮ್ಮ ಜೊತೆಯಲ್ಲಿ ಇದ್ದೆ, ಈಗ ನನ್ನ ಅನಾಥ ಮಾಡಿಬಿಟ್ಟೇಯಲ್ಲ' ಎಂದಿರಬೇಕು.

ನನ್ನ ಮೊಮ್ಮಕ್ಕಳು ಅದರಲ್ಲಿ ಏನೋ ಕಾಯಿಗಳನ್ನು ಹಾಕಿ ಜಜ್ಜಿ ಆಟವಾಡುತಿರುತ್ತವೆ. ಮಳೆ ಬಂದಾಗಲೆಲ್ಲ ಅದರಲ್ಲಿ ನೀರು ತುಂಬಿರುತ್ತದೆ, ಅದನ್ನು ತಗೆವಾಗಲೆಲ್ಲ ಅಮ್ಮ ನೆನಪಿಗೆ ಬರುತ್ತಾಳೆ. ವರಳಕಲ್ಲಲ್ಲಿ ನೀರು ತುಂಬಿದ್ದರೆ ಸಾಲ ಜಾಸ್ತಿ ಆಗುತ್ತೆ ಅಂತ ಅಮ್ಮ ಹೇಳುತಿದ್ದಳು.

ನನಗೆ ಯಾರಮ್ಮ ಈ ವಯಸ್ಸಿನಲ್ಲಿ ಸಾಲ ಕೊಡ್ತಾರೆ.

ವಿದಾಯಪತ್ರ

ನನ್ನ ಪ್ರೀತಿಯ ಲತಾಗೆ...

– ಮಂಗಳಾ ಇನಾಂದಾರ್

ಪ್ರೀತಿಯ ಲತಾ,

ಕಳೆದ ವಾರವಷ್ಟೇ ನಾನು ನೀನು ತಾಸುಗಟ್ಟಲೆ ಮಾತಾಡಿದ್ವಿ. ಇನ್ನು ಇನ್ನೂ ಮುಗ್ದಿದ್ದಿಲ್ಲ..... ಮೀತಾ ಬಂದ್ಲು ಇಡ್ತೇನಿ ಮತ್ತ ಮಾಡ್ತೇನಿ ಅಂತ ಹೇಳಿ, ಮರುದಿವಸನಃ ಹೊಂಟುಬಿಡೋದಃ ನಮ್ಮನ್ನು ಬಿಟ್ಟು! ಅದ್ಹೆಂಗ ಮನಸ್ಸರೆ ಬಂತು ಲತಾ ನಿನಗ ಹೋಗಲಿಕ್ಕೆ?

ನನಗ ಗೊತ್ತು ನಿನಗ ಕಾಲು- ನೋವು ಭಾಳ ತ್ರಾಸ ಕೊಡತಿತ್ತು. ನೀ ಅದಕ್ಕಃ ಅರ್ಧಾ ಹಣ್ಣಾಗಿದ್ದಿ... ಆದರ ಇದಃ ತಿಂಗಳ ಆಪರೇಷನ್ ಆಗೋದಿತ್ತಲ್ಲಃ ಆಮ್ಯಾಲೇನು ಘಟ್ಟಿ ಆಗ್ತೇನಿ, ನಿಮ್ಮ ಮನೀಗೆ ಬರ್ತೇನಿ, ಎಲ್ಲಾ ಕಡೆ ಅಡ್ಡಾಡಿ ಬರೋಣು ಅಂದಿ.

ಮಾತು ಮಾತಿನ್ಯಾಗ ಎಲ್ಲೆಲ್ಲಿ ಅಡ್ಡಾಡಿ-ಬಂದೆವ್ಯಲ್ಲ! ಆ ನಿನ್ನ ಅವತ್ತಿನ ಮಾತು ಇನ್ನೂ ಕಿಂವ್ಯಾಗ ಗುಂಯ್ಗುಡ್ತಾವ, ಕಾಲೇಜಕ್ಕ ಹೋಗಿದ್ವಿ.. ಹುಬ್ಬಳ್ಳಿ ಹೈಸ್ಕೂಲಿಗೆ ಹೋಗಿದ್ವಿ... ಮದುವಿ ಆದ ಹೊಸದಾಗಿನ್ನು ನೆನೆಸಿ ನಕ್ಕಿವಿ, ಆವತ್ತ ಭಾಳಃ ನಕ್ಕಿವಿ... ಇನ್ನ ಅಳೋದದಂತ ಆಗ ಅಷ್ಟು ನಗಿಸಿದನೇನು ಆ ದೇವರು...? ನೀ ನಮ್ಮನ್ನೆಲ್ಲಾ ಬಿಟ್ಟು ಪಾರಾದ್ಯಲಾ!!!

ನೀ ರಾತ್ರಿ ಹೋಗೀದಿ.. ಮುಂಜಾನೆ ಶೋಭಾ ಫೋನ್ ಮಾಡಿ ಹೇಳಿದ್ರ ಸುಳ್ಳಃ ಅನಿಸ್ತು. ಏನ ಹುಚ್ಚದ ಈ ಹುಡುಗಿ, ಯಾರೋ ಅನಕೊಂಡು ಯಾರದೋ ವಿಷಯ ಹೇಳ್ತಾಳ ಅಂತ ತಿಳ್ಕೊಂಡಿದ್ದೆ. "ನಿನ್ನ ಹತ್ರ ಅಕಿಃ ಮನಿಯವ್ರ ನಂಬರ್ ಇರ್ತದ ಕೇಳಿ ನೋಡು" ಅಂದಳು. ಎಲ್ಲೆ ವಾಟ್ಸಾಪ್ ನಾಗ ಆಗಃ ಹಾಕಿಬಿಟ್ಟಿದ್ರು ಗೋಪಣ್ಣ - ನೀ ದೈವಾಧೀನ ಆದಿ ಅಂತ. ಆದರ ನನಗ ಸುಳ್ಳಃ ಅನಸ್ತು. ಅದಕ್ಕ ಫೋನ್ ಮಾಡ್ದೆ ಗೋಪಣ್ಣನ ನಂಬರಿಗೆ... ಪಾಪ ನರೇಶ್, ನಿನ್ನ ಅಳಿಯ ಫೋನ್ ಎತ್ತಿದ್ರು ಅಳಕೋತನಃ ಹೇಳಿದ್ರು - ಅಮ್ಮಾ ಹೋಗಿಬಿಟ್ರು, ನಾವೆಷ್ಟು ಪ್ರಯತ್ನಿಸಿದ್ರೂ ಉಳೀಲಿಲ್ಲ. ಮ್ಯಾಸಿವ ಅಟ್ಯಾಕ್ ಬಂತರಿ ಅಂದ್ರು. ಒಂದ ಘಳಗಿ ಸ್ತಬ್ಧ ಆಗಿ ಕಲ್ಲಾಗಿ ನಿಂತಬಿಟ್ಟೆ. ಈಗಂತೂ ಕೂತ್ರ, ನಿಂತ್ರ ನಿಂದೇ ಧ್ಯಾಸ. ನೀನು ಇಲ್ಲೆ ಬಂದದ್ದು, ನಾನು ನೀನು ಓಡಾಡಿದ್ದು, ನಿನ್ನ ಹೊಗಳಿಕಿ, ಬುದ್ಧಿಮಾತು ಎಲ್ಲಾ ಕಣ್ಮುಂದ ಕಟ್ಟಿಧಾಂಗ ಆಗೇದ ನೋಡು.

ನವಂಬರ್ ೪ನೇ ತಾರೀಖು ೨೦೧೧ಲಕ್ಕೆ ತುಮಕೂರಿನ್ಯಾಗ ನಮ್ಮ ತಂದಿಯವರ ಪುಸ್ತಕ ಬಿಡುಗಡೆ ಮಾಡಲಿಕ್ಕೆ ಬಂದಾಗ ಇಬ್ಬರೂ ಮುಂಜಾನಿಂದ ಸಂಜೀತನಕ ಜೋಡೀನೇ ಇದ್ದವ್ರು ಬೆಂಗಳೂರಿಗೆ ನಾವು ವಾಪಸ್ ಆಗೋ ಮುಂದನಃ ಅಗಲಿದ್ದು. ಪ್ರತಿಸಲ ಕಳಿಸೋ ಮುಂದ ಇಬ್ಬರೂ ಕಣ್ಣಿಗೆ ಕಾಣಸೋತನಕ ನೋಡ್ಕೋತ ನಿಲ್ಲೋ ನಮ್ಮ ಬಾಂಧವ್ಯ ಮರೀಲಿಕ್ಕಾಗೋದಿಲ್ಲ! ಪೂರ್ತಿ ಕಣ್ತುಂಬಿಕೊಂಡಃ ಹೊರಡ್ತಿದ್ದೆ ನಾನಂತೂ. ಬಿಟ್ಟು ಹೊರಟಿರೋ ದುಃಖ ಇರ್ತಿದ್ದರೂ ಹಿಂಗ ಪೂರಾ ನಮ್ಮನ್ನು ಬಿಟ್ಟು ಹೋಗ್ತಿ ಅನಿಸಿರಲಿಲ್ಲ.

ಲತಾ, ಯಾಕಡೆ ನೋಡಿದ್ರೂ, ನೀನೇ ಕಾಣಿಸ್ತಿ, ನನಗಃ ಇಷ್ಟು ತ್ರಾಸ ಆಗೇದ, ಇನ್ನ ನಿನ್ನ ಮನಿಯವ್ರಿಗೆ - ಮಕ್ಕಳಿಗೆಷ್ಟು ತ್ರಾಸ ಆಗಿರ್ಬೋದು? ನನಗ ಫೋನ್ ಹಚ್ಚಿ ಮಾತಾಡ್ಲಿಕ್ಕೂ ಆಗವಲ್ತು. ಏನೂಂತ ಹೇಳಲಿ? ಮಕ್ಕಳಿಗೆ ಏನು ಧೈರ್ಯ ಕೊಡಲಿ?

ನಡುವ ಇಲ್ಲೆ ಯಾರದೋ ಕಾರ್ಯಕ್ರಮ ಅಂತ ಬಂದವರು ಬರೇ ಸ್ವಲ್ಪ ಅಡ್ಡಾಗಿ ಹೋಗ್ತೇವಿ ಅಂತ ಬಂದಾಗಲೂ ಅಷ್ಟೇ.... ಮಾತು..! ಮಾತು ! ಮಾತು!! ನನಗ ಎಷ್ಟ ಸಲ ಅನಸ್ತಿತ್ತು - ಗೋಪಣ್ಣಗ ಬೇಜಾರಾಗ್ತದೇನೋ ಅಂತ. ಆದರ ಅವರು ಹೇಳ್ತಿದ್ರು 'ನಿಮ್ಮ ಜೋಡಿ ಮಾತಾಡಿ ಆದಮ್ಯಾಲೆ, ಒಂದ್ವಾರ ೧೫ ದಿನ ಅಕಿ ಚಾರ್ಜ್ ಆಗಿರ್ತಾಳ ನೋಡ್ರಿ ನನಗ ಭಾಳ ಛಲೋ ಅನಸ್ತದ ಮಾತಾಡ್ರಿ ಅಂತ.

ಸುಂದರ ಮನೆ, ಸಾಹಿತಿ- ನಿಗರ್ವಿ ಪತಿ, ಮೇಧಾವಿ ಮಕ್ಕಳನ್ನು ಪಡೆದ ನೀನು "ಕಾಲು ಆಪರೇಷನ್ ಆತಂದ್ರ ನೋವಿಲ್ಲದs ಇನ್ನ ಖರೇ ಜೀವನ ಎಂಜಾಯ್ ಮಾಡ್ತೀನಿ" ಅಂದಾಕಿ ಪಟ್ ಅಂತ ಇಲ್ಲದಂಗ ಆಗಿದ್ದು ಭಾಳ ಅಂದ್ರ ಭಾಳ ಕೆಟ್ಟನಿಸ್ತದ.

ಆ ಭಗವಂತನಿಗೂ ಒಳ್ಳೆಯ ಹೂವೇ ಬೇಕಂತೆ. ಅದಕ್ಕೇ ನಿರ್ಮಲ ಮನಸ್ಸಿನ ನಿನ್ನನ್ನು ಅನಾಮತ್ತಾಗಿ ಎತ್ತಿ, ನಮ್ಮ ಸ್ನೇಹಿತೆಯರ ಗುಂಪನ್ನು, ನಿನ್ನ ಮಕ್ಕಳು- ಪತಿಯನ್ನು ಏಕಾಕಿಯನ್ನಾಗಿಸಿದ ಆ ದೇವರಿಗೆ ಏನೆನ್ನಲಿ?

ನಿನ್ನ ಪ್ರೀತಿಯ ಗೆಳತಿ... ಮಂಗಳಾ.

(12 ಜೂನ್ 2021ರಂದು ನಡೆದ 'ಸಾಹಿತ್ಯ ದಾಸೋಹ-191'ರಲ್ಲಿ ಪ್ರಸ್ತುತಪಡಿಸಿದ ಬರಹ)

ಹಾಸ್ಯ ಲೇಖನ

ಅಮ್ಮ ತಂದ ಮಡಿಯ ಅವಾಂತರ

– ಕೆ.ಆರ್. ವೆಂಕಟೇಶ್ (ಮನೋಹಂಸ)

ಸಂಪ್ರದಾಯಸ್ಥ ಹಾಗೂ ಆಚಾರವಂತರ ಕುಟುಂಬಗಳಲ್ಲಿ ಕೆಲವು ಕಟ್ಟುಪಾಡುಗಳು ಇರುವುವು. ಅವುಗಳ ಮೇಲೆ ನಂಬಿಕೆಯಿಂದಲೋ ಅಥವಾ ಹಿರಿಯರು ಆಚರಿಸಿಕೊಂಡು ಬಂದಿದ್ದಾರೆ ಎನ್ನುವ ಗೌರವದಿಂದಲೋ ಅದನ್ನು ಚಾಚೂ ತಪ್ಪದೆ ಪಾಲಿಸುವುದು ಸರಿ. ಆದರೆ ಕೇವಲ ತೋರ್ಪಡಿಕೆಗೆ, ಇನ್ನೊಬ್ಬರನ್ನು ಮೆಚ್ಚಿಸಲು ಹೋದಾಗ ಆಗುವ ಆವಾಂತರಗಳನ್ನು ನೋಡೋಣ ಬನ್ನಿ.

ರಾಮಚಂದ್ರ ಹಾಗೂ ರವಿಶಂಕರ ಅಣ್ಣತಮ್ಮಂದಿರು. ಅಣ್ಣ ರಾಮ, ತಮ್ಮ ರವಿ. ಊರು ಪಾಂಡವಪುರ. ತಾಯಿ ರುಕ್ಮಿಣಮ್ಮ, ತಂದೆ ಕಾಲವಾಗಿದ್ದಾರೆ. ರಾಮಚಂದ್ರ ಪಾಂಡವಪುರದಲ್ಲೇ ಸರ್ಕಾರಿ ಕೆಲಸದಲ್ಲಿದ್ದಾನೆ. ಹೆಂಡತಿ ಲಕ್ಷ್ಮೀ ಗೃಹಿಣಿ. ರವಿ ಬೆಂಗಳೂರಿನಲ್ಲಿ ಖಾಸಗಿ ಕಂಪನಿ ಒಂದರಲ್ಲಿ ಕೆಲಸ. ಹೆಂಡತಿ ಶೋಭಾ ಮೊದಲು ಕೆಲಸದಲ್ಲಿದ್ದು ಮಗುವಾದ ಮೇಲೆ ಕೆಲಸ ಬಿಟ್ಟಿದ್ದಾಳೆ. ತಾಯಿ ರುಕ್ಮಿಣಿ ಬಹಳ ಆಚಾರವಂತರು. ಇಬ್ಬರು ಗಂಡು ಮಕ್ಕಳಿಗೂ ಒಬ್ಬ ಮಗಳಿಗೂ ಸಂಪ್ರದಾಯಗಳನ್ನು ಚೆನ್ನಾಗಿ ಕಲಿಸಿದ್ದರು. ಮಗಳಿಗೆ ಮದುವೆಯಾಗಿತ್ತು. ಗಂಡು ಮಕ್ಕಳಿರಿಬ್ಬರಿಗೂ ತಾಯಿಯ ಮಾತುಗಳು ವೇದವಾಕ್ಯ. ಅವರ ಬಗ್ಗೆ ಹೆದರಿಕೆಯೂ ಇತ್ತು. ಹೇಳಿದ್ದೆಲ್ಲಾ ಶಿರಸಾವಹಿಸಿ ಪಾಲಿಸುತ್ತಿದ್ದರು. ಹಿರಿಯ ಸೊಸೆ ಪಾಪದ ಹೆಂಗಸು. ಗಂಡ ಅತ್ತೆಯ ಮಾತುಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದಳು.

ಕಿರಿಯ ಸೊಸೆ ಶೋಭಾ ಜೋರು, ಜಬರ್ದಸ್ತ್. ರವಿಶಂಕರ ತನ್ನ ಹೆಂಡತಿಯನ್ನು ಎಷ್ಟೇ ನಿಯಂತ್ರಣ ಮಾಡಲು ಪ್ರಯತ್ನಿಸಿದರೂ ಜಗ್ಗುತ್ತಿರಲಿಲ್ಲ, ಬಗ್ಗುತ್ತಿರಲಿಲ್ಲ. ಶೋಭಾ ಮನೆಯವರು ಸ್ಥಿತಿವಂತರಾಗಿದ್ದರು. ಅದೂ ಬೇರೆ ಮೊದಲು ಕೆಲಸದಲ್ಲಿದ್ದುದರಿಂದ ರವಿಯ ಹಿಡಿತಕ್ಕೆ ಬಂದಿರಲಿಲ್ಲ. ತನ್ನ ವಾರಗಿತ್ತಿ ಪಾಲಿಸುತ್ತಿದ್ದ ಕಟ್ಟುಪಾಡುಗಳಲ್ಲಿ ಮುಕ್ಕಾಲುಪಾಲು ಶೋಭಾ ಪಾಲಿಸುತ್ತಿರಲಿಲ್ಲ. ರವಿ ಮೊದಮೊದಲು ಜೋರಾಗಿದ್ದವನು ಕ್ರಮೇಣ ಹೆಂಡತಿಗೆ ಶರಣಾಗಿದ್ದ.

ತಾಯಿ ರುಕ್ಮಿಣಮ್ಮ ಬೆಂಗಳೂರಿಗೆ ಹೆಚ್ಚಾಗಿ ಬರುತ್ತಿರಲಿಲ್ಲ. ಮೊಮ್ಮಗಳು ಹುಟ್ಟಿದಾಗ ಹಾಗೂ ತೀರ ಹತ್ತಿರದ ನೆಂಟರ ಸಮಾರಂಭಕ್ಕೆ ಮೂರ್ನಾಕು ಬಾರಿ ಬಂದಿದ್ದರು. ರಜೆ ಬಂದಾಗ ರವಿಯ ಕುಟುಂಬವೇ ಪಾಂಡವಪುರಕ್ಕೆ ಭೇಟಿ ನೀಡುತ್ತಿತ್ತು.

ಇದೀಗ ತೀರ ಹತ್ತಿರದ ನೆಂಟರ ಎರಡು ಮದುವೆಗಳು ಬೆಂಗಳೂರಿನಲ್ಲಿ ಒಂದು ವಾರದ ಅಂತರದಲ್ಲೇ ಬಂದಿರಲಾಗಿ ರುಕ್ಮಿಣಮ್ಮ ಹಾಗೂ ಅವರ ಅಕ್ಕ ಸಾವಿತ್ರಮ್ಮ ರವಿಯ ಮನೆಗೆ ಎರಡು ವಾರದ ವಾಸ್ತವ್ಯಕ್ಕೆ ಬೆಂಗಳೂರಿಗೆ ಇನ್ನೆರಡು ದಿನದಲ್ಲಿ ಬರಲಿದ್ದಾರೆ. ರವಿಗೆ ತನ್ನ ಅಮ್ಮ ಹಾಗೂ ದೊಡ್ಡಮ್ಮ ಬೆಂಗಳೂರಿಗೆ ಬರುತ್ತಿರುವ ವಿಷಯ ಖುಷಿ ತಂದರೂ ಅಮ್ಮನ ಮಡಿ, ಆಚಾರ, ಜೊತೆಗೆ ದೊಡ್ಡಮ್ಮ ಬೇರೆ. ಹೇಗೆ ಸಂಭಾಳಿಸುವುದು ಎಂದು ಪೀಕಲಾಟ ಶುರುವಾಯಿತು.

ರವಿ ಹೆಂಡತಿ ಶೋಭಾಗೆ "ಶೋಭಾ, ಅಮ್ಮ, ದೊಡ್ಡಮ್ಮ ನಾಳಿದ್ದು ಬೆಂಗಳೂರಿಗೆ ಬರುತ್ತಿದ್ದಾರೆ. ಎರಡು ವಾರ ಇಲ್ಲೇ ಇದ್ದು ನೆಂಟರ ಮದುವೆ ಮುಗಿಸಿಕೊಂಡು ಹೋಗ್ತಾರೆ. ನಿಂಗೇ ಗೊತ್ತಲ್ಲ, ಇಬ್ರೂ ತುಂಬಾ ಮಡಿ, ನನಗೋಸ್ಕರ ಸಂಭಾಳಿಸಿಕೊಂಡು ಹೋಗು.

ಅವರಿಬ್ಬರಿಗೂ ಬೇಜಾರಾಗದ ಹಾಗೆ ನಡ್ಕೋ ಪ್ಲೀಸ್" ಎಂದ. ಹೆಂಡತಿ ಶೋಭಾಗೆ ಗಂಡನ ಅವಸ್ಥೆ ನೋಡಿ ಕತ್ತರಿಯ ಮಧ್ಯೆ ಸಿಕ್ಕ ಅಡಿಕೆಯಂತೆ ತೋರಿತು. ಜೊತೆಗೆ ನಗುವೂ ಬಂತು. "ಸರಿ ಆಯ್ತು. ನನ್ನ ಕೈಲಾದಷ್ಟು ಪ್ರಯತ್ನಪಡ್ತೀನಿ" ಎಂದಳು.

ಆದರೆ ರಾತ್ರಿ ಮಲಗುವ ಮುನ್ನ ರವಿಗೆ ಇದ್ದಕ್ಕಿದ್ದಂತೆ ಏನೋ ಯೋಚನೆ ಬಂದು "ಶೋಭಾ, ನೀನು ಮುಂದಿನ ಎರಡು ವಾರ ಒಳಗಿಲ್ಲದೇ ಇರುವ ಪ್ರಮೇಯ ಏನಾದ್ರು, ಅದೇ ಹೆಂಗಸರ ತಿಂಗಳಿಗೊಮ್ಮೆ ಆಗೋದು. ೩ ದಿವಸದ್ದು" ಎಂದಾಗ ಶೋಭಾ ಸ್ವಲ್ಪ ಯೋಚಿಸಿ "ಆದ್ರೂ ಆಗ್ಬೋದು" ಎಂದಾಗ ರವಿಯ ಎದೆ ಧಸಕ್ ಎಂದಿತು. ಅದಕ್ಕವನು "ಹೌದಾ! ಅಯ್ಯೋ ಹಂಗಾದ್ರೆ ನೀನು ಮೂರು ದಿವಸ ಮೂಲೇಲಿ ಕೂತ್ಕೋಬೇಕು. ಅಮ್ಮ ಅದರಲ್ಲಿ ಬಹಳ ಕಟ್ಟುನಿಟ್ಟು. ನಾವು ಮೂರೇ ಜನ ಇದ್ದಾಗ ಪರವಾಗಿಲ್ಲ, ನೀನು ಏನೂ ಫಾಲೋಮಾಡಲ್ಲ. ಆದ್ರೆ ಅಮ್ಮ, ದೊಡ್ಡಮ್ಮನ ಮುಂದೆ ಮೂರು ದಿನ ಕೂತ್ಕೋಬೇಕಾಗುತ್ತೆ ಏನ್ ಮಾಡ್ತೀಯಾ" ಎಂದಾಗ ಅವಳು "ಅಯ್ಯೋ ಅದೆಲ್ಲಾ ಕಷ್ಟ, ನಾನು ನಿಮಗೆ ವರ್ಷಗಳ ಹಿಂದೇನೇ ಹೇಳಿದ್ನಲ್ಲಾ. ಈ ಸಿಟಿಯಲ್ಲಿ ಈ ದಿನಚರಿಯಲ್ಲಿ ಹಂಗೆಲ್ಲಾ ಕೂರಕ್ಕಾಗಲ್ಲ" ಎಂದು ಬಡಬಡಿಸಿದಳು.

ರವಿ "ಆದ್ರೆ ಅಮ್ಮ ದೊಡ್ಡಮ್ಮ" ಎಂದಾಗ ಶೋಭಾ, "ಹಾಗೇನೇದರೂ ಆದ್ರೆ ಅವರಿಗೆ ಹೇಳೇದೋ ಬೇಡ. ನಾನು ಹೇಗೋ ಮ್ಯಾನೇಜ್ ಮಾಡ್ತೀನಿ. ಆದ್ರೆ ದೇವರ ದೀಪ ಮಾತ್ರ ನೀವೇ ಹಚ್ಚಬೇಕು, ನಿಮಗೆ ಗೊತ್ತು. ನಾನು ಆಗ ದೇವರ ಮನೆಗೆ ಹೋಗಲ್ಲ ಅಂತ. ಆವರಿಗೆ ಗೊತ್ತಾಗದ ಹಾಗೆ ದೀಪ ಹಚ್ಚಿ ಬಾಗಿಲು ಎಳ್ಕೊಂಬಿಡಿ" ಎಂದಳು. ರವಿ ಯೋಚನೆಯಲ್ಲೇ ನಿದ್ರೆಗೆ ಜಾರಿದ.

ಎರಡು ದಿನದಲ್ಲಿ ರವಿಯ ಅಮ್ಮ, ದೊಡ್ಡಮ್ಮ ಅಣ್ಣನ ಜೊತೆ ಬಂದಿಳಿದರು. ಅಣ್ಣ ಮಾರನೆಯ ದಿನವೇ ಊರಿನಲ್ಲಿ ಕೆಲಸವಿದೆ ಎಂದು ಹೊರಟುಬಿಟ್ಟ. ಶೋಭಾ ಬೆಳಿಗ್ಗೆ ಎದ್ದು ರಂಗೋಲಿ ಹಾಕಿ, ಸ್ನಾನ ಮಾಡಿ ಎಲ್ಲರಿಗೂ ಕಾಫಿ ತಿಂಡಿ ಮಾಡಿಕೊಟ್ಟಳು. ಆರು ವರ್ಷದ ಮಗಳು ಶ್ವೇತಾಳನ್ನು ಸ್ಕೂಲಿಗೆ ಕಳುಹಿಸಿ ಇನ್ನು ಮಧ್ಯಾಹ್ನದ ಅಡುಗೆಗೆ ಸಿದ್ಧವಾಗುತ್ತಿದ್ದಳು. ಅತ್ತೆ ರುಕ್ಮಿಣಮ್ಮ ಹಾಗೂ ಅವರ ಅಕ್ಕ ಸಾವಿತ್ರಮ್ಮ ಸ್ನಾನ ಮುಗಿಸಿ ದೇವೀ ಪಾರಾಯಣ ಮಾಡಿ ಹಾಲಿನಲ್ಲಿ ಹರಟೆ ಹೊಡೆಯುತ್ತಿದ್ದರು. ನಂತರ ಮಧ್ಯಾಹ್ನದ ಊಟವಾದ ಮೇಲೆ ಎಲ್ಲರೂ ಸ್ವಲ್ಪ ವಿಶ್ರಾಂತಿ ಪಡೆದರು. ಅದೇ ವೇಳೆಗೆ ಶೋಭಾಗೆ ತಾನು ಒಳಗಿಲ್ಲ ಎಂದು ತಿಳಿಯಿತು. ಒಪ್ಪಂದದಂತೆ ಅತ್ತೆಗೆ ತಿಳಿಸಲಿಲ್ಲ. ಆ ಸಮಯದಲ್ಲಿ ಅವಳು ದೇವರಮನೆಗೆ ಹೋಗಿ ದೀಪ ಹಚ್ಚುತ್ತಿರಲಿಲ್ಲ. ಸಾಯಂಕಾಲ ಏನೋ ನೆಪಮಾಡಿ ಅತ್ತೆ ಕೈಯಲ್ಲಿ ದೇವರದೀಪ ಹಚ್ಚಿಸಿದಳು. ರಾತ್ರಿ ಅವಳೇ ಅಡುಗೆಮಾಡಿ ಎಲ್ಲರಿಗೂ ಬಡಿಸಿದಳು.

ರಾತ್ರಿ ಗಂಡ ರವಿಗೆ ಗುಟ್ಟಾಗಿ ತಿಳಿಸಿದಳು. ರವಿಗೆ ಬೆವರಿಳಿಯಲು ಶುರುವಾಯಿತು. "ಇನ್ನು ಮೂರು ದಿನ ಅಮ್ಮನಿಗೆ ದೊಡ್ಡಮ್ಮನಿಗೆ ಗೊತ್ತಾಗದಂತೆ ನೋಡಿಕೋ ಹುಷಾರು" ಎಂದ. ಮಾರನೆಯ ದಿನ ಯಥಾಪ್ರಕಾರ ಶೋಭಾ ದಿನಚರಿ ಆರಂಭಿಸಿ ಮಧ್ಯಾಹ್ನ ತನ್ನ ರೂಮಿನಲ್ಲಿ ಏನೋ ಮಾಡುತ್ತಿದ್ದಳು. ಅಲ್ಲಿಗೆ ಬಂದ ಅತ್ತೆ ರುಕ್ಮಿಣಮ್ಮ "ಶೋಭಾ, ಇಲ್ಲಿ ಬಂದಾಗ ಆ ದೇವಗಿರಿ ವೆಂಕಟೇಶ್ವರ ದೇವಸ್ಥಾನ ನೋಡೋಣ ಅಂದ್ರೆ ಆಗ್ತಾನೇ ಇಲ್ಲ. ಈ ಸತಿ ನೋಡ್ಲೇಬೇಕು. ಇಂದು ಸಾಯಂಕಾಲ ಹೋಗೋಣ, .ಇನ್ನು ನಾಳೆ ನಾಳಿದ್ದು ಮದುವೆ. ಇನ್ನೆರಡು ದಿನ ಬಿಟ್ಟರೆ ಇನ್ನೊಂದು ಮದುವೆ, ಹೋಗೋಕ್ಕಾಗಲ್ಲ" ಎಂದರು.

ಶೋಭಾಗೆ ಜೀವವೇ ಬಾಯಿಗೆ ಬಂದಂತಾಯಿತು. ತಾನು ಒಳಗಿಲ್ಲದಿರುವಾಗ ಅವಳು ದೇವಸ್ಥಾನಕ್ಕೆ ಹೋಗುವುದಿಲ್ಲ, .ಮನಸ್ಸೂ ಒಪ್ಪುವುದಿಲ್ಲ. ಆದರೆ ಅತ್ತೆಯ ಬಳಿ ಒಳಗಿಲ್ಲ ಅಂತ ಹೇಳಿಲ್ಲ. ಆದ್ದರಿಂದ ಬೇರೇನೋ ಕಾರಣ ಹೇಳಿ ತಪ್ಪಿಸಿಕೊಳ್ಳಬೇಕೆಂದು

ಪ್ರಯತ್ನಿಸಿದರೂ ಆಗಲಿಲ್ಲ. ಕಡೆಗೆ ವಿಧಿಯಿಲ್ಲದೆ ಇನ್ನೊಂದು ಗಂಟೆ ಬಿಟ್ಟು ಶೋಭಾ ಅತ್ತೆಯ ಬಳಿ ಬಂದು "ಅತ್ತೆ, ನೀವು ಸಾಯಂಕಾಲ ದೇವಗಿರಿ ದೇವಸ್ಥಾನಕ್ಕೆ ಹೋಗೋಣ ಅಂತ ಹೇಳಿದ್ರಲ್ಲ, ಅದು ಆಗೋಲ್ಲಾ ಅನ್ಸುತ್ತೆ, ನಾನು ಒಳಗಿಲ್ಲ" ಎಂದಳು.

ರುಕ್ಮಿಣಮ್ಮ ಕಣ್ಣು ಹುಬ್ಬೇರಿಸಿ "ಹೌದಾ, ಯಾವಾಗ, .ಅಡಿಗೆ ಮನೆಗೆ ಹೋಗಿಲ್ಲ ತಾನೇ" ಎಂದು ಕೇಳಿದರು. ಶೋಭಾ "ಇಲ್ಲ" ಎಂದಳು. ರುಕ್ಮಿಣಮ್ಮ "ಸರಿ, .ಚಾಪೆಯೆಲ್ಲಿ, ಎಲ್ಲಿ ನೀನು ಮೂರು ದಿವಸ ಕೂತ್ಕೋಳೋದು" ಎಂದು ಕೇಳಿದರು. ಶೋಭಾ ಚಾಪೆ ಇರೋಕಡೆ ತೋರಿಸಿ "ಅಲ್ಲಿ ಹಾಕಿ" ಎಂದಳು.

ಚಾಪೆಯೋ ಧೂಳೋ ಧೂಳು, ಉಪಯೋಗಿಸಿದ್ದರೆ ತಾನೇ!! ಕಡೆಗೆ ಅದನ್ನು ಕೊಡವಿ ಅಲ್ಲೊಂದು ಕಡೆ ಹಾಕಿದರು. ಒಂದು ದಿಂಬು, ಒಂದು ಚೊಂಬು, .ಅದರ ತುಂಬ ನೀರು, ಚಾಪೆಯ ಮೇಲಿಟ್ಟರು. ಒಂದು ಕಂಬಳಿಯನ್ನೂ ಇಟ್ಟರು. ಹ್ಯಾಪ್ಮೋರೆ ಹಾಕಿಕೊಂಡು "ಅಯ್ಯೋ ನನಗೆ ಸದ್ಯಕ್ಕೆ ಆ ದೇವಸ್ಥಾನ ನೋಡೋ ಭಾಗ್ಯ ಇಲ್ಲ ಅನ್ಸುತ್ತೆ" ಎಂದರು.

ಮಧ್ಯಾಹ್ನದ ಅಡುಗೆಗೆ ತರಕಾರಿ ಹೆಚ್ಚಿಟ್ಟಿದ್ದಳು. ಅನ್ನ ಮೆತ್ತಗಿರಬೇಕೆಂದು ನೀರಲ್ಲಿ ನೆನೆಸಿಟ್ಟಿದ್ದಳು. ರುಕ್ಮಿಣಮ್ಮ ಹಾಗೂ ಸಾವಿತ್ರಮ್ಮನವರಿಗೆ ಮಧ್ಯಾಹ್ನದ ಅಡುಗೆ ತಾವೇ ಮಾಡಬೇಕೆಂಬುದು ರುಜುವಾತಾಯಿತು. ಇಲ್ಲಿಯ ಅಡುಗೆಮನೆ ಅವರಿಗೆ ಅಭ್ಯಾಸವೇ ಇಲ್ಲ. ಹಾಗೂ ಹೀಗೂ ಶೋಭಾಳನ್ನು ಕೇಳಿ ಕೇಳಿ ಅನ್ನ ಸಾರು ಹೇಗೋ ಮಾಡಿದರು. ತರಕಾರಿ ಹಾಗೇ ಇರಲಿ, ರವಿ ರಾತ್ರಿ ಪಲ್ಯನೋ ಹುಳಿನೋ ಮಾಡ್ತಾನೆ ಎಂದುಕೊಂಡರು.

ರವಿಯ ಮಗಳು ಚೈತ್ರಾ ಸ್ಕೂಲಿನಿಂದ ಬಂದೊಡನೆಯೇ ಅಮ್ಮನನ್ನು ಚಾಪೆ ಮೇಲೆ ನೋಡಿ ಆಶ್ಚರ್ಯವಾಯಿತು. "ಏನಮ್ಮ, ಇಲ್ಲಿ ಕೂತಿದ್ಯ" ಎಂದು ಕೇಳಿ ಹತ್ತಿರ ಹೋದಳು. ಅಜ್ಜಿ ರುಕ್ಮಿಣಮ್ಮ "ಅಲ್ಲಿ ಹೋಗಬೇಡ ಅಮ್ಮನ್ನ ಮುಟ್ಟುಸ್ಕೋಬೇಡ" ಎಂದು ಕೂಗಿದರು. ಚೈತ್ರಾಗೆ ತಲೇಬುಡ ಅರ್ಥವಾಗದೆ "ಯಾಕಜ್ಜಿ" ಎಂದು ಕೇಳಿದಳು. ರುಕ್ಮಿಣಮ್ಮನವರಿಗೆ ಏನಿದು ಹೊಸದಾಗಿ ಕೇಳುತ್ತಿದ್ದಾಳೆ ಎಂದು ಅನುಮಾನ ಬಂತು. ರುಕ್ಮಿಣಮ್ಮ "ಅಯ್ಯೋ ನಿನಗದೆಲ್ಲಾ ಅರ್ಥವಾಗೋಲ್ಲ" ಎಂದು ಸಾಗಿಹಾಕಿದರು..

ರವಿ ಸಾಯಂಕಾಲ ಆಫೀಸಿನಿಂದ ಬಂದು ಷೂ ಬಿಚ್ಚಿಟ್ಟು ರೂಮಿನೊಳಗೆ ಬಂದ. ಒಮ್ಮೆಲೇ ಶೋಭಾಳನ್ನು ಚಾಪೆ ಮೇಲೆ ನೋಡಿ ತಬ್ಬಿಬ್ಬಾದ. ದಿಂಬು ಪಕ್ಕದಲ್ಲೊಂದು ಚೊಂಬು ನೋಡಿ "ಏನಿದು ಶೋಭಾ" ಎಂದು ಕೇಳಿದ. ಹಾಲಲ್ಲಿ ಕೂತಿದ್ದ ಸಾವಿತ್ರಮ್ಮನ ಕಿವಿಯೆಲ್ಲಾ ಇಲ್ಲೇ ಇತ್ತು. ಶೋಭಾ ಸನ್ನೆ ಮಾಡಿ "ಆಮೇಲೆ ಆಮೇಲೆ" ಎಂದಳು.

ರವಿಯು ಮುಖ ತೊಳೆದು ಬಂದಾಗ ತಾಯಿ ರುಕ್ಮಿಣಮ್ಮ "ರವಿ, ಶೋಭಾ ಒಳಗಿಲ್ಲ. ಪಾಪ ಮಧ್ಯಾಹ್ನದ ಅಡುಗೆನೂ ಮಾಡಕ್ಕಾಗ್ಲಿಲ್ಲ. ನಾನು, ನಿನ್ನ ದೊಡ್ಡಮ್ಮ ಕಷ್ಟಪಟ್ಟು ಅನ್ನ ಸಾರು ಮಾಡಿದ್ವಿ. ರಾತ್ರಿಗೆ ಹೆಚ್ಚೀರೋ ತರಕಾರಿಯಲ್ಲಿ ಪಲ್ಯ ಮಾಡ್ಬಿಡು. ಹೇಗಿದ್ದರೂ ತಿಂಗಳಲ್ಲಿ ಮೂರು ದಿನ ನೀನೇ ತಾನೇ ಅಡುಗೆ ಮಾಡೋದು. ನಿನಗೆ ಅಭ್ಯಾಸ ಇರತ್ತಲ್ವಾ" ಎಂದರು.

ರವಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಇಲ್ಲಿಯವರೆಗೂ ಸರಿಯಾಗಿ ಒಂದು ಕಾಫಿ ಕೂಡ ಮಾಡಿಲ್ಲ. ಇನ್ನು ಅಡುಗೆ? ದೇವ್ರೆ, ನೀನೇ ಕಾಪಾಡಬೇಕು, ಅಮ್ಮನಿಗೆ ನಿಜಾನೂ ಹೇಳಕ್ಕಾಗಲ್ಲ" ಎಂದು ಬೇಡಿಕೊಂಡ. ರಾತ್ರಿ ಅಡುಗೆಗೆ ರವಿ ತಲೆ ಕೆಡಿಸಿಕೊಂಡಿದ್ದ. ಅಮ್ಮ, ದೊಡ್ಡಮ್ಮನ ಕಣ್ಣು ತಪ್ಪಿಸಿ ರೂಮಿಗೆ ಬಂದು ಶೋಭಾಳನ್ನು ಪಲ್ಯ ಹೇಗೆ ಮಾಡುವುದು ಎಂದು ಕೇಳಿದ. ಗಂಡನ ಮುಖ

ನೋಡಿ ಬಲಿಗೆ ಸಿದ್ಧವಾಗಿರುವ ಬಕರಿಯಂತೆ ಕಂಡು ನಗು ಬಂತು. ಹಾಲಿನಲ್ಲಿದ್ದ ಸಾವಿತ್ರಮ್ಮನಿಗೆ ಏನೋ ಅನುಮಾನದ ವಾಸನೆ ಹೊಡೆಯುತ್ತಿತ್ತು. ಹೇಗೋ ಅರ್ಧಂಬರ್ಧ ತಿಳಿದುಕೊಂಡು ಬಂದು ಅಡುಗೆ ಶುರು ಮಾಡಿದ. ಶ್ವೇತಾ ಓಡಿಬಂದು "ನೀನ್ಯಾಕೆ ಮಮ್ಮಂ ಮಾಡ್ತಾ ಇದ್ಯಾ. ಅಮ್ಮ ಮಾಡಲ್ವ?" ಅಂದಾಗ ಏನೋ ಹೇಳಿ ಬಾಯಿ ಮುಚ್ಚಿಸಿ ಆಚೆ ಕಳಿಸಿದ. ಪಲ್ಯಕ್ಕೆ ಮಾಡಿದ ಒಗ್ಗರಣೆ ಸೀದುಹೋಯಿತು. ಪಲ್ಯ ಹೇಗೋ ಮಾಡಿ ಮುಗಿಸಿದ. ಊಟಕ್ಕೆ ಕೂತು ಅನ್ನ ಬಡಿಸಲು ಕುಕ್ಕರ್ ತೆಗೆದರೆ ರವಿಗೆ ಆಶ್ಚರ್ಯ ಕಾದಿತ್ತು. ಅನ್ನ ಮಿಡ್ಡೆಯಾಗಿ ಮುದ್ದೆಯಂತಾಗಿತ್ತು. ಮುಖ ಬೆವರಲು ಶುರುವಾಯಿತು. ಅಮ್ಮ ರುಕ್ಮಿಣಮ್ಮ "ಏನೋ ಇದು. ಅನ್ನ ಹೀಗಾಗಿದೆ. ನೀರು ಜಾಸ್ತಿಯಾಯ್ತಾ? ಯಾಕೆ ಗೊತ್ತಾಗ್ಲಿಲ್ವಾ? ತಿಂಗಳಿಗೆ ಮೂರು ದಿವಸ ಅಡುಗೆ ನೀನೇ ಮಾಡ್ತಿಯಾ ಅಲ್ವಾ" ಎಂದರು. ರವಿಗೆ ಮುಳ್ಳಿನ ಮೇಲೆ ಕೂತ ಹಾಗಾಯ್ತು. ಏನೋ ಕಾರಣ ಹೇಳಿ ನಿಭಾಯಿಸಿದ.

ಮಾರನೇ ದಿವಸ ಬೆಳಿಗ್ಗೆ ರುಕ್ಮಿಣಮ್ಮನೇ ರಂಗೋಲೆ ಹಾಕಿದರು. ಅವರು ಒಳಗೆ ಬರುವ ಹೊತ್ತಿಗೆ ವರ್ತನೆಯ ಹೂ ಮಾರುವವಳು ಬಂದು "ಅಮ್ಮೋವ್ರನ್ನ ಕರೀರಿ" ಎಂದಳು. ಅವರು ಒಳಗೆ ಹೋಗಿ ರವಿಗೆ ಹೇಳಿದರು. ರವಿಯೇ ಹೂ ಕೊಳ್ಳಲು ಬಂದನು. ಅದನ್ನು ನೋಡಿದ ಮಲ್ಲಮ್ಮ "ಏನ್ ಸ್ವಾಮಿ, ನೀವು ಬಂದಿದೀರ. ನಾನು ನೀವು ಹೂಕೊಳ್ಳೋದು ನೋಡೇ ಇಲ್ಲ. ಅಮ್ಮನವ್ರು ಇಲ್ವಾ" ಎಂದಳು. ರವಿ ಮನಸ್ಸಿನಲ್ಲಿಯೇ "ಇವಳೊಬ್ಬಳು ಅಧಿಕಪ್ರಸಂಗಿ. ಅದ್ವಾನದಲ್ಲಿ ಅಧಿಕ ಮಾಸ" ಅಂದುಕೊಂಡು ಏನೋ ಹೇಳಿ ಒಂದಷ್ಟು ಹೂ ಕೊಂಡ. ಅಲ್ಲೇ ನಿಂತಿದ್ದ ಸಾವಿತ್ರಮ್ಮನಿಗೆ ಮತ್ತೆ ಅನುಮಾನದ ವಾಸನೆ.

"ಬೆಳಿಗ್ಗೆ ತಿಂಡಿಗೆ ಏನು ಮಾಡ್ತೀಯಾ. ಪುಟ್ಟೀಗೂ ಡಬ್ಬಿಗೆ ಆಗ್ಬೇಕು ಅಲ್ವಾ" ಎಂದು ಸಾವಿತ್ರಮ್ಮ ಕೇಳಿದಾಗ, ರವಿಗೆ ಜಂಘಾಬಲವೇ ಬಿದ್ದು ಹೋಯಿತು. ಇನ್ನು ತಾನು ಅಡುಗೆ ಮನೆಗೆ ಹೋದರೆ ಎಡವಟ್ಟಂತೂ ಖಂಡಿತ ಎಂದುಕೊಂಡು ಒಂದು ಉಪಾಯ ಮಾಡಿದ.

ಅಮ್ಮ ರುಕ್ಮಿಣಮ್ಮನ ಬಳಿಗೆ ಹೋಗಿ "ಅಮ್ಮ ನೀನು ಮಾಡೋ ಉಪ್ಪಿಟ್ಟು ತಿಂದು ಎಷ್ಟೋ ತಿಂಗಳಾಗಿವೆ. ನಾನು ಪರಿಕರ ಎಲ್ಲಾ ನಿನಗೆ ಸಿಗೋ ಹಾಗೇ ಇಡ್ತೀನಿ" ಎಂದ. ಅವರಿಗೆ ರವಿಯ ಮನೆಯ ಅಡುಗೆಮನೆ ಅಭ್ಯಾಸವಿಲ್ಲದಿದ್ದರೂ ಮಗನ ಕೋರಿಕೆ ಒಪ್ಪಿಕೊಂಡು ಘಮಘಮ ಉಪ್ಪಿಟ್ಟು ತಯಾರಿಸಿದರು. ರವಿ ಅದನ್ನು ತಿಂದು ತನ್ನ ಡಬ್ಬಿಗೂ ಹಾಕಿಕೊಂಡು ಮಗಳ ಡಬ್ಬಿಗೂ ಹಾಕಿದ. "ಅಮ್ಮ ಮಧ್ಯಾಹ್ನದ ಅಡುಗೆಗೆ ಅನ್ನ ಸಾರು ರಾತ್ರಿಗೂ ಸೇರಿ ಮಾಡಿಬಿಡು" ಎಂದ. ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂಬಂತಾಯಿತು. ಇನ್ನೆರಡು ದಿವಸ ರುಕ್ಮಿಣಿಮ್ಮ, ಸಾವಿತ್ರಮ್ಮ ಅವರು ನೆಂಟರ ಮದುವೆ ಓಡಾಟದಲ್ಲಿದ್ದರು. ಅವರು ಆಚೆ ಹೋದೊಡನೆಯೇ ಶೋಭಾ ಅಡುಗೆ ಮನೆಗೆ ಹೋಗಿ ತಿಂಡಿ ಮಾಡಿದಳು.

ಅಂತೂ ಕೊನೆಗೆ ಶೋಭಾಗೆ ನೀರಾಯಿತು. ಅತ್ತೆ ರುಕ್ಮಿಣಮ್ಮನವರಿಂದ ಆಚೆ ಬಿಸಿನೀರು ಸುರಿಸಿಕೊಂಡು ಒಳಬಂದು ತಲೆಗೆ ಸ್ನಾನ ಮಾಡಿದಳು. ಎಡವಟ್ಟಿನಿಂದ ಒಂದು ದಿವಸ ಹೆಚ್ಚಾಗಿಯೇ ಮೂಲೆಯಲ್ಲಿ ಕೂರುವಂತಾಯಿತು.

ಕಡೆಗೂ ಅಮ್ಮ ಹಾಗೂ ದೊಡ್ಡಮ್ಮ ಮದುವೆ ಮುಗಿಸಿಕೊಂಡು ವಾಪಸ್ ಊರಿಗೆ ಹೊರಟಾಗ ರವಿ, ಶೋಭಾ ಇಬ್ಬರಿಗೂ ನಿರಾಳ ಎನಿಸಿತು. ಅಪರಾಧ ಮನೋಭಾವವಿದ್ದರೂ ತಾವು ಸುಳ್ಳು ಮಡಿ ಆಚರಿಸಿ ಸತ್ತಂತಾಗಿದ್ದ ದೇಹ ಮನಸ್ಸೆರಡೂ ಹಗುರವಾಯಿತು.

ರುಕ್ಮಿಣಮ್ಮನವರ ಜೊತೆ ಪ್ರಯಾಣಿಸುತ್ತಿದ್ದ ಸಾವಿತ್ರಮ್ಮನಿಗೆ ಅನುಮಾನದ ವಾಸನೆ ಇನ್ನೂ ಹೊಡೆಯುತ್ತಲೇ ಇತ್ತು. ***

ನಗೆ ಬರಹ

ನಾನು, ನಮ್ಮವರು ಮತ್ತು ಆಟ

– ಎಲ್. ಗಿರಿಜಾ ರಾಜ್

ಯಾರ ಸಾಂಸಾರಿಕ ಜೀವನದಲ್ಲಾದರೂ ಸಹಜವಾಗಿ ಸಂಭವಿಸುವ ಅಥವಾ ಸಂಭವಿಸಬಹುದಾದ ಘಟನೆಗಳು ಘಟಿಸುವಾಗ ಅದು ಮುಂದೆ ತಿಳಿಹಾಸ್ಯವಾಗಿ ಮನಕ್ಕೆ ಮುದ ನೀಡೀತು ಎಂಬ ನಿರೀಕ್ಷೆಯಿರದೆ ನಾವು ಅದರ ಭಾಗವಾಗಿರುತ್ತೇವೆ. ಆಗ ಸನ್ನಿವೇಶಕ್ಕನುಗುಣವಾಗಿ ಹುಸಿಕೋಪ, ವಿಷಾದ, ಸಣ್ಣಪುಟ್ಟ ರೇಗಾಟಕ್ಕೆ ಕಾರಣವಾಗಿರಬಹುದು. ಆದರೆ ಮತ್ತಾವಾಗಲೋ ಮೆಲುಕು ಹಾಕುವಾಗ ಅದು ಖುಷಿಕೊಡುವ ಸರಸದ ರಸಬುಗ್ಗೆಯಾಗುತ್ತದೆ. ನಗುವ ಮನಸಿರುವವರಿಗೆ ಸವಿಯಲು ನೆನಪಿನ ಸಿಹಿಬುತ್ತಿಯಾಗುತ್ತದೆ. ಬದುಕು ಸಹನೀಯವಾಗಲು, ಶೂನ್ಯವಾಗದಿರಲು ಈ ತಿಳಿ ವಿನೋದ ಲಹರಿಗಳು ಆಸರೆಗಳಲ್ಲವೇ?

ನಮ್ಮವರು ಸಾಹಸ ಪ್ರಿಯರು. ಯಾವಾಗಲೂ ಏನಾದರೂ ಮಾಡುತ್ತಲೇ ಇರುತ್ತಾರೆ, ಪಾಪ! ಕರ್ಮಯೋಗಿ. ತಾವೊಬ್ಬರೇ ತಮ್ಮ ಪಾಡಿಗೆ ಸಾಹಸ ಮಾಡಿಕೊಂಡರೆ ಸಾಕಾಗಿದೆ. ತಮ್ಮ ಸಾಹಸ ಪ್ರಪಂಚದೊಳಕ್ಕೆ ನಮ್ಮನ್ನೇಕೆ ಬಲವಂತವಾಗಿ ಎಳೆಯುವುದು, ನನಗಂತೂ ಬಲು ಕಷ್ಟಕ್ಕೆ ಬಂದಿದೆ. ಇವರೇನು ಗಂಡನೋ ಗಂಡಾಂತರವೋ ಅನ್ನಿಸಿಬಿಟ್ಟಿದೆ, ಈ ಗಂಡ 'ಉಂಡಾಡಿ ಗಂಡನಾಗಿಯೇ ಇದ್ದಿದ್ದರೆ ಒಳ್ಳೆಯದಿತ್ತೇನೋಪ್ಪ! ನಮ್ಮ ಪಾಡಿಗೆ ನಾವೂ ಉಂಡ್ಕೊಂಡು, ತಿನ್ಕೊಂಡು ಹಾಯಾಗಿ ಇರೋಣ' ಅಂದರೆ ಬಿಡಬೇಕಲ್ಲ, ಎಷ್ಟಾದರೂ ಅರ್ಧಾಂಗನಲ್ಲವೇ?

ನಮ್ಮವರು ಒಂದು ದಿನ ಇದ್ದಕ್ಕಿದ್ದಂತೆ ತಮ್ಮ ಹೊಸ ಸಾಹಸದ ಪ್ಲಾನೊಂದನ್ನು ನನ್ನ ಮುಂದಿಟ್ಟರು. ನಾನೊಬ್ಬಳು ಸುಲಭವಾಗಿ ಸಿಕ್ಕುತ್ತೇನಲ್ಲ ಇವರ ಪ್ರಯೋಗಗಳಿಗೆ ಬಲಿಪಶುವಾಗಿ. "ನೋಡೇ, ಹೊತ್ತುಹೊತ್ತಿಗೆ ಚೆನ್ನಾಗಿ ಮೇಯ್ದು ಕುಳಿತು ಬಿಟ್ಟರಾಗದು. ದೇಹಕ್ಕೆ ವ್ಯಾಯಾಮವೂ ಬೇಕು. ನಾವಿಬ್ಬರೂ ಏನಾದರೂ ಆಟವಾಡೋಣ" ಎಂದರು.

ನಾನು ನಿರಾಕರಿಸಿದೆ. ನನಗಾಗಲೇ ಎದೆ ಡವಡವ ಎನ್ನುತ್ತಿತ್ತು. ಇದೇನಪ್ಪ, ಹೊಸ ಗ್ರಹಚಾರ! ತಿಂದುಂಡು ಹಾಯಾಗಿ ನಿದ್ದೆ ಮಾಡಿ, ದುಂಡುದುಂಡಗೆ ಆಗುತ್ತಿರುವ ಹೊತ್ತಿನಲ್ಲಿ. ನಾನು ಅದೆಲ್ಲಾ ಆಗದ ಕೆಲಸ ಬಿಡ್ರೀ, ಈಗಾಗಲೇ ಹಿಂದೆ ಏನೇನೋ ಮಾಡಲು ಹೋಗಿ ಸೋತು ಸೋರೆ ಕಾಯಾಗಿ ಸುಮ್ಮನೇ ಕುಳಿತಿಲ್ಲವೇನು? ಇದರ ಕತೇನೂ ಅಷ್ಟೆ!

"ಯಾಕ್ರೀ, ನಾನು ಚೆನ್ನಾಗಿರೋದು ನೋಡಿ ನಿಮಗೆ ಹೊಟ್ಟೆಕಿಚ್ಚೇ? ಎಂದೆ, ಸ್ವಲ್ಪ ದನಿ ಏರಿಸಿ. ಈಗ ನಮ್ಮವರು ಹೂವಿನಂತೆ ಕೋಮಲವಾದರು.. ಅದೇನು ಅನುನಯ! ನಮ್ಮಿಬ್ಬರಲ್ಲಿ ಯಾವಾಗಲೂ ಹೀಗೇ ಆಗುತ್ತಿತ್ತು, ಅವರು ಒಂದು ಜೋರಾಗಿ ಕೂಗು ಹಾಕಿ, ದೂರ್ವಾಸರಂತೆ (ಬಹುಶಃ ದೂರ್ವಾಸರಿಗೂ ಅಂಥ ಕೆಂಗಣ್ಣು ಇದ್ದಿತೋ ಇಲ್ಲವೋ. ಇರಲಿ ಹಾಗಾದರೆ. ಇನ್ನಾರ ಉಪಮೆ ಸರಿಹೋದೀತು. ಹಾ! ಜಮದಗ್ನಿ.ಮಹರ್ಷಿಗಳಿಬ್ಬರು. ಪ್ರಮಾದವಾಗಿದ್ದರೆ ಕ್ಷಮಿಸಿ, ನಿಮ್ಮ ಹೆಸರು ತೆಗೆದುಕೊಂಡದ್ದಕ್ಕಾಗಿ... ಯಾರ ಮನ ನೋಯಿಸದ ಹಾಸ್ಯಕ್ಕಾಗಿ ನಿಮ್ಮ ತುಟಿಗಳ ಮೇಲೂ ನಸುನಗೆ ತೇಲಿಬಿಟ್ಟು ನನ್ನ ಮನ್ನಿಸಿ) ಅಲ್ಲಲ್ಲ ..ಜಮದಗ್ನಿಯಂತೆ ಕಣ್ಣು ಬಿಟ್ಟರೆ ನಾನು ಗಪ್ ಚಿಪ್ಪಾಗುತ್ತಿದ್ದೆ. ನಾನು ಕೋಪದಿಂದ ಕಾಳಿ ಅವತಾರ ತಾಳಿದಾಗ ಅವರು ಮೆತ್ತಗಾಗುತ್ತಿದ್ದರು.

“ಹಾಗಲ್ಲಾ ಚೆನ್ನಾ, ಪ್ರಯತ್ನ ಮಾಡ್ತಾನೇ ಇರಬೇಕು, ಒಂದ್ಸಲ ಅಲ್ಲ, ಎರಡು ಸಲವಲ್ಲ, ಮೂರನೇ ಸಲ ಏನಾದರೂ ಸಾಧಿಸಿಬಿಡಬಹುದು. ಕೇಳಿಲ್ಲವೇನೇ ದಡ್ಡಿ! ವಿವೇಕರ ವಾಣಿ: ‘Try and try and try again, till the goal is reached’ ಅಂತ. ಅಂದರೆ ಗುರಿ ಮುಟ್ಟುವವರೆಗೂ ಪ್ರಯತ್ನ ಬಿಡಬಾರದು" ಎಂದರು.

ನಾನು "ರಸ್ತೆಯಲ್ಲಿ ಜಾಗಿಂಗು, ರನ್ನಿಂಗು, ಎಲ್ಲ ಮಾಡಿದ್ದಾಯ್ತು, ಈಗ...” ಎನ್ನುತ್ತಿದ್ದಂತೆ ಅವರು "ಅದೆಲ್ಲ ಕಷ್ಟ ಕಣೆ, ಬ್ಯಾಡ್ಮಿಂಟನ್ ಆಡ್ತಾ ಇದ್ರೆ ಶ್ರಮ ಗೊತ್ತಾಗಲ್ಲ" ಎಂದರು.

"ಅಷ್ಟಕ್ಕೂ ದೇಹ ಕರಗಿಸೋಕೆ ನಾನೇನು ರಂಡೋಲು ಆಗಿಲ್ಲವಲ್ರೀ.." ಎನ್ನುತ್ತಿದ್ದಂತೆ ಮೆಲ್ಲಗೆ ಗೊಣಗುಟ್ಟಿದ್ದು ಕೇಳಿಸಿತು ‘ಆದರೇನು? ತೆಳ್ಳಗೆ ಬೆಳ್ಳಗೇನೂ ಬಳುಕುತ್ತಿಲ್ಲವಲ್ಲ...’

"ಏ ಎನ್ರೀ ಅದು” ಎಂದೆ.

ಅವರು "ಅದೇ ನೀನು ಈಗಲೂ ಬಳ್ಳಿಯಂತೆ ಬಳುಕುತ್ತಿದ್ದೀಯ ಅಂದೆ, ಅದನ್ನು ಹಾಗೇ ಇರಿಸಿಕೊಳ್ಳಲು ಆಟ ಅಡಿದರೆ ತಪ್ಪೇ?" ಎಂದು ಮೆಲ್ಲಗೆ ತಿರುಗಿಸಿಬಿಟ್ಟರು. ಸರಿ, ಎಷ್ಟಂತ ಜಗಳ ಆಡೋದು, ಸುಸ್ತಾಗುತ್ತೆ. ನಾನು ‘ಅಸ್ತು’ ಎಂದು ಒಪ್ಪಿಕೊಂಡೆ.

ಮರುದಿನ ಪ್ರಾರಂಭವಾಯಿತು ನಮ್ಮ ಆಟ. ಎಲ್ಲಿ ಅಂತೀರಾ? ಮನೆ ಮುಂದಿನ ಫುಟ್ ಪಾತೇ ನಮ್ಮ ಆಟದ ಬಯಲು. ಇಬ್ಬರೂ ಆರು ಗಂಟೆಗೇ ಏಳುತ್ತಿದ್ದೆವು. "ಹೊಸದರಲ್ಲಿ ಅಗಸ ಗೋಣಿ ಎತ್ತೆತ್ತಿ ಒಗೆದ" ಎನ್ನುವಂತೆ ಮೊದಲ ದಿನ ಹುರುಪಿನಿಂದ ಪ್ರಾರಂಭಿಸಿದೆವು. ಅದು ಮುಖ್ಯ ರಸ್ತೆಯಾದುದರಿಂದ ಆರು ಗಂಟೆಗೆ ಮುಂಚೆಯೇ ಜನಗಳು, ವಾಹನಗಳು ಓಡಾಡಲು ಪ್ರಾರಂಭವಾಗುತ್ತಿದ್ದವು.

ಎರಡನೆಯ ದಿನ ನಾನು ಜೋರಾಗಿ ಬಾರಿಸಿದ ಬಾಲು ಸೈಕಲ್ಲಿನಲ್ಲಿ ಹಾಲು ತೆಗೆದುಕೊಂಡು ಹೋಗುತ್ತಿದ್ದ ಹುಡುಗನೊಬ್ಬನ ತಲೆಗೆ "ಪಟ್" ಅಂತ ಬಿತ್ತು. ಆ ಹುಡುಗ ದುರುಗುಟ್ಟಿ ನಮ್ಮ ಕಡೆ ನೋಡಿದ. ನಾನು ತಲೆತಗ್ಗಿಸಿ ಉಗುಳು ನುಂಗಿದೆ. ಸದ್ಯ! ಜಗಳಕ್ಕೆ ಬರಲಿಲ್ಲ. ನನಗಿಂತ ದೊಡ್ಡವರಾದರೂ ಇನ್ನೂ ತಿಳುವಳಿಕೆಯಿಲ್ಲ, ವಯಸ್ಸಿಗಾದರೂ ಮರ್ಯಾದೆ ಕೊಡೋಣ ಎಂದು ಸುಮ್ಮನಾಗಿರಬಹುದು ಎಂದು ನಾನು ತರ್ಕಿಸಿದೆ.

ಮೂರನೆಯ ದಿನ ನಮ್ಮ ಬ್ಯಾಡ್ಮಿಂಟಾಯಣ ಮುಂದುವರೆಯಿತು. ಬಾಲು ಎರಡು ಬ್ಯಾಟುಗಳ ನಡುವೆ ಚಚ್ಚಿಸಿಕೊಳ್ಳುವುದನ್ನು ಬಿಟ್ಟು ಅಡ್ಡದಾರಿ ಹಿಡಿಯುವುದು ಹೆಚ್ಚಾದಾಗ ನಮ್ಮ ಭೀತಿಯೂ ಹೆಚ್ಚಿತು. ಬೆಳಗಿನ ಆಹ್ಲಾದಕರ ಹವೆಯಲ್ಲಿ ವಾಕಿಂಗ್ ಹೊರಟಿದ್ದ ಬಾಲ್ಡ್ ಹೆಡ್ ನ ಮುದುಕರ ತಲೆಗೆ ಬಾಲು ಹೊಡೆದಾಗ ಅವರು ನೋವಿನಿಂದ ಮುಖ ಸೊಟ್ಟ ಮಾಡಿ, ಬೋಳು ತಲೆ ಸವರಿಕೊಳ್ಳುತ್ತ, ನಮ್ಮಿಬ್ಬರ ಕಡೆ ನೋಡಿ ಸಹಸ್ರ ನಾಮಾರ್ಚನೆ ಶುರುಮಾಡಿದರು. ನಮ್ಮವರು ಅವರಿಗೆ ವಿನಯಪೂರ್ವಕವಾಗಿ ನಮಿಸಿ, "ಏನೋ ತಪ್ಪಾಗಿಹೋಯ್ತು, ಕ್ಷಮಿಸಿ ತಾತಾ" ಎಂದರು. ಅವರ ತಲೆಗಾದ ಪೆಟ್ಟಿಗಿಂತ ತಾತಾ ಅಂದದ್ದಕ್ಕೆ ಅವರಿಗೆ ಬಹಳ ನೋವಾಗಿರಬೇಕು..."ಸ್ವಲ್ಪ ನೋಡ್ಕೊಂಡು ಆಡ್ರಪ್ಪ, ಸ್ವಲ್ಪ ಬಾಲ್ಡಿ ಆಗಿದ್ದಕ್ಕೇ ತಾತಾ ಅನ್ನೋದೆ?” ಎಂದು ಗೊಣಗಿಕೊಂಡಿದ್ದು ಕೇಳಿಸಿತು.

ಅವರು ಹೋಗುವವರೆಗೂ ನಗೆಯ ಮುಖವಾಡ ಧರಿಸಿದ್ದವರು ಅವರು ಅತ್ತ ಹೋಗುತ್ತಲೇ ಆ ಮುದುಕರ ಮೇಲಿನ ಕೋಪವನ್ನು ನನ್ನ ಮೇಲೆ ತೀರಿಸಿಕೊಳ್ಳಲು ಪ್ರಯತ್ನಿಸುವುದು ಸರಿಯೇ ಹೇಳಿ? "ಏನೇ ಸ್ವಲ್ಪ ನೋಡ್ಕೊಂಡು ಆಡಬಾರದೇನೇ? ಥತ್! ಇನ್ನೂ ಎಷ್ಟು ಜನರ ಬಳಿ ಜಗಳ ಆಡಬೇಕೋ, ಈ ಜನ್ಮದಲ್ಲಿ ನಿನಗೆ ಬ್ಯಾಡ್ಮಿಂಟನ್ ಆಟ ಬರುವುದಿಲ್ಲ ಬಿಡು"ಎಂದರು.

ನನಗ್ಯಾಕೋ ಬಲು ರೇಗಿತು. ಸೆರಗನ್ನು ಸೊಂಟಕ್ಕೆ ಸಿಕ್ಕಿಸಿ ಬ್ಯಾಟು ಹಿಡಿದು ಅವರ ಕಡೆಗೆ ಬರುತ್ತಿದ್ದ ನನ್ನನ್ನು ನೋಡಿ ಅವರು ಹೆದರಿ ಹಿಂದಕ್ಕೆ ಸರಿದರು. "ಹುಟ್ಟುತ್ತಲೇ ಬರಬೇಕು ಅಂದ್ರೆ ಹೆಂಗ್ರೀ? ರಸ್ತೆಯಲ್ಲಿ ಆಡಿದರೆ ಹೀಗೇ ಆಗೋದು. ನೀವೇನ್ರೀ ನನ್ನ ಬೈಯೋದು? ನೀವೇ ಆಡ್ಕೊಳಿ.." ಎಂದು ಬ್ಯಾಟನ್ನು ಬಿಸಾಡಿ ಮನೆಯ ಕಡೆ ಹೊರಟೆ.

"ಇಷ್ಟೊಂದು ಕೋಪವೇಕೆ ಚಿನ್ನಾ, ಇನ್ಮೇಲೆ ಇಷ್ಟು ತಡವಾಗಿ ಏಳುವುದು ಬೇಡ, ಐದು ಗಂಟೆಗೇ ಎದ್ದು ಬಿಡೋಣ" ಎಂದರು. ನಾನು ರೇಗಿ "ಹೂಂ ಆಗಲಿ, ಸೂರ್ಯನಿಗೆ ಐದು ಗಂಟೆಗೇ ಹುಟ್ಟಲು ಮೆಸೇಜ್ ಕಳಹಿಸಿಬಿಡಿ" ಎಂದೆ.

"ಹುಂ ಹೌದಲ್ಲ? ಕತ್ತಲಲ್ಲಿ ಹೇಗೆ ಆಡೋದು. ಹೀಗೆ ಮಾಡೋಣ, ಫೀಲ್ಡಿಗೇ ಹೋಗೋಣ"ಎಂದರು, ಹೊಸ ಆವಿಷ್ಕಾರ ಕಂಡುಹಿಡಿದವರಂತೆ. ನ್ಯೂಟನ್ ಸಹ ಇಷ್ಟು ಖುಷಿಯಿಂದ ಓಡಿಬರಲಿಲ್ಲ 'ಯುರೇಕಾ ಯುರೇಕಾ' ಎಂದು.

ಬಿಡಿ, ಆದರೆ ಅದು ಪ್ರಯೋಜನಕ್ಕೆ ಬರುವುದಿಲ್ಲ. ಏಕೆಂದರೆ ಅ ಕಡೆ ಫೀಲ್ಡ್ ಗೆ ಹೋದರೆ ಈ ಕಡೆ ಮಲಗಿರುವ ಮಗು ಎದ್ದು ಶಂಖವಾದ್ಯ ಬಾರಿಸಲಿ. ಇಲ್ಲೇನೋ ಮನೆ ಮುಂದೇನೆ ಅಡ್ತಿದ್ದೀವಿ, ಮಗು ಅತ್ತರೆ ಕೇಳಿಸುತ್ತಿತ್ತು" ಎಂದೆ.

ಅವರು "ಅಯ್ಯೋ! ನಿಂಗಿಷ್ಟೂ ಗೊತ್ತಾಗಲಿಲ್ಲವೇನೇ? ಎಂಥ ದಡ್ಡಿ ನೀನು, ಮಗೂನೂ ಫೀಲ್ಡ್ ಗೇ ಎತ್ಕೊಂಡು ಹೋಗೋಣ.." ಎಂದಾಗ, "ಅಷ್ಟೇ ಯಾಕೆ? ಜೊತೇಲಿ ಅದರ ಫೀಡಿಂಗ್ ಬಾಟಲ್, ಅದರ ಸೈಕಲ್ಲು, ಆಟದ ಸಾಮಾನು' ಎನ್ನುತ್ತಿದ್ದಂತೆ ಅವರು "ಸಾಕಮ್ಮಾ, ಸಾಕು, ನಿನ್ನ ಸಹವಾಸ. ನಾಳೆಯಿಂದ ನಾನೊಬ್ನೇ ಸ್ನೇಹಿತನ ಮನೆಗೆ ಹೋಗ್ತೀನಿ" ಎಂದರು.

ಸದ್ಯ! ನಾನು ಬಿಡುಗಡೆಯ ನಿಟ್ಟುಸಿರು ಎಳೆದೆ. ಒಳಗೊಳಗೇ ಸಂತೋಷ. ಆದರೂ ತೋರಗೊಡದೆ ಬ್ಯಾಟನ್ನು ಬೀಸುತ್ತಾ "ಏನಾದರೂ ಮಾಡ್ಕೊಳಿ" ಎಂದು ಮಗುವಿನೆಡೆಗೆ ಓಡಿದೆ.

ಮರುದಿನ ನನಗೆ ಆರು ಗಂಟೆಗೇ ಮಾಮೂಲಿನಂತೆ ಎಚ್ಚರವಾಯಿತು. ಪಕ್ಕದಲ್ಲಿ ನೋಡಿದರೆ ಸ್ನೇಹಿತನ ಮನೆಗೆ ಬ್ಯಾಡ್ಮಿಂಟನ್ ಆಡಲು ಹೋಗುತ್ತೇನೆ ಎಂದು ಜಂಬ ಕೊಚ್ಚಿದ ಮಹನೀಯರು ಗೊರಕೆ ಹೊಡೆಯುತ್ತ ಆನಂದದಿಂದ ಮಲಗಿದ್ದರು. ಅವರನ್ನು ಅಲುಗಾಡಿಸಿ "ರೀ.. ರೀ ಏಳ್ರೀ..ಹೋಗುವುದಿಲ್ಲವೇ?" ಎಂದೆ. ಅವರು ನಿದ್ದೆಗಣ್ಣಿನಲ್ಲೇ ತೊದಲುತ್ತಾ "ಏ..ಏ..ಎಲ್ಲಿಗೇ?" ಎಂದು ರಾಗವೆಳೆದರು. ಬ್ಯಾಡ್ಮಿಂಟನ್ ಆಟಕ್ಕೆ ನಿಮ್ಮ ಗೆಳೆಯನ ಮನೆಗೆ"ಎಂದೆ ಕಿರುನಗುತ್ತ. "ಹೋಗೇ, ಯಾರು ಹೋಗ್ತಾರೆ? ನಿದ್ದೆ ತುಂಬ ಬರುತ್ತಿದೆ ಊ ಉಹುಂ" ಎಂದು ಗೊಣಗುತ್ತಾ ರಗ್ಗನ್ನು ಮುಖದ ತುಂಬ ಎಳೆದುಕೊಂಡು ಪಕ್ಕಕ್ಕೆ ತಿರುಗಿಕೊಂಡಾಗ ನಾನು ಅವರನ್ನು ಛೇಡಿಸಲು ಕಾರಣ ಸಿಕ್ಕಿದ್ದಕ್ಕಾಗಿ ಸಂತೋಷದಿಂದ ಉಬ್ಬುತ್ತಾ ಅವರು ಏಳುವುದನ್ನೇ ಕಾಯುತ್ತಾ ಕುಳಿತೆ, ಕಾಲು ಕೆರೆದುಕೊಂಡು. ಎಷ್ಟೇ ಜಗಳಗಂಟಿ ಯಾದರೂ ಪಾಪ! ಅವರ ನಿದ್ದೆ ಕೆಡಿಸುವಷ್ಟು ಪಾಪಿ ನಾನಲ್ಲ!

ಕನ್ನಡ ಕಥಾಲೋಕ

ಕಥಾಮೃತ - ಸೋಮದೇವನ "ಕಥಾಸರಿತ್ಸಾಗರದ ಸಂಗ್ರಹ"

– ವಿಠ್ಠಲ್ ಇಜೇರಿ

ಈ ಮುಂಚೆ ಕನ್ನಡ ಕಥಾಲೋಕದಲ್ಲಿ ಕನ್ನಡದಲ್ಲಿ ಸಣ್ಣ ಕಥೆಗಳ ವಿವಿಧ ಆಯಾಮಗಳನ್ನು ಪ್ರಸ್ತುತಪಡಿಸುತ್ತ, ಕಳೆದ ತಿಂಗಳು ಕನ್ನಡದ ಪ್ರಥಮ ಗದ್ಯ ವಡ್ಡರಾಧನೆ ಬಗ್ಗೆ ಬರೆದಿದ್ದೆ. ಈಗ ಇನ್ನೊಂದು ಮಹತ್ವದ ಪ್ರಾಚೀನ ಕಥಾ ಸಂಗ್ರಹ ಕಥಾಸರಿತ್ಸಾಗರದ ಬಗ್ಗೆ:

ಕಥಾಸರಿತ್ಸಾಗರವು ಸಂಸ್ಕೃತದ ಒಂದು ದೊಡ್ಡ ಪದ್ಯ ಕಾವ್ಯ. ಇದರ ಭಾಷೆ ಲಲಿತವಾಗಿದೆ, ಬಂಧ ಬಿಗಿಯಾಗಿದೆ. ಅತಿಯಾದ ಅಲಂಕಾರ, ಕವಿಸಮಯ, ಪುರಾಣದ ಸಂಶಯಗಳು ಇಲ್ಲ. ರಾಮಾಯಣವನ್ನು ಕಾಂಡಗಳಲ್ಲಿ, ಮಹಾಭಾರತವನ್ನು ಪರ್ವಗಳಲ್ಲಿ ವಿಭಜಿಸಿದಂತೆ, ಕಥಾಸರಿತ್ಸಾಗರವನ್ನು 18 ಲಂಬಕ ಎಂಬ ಹೆಸರಿನಲ್ಲಿ ವಿಭಜಿಸಲಾಗಿದೆ. ಪ್ರತಿ ಲಂಬಕದ ಪ್ರಾರಂಭದಲ್ಲಿ ಶಿವ, ಪಾರ್ವತಿ, ಗಣೇಶ, ಸರಸ್ವತಿ, ಮನ್ಮಥ ಮೊದಲಾದವರ ಸ್ತೋತ್ರಗಳಿವೆ. ಹದಿನೆಂಟು ಲಂಬಕಗಳನ್ನು 124 ತರಂಗಗಳು ಎಂದು ಮರು ವಿಭಜನೆ ಮಾಡಿದ್ದು ಒಟ್ಟು ಸುಮಾರು 22 ಸಾವಿರ ಸ್ತೋತ್ರಗಳುಳ್ಳ ಬೃಹತ್ ಕೃತಿ ಇದಾಗಿದೆ. ಪ್ರಾಚೀನ ಗ್ರೀಕ್ ಇತಿಹಾಸದ ಇಲಿಯಡ್ ಮತ್ತು ಒಡೆಸ್ಸಿ ಗ್ರಂಥಗಳು ಇದರ ಅರ್ಧದಷ್ಟು ಆಗುತ್ತವೆ. ಇದನ್ನು ರಾಮದೇವಭಟ್ಟನ ಮಗ ಸೋಮದೇವಭಟ್ಟನು ಕಾಶ್ಮೀರದ ಅನಂತರಾಜನ ಹೆಂಡತಿ ಸೂರ್ಯಮತಿಯ ಚಿತ್ರ ವಿನೋದಕ್ಕಾಗಿ, ಸಮಯ ಕ್ರಿ. ಶ. 1029- 1064ರ ಮಧ್ಯೆ ಬರೆದಿದ್ದಾರೆ.

'ಕಥಾ ಸರಿತ್ಸಾಗರ' ಎಂದರೆ ಕಥೆಗಳೆಂಬ ನದಿಗಳು ಬಂದು ಸೇರಿ ಆಗಿರುವ ಸಾಗರ ಎಂದು ಅರ್ಥ. ಇದನ್ನು "ಒಸೆನ್ ಆಫ್ ಸ್ಟೋರಿ" ಎಂಬ ಹೆಸರಿನಿಂದ ಇಂಗ್ಲೀಷ್ ಭಾಷೆಗೆ ಅನುವಾದ ಮಾಡಿದ ಚಾರ್ಲ್ಸ್ ಹೆನ್ರಿ ಟಾನಿ, ಕೊಲ್ಕೋತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಚರಿತ್ರೆ ಮತ್ತು ಇಂಗ್ಲಿಷ್ ಪಾಠ ಮಾಡುತ್ತಿದ್ದರು (1865-66). ವಿದ್ಯಾಕ್ಷೇತ್ರದಲ್ಲಿ 1889 ರವರೆಗೆ ಸೇವೆ ಸಲ್ಲಿಸಿದರು. 1892 ರಲ್ಲಿ ಇಂಗ್ಲೆಂಡಿಗೆ ಹೋದಮೇಲೆ ಅವರು ಹಲವು ಸಂಸ್ಕೃತ ಕೃತಿಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದರು. ಅದರಲ್ಲಿ ಕಥಾಸರಿತ್ಸಾಗರದ ಭಾಷಾಂತರ ಮಹತ್ವದ್ದು. ಸ್ವಾರಾಸ್ಯವೇ ಕಥೆಯ ಜೀವ, 'ಕಥಾಯಾಮ್ ಸರಸಂ ವಸ್ತು' ಅದೇ ಪ್ರಧಾನ. ಮಿಕ್ಕಿದ್ದು ಗೌಣ. ಅದು ಪಾತ್ರ ಪೋಷಣಕ್ಕೂ, ಗುಣ ಚಿತ್ರಣಕ್ಕೂ ಹೋಗುವದಿಲ್ಲ. ವರ್ಣನೆ, ಅಲಂಕಾರಗಳೂ ಅಷ್ಟೇ, ಅವು ಕಥೆಗೆ ಕಲ್ಲು ಕಟ್ಟಿದಂತೆ ಬರಿಯ ಭಾರವಾಗುತ್ತವೆ. ಒಟ್ಟಿನ ಮೇಲೆ ಕಥೆ ಎಂದರೆ ಕಲ್ಪನೆ. ಚಿತ್ರಕ್ಕೆ ಹಿನ್ನೆಲೆಯಾಗಿ ಗೋಡೆ ಏನೋ ಇರುತ್ತದೆ. ಆದರೆ ಆ ಸತ್ಯದ ಮೇಲೆ ಕಲ್ಪಿತವಾದ ಮಿಥ್ಯಕ್ಕೇ ಹೆಚ್ಚು ಬೆಲೆ. ಕಥೆಯ ಊರು, ದೇಶ, ರಾಜ, ಪ್ರಜೆ ಇತ್ಯಾದಿ ಹೆಸರುಗಳು ಸತ್ಯವಾದರೂ ಅದು ಚರಿತ್ರೆಗೂ, ಭೂಗೋಳಕ್ಕೂ ದೂರ. ಅದು ನಿಖರವಾದುದಲ್ಲ. ಆದುದರಿಂದ ಬಾಯಿಂದ ಬಾಯಿಗೆ, ಕೈಯಿಂದ ಕೈಗೆ ಮತ್ತು ಕಾಲದಿಂದ ಕಾಲಕ್ಕೆ ಅದರ ಆಕಾರ, ಪ್ರಮಾಣಗಳು ಬದಲಾಗುತ್ತ ಹೋಗುತ್ತವೆ. ಅದು ಬರಹ ರೂಪದಲ್ಲಿ ದಾಖಲೆಯಾದಾಗ ಅದಕ್ಕೊಂದು ನಿಶ್ಚಿತ ಚೌಕಟ್ಟು ದೊರೆಯುತ್ತದೆ. ಕಥಾಸಾರಿತ್ಸಾಗರವು, ಮೊದಲು ಮುದ್ರಣ ಕಂಡದ್ದು 1862 ರಲ್ಲಿ. ಅದಕ್ಕೂ ಹಿಂದೆ ಗುಣಾಢ್ಯನಿಂದ ಸೋಮದೇವನವರೆಗೆ ಯಾವಯಾವ ಹಂತಗಳಲ್ಲಿ ಎಷ್ಟೆಷ್ಟು ಬದಲಾವಣೆ ಕಂಡಿವೆಯೋ ತಿಳಿಯದು.

ಕಥಾ ಸರಿತ್ಸಾಗರವು ಸ್ತ್ರೀಯನ್ನು ವಿನೋದ ಪಡಿಸುವುದಕ್ಕಾಗಿ ಹೇಳಿದುದು. ಶಿವನು ತನ್ನ ಹೆಂಡತಿ ಪಾರ್ವತಿಯನ್ನು ಸಂತೋಷ ಪಡಿಸಲು ಹೇಳಿದ ಕತೆ. ಆಕೆ ಅಪೂರ್ವವಾದ ಕತೆ ಹೇಳು ಅಂದಳು, ಆದರೆ ಅದನ್ನು ಬೇರೆ ಯಾರೂ ಕೇಳಬಾರದು ಎಂಬ ಸ್ವಾರ್ಥ ಯಾಕೆ ಉಂಟಾಯಿತೋ ತಿಳಿಯದು. ಆದರೆ ಒಬ್ಬ ಕದ್ದು ಕೇಳಿ, ತನ್ನ ಹೆಂಡತಿಗೆ ಹೇಳಿ, ಅದು ಲೋಕಕ್ಕೆಲ್ಲ ತಿಳಿದರೆ ಶಾಪ ವಿಮೋಚನೆ ಎಂದು ಇದ್ದುದು, ಲೋಕೋಪಕಾರವೇ ಆಯಿತು. ಕತೆಗಳ ಮೂಲ ಉದ್ದೇಶ, ಭಾರವಾದ ಬದುಕು ಹಗುರಾಗಬೇಕು. ಕಥಾಸರಿತ್ಸಾಗರವು ಧರ್ಮ ಗ್ರಂಥವಲ್ಲ. ಇತಿಹಾಸವಲ್ಲ, ಪುರಾಣವೂ ಅಲ್ಲ. ಉತ್ತಮ, ಸ್ವಾರಸ್ಯಪೂರ್ಣ ಕತೆಗಳನ್ನು ಓದಿದಾಗ ಒಂದು ರೀತಿಯ ಏಕಾಗ್ರತೆ ಉಂಟಾಗುತ್ತದೆ. ಅದರಿಂದ ಹೊರ ವೃತ್ತಿಗಳು ಹೊರಟು ಹೋಗುತ್ತವೆ. ಅಲ್ಲೊಂದು ಜೀವನತತ್ವ ಕಾಣಿಸುತ್ತದೆ. ತನ್ಮೂಲಕ ಒಳ್ಳೆಯ ಕರ್ಮಗಳಿಗೆ ಪ್ರೇರಣೆ ಸಿಗುತ್ತದೆ. ಹಾಗೂ ಎಲ್ಲ ಪ್ರಾಣಿಗಳಿಗೂ ಅದರಿಂದ ಶುಭ ಉಂಟಾಗುವದು.

ಪುಷ್ಪದಂತನಿಗೆ ಶಾಪ : ಪಾರ್ವತಿ ನಂದಿಗೆ ಒಳಗೆ ಯಾರನ್ನೂ ಬಿಡಬೇಡ ಎಂದು ಹೇಳಿ ಬಾಗಿಲು ಕಾಯಲು ತಿಳಿಸಿ ಶಿವನಿಗೆ "ನನಗೊಂದು ಒಳ್ಳೆಯ ಕತೆ ಹೇಳಿ" ಅಂದಳು. ಶಿವ "ದೇವತೆಗಳು ನಿತ್ಯ ಸುಖಿಗಳು, ಮತ್ತು ಮನುಷ್ಯರು ದುಃಖಿಗಳು ಅವರಿಬ್ಬರ ಕತೆ ಬೇಡ, ನಾನು ನಿನಗೆ ವಿದ್ಯಾಧರ ಚರಿತ್ರೆಯನ್ನು ಹೇಳುತ್ತೇನೆ," ಎಂದು ಹೇಳಲು ಪ್ರಾರಂಭ ಮಾಡಿದನು. ಅಷ್ಟರಲ್ಲಿ ಪುಷ್ಪದಂತನೆಂಬ ಗಣನು ಬಂದನು. ನಂದಿ ಅವನಿಗೆ ಒಳಗೆ ಹೋಗದಂತೆ ತಡೆದನು. ಪುಷ್ಪದಂತನಿಗೆ ಇನ್ನೂ ಕುತೂಹಲ ಹೆಚ್ಚಾಗಿ ಅದೃಶ್ಯ ರೂಪದಲ್ಲಿ ಒಳಹೋಗಿ, ಕತೆ ಕೇಳಿ ಮನೆಗೆ ಹೋಗಿ ಹೆಂಡತಿ ಜಯಾಳಿಗೆ ಆ ಕತೆಯನ್ನು ಹೇಳಿದನು. ಜಯಾ, ಪಾರ್ವತಿಯ ಸಖಿ. ಆಕೆ, ಗಂಡ ಹೇಳಿದ ಕತೆ ಪಾರ್ವತಿಗೆ ಹೇಳಿದಳು. ಪಾರ್ವತಿ ಶಿವನಿಗೆ "ಅಪೂರ್ವ ಕತೆ ಹೇಳು ಅಂದರೆ ಇದೆಂಥ ಹಳೇ ಕತೆ ಹೇಳಿರುವೆ, ಜಯಾಳಿಗೂ ತಿಳಿದ ಕತೆ ಹೇಳಿರುವೆ" ಎಂದು ದೂರಿದಳು. ಶಿವನು ಧ್ಯಾನದಲ್ಲಿ ಎಲ್ಲವನ್ನು ತಿಳಿದು ಪಾರ್ವತಿಗೆ ಪುಷ್ಪದಂತ ಅಧೃಶ್ಯನಾಗಿ ಬಂದು ಕತೆ ಕೇಳಿದ ಬಗ್ಗೆ ತಿಳಿಸಿದನು. ಪಾರ್ವತಿ ಪುಷ್ಪದಂತನನ್ನು ಕರೆಯಿಸಿ "ಭೂಲೋಕದಲ್ಲಿ ಜನ್ಮವೆತ್ತು" ಎಂದು ಶಾಪ ನೀಡಿದಳು. ಪುಷ್ಪದಂತನು ಶಾಪ ವಿಮೋಚನೆಗಾಗಿ ಅಂಗಲಾಚಿದಾಗ ಪಾರ್ವತಿ "ವಿಂಧ್ಯಾಡವಿಯಲ್ಲಿ ಕಾಣಭೂತಿ ಎಂಬ ಪಿಶಾಚಿ ಇದ್ದಾನೆ, ಅವನು ಯಕ್ಷನಿಂದ ಶಾಪ ಪಡೆದು ಪಿಶಾಚಿಯಾಗಿದ್ದಾನೆ. ಅವನಿಗೆ ಈ ಕತೆ ಹೇಳಿದರೆ ಶಾಪ ಮುಕ್ತನಾಗುತ್ತಾನೆ" ಎಂದು ತಿಳಿಸಿದಳು.

ನದಿಯ ಜಾಡು ಹಿಡಿದು..

ಋಗ್ವೇದದಲ್ಲಿ ಸರಸ್ವತಿ ನದಿ - ಒಂದು ವಿಶ್ಲೇಷಣೆ

– **ಹೆಚ್.ಎಲ್. ಗುರುಪ್ರಸಾದ್**

ವೇದ ಸಾಹಿತ್ಯದ ಅನೇಕ ಕಡೆ ಸರಸ್ವತಿ ನದಿಯ ಉಲ್ಲೇಖ ಕಂಡುಬರುವುದು. ಭಾರತಕ್ಕೆ ಸಾಂಸ್ಕೃತಿಕ ಹೆಗ್ಗುರುತನ್ನು ನೀಡಿದ ಸರಸ್ವತಿ ನದಿಯ ತಪ್ಪಲನ್ನು ಮಹಾ ನಾಗರಿಕತೆಯ ತೊಟ್ಟಿಲು ಎಂದು ಪರಿಗಣಿಸಲಾಗಿದೆ. ಪ್ರಾಚೀನ ಕಾಲದಲ್ಲಿ ದಕ್ಷಿಣ ಏಷ್ಯದಲ್ಲಿ ಪ್ರಪ್ರಥಮ ನಾಗರಿಕತೆ ಹುಟ್ಟಿ ಬೆಳೆದದ್ದು ಸರಸ್ವತಿ ಮಹಾನದಿ ಹಾಗೂ ಇದರ ಉಪನದಿಗಳ ತೀರದಲ್ಲೇ ಎನ್ನುವುದು ಈಗ ಚರಿತ್ರಾರ್ಹ ವಿಷಯ. ಇಷ್ಟು ಬೃಹತ್ತಾಗಿದ್ದ ನದಿಯು ಕ್ರಿ.ಪೂ.2000ರ ಆಸುಪಾಸಿನಲ್ಲಿ ಸಂಪೂರ್ಣ ಕಣ್ಮರೆಯಾಗಿದ್ದು ಒಂದು ವಿಪರ್ಯಾಸ. ಈ ನದೀಪಾತ್ರದ ನಾಗರಿಕತೆಯು ಅಂದಾಜು 2 ಮಿಲಿಯನ್ ಚದರ ಕಿಲೋಮೀಟರ್ ವರೆಗೂ ಹಬ್ಬಿತ್ತು. ಗಾತ್ರದಲ್ಲಿ ಸರಸ್ವತಿ ನದಿಯು ಬ್ರಹ್ಮಪುತ್ರ ನದಿಗಿಂತಲೂ ದೊಡ್ಡದಾಗಿತ್ತು. ಹಿಮಾಲಯದ ಶಿವಾಲಿಕ್ ಪರ್ವತದಲ್ಲಿ ಜನಿಸಿ ದ್ವಾರಕದ ಬಳಿ ಅರಬ್ಬೀ ಸಮುದ್ರವನ್ನು ಸೇರುತ್ತಿದ್ದ ಸರಸ್ವತಿ ನದಿಯು 4600 ಕಿ.ಮೀ ಉದ್ದಕ್ಕೆ ಪ್ರವಹಿಸುತ್ತಿತ್ತು. ಕ್ರಿ.ಪೂ 1900ರ ಕಾಲದಲ್ಲಿ ಭೂಪದರಗಳ ಘರ್ಷಣೆಯಿಂದಾಗಿ ಹಾಗೂ ಮುಂಗಾರು ಮಳೆಯ ನಿರಂತರ ಅಭಾವದಿಂದಾಗಿ ಈ ಮಹಾನದಿಯು ಕಣ್ಮರೆಯಾಯಿತೆಂದು ತಿಳಿದುಬರುತ್ತದೆ.

ಆಶ್ಚರ್ಯಕರ ವಿಷಯವೆಂದರೆ ಸರಸ್ವತಿ ನದಿಯು ಕಣ್ಮರೆಯಾಗಿ 4000 ವರ್ಷಗಳ ನಂತರವೂ ಜನರ ಮನಸ್ಸಿನಲ್ಲಿ ಅದರ ನೆನಪು ಮಾಸದೆ ಶೃತಿ, ಸ್ಮೃತಿ ಹಾಗೂ ಧರ್ಮಶಾಸ್ತ್ರಗಳ ಮೂಲಕ ಪರಂಪರಾಗತವಾಗಿ ಮೌಖಿಕವಾಗಿ ಹರಿದುಬಂದಿದೆ.

ಋಗ್ವೇದವು ಮಾನವ ಜನಾಂಗದ ಮೊತ್ತ ಮೊದಲ ಸಾಹಿತ್ಯ ಹಾಗೂ ಧರ್ಮಗ್ರಂಥ ಎಂಬುದು ನಿರ್ವಿವಾದ ವಿಷಯ. ಅದರಲ್ಲಿ ಸರಸ್ವತಿ ನದಿಯ ಬಗ್ಗೆ 74 ಕಡೆಗಳಲ್ಲಿ ಉಲ್ಲೇಖ ಹಾಗೂ ಶ್ಲೋಕಗಳ ಮೂಲಕ ಕಾಣಬಹುದು. ಅವುಗಳಲ್ಲಿ ಎರಡು ಶ್ಲೋಕಗಳನ್ನು ನೋಡೋಣ:

> ಅಂಬೀತಮೇ ನದೀತಮೇ ದೇವೀತಮೇ ಸರಸ್ವತಿ
> ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಂಬ ನಸ್ಕೃಧೀಃ (ಋಗ್ವೇದ 2.41.16)

ಮಾತೆಯರಲ್ಲೇ ಸರ್ವೋತ್ತಮಳೂ, ನದಿಗಳಲ್ಲೇ ಸರ್ವಶ್ರೇಷ್ಠಳೂ, ದೇವಿಯರಲ್ಲೇ ಸರ್ವೋತ್ಕೃಷ್ಟಳೂ ಆದ ಓ ತಾಯೇ, ನಾವು ಅಜ್ಞಾನಿಗಳು. ದಯೆತೋರಿ ನೀನೆಮಗೆ ಜ್ಞಾನ ಮತ್ತು ವಿವೇಕಗಳನ್ನು ದಯಪಾಲಿಸು.

ನದೀ ಸೂಕ್ತ:

> ಗಂಗೇ ಯಮುನೇ ಸರಸ್ವತೀ |
> ಶತುದ್ರಿ ಸ್ತೋಮಗಂ ಸಚತಾ ಪರುಷ್ಣಿಯಾ|
> ಅಸಿಕ್ನಿಯಾ ಮರುದ್ವೃಧೇ ವಿತಸ್ತಯಾರ್ಜಿಕೀಯೇ
> ಶೃಣುಹ್ಯಾಸುಷೋಮಯಾ || (ಋಗ್ವೇದ 10.75.5)

ಹೀಗೆ ಸರಸ್ವತಿಯನ್ನು ವೈದಿಕ ಜನರು ಭೋರ್ಗರೆವ ಜಲರಾಶಿ, ಪ್ರವಾಹಗಳ ತಾಯಿ ಹಾಗೂ ಸರ್ವಶ್ರೇಷ್ಠ ನದಿ ಎಂಬುದಾಗಿ ವರ್ಣಿಸಿದ್ದಾರೆ.

ಹಿಮಯುಗಗಳು ಮತ್ತು ಸರಸ್ವತಿಯ ದುರಾದೃಷ್ಟ

ಅನೇಕ ದಶಲಕ್ಷ ವರ್ಷಗಳಿಂದ ಆರಂಭವಾಗಿ ಇತ್ತೀಚೆಗೆ ಎಂದರೆ, ಪೂರ್ವ ಪ್ರಿಯಾಸ್ ಶಕೆ 50000 ವರ್ಷಗಳಷ್ಟು ಹಿಂದಿನವರೆಗೂ ವಿಸ್ತರಿಸಿದ್ದ ಈ 'ಪ್ಲಿಸ್ಟೋಸೀನ್'-ಯುಗದಲ್ಲಿ ಹಿಮಾಲಯದ ಪರ್ವತಶ್ರೇಣಿಗಳು ತಮ್ಮ ಈಗಿನ ಗಾತ್ರ, ಆಕಾರ ಮತ್ತು ಎತ್ತರವನ್ನು ಹೊಂದಿದವು. ಹೋಲೋಸೀನ್ ಯುಗದ ಅಂತ್ಯದ ಕಾಲಕ್ಕೆ (ಪೂಪ್ರಿ 12500 - 10500) ಪೂರ್ವಭಾಗದ ಯುರೋಪಿನಲ್ಲಿ ಎರಡು ಪ್ರತ್ಯೇಕವಾದ "ಹಿಮಯುಗಗಳೇ ಆಗಿಹೋದವು. ಅವುಗಳೇ -

1. ಪುರಾತನ ಶಕೆ 2, ಪ್ರಿಯಾಸ್ ಶಕೆ

ಸರಸ್ವತಿಯ ಹುಟ್ಟಿಗೆ ಕಾರಣವಾದ "ರೂಪಿನ್-ಸುಪಿನ್" ಮತ್ತು "ಸಮಾದರ್" ಎನ್ನುವ ಹಿಮಗಡ್ಡೆಗಳಿರುವ ಹಿಮಾಲಯದ ಪರ್ವತ ಭಾಗದಲ್ಲಿ ಇದರಿಂದಾಗಿ ಅನೇಕ ಏರುಪೇರುಗಳುಂಟಾಗಿರುವ ಸಂಭವವಿದೆ. ವಾತಾವರಣದ ಉಷ್ಣಾಂಶವು ತೀವ್ರವಾಗಿ ಕುಸಿದು, ಈ ಶೀತಲೀಕರಣದ ಪರಿಣಾಮವಾಗಿ ಹಿಮಾಲಯದ ಹಿಮಗಡ್ಡೆಗಳು ಮತ್ತು ಹಿಮನದಿಗಳು ಘನೀಭವಿಸಿ, ಈ ನದಿಗಳಲ್ಲಿ ಹರಿವು ನಿಂತೇ ಹೋಗಿರುವ ಸಾಧ್ಯತೆಗಳಿವೆ. ಪೂಪ್ರಿ 10500ರ ಸಮಯದಲ್ಲಿ ಹಿಮಯುಗವು ಅಂತ್ಯಗೊಳ್ಳುತ್ತಿದ್ದಂತೆಯೇ ಹಿಮಪಾತವು ಕೊನೆಗೊಂಡು ಹಿಮವು ಕರಗಿ ನೀರಾಗಿ ಈ ನದಿಗಳೆಲ್ಲಾ ಮತ್ತೆ ಹರಿಯತೊಡಗಿರಬಹುದು. ಹೀಗೆ ಈ ನದಿಗಳೆಲ್ಲಾ ಪುನರುಜ್ಜೀವಿತಗೊಳ್ಳತ್ತಿದ್ದಂತೆಯೇ ನದೀತೀರಗಳಲ್ಲಿ ವಾಸವಿದ್ದ ಜನರ ದೈನಂದಿನ ಜೀವನವೂ ಮತ್ತೊಮ್ಮೆ ಎಂದಿನಂತೆ ಪುನರಾರಂಭಗೊಂಡಿರಬೇಕು.

ನಾವೀಗ ಕ್ಷಣಕಾಲ ಋಗ್ವೇದದಲ್ಲಿ ಉಲ್ಲೇಖಿತ ಪೌರಾಣಿಕ ತಥ್ಯಗಳನ್ನೊಮ್ಮೆ ಗಮನಿಸೋಣ. ಚತುರ್ವೇದಗಳಲ್ಲಿ ಅತ್ಯಂತ ಪ್ರಾಚೀನವಾದ ಋಗ್ವೇದದಲ್ಲಿ ಅನೇಕ ಕುತೂಹಲಕಾರಿ ಕಥೆಗಳು ಮತ್ತು ಉಲ್ಲೇಖಗಳು ಅಲ್ಲಲ್ಲಿ ಕಂಡುಬರುತ್ತವೆ. ಅಹಿ ಮತ್ತು ವೃತ್ರರೆಂಬ ಅಸುರರು "ನದಿಗಳನ್ನು ಅಪಹರಿಸಿ ಅವುಗಳ "ಪ್ರವಾಹಕ್ಕೆ ತಡೆಯೊಡ್ಡಿದರು" ಎಂದಿದೆ. ಅತ್ಯಂತ ಗಾಢವಾದ ಮತ್ತು ಗೂಢವಾದ ಸಾಂಕೇತಿಕ ಅರ್ಥವನ್ನು ಹೊಂದಿರುವ ಈ ಶ್ಲೋಕಗಳನ್ನು ಸ್ಥೂಲವಾಗಿ ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ, ಈ ಶ್ಲೋಕಗಳು ನಿಜವಾಗಲೂ ಏನನ್ನು ಹೇಳಬಯಸುತ್ತವೆ? ತ್ರಯೀ ಎಂದು ಕರೆಸಿಕೊಳ್ಳುವ ವೇದವಾಕ್ಕುಗಳಿಗೆ ಅನೇಕ ಸಾಂಕೇತಿಕ ಅರ್ಥಗಳಿವೆ ಎಂದು ಹೇಳಲಾಗಿದೆ.

ಆದರೆ, ಪುರಾಣಗಳಲ್ಲಿ ಹೇಳಲಾದ ಈ ಘಟನೆಗಳು ಸತ್ಯಕ್ಕೆ ಹತ್ತಿರವಿದ್ದಂತೆ ಕಂಡುಬರುತ್ತದೆ. ಈ ಕುತೂಹಲಕರವಾದ ವೇದವಾಕ್ಯಗಳು ಹೇಳಬಯಸುವುದೇನನ್ನು? ಜಲ ರಾಕ್ಷಸರು ನದಿಗಳನ್ನು ಅಪಹರಿಸಿದರು ಹಾಗೂ ನದಿಗಳ ಪ್ರವಾಹವನ್ನು ನಿಲ್ಲಿಸಿದರು ಎನ್ನುವಲ್ಲಿ ಯಾವ ಗೂಢಾರ್ಥವಿದೆ? ಗೋವುಗಳನ್ನು (ಬಾಳಿನ ಬೆಳಕಿನ ಕಿರಣಗಳು) ದೈತ್ಯರು ಅಪಹರಿಸಿ ಪರ್ವತಗಳ ಬಂಡೆಗಳ ಹಿಂದೆ ಅಡಗಿಸಿಟ್ಟರು ಎನ್ನುವ ಮಾತುಗಳ ಮೂಲಕ ಅವರು ಏನನ್ನು ಹೇಳಬಯಸಿದ್ದರು?

ಋಗ್ವೇದದ ದೃಷ್ಟಾರರು ಹಿಮಯುಗದ ಶೀತಲೀಕರಣದ ಕಾರಣ ಸರಸ್ವತಿ ನದಿಯಲ್ಲಿ ನೀರಿನ ಹರಿವು ನಿಂತು ಹೋಗಿದ್ದನ್ನೇ, ರಾಕ್ಷಸರಾದ ಅಹಿ ಮತ್ತು ವೃತ್ರಾಸುರರು ನದಿಗಳ ನಿರಂತರವಾದ ಜಲಪ್ರವಾಹಕ್ಕೆ ಅಡ್ಡಿಪಡಿಸಿದರೆಂದು ಹೇಳಿದ್ದಾರೆ ಎಂದು ಪ್ರೊಫೆಸರ್ ದಾಮ್ಲೆಯವರು ವರ್ಣಿಸಿದ್ದಾರೆ. ಹಿಮಾಲಯದಿಂದ ಪಶ್ಚಿಮದ ಸಮುದ್ರದವರೆಗೂ ಮುಕ್ತವಾಗಿ ಸದಾಕಾಲ ಹರಿಯುತ್ತಿದ್ದ ನದಿಯ ಜೀವಜಲ ಪ್ರವಾಹವು ಒಂದೊಮ್ಮೆ ಅಚಾನಕ್ಕಾಗಿ ನಿಂತುಹೋಯಿತು ಎಂಬುದನ್ನು ತಾವು ಕಂಡಂತೆಯೇ ಅವರು ಸಂಕಲಿಸಿದ್ದಾರೆ ಎಂದು ಹೇಳಬಹುದು. ಜೀವ

ನೀಡುವ ಗೋವುಗಳನ್ನು ಅಸುರರು ಅಪಹರಿಸಿ ಪರ್ವತಗಳ ಬಂಡೆಗಳ ಹಿಂದೆ ಬಂಧಿಸಿಟ್ಟರು ಎಂದು ಈ ಘಟನೆಯನ್ನೇ ಹೀಗೆ ಅರ್ಥೈಸಿ ಹೇಳಿರಬಹುದು. ತನ್ನ ಗುಡುಗು ಸಿಡಿಲು ಮತ್ತು ಮಂತ್ರಶಕ್ತಿಯ ಸಹಾಯದಿಂದ ದೇವರಾಜ ಇಂದ್ರನು ಇವುಗಳನ್ನು ಬಂಧನದಿಂದ ಬಿಡಿಸಿದನು ಎಂದೂ ಉಲ್ಲೇಖವಿದೆ. ನದಿಗಳು ಸ್ವಾಭಾವಿಕವಾಗಿ ಸಮುದ್ರದ ಕಡೆಗೆ ಪ್ರವಹಿಸುವುದಕ್ಕೆ ಅಡ್ಡಿಪಡಿಸುವ ಮತ್ತು ನದಿಗಳನ್ನು ಅಪಹರಿಸುವ ಕುರಿತು ಇತರೆಡೆಗಳಲ್ಲಿ ಇನ್ನೂ ಅನೇಕ ಉಲ್ಲೇಖಗಳಿವೆ. ಬಾಹ್ಯರೂಪದಲ್ಲಿ ಇವು ಮಕ್ಕಳಾಟಿಕೆಯ ಬಾಲಿಶ ಮಾತುಗಳಂತೆ ಕಂಡುಬಂದರೂ, ಈ ಪ್ರಾಚೀನ ಸಾಹಿತ್ಯವನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಅಂದಿನ ಜನರು ತಾವು ಕಂಡ ಭೌಗೋಳಿಕ ವಿಪ್ಲವಗಳು ಮತ್ತು ಮಹತ್ವದ ಬದಲಾವಣೆಗಳ ಕುರಿತು ಪ್ರಾಮಾಣಿಕವಾಗಿ ಕಂಡಿದ್ದನ್ನು ಕಂಡಂತೆಯೇ ವಿವರಿಸಿದ್ದಾರೆನ್ನುವುದು ಕಂಡುಬರುತ್ತದೆ.

ಪ್ರೊ.ದಾಮ್ಲಯವರು ಹೇಳುವಂತೆ ಈ ಮಹತ್ವದ ಭೌಗೋಳಿಕ ವಿದ್ಯಮಾನಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಋಗ್ವೇದದ ಕಾಲಮಾನವು ಸರಿಸುಮಾರು BP 10500 ವರ್ಷಗಳಷ್ಟು ಹಿಂದಕ್ಕೆ ಹೋಗುವುದಂತೂ ಖಚಿತ.

ಮತ್ತೊಂದು ವಿಷಯವೆಂದರೆ, ಸರಸ್ವತಿ ನದೀತೀರದಲ್ಲಿದ್ದ ಭಿರಾನಾ ಪಟ್ಟಣದಲ್ಲಿ ದೊರೆತ ಅವಶೇಷಗಳ ಪ್ರಾಯೋಗಿಕ ಕಾರ್ಬನ ಡೇಟಿಂಗ್ ವಯೋಮಾನ ನಿರ್ಧಾರದ ಪ್ರಕಾರ, ಆ ಕಾಲವು ಇಂದಿನಿಂದ ಸುಮಾರು 9,500 ವರ್ಷಗಳಿಗೂ ಹಿಂದಿನದ್ದೆಂದು ತಿಳಿದುಬರುತ್ತದೆ. ಕಟ್ಟಕೊನೆಯ ಹಿಮಯುಗವು ಅಂತ್ಯಗೊಂಡು, ನದಿಗಳಲ್ಲಿ ಹೆಪ್ಪುಗಟ್ಟಿದ್ದ ಹಿಮವು ನಿಧಾನವಾಗಿ ಕರಗುತ್ತಾ ಮತ್ತೆ ಭೋರ್ಗರೆವ ಪ್ರವಾಹೋಪಾದಿಯಲ್ಲಿ ಈ ನದಿಗಳು ಹರಿಯಲಾರಂಭಿಸಿದ ಕಾಲಮಾನಕ್ಕೂ, ಭಿರಾನಾ ಪಟ್ಟಣದ ವಯೋಮಾನಕ್ಕೂ ಸರಿಯಾಗಿ ಹೊಂದಾಣಿಕೆಯಾಗುತ್ತದೆ.

ದೇವತೆಗಳ ರಾಜ ಇಂದ್ರನು ತನ್ನ ಅರಿಭಯಂಕರವಾದ ಗುಡುಗು-ಸಿಡಿಲುಗಳ ಪ್ರಭಾವದಿಂದ ತಡೆಹಿಡಿಯಲ್ಪಟ್ಟಿದ್ದ ನದಿಗಳ ಪ್ರವಾಹವನ್ನು ಸೆರೆಬಿಡಿಸಿದನು ಎನ್ನಲಾದ ಋಗ್ವೇದದ ಸಾಲುಗಳು, ಮೇಲ್ಕಂಡ ಭೌಗೋಳಿಕ ವಿದ್ಯಮಾನಗಳನ್ನು ಆ ಕಾಲದ ಋಷಿಗಳು ಯಥಾವತ್ತಾಗಿ ತಾವು ಕಂಡಂತೆಯೇ, ತಮ್ಮ ರಹಸ್ಯ ಕಾವ್ಯಾತ್ಮಕ ಭಾಷೆಯಲ್ಲಿ ವ್ಯಕ್ತಪಡಿಸಿದ್ದರು ಎನ್ನಬಹುದು.

ಈ ಮಾತನ್ನು ಕೇವಲ ಕಾಲ್ಪನಿಕ ಸಿದ್ಧಾಂತದಂತೆ ಹೇಳಬಹುದೇ ಹೊರತು ಇದನ್ನು ಪ್ರಾಯೋಗಿಕವಾಗಿ ದೃಢೀಕರಿಸುವ ಪುರಾವೆಗಳು ದೊರೆಯಬೇಕಷ್ಟೆ. ಆದರೆ ಋಗ್ವೇದದಲ್ಲಿ ವರ್ಣಿತವಾದಂತೆ, ಮೈದುಂಬಿ ಹರಿಯುತ್ತಿದ್ದ ನದಿಗಳ ಪ್ರವಾಹವು ದಿಢೀರನೇ ಎಂಬಂತೆ ಅಕಾರಣವಾಗಿ ನಿಂತುಹೋಗುವುದು ಮತ್ತು ತದನಂತರದಲ್ಲಿ ಮೃತ ಸಂಜೀವಿನಿಯಿಂದ ಸತ್ತವರು ಒಮ್ಮಿಂದೊಮ್ಮೆಲೇ ಎದ್ದು ಬಂದಂತೆ ಈ ನದಿಗಳೆಲ್ಲಾ ಮತ್ತೊಮ್ಮೆ ಪುನಶ್ಚೇತನಗೊಂಡು ಭೋರ್ಗರೆದು ಪ್ರವಹಿಸುವುದು, ಇವುಗಳನ್ನು ಕೇಳಿದರೆ ಯಾರಿಗೂ ಒಮ್ಮೆ ರೋಮಾಂಚನವಾಗದಿರದು. ಅನೇಕ ಬಾರಿ ತನ್ನ ಮಾರ್ಗವನ್ನು ಬದಲಿಸಿ, ಹಲವು ದುರಂತಗಳನ್ನು ತನ್ನ ದುರಾದೃಷ್ಟಕರ ಜೀವನದಲ್ಲಿ ಕಂಡ ಸರಸ್ವತಿ ನದಿಯ ಕುರಿತು ಅಂದಿನ ಋಷಿಗಳು ಏನು ಹೇಳಬಯಸಿದ್ದರು?

ಹಿಮಯುಗದ ಶೀತಲೀಕರಣದ ಪ್ರಕ್ರಿಯೆಯಿಂದಾಗಿ ಆಗಾಗ ಹೆಪ್ಪುಗಟ್ಟುವ ನದಿಯ ಪ್ರವಾಹ, ಭೂಪದರಗಳ ಅದುರುವಿಕೆಯಿಂದಾಗಿ ನದಿಯ ಪಥದಲ್ಲಾದ ಅಭೂತಪೂರ್ವ ಬದಲಾವಣೆ, ಭೂಕಂಪನಗಳಿಂದಾಗಿ ಉಂಟಾದ ಭಾರೀ ಬಿರುಕು ಹಾಗೂ ಕಂದಕಗಳು ನದಿಯ ಪ್ರವಾಹಕ್ಕೆ ಅಡ್ಡಿಪಡಿಸಿ ಅಖಂಡವಾಗಿ ಹರಿಯುತ್ತಿದ್ದ ನದಿಯನ್ನು ತುಂಡು ತುಂಡಾಗಿಸಿ ಅಸಂಖ್ಯ ಕೆರೆ, ಕೊಳ, ಸರೋವರಗಳ ಮಾಲೆಯನ್ನಾಗಿ ಬದಲಿಸಿದ ಎಲ್ಲಾ ವಿದ್ಯಮಾನಗಳನ್ನೂ ಸರಸ್ವತಿ ನದಿಯು ತನ್ನ ಜೀವನದಲ್ಲಿ ಕಂಡಿದೆ. ಈ ಜೀವನದಿಯ ಬದುಕಿನಲ್ಲಾದ

ಏರುಪೇರು ಮತ್ತು ಏಳುಬೀಳುಗಳು, ನದಿಯ ಹುಟ್ಟಿನಿಂದ ಅಂತ್ಯದವರೆಗಿನ ಅನೇಕ ಭೌತಿಕ ಮಾರ್ಪಾಡುಗಳು, ಪುರಾಣದಲ್ಲಿ ಪದೇ ಪದೇ ಉಲ್ಲೇಖವಾದ ದೇವಾಸುರ ಸಂಗ್ರಾಮದ ಹೊಸದೊಂದು ಆಯಾಮವೊಂದನ್ನು ನಮ್ಮೆದುರಿಗೆ ತೆರೆದಿಡುತ್ತದೆ. ಜೀವನಕ್ಕೆ ಪೂರಕವಾದ ಬೆಳಕು ನೀಡುವ ದೈವಿಕ ಶಕ್ತಿಗಳು ಮತ್ತು ಜೀವನ ವಿರೋಧಿಯಾದ ವಿನಾಶ ಮತ್ತು ಕತ್ತಲೆಯನ್ನೇ ತರುವ ಆಸುರೀ ಶಕ್ತಿಗಳ ನಡುವಿನ ಈ ಹೋರಾಟವು ಬದುಕಿನ ಅನೇಕ ಸ್ತರಗಳಲ್ಲಿ (ಅಂತರಂಗ ಮತ್ತು ಬಹಿರಂಗಗಳಲ್ಲಿ) ನಿರಂತರವಾಗಿ ನಿತ್ಯವೂ ನಡೆಯುತ್ತಿರುವ ಸಹಜ ಪ್ರಕ್ರಿಯೆ. ಇದರ ಹೊಸದೊಂದು ಆವರ್ತನವನ್ನು ವೈದಿಕ ಋಷಿಗಳು ಈ ರೀತಿ ಭೌಗೋಳಿಕ ಸನ್ನಿವೇಶಗಳಿಗೆ ರೂಪಕವನ್ನಾಗಿ ತಿಳಿದು ವರ್ಣಿಸಿದರೋ ಎಂಬಂತೆ ಕಂಡುಬರುತ್ತದೆ,

ಈ ಪ್ರಾಕೃತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮೇಲ್ಕಂಡ ಪೌರಾಣಿಕ ನಿರೂಪಣೆಗಳಿಗೆ ಹೊಚ್ಚಹೊಸ ಅರ್ಥ ಮತ್ತು ಆಯಾಮಗಳು ಹುಟ್ಟಿಕೊಳ್ಳುತ್ತವೆ. ವೇದಗಳಲ್ಲಿ ವರ್ಣಿಸಲ್ಪಟ್ಟ ಆಧ್ಯಾತ್ಮಿಕ ಮತ್ತು ಪೌರಾಣಿಕ ಕಲ್ಪನೆಗಳಿಗೆ, ನದಿಯೊಂದು ತನ್ನ ಜೀವನದಲ್ಲಿ ಹುಟ್ಟು ಸಾವುಗಳ ನಡುವೆ ಅನುಭವಿಸಿದ ವೈಪರೀತ್ಯಗಳೇ ಮೂಲ ಕಾರಣವಾಗಿರಬಹುದೇ?

ಋಗ್ವೇದದ ವರ್ಣನೆಗಳು ನೀಡುವ ಕಾಲ್ಪನಿಕವೆನ್ನಿಸುವ ನಿರೂಪಣೆಯ ಚಿತ್ರಣವು ಅದೆಷ್ಟು ಮಾರ್ಮಿಕ ಮತ್ತು ನೈಜವಾಗಿದೆ ಎಂದರೆ, ಬೃಹತ್ ಮಹಾನದಿಯಾದ ಸರಸ್ವತಿಯ ಬದುಕಿನಲ್ಲಿ ಘಟಿಸಿದ ಅನಾಹುತಗಳಿಗೆ ಇದು ಬೇರೊಂದು ಹೊಸ ಅರ್ಥವನ್ನೇ ಕೊಡುವಂತಿದೆ. ತಮ್ಮ ಜೀವನ, ಕೃಷಿ ಹಾಗೂ ಉನ್ನತಿಯನ್ನು ಆಧರಿಸಿ ನಿಂತ ಜೀವನದಿಯ ಬದುಕಿನ ಏರುಪೇರುಗಳು ಅಂದಿನ ಜನರ ಮೇಲೆ ಅದೆಷ್ಟು ಆಳವಾದ ಪರಿಣಾಮವನ್ನು ಬೀರಿರಬೇಡ? ಮೊದಮೊದಲು ಭೀಕರ ಜಲಪ್ರವಾಹ ಮತ್ತು ಕಟ್ಟಕಡೆಯಲ್ಲಿ ದಾರುಣ ಜಲಕ್ಷಾಮ, ಹೀಗೆ ತಮ್ಮ ಬದುಕಿನಲ್ಲಿ ಈ ರೀತಿಯ ಅನೇಕ ವಿಪರೀತಗಳನ್ನು ಕಂಡು ಅನುಭವಿಸಿದ ಸರಸ್ವತಿ ನದೀತೀರದ ಜನರ ಬದುಕು ಇನ್ನೂ ಅದೆಷ್ಟು ಏರುಪೇರುಗಳನ್ನು ಕಂಡಿತ್ತೋ? ಈ ಎಲ್ಲಾ ಪ್ರಾಕೃತಿಕ ಅನಾಹುತಗಳನ್ನು ಭಯ ಮತ್ತು ಆಶ್ಚರ್ಯಗಳಿಂದ ಕಂಡು ಅನುಭವಿಸಿದ ವೈದಿಕ ಕಾಲದ ಋಷಿಗಳು ಅದನ್ನು ಋಗ್ವೇದದ ಶ್ಲೋಕಗಳಲ್ಲಿ ಯಥಾವತ್ತಾಗಿ ವರ್ಣಿಸಿದ್ದಾರೆನ್ನಬಹುದು. ಪುರಾಣವು ಐತಿಹಾಸಿಕ ಸಾಕ್ಷಿಯಾಗುವುದು ಹೀಗೆ, ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವ ದೃಷ್ಟಿಕೋನವಿರಬೇಕು, ಅಷ್ಟೆ

(ಸರಸ್ವತಿ ನದಿಯ ಉಗಮ, ಉಚ್ಛ್ರಾಯ ಸ್ಥಿತಿ, ನಾಗರಿಕತೆ, ಅವನತಿಗಳ ಬಗ್ಗೆ ಹೆಚ್ಚಿನ ಮಾಹಿತಿಗೆ ಪ್ರತಿಯೊಬ್ಬರೂ ಓದಲೇಬೇಕಾದ ಉಪಯುಕ್ತ ಕೃತಿ - ಸರಸ್ವತಿ ನಾಗರಿಕತೆ - ಆಂಗ್ಲ ಮೂಲ - ಜೆ.ಡಿ. ಭಕ್ಷಿ - ಕನ್ನಡದಲ್ಲಿ ಡಾ.ಸಿ.ಜಿ. ರಾಘವೇಂದ್ರ ವೈಲಾಯ - ಮೊದಲ ಮುದ್ರಣ 2021 - ಬೆಲೆ ರೂ.399/-; ಪುಸ್ತಕಕ್ಕಾಗಿ ಸಂಪರ್ಕಿಸಿ : ಸಾಹಿತ್ಯ ಭಾರತಿ - ವಾಟ್ಸಾಪ್ ಸಂಖ್ಯೆ - 7483681708.)

ಪುಸ್ತಕ ಪರಿಚಯ

ವಿಸ್ಮಯದಾಗರ ‘ವ್ಯೋಮ ವಿಸ್ಮಯ ಮಂಡಲ’

(ಶ್ರೀ ಕೆ.ಆರ್.ಎಸ್. ಮೂರ್ತಿಯವರ ವೈಜ್ಞಾನಿಕ ಕಾದಂಬರಿ)

– **ಬೆಂ.ಶ್ರೀ. ರವೀಂದ್ರ**

ಶ್ರೀ ಕೆ.ಆರ್.ಎಸ್. ಮೂರ್ತಿಯವರು ನಮ್ಮ ವೇದಿಕೆಯ ಪ್ರತಿಭಾವಂತ ಬರಹಗಾರರು. ’ಆಡು ಮುಟ್ಟದ ಸೊಪ್ಪಿಲ್ಲ’ ಎಂಬಂತೆ ಶ್ರೀಯುತರು ಸಾಹಿತ್ಯ, ಸಂಗೀತ, ಚಿತ್ರಕಲೆಗಳಲ್ಲಿ ತಮ್ಮ ಸೃಜನಾತ್ಮಕ ಪ್ರತಿಭೆಯನ್ನು ಮೆರೆದಿದ್ದಾರೆ. ಮೂಲತಃ ವಿಜ್ಞಾನದ ವಿದ್ಯಾರ್ಥಿಯಾದ ಮೂರ್ತಿಯವರು ಕನ್ನಡದಲ್ಲಿ ಅಪರೂಪವೆನ್ನಿಸುತ್ತಿರುವ ವೈಜ್ಞಾನಿಕ ಕಾದಂಬರಿ ಪ್ರಕಾರದಲ್ಲಿ, “ವ್ಯೋಮ ಮಂಡಲ ವಿಸ್ಮಯ” ವನ್ನು ರಚಿಸಿರುವುದು ಹೊಸ ಬೆಳಕನ್ನು ತೋರಿದೆಯೆಂದರೆ ತಪ್ಪಾಗಲಾರದು. ಈಗ ‘ಸಮನ್ವಯ ಸಮಿತಿ ಕನ್ನಡವೇ ಸತ್ಯ’ ವೇದಿಕೆಯಲ್ಲಿ ಪುನಃ ಪ್ರಸ್ತುತವಾಗುತ್ತಿರುವ ’ಹವಳ ದ್ವೀಪದ ಹೊನ್ನು’, ಕುತೂಹಲಭರಿತ ಪತ್ತೇದಾರಿ ಕಾದಂಬರಿಯ ಮೂಲಕ ಎಲ್ಲರ ಮನಸ್ಸನ್ನು ಗೆದ್ದವರು. ’ಹವಳ ದ್ವೀಪದ ಹೊನ್ನು’ ಕಾದಂಬರಿಯು ‘ತರಂಗ’ದಲ್ಲಿ ಧಾರಾವಾಹಿಯಾಗಿ ಕನ್ನಡದ ಜನಮನವನ್ನು ಗೆದ್ದಿದ್ದು ವೇದಿಕೆಗೆ ಭೂಷಣವಾಯ್ತು. ಇದರ ಇ-ಬುಕ್ ಆವೃತ್ತಿ - "ಮೈಲ್ಯಾಂಗ್" ಅಂತರ್ಜಾಲ ವೇದಿಕೆಯಲ್ಲಿ ಲಭ್ಯವಿದೆ.

ವೈಜ್ಞಾನಿಕ ಕಾದಂಬರಿಯನ್ನು ಶುದ್ಧ ಕಲ್ಪನೆಯಲ್ಲಿ ಬರೆಯಲು ಸಾಧ್ಯವಿಲ್ಲ. ನಾವು ಕಂಡ, ಅನುಭವಿಸಿದ ಸಂಗತಿಗಳ ಹಂದರಕ್ಕೆ ಕಲ್ಪನೆಯ ತಂತುಗಳನ್ನು ಬಿಗಿದು, ಭಾವದ, ಘಟನೆಗಳ ರಕ್ತ ಮಾಂಸಗಳನ್ನು ತುಂಬಿ ಬರೆಯಲು ಆಗುವುದಿಲ್ಲ. ವಿಜ್ಞಾನದ ಹಿನ್ನೆಲೆಯೊಂದಿಗೆ ಆಧುನಿಕ ಬೆಳವಣಿಗೆ, ಆವಿಷ್ಕಾರಗಳ ಸತತ ಗಟ್ಟಿ ಅಧ್ಯಯನದಿಂದ ಗಳಿಸಿದ ಮುನ್ನೋಟ ಬಹಳ ಮುಖ್ಯವಾಗುತ್ತದೆ. ಇಂತಹ ಹಿನ್ನೆಲೆ ಮತ್ತು ಓದಿನ ತುಡಿತ ಹಾಗೂ ಸಾಹಿತ್ಯದ ಬರಹಗಳು ಮೂರ್ತಿಯವರ ಶಕ್ತಿಯಾಗಿವೆ, ೧೯೭೫ ರಲ್ಲಿ ಸ್ವಯಂಚಲಿ ವಿಭಾಗದಲ್ಲಿ ಕಂಪ್ಯೂಟರ್ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಮೂರ್ತಿ, ಸಿಂಗಪುರದ ನ್ಯಾಷನಲ್ ಯುನಿವರ್ಸಿಟಿ ಆಫ್ ಸಿಂಗಪೂರ್, ನಾನ್ಯಂಗ್ ಟೆಕ್ನಲಾಜಿಕಲ್ ಯುನಿವರ್ಸಿಟಿಗಳಲ್ಲಿ ಕಂಪ್ಯೂಟರ್ ವಿಜ್ಞಾನ, ಸಂವಹನ ಮತ್ತು ತಂತ್ರಾಶ ಇಂಜಿನಿಯರಿಂಗ್ ವಿಭಾಗಳ ಮುಖ್ಯಸ್ಥರಾಗಿ ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿನ ಹಲವಾರು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಲ್ಲಿ ಹಿರಿಯ ಹುದ್ದೆಗಳನ್ನು ನಿರ್ವಹಿಸಿ ೨೦೧೬ರಲ್ಲಿ ನಿವೃತ್ತರಾಗಿ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಖೇಚರ ವಿಹಾರ, ನೀಲಗಗನ, ಮಿನುಗುತಿದೆ ನಕ್ಷತ್ರ, ಇವರ ಕವನ ಸಂಕಲನಗಳು. ಹವಳ ದ್ವೀಪದ ಹೊನ್ನು ಹಾಗೂ ವ್ಯೋಮ ವಿಸ್ಮಯ ಮಂಡಲ ಇವರ ಕಾದಂಬರಿಗಳು. ಕಸ್ತೂರಿ, ತರಂಗ ಹಾಗೂ ಹಲವು ಅಂತರ್ಜಾಲ ಪತ್ರಿಕೆಗಳಲ್ಲಿ ಮೂರ್ತಿಯವರ ಬರಹ/ಕವನಗಳು ಪ್ರಕಟಗೊಂಡಿವೆ.

ಸಾಮಾನ್ಯವಾಗಿ ಮನುಷ್ಯನಿಗೆ ಹುಟ್ಟಿನಿಂದ ಎರಡು ಪ್ರಶ್ನೆಗಳು ಕಾಡುತ್ತವೆ. ಈ ಎರಡಕ್ಕೂ ಉತ್ತರ ಸಿಗುತ್ತಿಲ್ಲ. ನಾನು ಯಾರು? ಏನೀ ಜಗತ್ತು?. ಕಣ್ಣು ತೆರೆದರೆ ಅಖಂಡ ಆಕಾಶ ಕಾಣುತ್ತದೆ. ನಾನು ಅಲ್ಲಿಂದ ಬಂದೆನೆ, ಅಲ್ಲೇನಿದೆ ಎಂಬ ಕಾಡುವಿಕೆ ನಿರಂತರ. ಜೊತೆಗೆ, ಆಕಾಶದ ನಿಗೂಢಗಳು ನಾವು ಬೆಳಯುತ್ತಿರುವಂತೆ ವಿಸ್ತಾರವಾಗುತ್ತವೆ. ಖಗೋಳ ವಿಜ್ಞಾನವು ನಮ್ಮ ದಾಹಕ್ಕೆ ತಂಪೆರೆಯಲು ಯತ್ನಿಸಿದೆ. ಆದರೆ ಭೂಮಿ ಮತ್ತು ಸೂರ್ಯನಾಚೆಯ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ. ಮೂರ್ತಿಯವರಿಗೂ ಗಗನವು ಪ್ರಿಯವಾಗಿದೆ. ಅವರ ಐದು ಪುಸ್ತಕಗಳಲ್ಲಿ ನಾಲ್ಕು ಗಗನವನ್ನೆ ಸೂಚಿಸುತ್ತಿದೆ.

ವೈಜ್ಞಾನಿಕ ಕಾದಂಬರಿಯ ಓದುಗನಿಗೆ, ಕಥೆಗೆ ಸಂಬಂಧಿಸಿದ ವಿಷಯದ ಬಗ್ಗೆ ಆಳವಾದ ಅರಿವಿನ ಅವಶ್ಯಕತೆಯಿಲ್ಲ. ಕುತೂಹಲದೊಂದಿಗೆ ವೈಜ್ಞಾನಿಕ ಮನೋಧರ್ಮವಿದ್ದರೆ ಕಥೆಯ ರಸವನ್ನು ಗ್ರಹಿಸಬಹುದು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿದ್ದ ಶ್ರೀ ರಾಜಶೇಖರ ಭೂಸನೂರಮಠ ಅವರು ಈ ಪ್ರಕಾರವನ್ನು ಜನಪ್ರಿಯಗೊಳಿಸಿದರು. ಶ್ರೀ ಜಿ.ವಿ. ಗಣೇಶಯ್ಯ ಮೊದಲಾದವರು ಕುತೂಹಲವನ್ನು ಕಾದಿರಿಸಿದ್ದಾರೆ. ಮೂರ್ತಿಯವರಿಗೆ ಈ ಕ್ಷೇತ್ರದಲ್ಲಿ ಅವಕಾಶ ವಿಫುಲವಾಗಿದೆ.
ಅನ್ಯಗ್ರಹ ಜೀವಿಯೊಂದಿಗೆ ಮುಖಾಮುಖಿಯಾಗುವ ಈ ಕಥೆಯು ನಾಲ್ಕು ಸ್ಥಳಗಲ್ಲಿ ನಡೆಯುತ್ತದೆ. ನಾಗಪುರ, ಕಾರವಾರ, ದೆಹಲಿ ಮತ್ತು ಪಪುವಾ ನ್ಯೂಗಿನಿಯಾ ದೇಶದಲ್ಲಿ.

ಆರಂಭವೇ ನಿಗೂಢತೆಗೆ ನಮ್ಮನ್ನು ತಳ್ಳುತ್ತದೆ. ಅತಿ ಎತ್ತರದ ಹಾರಾಟದಲ್ಲಿ ಕುಶಲ, ವಿಂಗ್ ಕಮಾಂಡರ್ ಸಂದೀಪ್ ಭಾರ್ಗವ, ನಾಗಪುರ ವಾಯುನಲೆಯಲ್ಲಿ ಪರೀಕ್ಷಾರ್ಥವಾಗಿ ಅತ್ಯಾಧುನಿಕ ತಂತ್ರಜ್ಞಾನದ ಬೋಲ್ಟ್ ೨೨೦ ವಿಮಾನ ಹಾರಾಟ ಮಾಡುತ್ತಿರುವಾಗ, ಹಾರುವ ತಟ್ಟೆಯಂತೆ ಕಾಣುವ ಬಹಳ ದೊಡ್ಡದಾದ ಅಂತರಿಕ್ಷ ನೌಕೆಯೊಂದು ಅವನ ವಿಮಾನವನ್ನು ಅಟಕಾಯಿಸುತ್ತದೆ. ಅವನ ಮಾತನ್ನು ಏರ್ವೈಸ್ ಮಾರ್ಷಲ್ ನಿರಂಜನ್ ಧಿಫೆ, ಆ ಏರ್ಬೇಸ್ ಮುಖ್ಯಸ್ಥರು ನಂಬುವುದಿಲ್ಲ. ಆದರೆ ಮನೆಗೆ ಹಿಂತಿರುಗುವ ದಾರಿಯಲ್ಲಿ ಸಂದೀಪ್ ಕಾಣೆಯಾಗುತ್ತಾನೆ. ಸಮೀಪದ ಹೊಲದಲ್ಲಿ ಕಾಣುವ ವೃತ್ತಾಕಾರದ ಗುರುತುಗಳು, ರಸ್ತೆ ಬದಿಯಲ್ಲಿ ಅನಾಥವಾಗಿ ನಿಂತ ಸಂದೀಪನ ಜೀಪು ಆತಂಕವನ್ನು ಹುಟ್ಟಿಸುತ್ತದೆ.

ಇಲ್ಲಿಂದ, ಕಥೆಯು ಕಾರವಾರದ ಭಾರತದ ಅತ್ಯಾಧುನಿಕ 'ವರಹಾಮಿಹಿರ ಅಂತರಿಕ್ಷ ಖಗೋಳ ವೀಕ್ಷಣಾಲಯ'ಕ್ಕೆ ಬದಲಾಗುತ್ತದೆ. ವೀಕ್ಷಣಾಲಯದ ಉದ್ಘಾಟನಾ ಕಾರ್ಯಕ್ರಮಕ್ಕೆ ಸಿದ್ದತೆಯಾಗುತ್ತಿರುವಂತೆ ದೆಹಲಿಯಿಂದ ಭದ್ರತಾಧಿಕಾರಿ {ಈ ವಿಷಯ ರಹಸ್ಯ} ದಯಾನ ಬರುತ್ತಾಳೆ. ಅಲ್ಲಿ ಡಾ ರಾವ್, ಮುಖ್ಯಸ್ಥರು ಹಾಗೂ ಡಾ ವಸಂತ ಕುಮಾರ್, ಡಾ ಅನನ್ಯ ದೇಶಪಾಂಡೆ, ಡಾ ಉದಯ್ ಮೆನನ್, ಡಾ ಗೌತಮ್ ಚಟರ್ಜಿ... ಮುಂತಾದವರು ವಿಜ್ಞಾನಿಗಳು, ತಂತ್ರಜ್ಞ ಮಧುಕರ್ ಮತ್ತು ಹಣಕಾಸು ವಿಭಾಗದಲ್ಲಿ ಜಗದೀಪ್ ಇರುತ್ತಾರೆ. ಕಾದಂಬರಿಕಾರರು ಇಲ್ಲಿ ಮುಖ್ಯ ಕಥಾಧಾರೆಯೊಂದಿಗೆ ಜಗದೀಪ್, ಮಧುಕರ್ ಹಾಗೂ ದಯಾನರನ್ನು ಒಳಗೊಂಡಂತೆ ಕೆಲವು ನಾಟಕೀಯ ಸನ್ನಿವೇಶಗಳನ್ನು, ಘಟನೆಗಳನ್ನು ಬಹಳ ಸಮರ್ಥವಾಗಿ ತಂದಿದ್ದಾರೆ.

ವೀಕ್ಷಣಾಲಯದ ವಿಜ್ಞಾನಿಗಳು ಅಂತರಿಕ್ಷದಿಂದ ಬರುವ ಸಂದೇಶಗಳನ್ನು ವಿಶ್ಲೇಷಣೆ ಮಾಡುತ್ತಿರುತ್ತಾರೆ. ಆಗ ಕೆಲವು ವಿಶೇಷ ಸಂದೇಶಗಳು ಗುರುಗ್ರಹದ ಯುರೋಪಾ ಮತ್ತು ಕಾಲಿಸ್ಟೊ ಉಪಗ್ರಹಗಳ ಸಮೀಪದಿಂದ ಕೆಲವು ಸಂಕೇತಾಕ್ಷರ ರೂಪದಲ್ಲಿ ಬರುತ್ತಿರುತ್ತವೆ. ವಿಜ್ಞಾನಿಗಳು ಅವುಗಳನ್ನು ಓದಿ, ಕಾರವಾರದ ಸಮೀಪ ಅನ್ಯಗ್ರಹ ಜೀವಿಗಳು ಸಣ್ಣ ಅಂತರಿಕ್ಷ ನೌಕೆಯನ್ನು ಇಳಿಸಿರುವ ಸೂಚನೆಯನ್ನು ಗ್ರಹಿಸುತ್ತಾರೆ. ದೆಹಲಿಯ ಸಚಿವಾಲಯದಲ್ಲಿ ಚರ್ಚೆಯಾಗಿ ಈ ನೌಕೆಯನ್ನು ಕರಾವಳಿ ಪ್ರದೇಶದಲ್ಲಿ ಹುಡುಕಲು ಒಪ್ಪಿಗೆಯನ್ನು ಪಡೆಯಲಾಗುತ್ತದೆ. ನೌಕೆಯೂ ಸಿಕ್ಕುತ್ತದೆ. ಅದನ್ನು ಕಾರವಾರದ ವೀಕ್ಷಣಾಲಯಕ್ಕೆ ರಹಸ್ಯವಾಗಿ ಸಾಗಿಸಲಾಗುತ್ತದೆ. ಹಲವಾರು ಸುತ್ತಿನ ಚರ್ಚೆಗಳು ನಡೆಯುತ್ತವೆ. ವಿಜ್ಞಾನಿಗಳ ಚತುರತೆ, ನಡುವೆ ನಡೆಯುವ ಮಾನವೀಯ ಭಾವನೆಗಳ ತಾಕಲಾಟ, ಪ್ರತಿಯೊಬ್ಬರಲ್ಲೂ ಇರುವ ವ್ಯಕ್ತಿತ್ವದ ಭಿನ್ನ ಆಯಾಮಗಳು ಎಲ್ಲವನ್ನೂ ಮುಂದೆ ತರುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ.

ಈ ಮಧ್ಯೆ ನಾಗಪುರದ ಸಮೀಪದ ಹೊಲದಿಂದ ಪುಟ್ಟ ವ್ಯೋಮ ನೌಕೆಯ ಮೂಲಕ ಅಪಹರಿಸಿದ್ದ ಸಂದೀಪ್ ಮತ್ತೊಂದು ಸ್ವಲ್ಪ ದೊಡ್ಡ ನೌಕೆಗೆ ವರ್ಗಾಯಿಸಲ್ಪಟ್ಟಿರುತ್ತಾನೆ. ಅವನ ಮೂಲಕ ಭೂಗ್ರಹವನ್ನು ಸಂಪರ್ಕಿಸುವುದು ಅನ್ಯಗ್ರಹಿಗಳ ಉದ್ದೇಶವಾಗಿರುತ್ತದೆ. ಇಲ್ಲಿಯ ವಿಚಿತ್ರಗಳನ್ನು ಚಿತ್ರವತ್ತಾಗಿ ಮೂರ್ತಿಯವರು ಮೂಡಿಸಿದ್ದಾರೆ.

ಗೋಲದ ರೂಪದ ಪುಟ್ಟ ನೌಕೆಯನ್ನು ಪರಿಶೀಲಿಸಿದಾಗ ಒಳಗೆ ಒಂದು ಕುರ್ಚಿ, ಹಲವಾರು ರೀತಿಯ ವೈಜ್ಞಾನಿಕ ಉಪಕರಣಗಳು ಇರುವುದು ಗೊತ್ತಾಗುತ್ತದೆ. ಯಾವುದೋ ಗ್ರಹಜೀವಿಗಳು ನಮ್ಮನ್ನು ಸಂಪರ್ಕಿಸಲು ಈ ಯಂತ್ರವನ್ನು ಕಳಿಸಿರುವುದು ಸ್ಪಷ್ಟವಾಗುತ್ತದೆ. ಸರ್ಕಾರದ ಒಪ್ಪಿಗೆಯ ನಂತರ ಸ್ವಪ್ನಾ ನಾರಂಗ್ ಎಂಬ ಧೈರ್ಯವಂತೆ ಜೆಟ್ ಪೈಲೆಟ್ ನೌಕೆಯ ಕುರ್ಚಿಯಲ್ಲಿ ಕುಳಿತು ಪ್ರಯೋಗಕ್ಕೆ ಸಿದ್ಧವಾಗುತ್ತಾಳೆ. ಶಿರಸ್ತ್ರಾಣದ ಮೂಲಕ ಸಾಧ್ಯವಾಗುವ ಸಂವಹನವು ಸಂದೀಪನೊಂದಿಗೆ ನಡೆಯುತ್ತದೆ. ಕುತೂಹಲಕಾರಿಯಾಗಿ ಸಾಗುವ ಕಥನವು ವಿಸ್ಮಯ ಕಾರಿಯಾಗಿದೆ.

ಸಂದೀಪ್ – ಸ್ವಪ್ನಾರ ಪರಸ್ಪರ ಸಂವಾದವು, ವಿಚಿತ್ರವಾದ, ಅನೂಹ್ಯವಾದ ಪರಿಸ್ಥಿತಿಯೊಂದನ್ನು ತೆರೆದಿಡುತ್ತದೆ. ಭೂಮಿಯ ಮೇಲೆ ಪ್ರಯೋಗಕ್ಕಾಗಿ ಬಂದ ಈ ಜೀವಿಗಳಲ್ಲಿ ಕೆಲವರು, ತಮ್ಮ ಪುಟ್ಟ ನೌಕೆಗಳೊಂದಿಗೆ ಪ್ರಪಂಚದ ಯಾವುದೋ ಭಾಗದಲ್ಲಿ, ನಂತರ ಆ ಪ್ರದೇಶವು ಪಪುವಾ ನ್ಯೂಗಿನಿಯಾದ ದಟ್ಟಕಾಡುಗಳಿಂದ ಆವೃತವಾದ, ಆಳ ಕಣಿವೆಗಳ, ನೂರಾರು ಜಲಪಾತಗಳಿರುವ ಪ್ರದೇಶವೆಂದು ಸಂಕೇತಾಕ್ಷರದ ಮೂಲಕ ಗೊತ್ತಾಗುತ್ತದೆ. ಅವರನ್ನು ವಾಪಸ್ಸು ಕರೆದುಕೊಂಡು ಹೋಗುವ ಪ್ರಯತ್ನವೇ ವಿಸ್ಮಯ.

ಈ ನಡುವೆ ಪರಸ್ಪರ ಸಂವಾದದಲ್ಲಿ ತೊಡಗಿಕೊಳ್ಳುವ ಸಂದೀಪ-ಸ್ವಪ್ನಾರ ಮಧ್ಯೆ ಮಧುರ ಬಾಂಧವ್ಯವು ಆರಂಭವಾಗುವುದು ಸ್ವಾರಸ್ಯಕರ.

ಇದೊಂದು ಬಹಳ ವಿಚಿತ್ರ ಸನ್ನಿವೇಶ. ಯಾವುದೋ ಗ್ರಹದ ನಿವಾಸಿಗಳು, ನಮಗಿಂತ ವಿಜ್ಞಾನದಲ್ಲಿ ಬಹಳ ಮುಂದುವರೆದಿರುವವರು, ಅವರ ಜನರು ಪಪುವಾ ನ್ಯೂಗಿನಿಯಾದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ, ಅವರನ್ನು ವಾಪಸ್ಸು ಕರೆದುಕೊಂಡು ಹೋಗಲು ಭಾರತೀಯರ ಸಹಾಯವನ್ನು ಕೇಳುತ್ತಾರೆ. ಮುಂದುವರೆದ ವಿಜ್ಞಾನ ಒಂದು ಕಡೆ, ಇಡೀ ಕಾರ್ಯಾಚರಣೆ ರಹಸ್ಯವಾಗಿರಬೇಕು, ಬೇರೆ ಬೇರೆ ದೇಶಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಬೇಕಾಗಿದೆ, ಅಂತರರಾಷ್ಟ್ರೀಯ ಕಾರ್ಯಾಚರಣೆಯ ಸೂಕ್ಷ್ಮಗಳು, ಅದನ್ನು ನಿಭಾಯಿಸಬೇಕು. ವೈಜ್ಞಾನಿಕ ಅಂಶಗಳ ಜೊತೆಗೆ ರಾಜಕೀಯ ಅಂಶಗಳು, ಮಿಲಿಟರಿ ಚಟುವಟಿಕೆಗಳು, ಇವೆಲ್ಲಾ ಆಸಕ್ತಿದಾಯಕ. ಪಪುವಾ ನ್ಯೂಗಿನಿಯಾ ಅರಣ್ಯಗಳ ವರ್ಣನೆ ಸುಂದರವಾಗಿಯೂ ಮಾಹಿತಿಪೂರ್ಣವಾಗಿಯೂ ಕೂಡಿದೆ.

ಪಪುವಾ ನ್ಯೂಗಿನಿಯಾ ತಲುಪುವ ಭಾರತದ ತಂಡವು, ಅನ್ಯಗ್ರಹಜೀವಿಗಳೊಂದಿಗೆ ಸಂದೀಪನ ಬಿಡುಗಡೆ ಹಾಗೂ ಆ ಜೀವಿಗಳನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯು ಸೂಕ್ಷ್ಮವಾಗಿದೆ. ಲೇಖಕರು ವಾಸ್ತವ ಪ್ರಜ್ಞೆಯಿಂದ ಇಂತಹ ಸಂದರ್ಭಗಳನ್ನು ನಿಭಾಯಿಸಿದ್ದಾರೆ. ಅಂತರಿಕ್ಷದಿಂದ ಬಂದ ಜೀವಿಗಳ ವಿಚಿತ್ರರೂಪ, ನಮ್ಮಂತೆಯೇ ಇರುವ ಮನೋಧರ್ಮ, ನಮ್ಮ ಔಷಧಗಳು ಅವರಿಗೂ ಹೊಂದುವುದು.ಮುಂತಾದ ವಿಚಾರಗಳು ಓದುವ ಆಸಕ್ತಿಯನ್ನು ಕಾಪಾಡಿಕೊಂಡು ಹೋಗುತ್ತದೆ.

ವೈಜ್ಞಾನಿಕ ಪಾರಿಭಾಷಿಕ ಪದಗಳ ಸಮರ್ಥವಾದ ಖಚಿತವಾದ ಅನುವಾದ, ವಾಸ್ತವಕ್ಕೆ ಹತ್ತಿರವಾದ ವೈಜ್ಞಾನಿಕ ಕಲ್ಪನೆ, ಕಾದಂಬರಿಯ ವಸ್ತುವಿಗೆ ತಕ್ಕಂತಹ ಸರಾಗವಾದ ಬರಹ, ಸೂಕ್ಷ್ಮ ರಾಜಕೀಯ ವಿಶ್ಲೇಷಣೆ ಮತ್ತು ಸನ್ನಿವೇಶಗಳ ನಿಭಾವಣೆ, ಮಾನವೀಯ ಸಂಬಂಧಗಳ ತಾಕಲಾಟ, ಕೊನೆಯ ತನಕವೂ ಉಳಿಸಿಕೊಳ್ಳುವ ಕುತೂಹಲ, ಕೊನೆಯಲ್ಲಿ ಸ್ಫೋಟವಾಗುವ ವಿಚಿತ್ರ ಸನ್ನಿವೇಶ ಇವೆಲ್ಲಾ ಕಥೆಗೆ ಹೆಚ್ಚಿನ ಮೆರಗನ್ನು ತಂದಿವೆ. ವೈಜ್ಞಾನಿಕ ವಿಷಯಗಳನ್ನು ಸರಳೀಕರಿಸಿ ಸುಲಭವಾಗಿ ಅರ್ಥವಾಗುವಂತೆ ಸೇರಿಸಿದ್ದಾರೆ. ಶತ ಶತಮಾನಗಳ ಹಿಂದಿನಿಂದ ಖಗೋಳದ ಅಧ್ಯಯನ ಭಾರತೀಯ ಪರಂಪರೆಯ ಒಂದು ಅಂಗ. ಈ ಅಂಶವನ್ನು ವಿವರಣೆಗಳಲ್ಲಿ ಬಳಸಿಕೊಂಡಿದ್ದಾರೆ.

ಕಥೆ ರಿಯಲಿಸಂ ಚೌಕಟ್ಟಿನಲ್ಲೇ ಉತ್ಪ್ರೇಕ್ಷೆ ಗಳಿಲ್ಲದೆ ನಂಬಬಹುದಾದಂತಹ ಸ್ತರ ಮತ್ತು ಎಳೆಗಳನ್ನು ಹಿಡಿದು ಸಾಗುತ್ತದೆ. ಇದು ಕಥೆಯ ಹೆಚ್ಚುಗಾರಿಕೆ. ಮೊದಲಿನಿಂದ ಕೊನೆಯವರೆಗೂ ಕುತೂಹಲಕರ ಓದನ್ನು ಉದ್ದೀಪಿಸುವ 'ವ್ಯೋಮ ವಿಸ್ಮಯ ಮಂಡಲ', ತರಂಗ ವಾರಪತ್ರಿಕೆಯಲ್ಲಿ ಈ ವರ್ಷಾಂತ್ಯದಿಂದ ಪ್ರಕಟವಾಗಿ, ಕರುನಾಡಿನ ಬೀಡುಬೀಡಿಗೂ ತಲುಪುವುದು ಸಂತೋಷ ಮತ್ತು ಹೆಮ್ಮೆಯ ವಿಷಯ. ಶ್ರೀ ಕೆ.ಅರ್.ಎಸ್. ಮೂರ್ತಿಯವರಿಗೆ ಅಭಿನಂದನೆಗಳು.

ನಿತ್ಯ ನೂತನ ನಭೋ ಮಂಡಲ

ನಿತ್ಯ ನೂತನ ನಭೋ ಮಂಡಲ ಹಗಲು ಇರುಳಿನ ಉರುಳಲಿ
ಹಳೆಯ ಪಕಳೆಗಳುದುರಿ ಹೋಗುತ ಚಿಗುರು ಮೂಡುವ ಪರಿಯಲಿ

ವ್ಯೋಮ ತುಂಬಿದುತ್ಕರ್ಷ ಕಾಂತವೆ ಸತತ ಚಲನೆಯಲಸದಳ
ಧೂಮಕೇತುಗಳುರಿದು ಬೀಳುತ ಧೂಳನೆಬ್ಬಿಪ ಬಾಂದಳ

ವೇಗದುದ್ವೇಗ ಪಥದಲಿ ಗ್ರಹಗಳಾಡಿರೆ ಸಿಲುಕಲಿ
ಆಗ್ರಹದ ಬಂಧನ ನಾವೆ ಪಯಣಕೆ ಕಾಮನೆಗಳ ಕಡಲಲಿ

ದೂರ ಗಗನದ ಪುಂಜ ಮಿನುಗಲಿ ಕಂಡಿತೇನದು ಕಾರಣ
ಕಿರಣ ನೂತನ ನಿತ್ಯ ನಿಲುವಿಗೆ ಬದಲು ತರುತಿಹ ಚೇತನ

– **ಕೆ.ಆರ್.ಎಸ್. ಮೂರ್ತಿ**

('ಮಿನುಗುತಿದೆ ನಕ್ಷತ್ರ' ಸಂಕಲನದಿಂದ)

ವಿಡಂಬನೆ

ಗಾರ್ದಭ ಪುರಾಣ

– **ಜಿಬಿ ಕೋಟೆ ಅನಂತ್**

ರಾಜಧಾನಿಯಲ್ಲಿ ಗಾರ್ದಭಗಳ ದೊಡ್ಡ ಸಭೆ ಸೇರಿತ್ತು. 'ನಮಗೆ ಸಮಾನತೆ ಬೇಕೇಬೇಕು' ಎನ್ನುವುದು ಅವುಗಳ ಬಹುದಿನದ ಬೇಡಿಕೆ. ಅಂದರೆ "ಕತ್ತೆಗಳ ಸಮಾನತೆ"ಗಾಗಿ ಹೋರಾಟ. ಸಭೆಯಲ್ಲಿ ಬಹು ಚರ್ಚಿತವಾಗಿ ಒಮ್ಮತಕ್ಕೆ ಬಂದ ವಿಷಯಗಳೆಂದರೆ -

ಸಾಮಾನ್ಯವಾಗಿ 'ಏಯ್ ಕತ್ತೆ' ಎಂದು ಕರೆಯುವುದು ರೂಢಿ. ಕತ್ತೆ ಎಂದು ಯಾರು ಕರೆಸಿಕೊಳ್ಳುತ್ತಾರೋ ಅಂತಹವರು ಖಡಾಖಂಡಿತವಾಗಿ ನಮ್ಮ ಜೊತೆ ಸೇರಿಕೋಬೇಕು.

ಗಾದೆ ಮಾತಿನಂತೆ 'ಬರ್ತಾ ಬರ್ತಾ ರಾಯರ ಕುದುರೆ ಕತ್ತೆ ಆಯ್ತು' ಅಂದರೆ ಆ ಕುದುರೆಯ ಯಜಮಾನರಾದ ಗುಂಡೂರಾಯರ ಮಾತನ್ನೇ ತೀರ್ಪು ಎಂದು ಪರಿಗಣಿಸಿ ಅದನ್ನು ನಮ್ಮ ಸಮುದಾಯಕ್ಕೆ, ಗುಂಪಿಗೆ ಸೇರಿಸಿಕೊಳ್ಳಬೇಕು. ಹಾಗೊಂದು ವೇಳೆ ಮಾಡದಿದ್ರೆ ಮುಂದೆ… ಚುರುಕಾಗಿರುವ ಕತ್ತೆಗಳನ್ನು 'ಬರ್ತಾ ಬರ್ತಾ ರಾಯರ ಕುದುರೆ ಕತ್ತೆ ಆಯ್ತು' ಅಂತ ತೀರ್ಪು ನೀಡಿ, ಅಂತಹವನ್ನು 'ರಾಯರ ಕೋಚ್ ಗಾಡಿಗೆ ಅಥವಾ ಇಮಾಂ ಸಾಬರ ಜಟಕಾ ಗಾಡಿಗೆ ಕಟ್ಟಲು ಅರ್ಹವಾಗಿದೆ' ಅಂತ ಪ್ರಮಾಣಪತ್ರ ನೀಡಬೇಕು.

ರಾಯರ ಕುದುರೆ ಕತ್ತೆಯಾಯಿತು! ಇದು ಪರಿವರ್ತನೆ. ಕತ್ತೆಯೊಂದು ಕುದುರೆಯಾದದ್ದು ಹೇಗೆ ಎಂದು ಸಂಶೋಧಕರು ಕಂಡುಹಿಡಿಯಬೇಕು. ಅಪೇಕ್ಷೆಪಟ್ಟಲ್ಲಿ ಯಾವುದೇ ಕತ್ತೆ ಸ್ವಇಚ್ಛೆಯಿಂದ ಆವಶ್ಯಕ ಶಸ್ತ್ರಚಿಕಿತ್ಸೆ, ಔಷಧೋಪಚಾರ ಇತ್ಯಾದಿಗಳನ್ನು ಮಾಡಿಸಿಕೊಂಡು ಕುದುರೆಯಾಗಬಲ್ಲದು ಎಂಬುದನ್ನು ಸಾಬೀತುಪಡಿಸಬೇಕು. ಮದುವೆ ಬಾರಾತ್ ಗೆ ಅಂಥದೊಂದು ಕತ್ತೆಯನ್ನು ಸುಂದರವಾಗಿ ಅಲಂಕರಿಸಿ ವರನನ್ನು ಅದರ ಮೇಲೆ ಕೂರಿಸಿ ಬಾಜಾಬಜಂತ್ರಿಗಳೊಂದಿಗೆ ಮೆರವಣಿಗೆ ಮಾಡಬೇಕು.

ಹೇಸರಗತ್ತೆ ನಮ್ಮ ವರ್ಗಕ್ಕೇ ಸೇರಿದೆ. ತನ್ನ ಪಟ್ಟಾಪಟ್ಟಿ ಮೈಬಣ್ಣದಿಂದ ಅದು ಜೀಬ್ರಾ ಎಂದು ಕರೆಸಿಕೊಳ್ಳುವುದು. ಇದು ಕತ್ತೆಯಲ್ಲ ಎಂಬುದನ್ನು ಯಾವುದೇ ಕಾರಣಕ್ಕೂ ಒಪ್ಪುವಂತಹುದಲ್ಲ, ಅವು ನಮ್ಮವೇ. ಮಾನವರಲ್ಲಿ ಮೈಬಣ್ಣ ಯಾವುದೇ ಇರಲಿ ಅವರು ಮನುಷ್ಯರು ಅಂದಮೇಲೆ ನಮ್ಮ ವರ್ಗದಲ್ಲಿ ಏಕೆ ಈ ತಾರತಮ್ಯ? "ಹೌದು.. ಹೌದು' ಎಂದು ಎಲ್ಲ ಕತ್ತೆಗಳ ಕೂಗು.

'ಜೀಬ್ರಾ ಕ್ರಾಸ್' ತುಂಬಾ ಉಪಯೋಗಕಾರಿ. ಜೀಬ್ರಾಗಳು ನಮ್ಮ ನೆಂಟರು. ಜೀಬ್ರಾ ಕ್ರಾಸಿನಲ್ಲಿ ಅವರ ಮೈಬಣ್ಣದ ಪಟ್ಟೆ ಹಾಕಿರುವುದರಿಂದ ಅವುಗಳಿಗೆ ಸಂಭಾವನೆ ಕೊಡಬೇಕು.

'ಕಾರ್ಯವಾಸಿ ಕತ್ತೆ ಕಾಲು ಹಿಡಿ' ಅಂತ ಮಾತಿದೆ. ಇದು ತಮಗೆಲ್ಲಾ ಗೊತ್ತಿರುವುದೇ. ಹೀಗೆ ಯಾರಾದರೂ ಹಿಡಿದಿದ್ದಾರಾ? ಉಹುಂ, ಇಲ್ಲಾ… ಇದು ನಮ್ಮ ಕುಲದವರಿಗೆ ಬಹಳ ನೋವಿನ ಸಂಗತಿ.

ನಮ್ಮ ಗುಂಪಿಗೆ ಸೇರಿದ ಹೇಸರಗತ್ತೆಗಳು ರಕ್ಷಣಾ ಇಲಾಖೆಗೆ ಸೇವೆ ಸಲ್ಲಿಸುತ್ತಿವೆ. ಇವುಗಳ ಸೇವೆಯನ್ನು ಪರಿಗಣಿಸಿ ಮೆಡಲ್ಲು, ಉನ್ನತ ಹುದ್ದೆಗೆ ಬಡ್ತಿ, ಪೆರೇಡಿನಲ್ಲಿ ಸ್ಥಾನ, ಜೊತೆಗೆ ಪಿಂಚಣಿ ಕೂಡಾ ನೀಡಬೇಕು.

ಎಚ್ಚರಿಕೆಯ ಮಾತು: ಸಾರ್ವಜನಿಕ ಸ್ಥಳಗಳಲ್ಲಿ ಯಾರೂ ಯಾರನ್ನೂ 'ಕತ್ತೆ' ಎನ್ನುವುದಾಗಲೀ, 'ಕನಮ' ಅರ್ಥಾತ್ 'ಕತ್ತೆ ನನ್ನ ಮಗನೇ' ಎಂದು ಬೈಯುವುದಾಗಲೀ, 'ಕತ್ತೆ ಒದ್ದಂಗೆ ಒದೆಯುತ್ತೇನೆ' ಎನ್ನುವುದಾಗಲೀ ಅಸಂಬದ್ಧ. ಅದು ಸಮಸ್ತ ಕತ್ತೆ ಕುಲದ ಮಾನ ಮರ್ಯಾದೆ ಕಳೆದ ಹಾಗೆ ಎಂದು ಪರಿಗಣಿಸಿ, ಹಾಗೆ ಹೇಳಿದವರನ್ನು ಕತ್ತೆಗಳಿರುವ ಮೃಗಾಲಯದಲ್ಲಿ ಅಂದರೆ ಕತ್ತಮನೆಯಲ್ಲಿ ಸದಾ ಕತ್ತೆಗಳ ಸೇವೆ ಮಾಡುವ ಶಿಕ್ಷೆ ಕೊಡಬೇಕು.

ಇತ್ತೀಚೆಗೆ ನಗರಗಳಲ್ಲಿ ಕತ್ತೆಗಳ ತಂಗುದಾಣವಾದ ಮೋಟುಗೋಡೆಗಳೇ ಕಣ್ಮರೆಯಾಗುತ್ತಿರುವುದು ಎಲ್ಲಾ ಕತ್ತೆಗಳಿಗೂ ಚಿಂತನೆಗೆ ಕಾರಣವಾಗಿದೆ. ಆದುದರಿಂದ ಈ ಕೂಡಲೇ ಸರ್ಕಾರವು ನಗರಗಳಾದ್ಯಂತ ಮೋಟುಗೋಡೆಗಳನ್ನು ನಿರ್ಮಿಸಿ ಕತ್ತೆಗಳ ಏಕಾಂತಕ್ಕೆ ಪ್ರೋತ್ಸಾಹ ನೀಡಬೇಕು.

ಮುಖ್ಯ ವಿಷಯ ಎಂದರೆ ಇತ್ತೀಚಿನ ದಿನಗಳಲ್ಲಿ ಚರಿತ್ರೆ ಮರುಕಳಿಸುತ್ತಿದೆ. 'ಕತ್ತೆಯ ಹಾಲು ಆರೋಗ್ಯಕ್ಕೆ ಅದರಲ್ಲೂ ಮಕ್ಕಳಿಗೆ ತುಂಬಾ ಒಳ್ಳೆಯದು ಎಂದು ಸಾಬೀತಾಗಿದೆ. ಎಲ್ಲೆಡೆಯೂ 'ಗಾರ್ದಭ ಕ್ಷೀರ' ಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆದುದರಿಂದ ಹಾಲು ಕೊಡುವ ಕತ್ತೆಗಳ ಪಾಲನೆ, ಪೋಷಣೆ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಕತ್ತೆ ಹಾಲನ್ನು ಶೇಖರಿಸಿ, ಶೀತಲೀಕರಿಸಿ, ಹಾಲು, ಮೊಸರು, ತುಪ್ಪ ಇತ್ಯಾದಿಗಳನ್ನು ತಯಾರಿಸಿ ವಿದೇಶಗಳಿಗೆ ರಫ್ತು ಮಾಡುವ ಬಗ್ಗೆ ಯೋಜನೆ ರೂಪಿಸಬೇಕು.

ತಾಳೆ ಹಾಕಿ ನೋಡಿದರೆ ಗಾರ್ದಭಗಳು ಕುದುರೆಗಳಿಗಿಂತ ಒಂದು ಕೈ ಮೇಲು. ಮಳೆ ಬರದಂತಹ ಬರಡು ಪ್ರದೇಶಗಳಲ್ಲಿ ಹೆಣ್ಣು-ಗಂಡು ಕತ್ತೆಗಳನ್ನು ಶೃಂಗರಿಸಿ ಊರ ತುಂಬಾ ಮೆರವಣಿಗೆ ಮಾಡಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಇದೆ. ಅದು ನಿಜವೂ ಆಗಿದೆ. ಆದುದರಿಂದ ನಾವು ಗಾರ್ದಭಗಳು ಕುದುರೆಗಳಿಗಿಂತ ಒಂದು ಕೈ ಮೇಲು ಎಂಬುದರಲ್ಲಿ ಸಂಶಯವೇ ಇಲ್ಲ.

ಇವೇ ಮುಂತಾದ ಮಹತ್ವದ ಠರಾವುಗಳನ್ನು ಒಕ್ಕೊರಲಿನಿಂದ ಅಂಗೀಕರಿಸಿದ ಸರ್ವ ಗಾರ್ದಭ ಸದಸ್ಯರ ಮಹಾ ಸಭೆ ಬರಖಾಸ್ತಾಯಿತು.

ಬದುಕೊಂದು ಭಾಗ್ಯ

ಬಂದಿಹೆ ಮಕ್ಕಳೆ
ತಂದಿಹೆ ಹೊಸಕತೆ
ಕಂದನ ತೆರದಲಿ ನಿಮ್ಮಬಳಿ
ಚೆಂದದಿ ಕೇಳುತ
ಲಂದದಿ ಪಾಡುತ
ಲೊಂದಿಗೆ ಕುಣಿಯುವ ನಲಿವಿನಲಿ (೧)

ಶರ ಷಟ್ಪದಿಯಲಿ
ಸರಸತಿಯೊಲುಮೆಗೆ
ಕರ ಮುಗಿಯುತ ನಾ ಬೇಡಿಹೆನು
ವರವನು ನೀಡುತ
ಕರುಣೆಯ ತೋರಿಸಿ
ಹರಸಿಹಳೆನುತಲಿ ನಂಬಿಹೆನು (೨)

ಕಾತರಗೊಂಡಿಹ
ಕೌತುಕ ಮನದಲಿ
ಮಾತನು ಕೇಳಲು ಕುಳಿತಿಹಿರಾ
ಗೀತೆಯ ತೆರದಲಿ
ಪ್ರಸ್ತುತ ಪಡಿಸುವೆ
ಚಿತ್ತವ ಕೊಡುತಲಿ ಕೇಳುವಿರಾ (೩)

ಊರೊಂದಿತ್ತದು
ಭಾರತ ದೇಶದಿ
ಯಾರೂ ಕಾಣದ ಮೂಲೆಯಲಿ
ಊರಿಂದಾಚೆಗೆ
ಭೋರೆಂದು ನದಿಯ
ನೀರು ಹರಿದಿತ್ತು ರಭಸದಲಿ (೪)

ಮಕ್ಕಳು ಮರಿಗಳು
ಹೈಕಳು ಹಿರಿಯರು
ತೆಕ್ಕೆಗೆ ಕೂಸನು ಹೊತ್ತವರು
ಸಿಕ್ಕರೆ ಸಮಯವ
ನಕ್ಕರೆಯಿಂದಲಿ
ಹೊಕ್ಕುತ ನದಿಯಲ್ಲಾಡುವರು (೫)

ಕೇಶವ ಮಾಧವ
ರೀಶನ ಗೆಳೆಯರು
ವಾಸಿಸುತಿದ್ದರು ಜೊತೆಯಲ್ಲಿ
ಪೋಷಕರಿಲ್ಲದೆ
ಕಾಸನು ದುಡಿಯಲು
ತ್ರಾಸು ಪಡುತಿಹರು ದಿನದಲ್ಲಿ (೬)

ಪ್ರತಿದಿನ ನದಿಬಳಿ
ಜೊತೆಯಲಿ ಹೋಗುತ
ಹಿತವ ಜನಗಳದು ನೋಡುವರು
ಸತತ ಸಹಾಯವ
ನಿತರ ಕೆಲಸಗಳ
ಮತಿಗಾದನಿತನು ಮಾಡುವರು (೭)

ಈಜಲು ಬಾರದೆ
ಮೌಜನು ಮಾಡುತ
ಬಾಜಿಗೆ ನಿಂತರು ಕೆಲಜನರು
ಭೋಜನ ಮುಗಿಸುತ
ಗೌಜಿನ ಜನಗಳ
ನುಜ್ಜುತ ನದಿಯಲಿ ಹಾರಿದರು (೮)

ಅಯ್ಯೋ ಮುಳುಗಿದೆ
ಭಯ್ಯಾ ಸತ್ತೆನು
ಕುರ್ಯೋ ಮರ್ಯೋ ಕೂಗಿದರು
ಕಾಯೋ ಶಿವನೇ
ಹಾಯುವೆ ಕೆಂಡವ
ಗೈಯುವೆ ಪೂಜೆಯನೆಂದಿಹರು (೯)

ಸುತ್ತಲ ಜನಗಳು
ಮತ್ತಿತರೆಲ್ಲರು
ಕೋತಿ ಕುಚೇಷ್ಟೆಗೆ ನಕ್ಕಿಹರು
ಅತ್ತ ತಿರುಗದೆಯೆ
ಹತ್ತಿರ ಹೋಗದೆ
ಮತ್ತೆ ಹರಟುತ್ತ ಕುಳಿತಿಹರು (೧೦)

ನೋಡಿದ ಗೆಳೆಯರು
ಮಾಡದೆ ಯೋಚನೆ
ಧಡ್ಡನೆ ಧುಮುಕಿದರೊಳನದಿಗೆ
ಸದ್ದು ಹೊಡೆದಂತೆ
ದಡ್ಡರನ್ನೆಳೆದು
ದೂಡುತ ತಂದರು ದಡದೆಡೆಗೆ (೧೧)

ನೀರಲಿ ಮುಳುಗುತ
ಹೀರಿದ ನೀರನು
ಕಾರಿಸಿ ಹೊರಕ್ಕೆ ತೆಗೆದಿಹರು
ಮಾರಣ ಮರಣವ
ದೂರ ಕಳಿಸಿದರು
ಧೀರರು ಪ್ರಶಂಸೆ ಗಳಿಸಿದರು (೧೨)

ಹರಡಿತು ವಿಷಯವು
ಪುರದ ಜನಗಳಿಗೆ
ಕಿರಿಯರು ಮಾಡಿದ ಸಾಹಸವು
ಕರೆದು ಹೊಗಳಿದರು
ಮೆರೆಸಿ ಹರಸಿದರು
ಹರಿಸಿ ಮಮತೆಯನು ಪ್ರತಿದಿನವು (೧೩)

ಕಷ್ಟವು ಕಳೆಯಿತ
ನಿಷ್ಟವು ತೊಲಗಿತು
ಪುಷ್ಟಿಯ ಕಂಡರು ಬಾಲಕರು
ಇಷ್ಟದಿ ಸರ್ವರ
ಕಷ್ಟಕ್ಕಾಗುತ
ನಿಷ್ಠೆಯ ಪಾಲಿಸಿ ಬೆಳೆದಿಹರು (೧೪)

ಕೇಶವ ಮಾಧವ
ರೀಶರು ಚರ್ಚಿಸಿ
ದೇಶದ ಸೇನೆಗೆ ಸೇರಿದರು
ದೂಷಿತ ವೈರಿಯ
ನಾಶವ ಮಾಡುತ
ದೇಶದ ರಕ್ಷಣೆ ಮಾಡಿದರು (೧೫)

ಊರಿನ ಹೆಸರದು
ಪೂರಾ ಹಬ್ಬಿತು
ಪೌರುಷ ಕಾರ್ಯಕೆ ಸಾಧನೆಗೆ
ಭಾರತ ನೀಡಿದ
ಗೌರವ ಮನ್ನಣೆ
ಪೌರ ಜನರಿಗದು ಹಿರಿಕೊಡುಗೆ (೧೬)

ಎಲ್ಲೋ ಮೂಲೆಯ
ಲೆಲ್ಲೋ ಬೆಳೆಯುತ
ಲೆಲ್ಲೋ ಹೆಸರನು ಮಾಡಿದರು
ಎಲ್ಲಾ ಕಾರ್ಯದ
ಲೆಲ್ಲರ ಮನದಲಿ
ಬಲ್ಲ ಹುಡುಗರೆಂದೆನಿಸಿದರು (೧೭)

ತಿಳಿಯುವ ಮಕ್ಕಳೆ
ಬೆಳೆಯುವ ಚೆಂದದಿ
ತಳಮಳವಿಲ್ಲದೆ ಮನಸಿನಲಿ
ಒಳಿತಿನ ಯೋಚನೆ
ತಿಳಿವು ಸುಗುಣಗಳು
ಬೆಳೆಸುತ ನಮ್ಮನು ಪೊರೆದಿರಲಿ (೧೮)

--ಶೀಲಾ ಅರಕಲಗೂಡು